**ಘಟಕ – 1**
**ಭಾರತ ಸಂಸ್ಕೃತಿಕ ಪರಂಪರೆ**

- **ಸಿಂಧೂ ಕಣಿವೆಯ ನಾಗರಿಕತೆ –** ಪ್ರಸ್ತುತ ಸಿಂಧೂ ಕಣಿವೆಯ ನಾಗರಿಕತೆಯು ಸಿಂಧ್ ಬಲೂಚಿಸ್ತಾನ, ಪಂಜಾಬ್, ರಾಜಸ್ಥಾನ್, ಉತ್ತರಪ್ರದೇಶ, ಗುಜರಾತ್ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಹರಡಿತ್ತು.

**ಹರಪ್ಪ ಮತ್ತು ಮಹೇಂಜೋದಾರಾವ್ ನಾಗರೀಕತೆಯ ಪ್ರಮುಖ ಸ್ಥಳಗಳು**

1826ರಲ್ಲಿ ಚಾರ್ಲ್ಸ್ ಮಾಶನ್ ಎಂಬ ಪುರಾತತ್ವ ಶಾಸ್ತ್ರಜ್ಞ ಇದನ್ನು ಮೊದಲ ಬಾರಿ ಪತ್ತೆ ಮಾಡಿದ್ದರು.

1921ರಲ್ಲಿ ಅಂದಿನ ಪುರಾತತ್ವ ಶಾಸ್ತ್ರಜ್ಞರಾದ ಆರ್.ಡಿ.ಬ್ಯಾನರ್ಜಿ ಹಾಗೂ ದಯಾರಾಂ ಸಹಾನಿರವರು ಪುನಃ ಸಂಶೋಧನೆ ನಡೆಸಿ. ಈ ಪುರಾತನ ಸ್ಥಳವನ್ನು/ನಾಗರಿಕತೆಯನ್ನು ಪುನಃ ಜಗತ್ತಿಗೆ ಪರಿಚಯಿಸಿದರು.

- ಮೆಹಂಜೋದಾರ ಎಂದರೆ ಸಿಂಧ್ ಭಾಷೆಯಲ್ಲಿ **"ಸತ್ತವರ ದಿಬ್ಬ"** ಎಂದರ್ಥ.

ಈ ಸಂಸ್ಕೃತಿಯ ಜನರು ಸುಸಂಸ್ಕೃತ ಜೀವನ ನಡೆಸಿದ್ದರು ಹಾಗೂ ಈ ಸಂಸ್ಕೃತಿಯ ನಗರಗಳು ತುಂಬಾ ವ್ಯವಸ್ಥಿತವಾಗಿ ರೂಪುಗೊಂಡಿದ್ದವು ಎಂಬುದಕ್ಕೆ ಇಲ್ಲಿನ ನಗರ ಯೋಜನೆಗಳೆ ಸಾಕ್ಷಿ.

**ನಗರಗಳು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು**

1) ಸೆಟಾಡೆಲ್
2) ಕೆಳಗಿನ ಪಟ್ಟಣ

1) ಸೆಟಾಡೆಲ್ – ಎಂದರೆ ಅಳುವ ವರ್ಗದವರ ಶ್ರೀಮಂತರ ಮತ್ತು ವರ್ತಕರ ಬದಲಾವಣೆಗಳಾಗಿದ್ದವು. ಇದು ಕೋಟೆಗಳಿಂದ ಆವೃತವಾಗಿತ್ತು.
2) ಕೆಳಗಿನ ಪಟ್ಟಣ – ಜನಸಾಮಾನ್ಯರು ಮತ್ತು ಕೂಲಿ ಕಾರ್ಮಿಕರು ಬಡಾವಣೆಗಳು

- ರಸ್ತೆಗಳು ಯೋಜನಾ ಬದಲಾಗಿದ್ದವು, 3 ರಿಂದ 4 ಮೀಟರ್ ಅಗಲವಾಗಿದ್ದವು
- ಕಟ್ಟಡಗಳು 3 ಗುಂಪಾಗಿ ವಿಭಾಗಿಸಬಹುದು

1. ವಾಸದ ಮನೆಗಳು
2. ಬೃಹತ್ ಕಟ್ಟಡ
3. ಸಾರ್ವಜನಿಕ ಸ್ನಾನದ ಗೃಹ

ಹರಪದಲ್ಲಿ ಬೃಹತ್ ಕಣಜ (ಗ್ರೇಟ್ ಗ್ರ್ಯಾನರಿ) ಪತ್ತೆಯಾಗಿದ್ದು. ಇದು ಅತ್ಯಂತ ದೊಡ್ಡ ಕಟ್ಟಡವಾಗಿದೆ. ಮಹೇಂಜೋದಾರೋವಿನ ಬೃಹತ್ ಸ್ನಾನ ಗೃಹವು ಸಿಕ್ಕಿರುವ ಅವಶೇಷಗಳಲ್ಲಿ ಅತ್ಯಂತ ವಿಶೇಷವಾಗಿವೆ ಈ ಸ್ನಾನ ಗೃಹದಲ್ಲಿ ಬೀಸುಗಾಳಿಯ ಸ್ನಾನದ ಅನುಕೂಲವಾಗಿದೆ.

ಅತ್ಯುತ್ತಮ ಒಳಚರಂಡಿಯ ವ್ಯವಸ್ಥೆಯಿದ್ದು, ಇದು ನೈರ್ಮಲ್ಯಕ್ಕೆ ತೋರಿರುವ ಕಾಳಜಿಯ ಅತ್ಯಂತ ಪ್ರಶಂಸನೀಯ. ಈ ನಾಗರೀಕತೆಯ ಜನರು ಸತ್ತ ನಂತರ ಬದುಕಿನಲ್ಲಿ ನಂಬಿಕೆಯನ್ನು ಹೊಂದಿದ್ದರು. ಶವವನ್ನು ಹೂಳುವುದು ಮತ್ತು ಸುಡುವುದು ಮಾಡುತ್ತಿದ್ದರು. ಗೋರಿಗಳಲ್ಲಿ ಗೃಹಪಯೋಗಿ ವಸ್ತುಗಳನ್ನು ಹಾಗೂ ದಿನಬಳಕೆಯ ವಸ್ತುಗಳನ್ನು ಇಡುತ್ತಿದ್ದರು. ಇದು ಸಾವಿನನಾಚೆಯ ಬದುಕಿನ ಮೇಲಿನ ನಂಬಿಕೆಯನ್ನು ಇನ್ನಷ್ಟು ಬಲಪಡಿಸುತ್ತದೆ.

ಈ ಸಂಸ್ಕೃತಿಯ ಜನರು ಪ್ರಕೃತಿಯ ಆರಾಧಕರಾಗಿದ್ದರು. ಇಲ್ಲಿನ ಉತ್ಖನನದಲ್ಲಿ ಅಸಂಖ್ಯಾತ ಮುದ್ರೆಗಳು ಹಾಗೂ ಆಕೃತಿಗಳು ದೊರೆತಿವೆ.

- ಪಶುಪತಿನಾಥನ ಮುದ್ರೆ
- ಗಡಸು ಜೇಡಿ ಮಣ್ಣಿನಿಂದ ಮಾಡಿರುವ ಮಾತೃದೇವತೆಯ ಆಕೃತಿ – ಮಹೇಂಜೋದಾರನಲ್ಲಿ ಪತ್ತೆಯಾಗಿದೆ
- ಕಂಚಿನ ನರ್ತಕಿ ಆಕೃತಿ – ಹರಪ್ಪದಲ್ಲಿ ಪತ್ತೆಯಾಗಿದೆ
- ಗಡ್ಡ ಮನುಷ್ಯ, ಪುರುಷನ ಮುಂಡಭಾಗ, ಗೂಳಿಯು ಚಿತ್ರ ಇನ್ನಿತರ ಪ್ರಮುಖ ಉತ್ಖತಿತ ವಸ್ತುಗಳ

➢ ಮುದ್ರೆಗಳನ್ನು ಸಾಮಾನ್ಯವಾಗಿ ವೃತ್ತಿ ಸಂಘಗಳು ಹಾಗೂ ವ್ಯಾಪಾರಸ್ಥರು ತಮ್ಮ ಗುರುತಿನ ಮುದ್ರೆ ಒತ್ತಲು ಉಪಯೋಗಿಸುತ್ತಿದ್ದರು.
➢ ಉಡುಪು ಮತ್ತು ಆಭರಣಗಳು – ಈ ನಾಗರಿಕತೆಯ ಜನರು ಸೌಂದರ್ಯಪಾಸಕರಾಗಿದ್ದರು. ಮೆಹಂಜೋದಾರ ಮತ್ತು ಹರಪ್ಪದಲ್ಲಿ ದೊರೆತ ಮಾನವಾಕೃತಿಯನ್ನು ಪರಿಶೀಲಿಸಿದಾಗ ದೋತ್ರ ಹಾಗೂ ಮೇಲುಹೊದಿಕೆಯನ್ನು ಉಪಯೋಗಿಸುತ್ತಿದ್ದರು.

ಮುಖ ಬಣ್ಣ, ತುಟಿ ಬಣ್ಣ, ಕಣ್ಣಿನ ಗಾದಿಗೆ, ಸುವಾಸನೆಯುಕ್ತಿ ದ್ರವ್ಯಗಳನ್ನು ಉಪಯೋಗಿಸುತ್ತಿದ್ದರು. ಕಂಠಾಭರಣ, ತಾಯತ, ಉಂಗುರ, ಬೆಳೆಗಳನ್ನು ಬಳಸುತ್ತಿದ್ದರು ಬೆಳೆಗಳನ್ನು ಪುರುಷ ಮತ್ತು ಮಹಿಳೆಯೊರಬ್ಬರೂ ಧರಿಸುತ್ತಿದ್ದರು.

ಸಿಂಧೂ ಬಯಲಿನ ನಾಗರೀಕತೆಗೂ ಹಾಗೂ ವೈದಿಕ ಸಂಸ್ಕೃತಿ ಎರಡು ಬೇರೆ ಬೇರೆ ವಿರುದ್ಧ ಸಂಸ್ಕೃತಿಗಳು. ಒಂದು ತುಂಬಾ ಮುಂದುವರೆದ "ನಗರ ಸಂಸ್ಕೃತಿ" ಇನ್ನೊಂದು ಹಿಂದುಳಿದ "ಗ್ರಾಮೀಣ ಸಂಸ್ಕೃತಿ" ಆದರೆ ಈ ಎರಡು ಸಂಸ್ಕೃತಿಗಳ ಭಿನ್ನತೆಗಳನ್ನು ಸರ್.ಜಾನ್ ಮಾರ್ಷಲ್‌ರವರು ಗುರುತಿಸಿದ್ದಾರೆ.

**ಪ್ರಮುಖ ಭಿನ್ನತೆಗಳು**

| ಸಿಂಧೂ ನಾಗರೀಕತೆ ಸಂಸ್ಕೃತಿ | ವೈದಿಕ ಸಂಸ್ಕೃತಿ |
|---|---|
| 1. ಇದು ನಗರ ನಾಗರೀಕತೆ | 1. ಇದು ಗ್ರಾಮೀಣ ಸಂಸ್ಕೃತಿ |
| 2. ಮುಂದುವರೆದ ನಾಗರೀಕತೆ | 2. ಹಿಂದುಳಿದ ನಾಗರೀಕತೆ |
| 3. ಪ್ರಮುಖ ವೃತ್ತಿ ವಾಣಿಜ್ಯ & ವ್ಯಾಪಾರ | 3. ಪ್ರಮುಖ ವೃತ್ತಿ ಕೃಷಿ ಮತ್ತು ಪಶು ಸಂಗೋಪನೆ |
| 4. ಹೊರದೇಶಗಳೊಂದಿಗೆ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ | 4. ವ್ಯಾಪಾರ ಆಂತರಿಕವಾಗಿತ್ತು |
| 5. ವಾಣಿಜ್ಯ ಬೆಳೆಗೆ ಪ್ರಾಮುಖ್ಯತೆ (ಉದಾ:- ಹತ್ತಿ) | 5. ಆಹಾರ ಬೆಳೆಗಳಿಗೆ ಪ್ರಾಮುಖ್ಯತೆ |

**ವರ್ಣ ಜಾತಿ/ಜಾತಿ ವ್ಯವಸ್ಥೆಯ ವಿಕಾಸ**

- ವರ್ಣ ಪದ್ಧತಿಯು ಋಗ್ವೇದ ಕಾಲದಲ್ಲಿ ಉಗಮವಾಯಿತು. ಸಮಾಜವು ವರ್ಣ ಮತ್ತು ವೃತ್ತಿ ಆಧಾರದ ಮೆಲೆ ವಿಭಜಿತವಾಗಿತ್ತು.
- ಬಣ್ಣದ ಆಧರದ ಮೇಲೆ ಋಗ್ವೇದ ಸಮಾಜವು ಎರಡು ವಿಭಾಗವಾಗಿತ್ತು ಶ್ವೇತವರ್ಣ ಮತ್ತು ಕೃಷ್ಣವರ್ಣ

ಶ್ವೇತವರ್ಣದಲ್ಲಿ ಮಧ್ಯ ಏಷಿಯಾದಿಂದ ಬಂದಿದ್ದ ಆರ್ಯರು ಸೇರಿದ್ದರು. ಈ ಆರ್ಯ ಸಮಾಜವು ವೃತ್ತಿ ಆಧಾರದ ಮೇಲೆ ಪುರೋಹಿತ, ಸೇನಾನಿ ಮತ್ತು ಸಾಮಾನ್ಯರು ಎಂದು ವಿಭಜನೆಗೊಂಡಿತ್ತು.

ಕೃಷ್ಣವರ್ಣದಲ್ಲಿ ಮೂಲ ನಿವಾಸಿಗಳಾದ ಆರ್ಯೇತರರು ಸೇರಿದ್ದರು ಇವರನ್ನು ಋಗ್ವೇದವು ದಾಸ, ದಸ್ಯು, ನಿಶಾದ, ಕಿರಾರ ಎಂಬ ಹೆಸರಿನಿಂದ ಕರೆದಿದೆ.

ಋಗ್ವೇದ ಕಾಲದ ಅಂತಿಮ ಹಂತದಲ್ಲಿ "ಚಾತುವರ್ಣ", "ಪದ್ದತಿ" ಜಾರಿಗೆ ಬಂದಿತು. ಋಗ್ವೇದದ 10ನೇ ಮಂಡಲದಲ್ಲಿ ಬರುವ ಪುರುಷಸೂಕ್ತವು ಮೊದಲಬಾರಿಗೆ ಚಾತುವರ್ಣ ಸಿದ್ಧಾಂತವನ್ನು ಪ್ರತಿಪಾದಿಸಿತು.

ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿತ್ತು. ಆದರೆ ವರ್ಣ ಮತ್ತು ವರ್ಗ ನಿಬಂಧನೆಗಳಿರಲಿಲ್ಲ. ಅಂತರ್‌ವರ್ಣ ಮದುವೆಗೆ ಅವಕಾಶವಿತ್ತು.

ಉತ್ತರ ವೈದಿಕ ಕಾಲದಲ್ಲಿ ವರ್ಣ ಪದ್ಧತಿ ತುಂಬಾ ಜಠಿಲಲಾಯಿತು. ಈ ಕಾಲದಲ್ಲಿ ವರ್ಣ ಪದ್ಧತಿಯನ್ನು ದೇವರಿಗೂ ಕಲ್ಪಿಸಲಾಯಿತು. ಉದಾ: ಅಗ್ನಿ ಮತ್ತು ಬೃಹಸ್ಪತಿಯನ್ನು ಬ್ರಾಹ್ಮಣರೆಂದು, ಇಂದ್ರ, ವರುಣ, ಸೋಮ, ಯಮರನ್ನು ಕ್ಷತ್ರಿಯರೆಂದು, ವಸು, ರುದ್ರ, ಮಾರುತ ಇವರನ್ನು ವೈಶ್ಯರೆಂದು, ಪುಷನ್ ದೇವತೆಯನ್ನು ಶೂದ್ರನೆಂದು ಪರಗಣಿಸಲಾಯಿತು.

ಜಾತಿ ಪದ್ಧತಿಯ ಉಗಮ – ಇದರ ಬಗ್ಗೆ ಹಲವಾರು ತರ್ಕಗಳು ಹಾಗೂ ಸಿದ್ಧಾಂತಗಳು ಹಾಗೂ ನಂಬಿಕೆಗಳಿವೆ. ಮೊದಲನೆಯಾದಾಗಿ ಸಮಾಜದ ವರ್ಗಗಳ ನಡುವೆ ಉಂಟಾದ ಅಸಮಾನತೆಯು ಮುಂದೆ ಜಾತಿ ಪದ್ಧತಿಯ ಉಗಮಕ್ಕೆ ಕಾರಣವಾಯಿತು.

ಇನ್ನು ಕೆಲವರ ಪ್ರಕಾರ ವರ್ಣ ಪದ್ಧತಿಯ, ಜಾತಿ ಪದ್ಧತಿಯಾಗಿ ಮಾರ್ಪಾಡಾಯಿತು. ಇದರ ಬಗ್ಗೆ ಅನೇಕ ಭಿನ್ನಾಭಿಪ್ರಾಯವಿದೆ. ಇತರ ಅಭಿಪ್ರಾಯದಂತೆ ವೃತ್ತಿ ವಿಭಜನೆ, ವರ್ಣ ವಿಭಜನೆ, ಅನುಲೋಮ – ಪ್ರತಿಲೋಮ ಮದುವೆ ಪದ್ಧತಿ, ಆರ್ಯ–ಅನಾರ್ಯರ ನಡುವಿನ ಸಂತರ ಇತ್ಯಾದಿ.

ಒಟ್ಟಾರೆ ಜಾತಿ ಪದ್ಧತಿಯ ಉಗಮದ ಬಗ್ಗೆ ಖಚಿತ ಮಾಹಿತಿ ಲಭ್ಯವಿಲ್ಲ. ಮೇಲಿನ ಎಲ್ಲಾ ಕಾರಣಗಳು ಸೇರಿ ಜಾತಿ ಪದ್ಧತಿ ಉಗಮವಾಯಿತು ಎನ್ನಬಹುದು.

**ಧಾರ್ಮಿಕ ಸ್ಥಿತಿ – ಧಾರ್ಮಿಕ ಚಳುವಳಿಗಳ ಉಗಮ**

ಸಿಂಧೂ ಬಯಲಿನ ನಾಗರೀಕತೆಯ ಧಾರ್ಮಿಕತೆ – ಈ ನಾಗರೀಕತೆಯ ಜನರು ಪ್ರಕೃತಿಯ ಆರಾಧನೆಯ ಜೊತೆಗೆ ಕೆಲವು ವಿಗ್ರಹ ಆರಾಧನೆಯನ್ನು ಮಾಡುತ್ತಿದ್ದರು. ಪಶುಪತಿ ಶಿವ, ಅಗ್ನಿ, ಸೂರ್ಯ, ಡುಬ್ಬದ ಗೂಳಿ ಹಾಗೂ ನಾಗಾರಾಧನೆ ಮತ್ತು ಏಕಶೃಂಗಿ ಆರಾಧನೆ ಮಾಡುತ್ತಿದ್ದರು.

**ದೆವ್ವ, ಭೂತ ಪ್ರೇತಗಳ ಬಗ್ಗೆ ನಂಬಿಕೆಯಿಟ್ಟಿದ್ದರು.**

1. ಋಗ್ವೇದ ಕಾಲದ ಧಾರ್ಮಿಕತೆ : ಋಗ್ವೇದ ಕಾಲದ ಧರ್ಮವು ಸರಳವಾಗಿತ್ತು. ಜನರು ಪ್ರಕೃತಿಯ ಆರಾಧಕರಾಗಿದ್ದರು.

ಇಂದ್ರ, ಅಗ್ನಿ, ವರುಣ, ಸೂರ್ಯ, ಪೃಥ್ವಿ, ಆಕಾಶ, ನದಿಗಳಿಗೆ ಮನುಷ್ಯರೂಪ ಕೊಟ್ಟು ಪೂಜಿಸುತ್ತಿದ್ದರು. ಋಗ್ವೇದ ಧರ್ಮವನ್ನು ಮೋನಿಸಂ ಎಂದು ಕರೆಯಲಾಗಿದೆ ಅಂದರೆ ದೇವನೊಬ್ಬ ನಾಮ ಹಲವು.

33 ವಿವಿಧ ದೇವತೆಗಳನ್ನು ಪೂಜಿಸುತ್ತಿದ್ದರು. ಆದರೆ 33 ದೇವತೆಗಳು ಬೇರೆಯಲ್ಲಿ ಒಂದೇ ವಿವಿಧ ಹೆಸರುಗಳಿಂದ ಪೂಜಿಸಲ್ಪಡುತ್ತಿದೆ ಎಂದು ನಂಬಿದ್ದರು.

ಈ ಕಾಲದ ಜನರು ಈ 33 ದೇವತೆಗಳನ್ನು ಪ್ರಾರ್ಥನೆಯ ಮೂಲಕ, ಶ್ಲೋಕಗಳನ್ನು ಉಚ್ಚರಿಸುವುದರ ಮೂಲಕ ಆರಾಧಿಸುತ್ತಿದ್ದರು.

ದೇವರಿಗೆ ಹಾಲು, ತುಪ್ಪ, ಧಾನ್ಯ, ಮಾಂಸ ಇತ್ಯಾದಿ ವಸ್ತುಗಳನ್ನು ಅರ್ಪಿಸುತ್ತಿದ್ದರು.

1. ಉತ್ತರ ವೈದಿನ ಕಾಲದ ಧಾರ್ಮಿಕತೆ – ಈ ಕಾಲದಲ್ಲಿ ಧರ್ಮವು ಇನ್ನಷ್ಟು ಜಟಿಲವಾಯಿತು. ಪುರೋಹಿತರು ಸಮಾಜದ ಪ್ರಮುಖ ಸ್ಥಾನ ಪಡೆದರು, ಯಜ್ಞ, ಯಾಗ ನಡೆಸಲು ಪುರೋಹಿತರು ಕಡ್ಡಾಯವಾಗಿ ಬೇಕಿತ್ತು. ಪ್ರಮುಖವಾಗಿ 4 ವಿಧದ ಪುರೋಹಿತರು ಯಜ್ಞ – ಯಾಗವನ್ನು ಆಚರಿಸುತ್ತಿದ್ದರು.
   1. ಹೋತ್ರಿ – ಯಾಗಕ್ಕೆ ಬೇಕಾದ ಶ್ಲೋಕವನ್ನು ಆರಿಸಿಕೊಳ್ಳುತ್ತಿದ್ದರು.
   2. ಉದ್ಗಾತ್ರಿ – ಯಾಗ ಸಮಯದಲ್ಲಿ ಶ್ಲೋಕಗಳನ್ನು ಪಠಿಸುತ್ತಿದ್ದನು ಹಾಗೂ ಯಾಗ ತಯಾರಿ ಮಾಡುತ್ತಿದ್ದನು.
   3. ಆಧ್ವರ್ಯು – ಯಜ್ಞ – ಯಾಗ ನಡೆಸಿಕೊಡುತ್ತಿದ್ದನು.
   4. ಬ್ರಾಹ್ಮಣ – ಈತ ಪ್ರಮುಖವಾಗಿದ್ದು ಯಾಗದ ಮೇಲ್ವಿಚಾರಣೆಯನ್ನು ಮಾಡುತ್ತಿದ್ದನು.

ಋಗ್ವೇದ ಕಾಲದಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ಇಂದ್ರ, ಅಗ್ನಿ ಮತ್ತು ವರುಣ ಉತ್ತರ ವೈದಿಕ ಕಾಲದಲ್ಲಿ ತಮ್ಮ ಸ್ಥಾನ ಕಳೆದುಕೊಂಡರು.

ಇವರ ಸ್ಥಾನದಲ್ಲಿ ರುದ್ರ, ಬ್ರಹ್ಮ, ವಿಷ್ಣು ಬಂದರು ಇದರಿಂದಾಗಿ ಉತ್ತರ ವೈದಿಕ ಕಾಲದಲ್ಲಿ ತ್ರಿಮೂರ್ತಿ ಕಲ್ಪನೆ ಹುಟ್ಟಿತು.

**ಧಾರ್ಮಿಕ ಚಳುವಳಿಗಳ ಉಗಮ**

- ಕ್ರಿ.ಶ. 6ನೇ ಶತಮಾನವನ್ನು ಪ್ರಾಚೀನ ಭಾರತದ ಇತಿಹಾಸವನ್ನು ಭಿನ್ನಮತ ಮತ್ತು ವಿರೋಧ ಬೆಳವಣಿಗೆ ಎಂದು ಇತಿಹಾಸ ತಜ್ಞರು ಗ್ರಹಿಸಿದ್ದಾರೆ.

ವೈದಿಕ ಮತವನ್ನು ಅದರ ತತ್ವಗಳನ್ನು ತಿರಸ್ಕರಿಸಿದವರನ್ನು ಅವೈದಿಕರು () ಎಂದು ಕರೆಯಲಾಯಿತು. ವೈದಿಕ ಮತವನ್ನು ತಿರಸ್ಕರಿಸುವ ಪಂಥಗಳು ಬೆಳೆದವು ಅವುಗಳಲ್ಲಿ ಮುಖ್ಯವಾಗಿ

1. ಅಜೀವಿಕರು
2. ಚಾರ್ವಾಕರು/ಲೋಕಯುತರು
3. ಜೈನರು
4. ಬೌದ್ಧರು, ಹೀಗೆ ಸುಮಾರು 62 ಹೊಸ ಮತ ಪಂಥಗಳು ತಲೆಯೆತ್ತಿದವು

1. ಅಜೀವಕರು – ಈ ಪಂಥದ ಪ್ರಕಾರ "ಈ ಪ್ರಪಂಚವು ಪೂರ್ವ ನಿರ್ಧಾರಿತ' ಎಂದು ನಂಬಿದ್ದರು. ಸ್ಥಾಪಕ : ಗೋಶಾಲ ಮಸಕರಿ ಪುತ್ರ
2. ಚಾರ್ವಕರು ಅಥವಾ ಲೋಕಾಯತರು – ಇವರು ಪಕ್ಕಾ ಭೌತಿಕವಾದಿಗಳು ಇವರ ಪ್ರಕಾರ "ಮನುಷ್ಯನ ಚತುರ್ ಭೂತಗಳಿಂದ ಮಾಡಲ್ಪಟಿದ್ದಾನೆ" (ಭೂಮಿ, ನೀರು, ಬೆಂಕಿ, ಗಾಳಿ) ಇವರನ್ನು "ಇಂದ್ರಿಯ ಸುಖವಾದಿಗಳು" ಎನ್ನುವರು.
3. ಜೈನ ಮತ – ಮೂಲತಃ ನಾಸ್ತಿಕವಾದ ಹಾಗೂ ನಿರೀಶ್ವರವಾದಿಯು ಆಗಿದೆ. ಈ ಪಂಥದ ಪ್ರಕಾರ ವಿಶ್ವವನ್ನು ಸೃಷ್ಟಿಸುವ ದೇವತೆ ಯಾರು ಇಲ್ಲ. ಈ ವಿಶ್ವ ಒಂದು ಅನಂತವಾದ ಗಡಿಗೆ ಬದ್ಧವಾಗಿದೆ, ಅದರಲ್ಲಿ ಅಸಂಖ್ಯೆ ಯುಗಗಳಿವೆ. ಪ್ರತಿ ಯುಗದಲ್ಲಿ 24 ತೀರ್ಥಂಕರಿದ್ದಾರೆ, 63 ಶಲಾಕಾಪುರುಷರಿರುತ್ತಾರೆ.
4. ಬೌದ್ಧಮತ – ಇದೊಂದು ಜನಪ್ರಿಯ ಧರ್ಮ, ಕ್ರಿ.ಪೂ.6ನೇ ಶತಮಾನದಲ್ಲಿ ಹುಟ್ಟಿಕೊಂಡ ಪಂಥ ಬುದ್ಧನ ಪ್ರಕಾರ ಈ ಜಗತ್ತು ಅನಿತ್ಯ ಹಾಗೂ ಅನಾತ್ಮ. ಈ ಭೌತಿಕ ಪ್ರಪಂಚದಲ್ಲಿ ಚಿರಂತನವಾಗಿ ಉಳಿಯುವುದು ಆತ್ಮ ಮಾತ್ರ.

ಈಶ್ವರವಾದಿ ಸಂಪ್ರಾದಯಗಳೆಂಬ ಪೂಜಾ ಪಂಥಗಳು ಹುಟ್ಟಿಕೊಂಡಿತು. ಇವುಗಳನ್ನು ಸ್ಥೂಲವಾಗಿ ವೈಷ್ಣವ, ಶೈವ ಹಾಗೂ ಶಾಕ ಎಂಬ ವಿಭಾಗಗಳನ್ನು ಗುರುತಿಸಬಹುದು.

## ಸಂಸ್ಕೃತ ಸಾಹಿತ್ಯ

ಪ್ರಾಚೀನ ಭಾರತದಲ್ಲಿ ಸಂಸ್ಕೃತ ಸಾಹಿತ್ಯ ಅಗ್ರಗಣ್ಯ ಸ್ಥಾನವನ್ನು ಹೊಂದಿದೆ. ಇವುಗಳಲ್ಲಿ ಮುಖ್ಯವಾಗಿ

1. ಗದ್ಯ ಸಂಸ್ಕೃತ ಸಾಹಿತ್ಯ
2. ಕಾವ್ಯ ಸಂಸ್ಕೃತ ಸಾಹಿತ್ಯ
3. ನಾಟಕ ಸಂಸ್ಕೃ ಸಾಹಿತ್ಯ

1. ಗದ್ಯ ಸಂಸ್ಕೃತ ಸಾಹಿತ್ಯದಲ್ಲಿ:– ಪಾಣಿನೀಯ "ಅಷ್ಟಾಧ್ಯಾಯಿನಿ" ಕೌಟಿಲ್ಯನ ಅರ್ಥಶಾಸ್ತ್ರ. ದಂಡಿಯ ದಶಕುಮಾರ ಚರಿತೆ, ಬಾಣನ ಹರ್ಷ ಚರಿತೆ ಅತ್ಯಂತ ಪ್ರಮುಖವಾದವು.
2. ಕಾವ್ಯ ಸಂಸ್ಕೃತ ಸಾಹಿತ್ಯದಲ್ಲಿ:– ಚಂಪು ಕಾವ್ಯಶೈಲಿಯು ಕಂಡುಬರುತ್ತದೆ. ಈ ಪ್ರಕಾರದಲ್ಲಿ ತ್ರಿವಿಕ್ರಮ ಭಟ್ಟನ ನಳಚಂಪೂ/ ದಮಯಂತಿ ಕಥೆ. ಸೋಮದೇವ ಸೂರಿಯ "ಯಶಸ್ತಿಲಕ ಚಂಪೂ" ಪ್ರಮುಖವಾದದ್ದು.
3. ನಾಟಕ ಸಂಸ್ಕೃತ ಸಾಹಿತ್ಯ:– ಕಾಳಿದಾಸನ ಮೂರು ಪ್ರಮುಖ ನಾಟಕಗಳಾದ ಅಭಿಜ್ಞಾನ ಶಾಕುಂತಲಾ, ಮಾಳವಿಕಾಗ್ನಿಮಿತ್ರ, ವಿಶಾಕದತ್ತನ ಮುದ್ರರಾಕ್ಷಸ, ಹಾಗೂ ದೇವಿಚಂದ್ರಗುಪ್ತ; ಭವಭೂತಿಯ ಉತ್ತರರಾಮಚರಿತೆ ಹಾಗೂ ಮಹಾವೀರ ಚರಿತೆ; ಹರ್ಷವರ್ಧನನ ರತ್ನಾವಳಿ, ಪ್ರಿಯದರ್ಶಿಕ ಮತ್ತು ನಾಗನಂದ ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತದೆ.

ಸಂಸ್ಕೃತ ಸ್ತೋತ್ರ ಸಾಹಿತ್ಯ : ಮಯೂರನ "ಮಯೂರ ಶತಕ" ಆನಂದವರ್ಧನನ ದೇವಿಶತಕ, ಕುಲಶೇಖರನ ಮುಖಂದ ಮಾಲೆ, ಉತ್ಪಲ ದೇವನ "ಸ್ತೋತ್ರದಲಿ" ಪ್ರಮುಖವಾಗಿದೆ.

**ಇನ್ನಿತರೆ ಪ್ರಮುಖ ಸಾಹಿತ್ಯವೆಂದರೆ**

1. ನೀತಿ ಕಾವ್ಯ ಸಂಸ್ಕೃತ ಸಾಹಿತ್ಯ – ಉತ್ತಮ ಉದಾಹರಣೆಯೆಂದರೆ ವಿಷ್ಣು ಶರ್ಮನ ಪಂಚತಂತ್ರ, ದಂಡಿಯ ದಶಕುಮಾರ ಚರಿತೆ ಮುಂತಾದವು
2. ಅಲಂಕಾರ, ಛಂದಸ್ಸು, ವ್ಯಾಕರಣಗಳ ಸಂಸ್ಕೃತ ಸಾಹಿತ್ಯ – ದಂಡಿಯ "ಕಾವ್ಯದರ್ಶಿ" ಮತ್ತು ಭಾಮಹನ "ಕಾವ್ಯಾಲಂಕಾರ", ರುದ್ರಭಟ್ಟನ "ಶೃಂಗಾರ ತಿಲಕ" ರಾಜಶೇಖರನ "ಕಾವ್ಯ ಮೀಮಾಂಸೆ' ಉತ್ತಮ ಉದಾಹರಣೆ.
3. ವೈದ್ಯಕೀಯ, ಖಗೋಳ ಶಾಸ್ತ್ರ ಮತ್ತು ಗಣಿತಶಾಸ್ತ್ರದ ಸಂಸ್ಕೃತ ಸಾಹಿತ್ಯ ಗ್ರಂಥಗಳು

ವಾಗ್ಭಟನ "ಅಷ್ಟಾಂಗ ಸಂಗ್ರಹ"; ಎರಡನೆಯ ವಾಗ್ಭಟನ "ಅಷ್ಟಾಂಗ ಹೃದಯ ಸಂಹಿತ" ಮಾಧನ "ರಗ್ಬಿನಿಶ್ಚಿಯ" ಶಾಲಿಪೊತ್ರ ಮುನಿಯ 'ಅಶ್ವಶಾಸ್ತ್ರ' ವರಹಮಿಹಿರನ ಪಂಚ ಸಿದ್ಧಾಂತಿಕ – ಖ್ಯಾತ ಖಗೋಳ ಗ್ರಂಥ ಆರ್ಯಭಟ್ಟನ "ಆರ್ಯಭಟ್ಟಿಯಂ".

**ಗಣಿತಶಾಸ್ತ್ರದಲ್ಲಿ**

- ಬ್ರಹ್ಮಗುಪ್ತನ – ಬ್ರಹ್ಮ ಸಿದ್ಧಾಂತಿಕ
- ಭಾಸ್ಕರಾಚಾರ್ಯ – ಲೀಲಾವತಿ
- ವರಾಹಮೀರನ ಬೃಹತ್ ಸಂಹಿತಾ

**ವೇದಕಾಲಿನ ಸಾಹಿತ್ಯ**

ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ

- ಶೃತಿ ಸಾಹಿತ್ಯ
- ಸ್ಮೃತಿ ಸಾಹಿತ್ಯ

➢ **ಶೃತಿ ಸಾಹಿತ್ಯದಲ್ಲಿ** –

1. ಋಗ್ವೇದ ಅತೀ ಪ್ರಾಚೀನವಾದ ವೈದಿಕ ಸಾಹಿತ್ಯವಾಗಿದೆ. ಇದು ಸ್ತ್ಯುತಿಗಳು ಅಥವಾ ಪದ್ಯಗಳಿಂದ ಕೂಡಿದೆ. ಇದನ್ನು 10 ಮಂಡಲಗಳನ್ನಾಗಿ ವಿಂಗಡಿಸಲಾಗಿದೆ ಮಂಡಲಗಳೆಂದರೆ ಅಧ್ಯಾಯಗಳು.
2. ಯಜುರ್ವೇದ – ಯಜ್ಞ – ಯಾಗಾದಿಗಳಿಗೆ ಸಂಬಂಧಿಸಿದ ಅಂಶಗಳಾಗಿವೆ.

3. ಸಾಮವೇದ – ಇದು ಸಂಗೀತಕ್ಕೆ ಸಂಬಂಧಿಸಿದಂತೆ ಹಲವು ಮಾಹಿತಿಯನ್ನು ಹೊಂದಿದೆ. ಈ ವೇದವು ಪದ್ಯ ರೂಪದಲ್ಲಿದ್ದು ಋತ್ತುಗಳನ್ನು ರಾಗಬದ್ಧವಾಗಿ ಹಾಡುವ ಸಂಪ್ರದಾಯವನ್ನು ಹೊಂದಿದೆ.
4. ಅಥರ್ವಣ ವೇದ – ಮುಖ್ಯವಾಗಿ ಯಂತ್ರ, ಮಂತ್ರ, ತಂತ್ರಗಳ ವಿವರಣೆ ಹೊಂದಿವೆ. ಇದು ಶೌಕನೀಯ ಹಾಗೂ ಪೈಪ್ಪಲ್ಲಾದ ಎಂಬೆರಡು ಶಾಖೆಗಳಿವೆ.

➢ **ಸ್ಮೃತಿ ಸಾಹಿತ್ಯ** – ಇದು ಮಾನವರಿಂದ ರಚಿತವಾದದ್ದು ಎಂದು ಪರಿಗಣಿಸಲಾಗಿದೆ. ಇದಕ್ಕೆ ವೇದಗಳಂತೆ ಪೂಜ್ಯ ಸ್ಥಾನಮಾನ ಸಿಕ್ಕಿಲ್ಲ ಇವುಗಳಲ್ಲಿ ಮುಖ್ಯವಾಗಿ
1. ಬ್ರಾಹ್ಮಣಕಗಳು
2. ಅರಣ್ಯಕಗಳು
3. ಉಪನಿಷತ್ತುಗಳು
4. ಉಪವೇದಗಳು
5. ವೇದಾಂಗಗಳು ಒಳಗೊಂಡಿದೆ.

**ಮಹಾಕಾವ್ಯಗಳು ಮತ್ತು ಪುರಾಣಗಳು**

ಭಾರತೀಯ ಮಹಾಕಾವ್ಯಗಳಲ್ಲಿ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಅಗ್ರಗಣ್ಯವಾಗಿ ನಿಲ್ಲುತ್ತದೆ.

- ರಾಮಾಯಣ – ಈ ಕೃತಿಯನ್ನು ಮಹರ್ಷಿ ವಾಲ್ಮೀಕಿ ಸಂಸ್ಕೃತದಲ್ಲಿ ಬರೆದಿದ್ದಾರೆ. ಇದು ಏಳು ಖಂಡಗಳನ್ನು ಒಳಗೊಂಡಿದೆ.
- ಮಹಾಭಾರತ – ಈ ಕೃತಿಯನ್ನು ವ್ಯಾಸ ಮಹರ್ಷಿ ಸಂಸ್ಕೃತದಲ್ಲಿ ರಚಿಸಿದ್ದಾರೆ. ಮೂಲತಃ ಇದನ್ನು "ಜಯ ಭಾರತ' ಅಥವಾ "ಜಯ ಸಂಹಿತ" ಎಂದು ಕರೆಯಲಾಗುತ್ತಿತ್ತು. ಉತ್ತರ ಕಾಲದಲ್ಲಿ ಸುಮಾರು ಒಂದು ಲಕ್ಷ ಶ್ಲೋಕಗಳಿಗೆ ವಿಸ್ತರಿಸಲಾಯಿತು. ಈ ಕೃತಿಯನ್ನು "ಶತ ಸಹಸ್ರ ಸಂಹಿತ" ಅಥವಾ 'ಮಹಾಭಾರತ' ಎಂದು ಕರೆಯಲಾಯಿತು.

ಈ ಕೃತಿಯನ್ನು "ಪಂಚಮವೇದ" ಮತ್ತು "ಪ್ರಾಚೀನ ಭಾರತೀಯ ಸಂಸ್ಕೃತಿಯ ವಿಶ್ವಕೋಶ".

**ಪುರಾಣಗಳು**

ಪುರಾಣಗಳು ಭಾರತೀಯ ಹಿಂದೂ ಧಾರ್ಮಿಕ ಗ್ರಂಥಗಳು ಪುರಾಣಗಳು ಮುಖ್ಯವಾಗಿ ವಿಶ್ವದ ಉಗಮ, ವಿಶ್ವದ ನಾಶ, ರಾಜರ ವಂಶಾವಳಿ, ಋಷಿಗಳ ವಂಶಾವಳಿ, ದೇವತೆಗಳ ವಂಶಾವಳಿಗಳ ಬಗ್ಗೆ ತಿಳಿಸುತ್ತದೆ.

ಒಟ್ಟು 18 ಪುರಾಣಗಳಿವೆ, ಉದಾಹರಣೆಗೆ : ಭಾಗವತ ಪುರಾಣ ಗರುಡ ಪುರಾಣ ವರಾಹ ಪುರಾಣ ಇತ್ಯಾದಿ.

## ಭಾರತೀಯ ಜನ ಜೀವನ ಸಂಸ್ಕೃತಿಯ ಮೇಲೆ ಪುರಾಣ ಮತ್ತು ಮಹಾ ಕಾವ್ಯಗಳ ಪ್ರಭಾವ

- ಸಮಾಜದಲ್ಲಿ ನೈತಿಕ – ಸಾಮಾಜಿಕ ಜೀವನಕ್ಕೆ ಎಡೆ ಮಾಡಿಕೊಟ್ಟಿತು.
- ಆತಿಥ್ಯ, ಔದಾರ್ಯ, ಪ್ರಾಮಾಣಿಕತೆಗಳಂತಹ ಸದ್ಗುಣಗಳ ಮೇಲೆ ಹೆಚ್ಚಿನ ಒತ್ತು ಕೊಡಲಾಯಿತು.
- ಸಕಲ ಜೀವಿಗಳ ಬಗ್ಗೆ ಒಳಿತಿನ ಚಿಂತನೆ ಹೆಚ್ಚಾಯಿತು. ಅಹಿಂಸಾ ತತ್ವ ಹೆಚ್ಚು ವ್ಯಾಪಕವಾಗಿ ಹರಿಡಿತ್ತು.
- ಮಹಾಕಾವ್ಯಗಳಿಂದ ಜನತೆಯು ಕರುಣೆ, ಅನುಕಂಪ, ಸ್ನೇಹಭಾವನ್ನು ಬೆಳೆಸಿಕೊಂಡರು.
- ಪುರುಷಾರ್ಥಗಳ ಮೇಲೆ ಜನರ ನಂಬಿಕೆ ಹೆಚ್ಚಾಗ ತೊಡಗಿತು.

**ರಾಜ್ಯಾಡಳಿತಕ್ಕೆ ಸಂಬಂಧಿಸಿದ ಗದ್ಯಕೃತಿಗಳು**

ಮಹಾಭಾರತದ ಶಾಂತಿಪರ್ವ, ಆದಿಪರ್ವ ಮತ್ತು ವನಪರ್ವಗಳು ನಮಗೆ ರಾಜ್ಯದ ಉಗಮ, ರಾಜತ್ವದ ಉಗಮ ರಾಜನೀತಿ, ಸರ್ಕಾರ, ವ್ಯವಸ್ಥೆಗೆ ಸಂಬಂಧಿಸಿದ ಮಾಹಿತಿ ನೀಡುತ್ತದೆ.

ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರಾಚಾರ್ಯ ಶುಕ್ರ ನೀತಿಸಾರ, ಕಮಾಂಡಕನ ನೀತಿಸಾರ, ಸೋಮೇಶ್ವರನ ಮನೋಲ್ಲಾಸ, ಶ್ರೀ ಕೃಷ್ಣದೇವರಾಯನ ಅಮುಕ್ತಮೌಲ್ಯದ ಇತ್ಯಾದಿ, ಕೃತಿಗಳು ರಾಜ್ಯ ಆಡಳಿತಕ್ಕೆ ಸಂಬಂಧಿಸಿದ ಪ್ರಮುಖ ಮಾಹಿತಿ ಕಣಜಗಳು

ಕ್ರಿ.ಪೂ. 4ನೇ ಶತಮಾನದಲ್ಲಿ ರಚನೆಯಾದ 'ಅರ್ಥಶಾಸ್ತ್ರ' ಎಂಬ ಕೃತಿ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಕೃತಿಯಾಗಿದೆ. ಇದು ರಾಜನ ಕರ್ತವ್ಯಗಳು, ಮಂತ್ರಿ ಪರಿಷತ್ ಯುದ್ಧ ಮತ್ತು ಶಾಂತಿ ಇನ್ನು ಮುಂತಾದ ಮಾಹಿತಿ ಕೊಡುತ್ತದೆ.

ಶುಕ್ರಾಚಾರ್ಯರ "ಶುಕ್ರನೀತಿ ಸಾರ" ಕೃತಿಯು "ರಾಜನೀತಿ"ಗೆ ಸಂಬಂಧಿಸಿದ ಮಾಹಿತಿಯನ್ನು ಕೊಡುತ್ತದೆ.

ಗುಪ್ತರ ಕಾಲದಲ್ಲಿದ್ದ ಕಮಂಡಕನು 'ನೀತಿಸಾರ' ಎಂಬ ರಾಜನೀತಿಗೆ ಸಂಬಂಧಿಸಿದ ಕೃತಿಯನ್ನು ರಚಿಸಿದ್ದಾನೆ.

**ಪಂಚತಂತ್ರ –** ಈ ಕೃತಿಯನ್ನು ವಿಷ್ಣುಶರ್ಮನ ಸಂಸ್ಕೃತದಲ್ಲಿ ರಚಿಸಿದ್ದಾನೆ. ಈ ಕೃತಿಯು ಪ್ರಮುಖವಾಗಿ ರಾಜಕೀಯ ಆಡಳಿತ, ವಿದೇಶಾಂಗ ನೀತಿ, ಯುದ್ಧ ಮತ್ತು ಶಾಂತಿ ಇತ್ಯಾದಿ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸುತ್ತದೆ. ಪಂಚತಂತ್ರ ಎಂದರೆ 5 ತಂತ್ರ ಎಂದರೆ 'ಪ್ರಬಂಧ' ಎಂದರ್ಥ. ಇದು 5 ಭಾಗಗಳಾಗಿದೆ

1. ಮಿತ್ರ ಬೇಧ
2. ಮಿತ್ರ ಲಾಭ
3. ಕಾಕೊಲು ಕೀಯಂ
4. ಲಬ್ಧ ಪ್ರಾಶನಂ
5. ಅಪರಾಕ್ಷಿತ ಕಾರಕಂ

ಇತರ ಸಾಹಿತ್ಯ ಕೃತಿಗಳಾದ ನಾರಾಯಣನ "ಹಿತೋಪದೇಶ", ಸೋಮದೇವನ "ಕಥಾಸರಿತ್ಸಾಗರ" ಕ್ಷೇಮೇಂದ್ರನ "ಬೃಹತ್ ಕಥಾಮಂಜರಿ"ಗಳು ಪಂಚತಂತ್ರ ಕೃತಿಯನ್ನು ಹೋಲುತ್ತವೆ.

**ಸಾಹಿತ್ಯಕ್ಕೆ ಮೊಘಲರ ಕೊಡುಗೆಗಳು**

ದೆಹಲಿಯನ್ನು ಆಳಿದ ಮೊಗಲರ ಕಾಲದಲ್ಲಿ ಪರ್ಷಿಯನ್, ಅರೇಬಿಕ್, ತುರ್ಕಿ, ಸಂಸ್ಕೃತಿ ಮತ್ತು ಹಿಂದಿ ಭಾಷೆಯಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚನೆಯಾದಾವು.

ಮೊಘಲ ರಾಜ ಬಾಬರನು "ತುಜಕ್–ಇ–ಬಾಬರಿ" ಅಥವಾ "ಬಾಬರ್ ನಾಮಾ" ಎಂಬ ಕೃತಿಯನ್ನು ಟರ್ಕಿ ಭಾಷೆಯಲ್ಲಿ ರಚಿಸಿದ್ದಾನೆ.

ಅದೇ ರೀತಿ ಹುಮಾಯೂನ್ ಸಹೋದರಿ ಗುಲ್ ಬದನ್ ಬೇಗಂಳು "ಹುಮಾಯೂನ್ ನಾಮಾ ಎಂಬ ಕೃತಿಯನ್ನು ಪರ್ಷಿಯನ್ ಭಾಷೆಯಲ್ಲಿ ರಚಿಸಿದ್ದಳು.

ಮೊಘಲರ ಕಾಲವನ್ನು ಪರ್ಷಿಯನ್ ಸಾಹಿತ್ಯದ "ಸುವರ್ಣ ಯುಗ" ಎಂದು ಗುರುತಿಸಿದ್ದಾರೆ.

ಅಕ್ಬರನ ಕಾಲದಲ್ಲಿ ಪರ್ಷಿಯನ್ ಸಾಹಿತ್ಯ ಕೃಷಿ ಸ್ವಲ್ಪ ಹೆಚ್ಚಾಯಿತೆನ್ನಬಹುದು. ಅವರು ಸಾಹಿತ್ಯವನ್ನು ಈ ಕೆಳಕಂಡ ರೀತಿಯಲ್ಲಿ ವರ್ಗೀಕರಿಸಿದ್ದಾರೆ.

1. ಐತಿಹಾಸಿಕ ಕೃತಿಗಳು
2. ಭಾಷಾಂತರದ ಕೃತಿಗಳು
3. ಕಾವ್ಯ ಮತ್ತು ಕವಿತೆ

**1. ಐತಿಹಾಸಿಕ ಕೃತಿಯಲ್ಲಿ ಪ್ರಮುಖವಾದದ್ದು –**

- ಅಬುಲ್ ಫಜಲ್‌ನ – ಐನಿ–ಇ–ಅಕ್ಬರಿ/ಅಕ್ಬರ್ ನಾಮಾ
- ಬದೌನಿಯ – ಮುಂತಖಾಬ್ –ಉಲ್–ತವಾರೀಖ್
- ಅಬ್ದುಲ್ ಖಖಿಯ – ಮಾಸಿರ್–ಇ–ರಹೀಮ
  ಇವುಗಳಲ್ಲಿ ಹೆಚ್ಚಾಗಿ ಯುದ್ಧದ ವರ್ಣನೆ, ಆಡಳಿತ, ಸೈನಿಕ ಕಂದಾಯಗಳ ಮಾಹಿತಿಯಿದೆ.

**2. ಭಾಷಾಂತರ ಕೃತಿಗಳು**

- ಮಹಾಭಾರತವನ್ನು ಅಬುಲ್ ಫಜಲ್ ಮತ್ತು ಬದೌನಿಯ ಮಹಾಭಾರತವನ್ನು ಪರ್ಷಿಯನ್ ಭಾಷೆಗೆ "ರಜ್ಮಾ ನಾಮ" ಎಂಬ ಹೆಸರಿನೊಂದಿಗೆ ಭಾಷಾಂತರಿಸಿದ್ದರು.
- ಅಬ್ದುಲ್–ಖಾದರ್–ಬದೌನಿಯು ರಾಮಾಯಣವನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿದನು.
- ಅಬುಲ್ ಫೈಜಿಯು ಸಂಸ್ಕೃತ ಲೀಲಾವತಿ ಗ್ರಂಥವನ್ನು ಭಾಷಾಂತರಿಸಿದ್ದನು.
- ದಾರಾಥೆಕೋನನು ಭಗವದ್ಗೀತೆ, ಉಪನಿಷತ್ತು, ಯೋಗವಾಶಿಷ್ಟಗಳನ್ನು ಭಾಷಾಂತರಿಸಿದನು.

3. **ಅರೇಬಿಕ್ ಸಾಹಿತ್ಯ –** ದೆಹಲಿ ಸುಲ್ತಾನರ ಅವಧಿಯಲ್ಲಿ ಅತಿ ಕಡಿಮೆ ಅರೇಬಿಕ್ ಸಾಹಿತ್ಯ ರಚನೆಯಾಯಿತು

- ಅಲ್ ಬರೂನಿಯು ಕಿತಾಬ್–ಉಲ್–ಹಿಂದ್
- ಅಬ್ದುಲ್–ಆಲ್–ಮತೀಯ ಜಫರುಲ್ ವಾಲಿಡ್ ಎಂಬ ಅರೇಬಿಕ್ ಐತಿಹಾಸಿಕ ಕೃತಿಯನ್ನು ರಚಿಸಿದನು.

4. **ಸಂಸ್ಕೃತ ಸಾಹಿತ್ಯ** – ಅಕ್ಬರನ ಕಾಲದಲ್ಲಿ ಸ್ವಲ್ಪ ಮಾತ್ರ ಸಂಸ್ಕೃತ ಸಾಹಿತ್ಯಕ್ಕೆ ಒತ್ತು ನೀಡಲಾಯಿತು.
   – ಅಕ್ಬರನ ಕಾಲದಲ್ಲಿ ರಾಮಾಯಣ ಮತ್ತು ಮಹಾಭಾರತವನ್ನು ಸಂಸ್ಕೃತದಿಂದ ಪರ್ಷಿಯನ್‌ಗೆ ಭಾಷಾಂತರ ಮಾಡಲಾಯಿತು.
   – ಕವಿ ರುದ್ರನಿಂದ "ಕೀರ್ತಿ ಸಾಮುಲ್ಲಸ್" ಮತ್ತು "ಧನಶ್ಚರಿತ".
   – ತುಳಸಿದಾಸರು ಈ ಕಾಲದ ಪ್ರಸಿದ್ಧ ಮೇರು ವ್ಯಕ್ತಿತ್ವ ಇವರು "ರಾಮಚರಿತಮಾನಸ", "ಹನುಮಾನ್ ಚಾಲೀಸ"ವನ್ನು ರಚಿಸಿದರು.

5. **ಹಿಂದಿ ಸಾಹಿತ್ಯ**

ಈ ಕಾಲದಲ್ಲಿ ಹಿಂದಿ ಭಾಷೆಯಲ್ಲಿಯೂ ಸಹ ಸಾಹಿತ್ಯ ಅಭಿವೃದ್ಧಿಯಾಯಿತು. "ಮಲ್ಲಿಕ್ ಮೊಹಮ್ಮದ್ ಜೈಸಿ" ಯ ಪದ್ಮಾವತ್; ಷಹಜಹನನ ಆಸ್ಥಾನದ ಕವಿ ಸುಂದರ ಕವಿರಾಯ ಎನ್ನುವ ಕವಿ ಹಿಂದಿಯಲ್ಲಿ "ಸುಂದರ ಶೃಂಗಾರ" ಎಂಬ ಕೃತಿಯನ್ನು ರಚಿಸಿದ್ದಾನೆ.

ಕೇಶವದಾಸ ಎಂಬ ಕವಿ "ರಸಿಕ ಪ್ರಿಯ", "ಕವಿಪ್ರಿಯ" ಮತ್ತು "ಅಲಂಕಾರ ಮಂಜರಿ" ಎಂಬ ಕೃತಿಯನ್ನು ರಚಿಸಿದ್ದಾರೆ.

## ಘಟಕ – 1

## ವಿಜ್ಞಾನ ಮತ್ತು ತಂತ್ರಜ್ಞಾನ

### ವಿಜ್ಞಾನ ಮತ್ತು ತಂತ್ರಜ್ಞಾನ

ಗಣಿತಶಾಸ್ತ್ರ – ಪ್ರಾಚೀನ ಭಾರತದಲ್ಲಿ ಗಣಿತಶಾಸ್ತ್ರವು ಸಾಕಷ್ಟು ಅಭಿವೃದ್ಧಿ ಹೊಂದಿತ್ತು. ಖಗೋಳಶಾಸ್ತ್ರ ಅಂಕಗಣಿತ, ಬೀಜಗಣಿತಗಳ ಗಣಿತಶಾಸ್ತ್ರದ ಭಾಗಗಳಾಗಿದ್ದ ಆದರೆ ರೇಖಾ ಗಣಿತದ ಭಾಗವಾಗಿರಲಿಲ್ಲ.

ಗುಜರಾತಿನಲ್ಲಿ ದೊರೆತ ಪ್ರಾಚೀನ ಶಿಲಾ ಶಾಸನದಲ್ಲಿ 9 ಅಂಕಿ ಮತ್ತು ಸೊನ್ನೆಯನ್ನು ಉಪಯೋಗಿಸಿ ದಿನಾಂಕವನ್ನು ದಾಖಲಿಸಿದ ಪ್ರಾಚೀನ ಶಾಸನ ಸಿಕ್ಕಿದೆ.

ಅನಾಮಧೇಯನ "ಬಕ್ಕಾಲೀ ಹಸ್ತ ಪ್ರತಿ" ಹಾಗೂ ಆರ್ಯಭಟ್ಟನ "ಆರ್ಯಭಟಿಯಂ" ಪ್ರಾಚೀನ ಗಣಿತ ಗ್ರಂಥಗಳು ಹರಪ್ಪ ಸಂಸ್ಕೃತಿಯ ನಗರ ಯೋಜನೆ, ಹಾಗೂ ವೇದಗಳ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಜ್ಯಾಮತಿ ಮತ್ತು ಗಣಿತವನ್ನು ಕಲಿಸುತ್ತಿದ್ದ ಬಗ್ಗೆ ಉಪನಿಷತ್‌ನಲ್ಲಿ ಉಲ್ಲೇಖ.

"ಸುಲ್ವಾ ಸೂತ್ರಗಳು" ಎಂಬಲ್ಲಿ ವೃತ್ತ, ಪರಿಧಿ, ಷಟ್‌ಕೋನ ಅಷ್ಟ ಕೋನವೆಂಬ ವಿವಿಧ ಅಂಶಗಳು.

π (ಪೈ) ನ ಮೌಲ್ಯ 3.1416 ಎಂದು ಆರ್ಯಭಟ್ಟನು ಕರಾರುವಕ್ಕಾಗಿ ಹೇಳಿದ್ದಾನೆ. ಆರ್ಯಭಟನನ್ನು "ಬೀಜಗಣಿತದ ಪಿತಾಮಹ" ಎಂದು ಕರೆಯಲಾಗಿದೆ.

ಅದೇ ರೀತಿ "ಬೃಹ್ಮಗುಪ್ತನ", 'ಬೃಹ್ಮಸ್ಪುಟ ಸಿದ್ದಾಂತ" "ಖಂಡಕಾದ್ವತ" ದಲ್ಲಿ ಅಪವರ್ತನ, ಪುಣ್ಯಸಂಖ್ಯೆ, ತ್ರೈರಾಶಿ ಸರಳ ಬಡ್ಡಿ ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾನೆ.

"ಸೊನ್ನೆ" (0) ಇತನ ಪ್ರಮುಖ ಅನ್ವೇಷಣೆ ಂ€ ಅದೇ ರೀತಿ ಅಮೋಘವರ್ಷನ ಆಸ್ಥಾನದ "ಮಹಾವೀರಚಾರ್ಯ", "ಗಣಿತ ಸಾರ ಸಂಗ್ರಹ" ಎಂಬ ಕೃತಿಯನ್ನು ರಚಿಸಿದ್ದಾನೆ. ಇಂದಿಗೂ ಸಹ ಅರೇಬಿಕರು ಸಂಖ್ಯೆಗಳನ್ನು "ಹಿಂದೂಷ" ಎಂದು ಕರೆಯುತ್ತಾರೆ.

ಮಧ್ಯಕಾಲೀನ ಯುಗದಲ್ಲಿ ರಚನೆಯಾದ ಶ್ರೀಧರನ "ಗಣಿತಸಾರ" ಬಹಾವುದ್ದೀನ್ ಲಮಾಲಿಯ "ಕುಲ್–ಸುತ್–ಉಲ್–ಹಿಸಾಖ್", ಪಂಡಿತ ನಾರಾಯಣನ "ಗಣಿತ ದಾಲಿ ಕೌಮುದಿ" ಪ್ರಮುಖವಾದವು.

### ಖಗೋಳ ಶಾಸ್ತ್ರ

"ಭೂಗೋಳಂ ಸರ್ವತೋ ವೃತ್ತಂ" – ಭೂಮಿಯು ಎಲ್ಲಾ ದಿಕ್ಕುಗಳಲ್ಲೂ ಗುಂಡಾಗಿಯೇ ಇದೆ ಎಂದು ಹೇಳಿದ ನಾಗರಿಕತೆ ಭಾರತೀಯ ನಾಗರಿಕತೆ.

ಪ್ರಾಚೀನ ಭಾರತೀಯರಿಗೆ ಬಾಹ್ಯಾಕಾಶದ ಬಗ್ಗೆ ಜ್ಞಾನವಿತ್ತು. ಋಗ್ವೇದದಲ್ಲಿ ಇದರ ಬಗ್ಗೆ ಉಲ್ಲೇಖ ಕಾಣಬಹುದು. ಸೂರ್ಯ, ಚಂದ್ರ, ನಕ್ಷತ್ರಗಳಿಗೆ ಮಾನವ ರೂಪ ಕೊಟ್ಟು ಪೂಜಿಸುತ್ತಿದ್ದರು. ವ್ರಿದ್ಧ, ಘಾರ್ಗ ಮತ್ತು ಲಗದರ ಕೃತಿಗಳು ಇಂದು ಲಭ್ಯವಿಲ್ಲವಾದರೂ ಇವು ಇದರ ಬಗ್ಗೆ ಉಲ್ಲೇಖವಿದೆ.

ಆರ್ಯಭಟ್ಟನ "ಆರ್ಯಭಟ್ಟೀಯಂ" ಸೂರ್ಯ ಸಿದ್ಧಾಂತ ಮತ್ತು "ಆರ್ಯಭಟ್ಟಿಯ ಸಿದ್ಧಾಂತ" ಎಂಬ ಕೃತಿಯನ್ನು ರಚಿಸಿದ್ದಾನೆ.

ಸೂರ್ಯ ಕೇಂದ್ರ ಸಿದ್ಧಾಂತವನ್ನು ತಿಳಿಸಿದ್ದಾನೆ ಮಹಾವೀರನು ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಉಲ್ಲೇಖವಿರುವಂತಹ "ಬೃಹತ್ ಜಾತಕ", "ಬೃಹತ್ ಸಂಹಿತ" ಮತ್ತು "ಲಘು ಜಾತಕ", "ಪಂಚ ಸಿದ್ಧಾಂತಿಕ ರಚಿಸಿದ್ದಾನೆ.

ಬ್ರಹ್ಮಗುಪ್ತನು "ಬ್ರಹ್ಮ ಸಿದ್ದಾಂತ" ಅಥವಾ "ಬ್ರಹ್ಮ ಸ್ಪುಟ" ಸಿದ್ಧಾಂತ ಮತ್ತು "ಖಂಡ ಕಾದ್ಯತ" ರಚಿಸಿದ್ದಾನೆ.

ಮಧ್ಯಯುಗದಲ್ಲೂ ಭಾರತೀಯ ಖಗೋಳಶಾಸ್ತ್ರ ಅಭಿವೃದ್ಧಿಗೊಂಡಿತು. 11ನೇ ಶತಮಾನದಲ್ಲಿ ಶ್ರೀಪತಿಯು "ಸಿದ್ಧಾಂತ ಶೇಖರ" ಎಂಬ ಕೃತಿಯನ್ನು ಕ್ರಿ.ಶ.12ನೇ ಶತಮಾನದಲ್ಲಿದ್ದ ಎರಡನೇ ಭಾಸ್ಕರನು "ಸಿದ್ಧಾಂತ ಶಿರೋಮಣಿ" ಮತ್ತು 'ಕರ ಕುತೂಹಲ' ಎಂಬ ಕೃತಿಯನ್ನು ರಚಿಸಿದ್ದಾನೆ.

ಫಿರೋಜ್ ಷಾ ತುಘಲಕ್ ದೆಹಲಿಯಲ್ಲಿ ಖಗೋಳ ವೀಕ್ಷಣಾಲಯವನ್ನು ನಿರ್ಮಿಸಿದನು. ಕ್ರಿ.ಶ. 18ನೇ ಶತಮಾನದಲ್ಲಿ ರಾಜ್ಯ ಸವಾಯಿ ಜೈ ಸಿಂಗನು ಜೈಪುರ, ಉಜ್ಜೈನಿ, ಮಥುರಾ, ದೆಹಲಿ, ವಾರಣಾಸಿಯಲ್ಲಿ ಖಗೋಳ ವೀಕ್ಷಣಾಲಯವನ್ನು ನಿರ್ಮಿಸಿದನು.

**ಭೌತಶಾಸ್ತ್ರ**

ಋಗ್ವೇದವು ನಮಗೆ ಬೆಳಕಿನ ವೇಗ ಅಥವಾ ಸಾಪೇಕ್ಷವಾದದ ಬಗ್ಗೆ ತಿಳಿಸುತ್ತದೆ. ನೈಸರ್ಗಿಕ ಜಗತ್ತು 'ಪಂಚಭೂತ'ಗಳಿಂದ ಮಾಡಲ್ಪಟ್ಟಿದೆ ಎಂದು ಕರೆಯಲಾಗಿದೆ. ಈ ಪಂಚಭೂತಗಳು ಸಣ್ಣ ಸಣ್ಣ ವಸ್ತುಗಳಿಂದ ಮಾಡಲ್ಪಟ್ಟಿದೆ ಅದನ್ನು 'ಕಣ' ಎಂದು ಕರೆದಿದ್ದಾರೆ. ಈ ಕಣಗಳನ್ನು ವಿಭಾಗಿಸಿದಾಗ ಬರುವ ವಸ್ತುವನ್ನು 'ಅಣು' ಎಂದು ಕರೆದಿದ್ದಾರೆ. ಇದನ್ನು 'ಅಣು ಸಿದ್ಧಾಂತ' ಎಂದು ಕರೆಯಲಾಗಿದೆ ಈ ಸಿದ್ಧಾಂತವನ್ನು ಸಾರಿದವನು 'ಮಹರ್ಷಿ ಕನಾದ'.

**ರಾಸಾಯನಶಾಸ್ತ್ರ**

ಪ್ರಾಚೀನ ಕಾಲದಲ್ಲಿ ವೈದ್ಯಕೀಯ ಶಾಸ್ತ್ರದ ಜೊತೆ ರಾಸಾಯನಿಕ ಶಾಸ್ತ್ರವನ್ನು ಸೇರಿಸಿಕೊಂಡು ಅಧ್ಯಯನ ಮಾಡಲಾಗುತ್ತಿತ್ತು. ಕ್ರಿ.ಶ. 2ನೇ ಶತಮಾನದ ಸನ್ಯಾಸಿ ನಾಗಾರ್ಜುನನು 'ಲೋಹ ಶಾಸ್ತ್ರ'ದಲ್ಲಿ ಪ್ರಾವೀಣ್ಯತೆ ಪಡೆದಿದ್ದನು. ಅದೇ ರೀತಿ ಇನ್ನೊಬ್ಬ ಬೌದ್ಧ ಸನ್ಯಾಸಿ ಕ್ರಿ.ಶ. 8 ಮತ್ತು 9ನೇ ಶತಮಾನದಲ್ಲಿ 'ರಸವೈದ್ಯ' ಎಂಬ ಕೃತಿಯನ್ನು ರಚಿಸಿದ್ದಾನೆ. ಪಾದರಸವನ್ನು ವೈದ್ಯಕೀಯ ವಿಷಯಗಳಿಗೆ ಬಳಸಿದ ವಿಶ್ವದ ಮೊದಲಿಗ.

**ಸಸ್ಯಶಾಸ್ತ್ರ**

ಪ್ರಾಚೀನ ಭಾರತೀಯರಿಗೆ ಸಸ್ಯಶಾಸ್ತ್ರದ ಬಗ್ಗೆ ಜ್ಞಾನವಿತ್ತು. ಸಿಂಧೂ ನಾಗರಿಕತೆಯಲ್ಲಿ ಜನರು ಗೋಧಿ, ಬಾರ್ಲಿ, ಅನೇಕ ವಿಧದ ಬೆಳೆಗಳನ್ನು ಬೆಳೆಯುತ್ತಿದ್ದರು. ಅದೇ ರೀತಿ ಬೇವು, ಅರಳಿ ಮತ್ತು ತುಳಸಿ ಗಿಡಗಳನ್ನು ಪೂಜಿಸುತ್ತಿದ್ದರು.

ವೈದಿಕ ಯುಗದ ಜನರಿಗೆ ಅನೇಕ ಸಸ್ಯಗಳ ಬಗ್ಗೆ ಪರಿಚಯವಿತ್ತು. ವೈದಿಕ ಕೃತಿಗಳಲ್ಲಿ 'ಕೃಷಿ ಬೆಳೆಗಳ' ಆವರ್ತನ ಪದ್ಧತಿ ಮತ್ತು ಗೊಬ್ಬರಗಳ ಬಳಕೆಯ ಬಗ್ಗೆ ಉಲ್ಲೇಖ ಬರುತ್ತದೆ.

ಸೋಮ ಸಸ್ಯ, ಅರಳಿಮರ, ರೇಷ್ಮೆ, ಹತ್ತಿ, ಗಿಡ, ಕಬ್ಬು, ತಾವರೆ, ಕುಂಬಳ ಗಿಡ, ಬಿಲ್ವ, ತುಳಸಿ, ಬೇವು, ಅಣಬೆಗಳ ಬಗ್ಗೆ ಮಾಹಿತಿ ನೀಡುತ್ತದೆ.

**ಸಸ್ಯ ಶರೀರ ಶಾಸ್ತ್ರ**

ಮಹಾಭಾರತದ ಶಾಂತಿಪರ್ವ ಸಸ್ಯಗಳಲ್ಲಿ ಕಂಡುಬರುವ ಸಸ್ಯರಸ (ಖನಿಜ+ನೀರು) ಮೇಲ್ಮುಖ ಚಲನೆಯ ಬಗ್ಗೆ ಮಾಹಿತಿ ನೀಡುತ್ತದೆ. ಇದೇ ಪರ್ವವು ಸಸ್ಯಗಳ ಆಹಾರೋತ್ಪತ್ತಿಯನ್ನು ವಿವರಿಸುತ್ತದೆ.

**ಪ್ರಾಣಿ ಶಾಸ್ತ್ರ**

ಸಿಂಧೂ ಬಯಲಿನ ನಾಗರಿಕತೆಯ ಜನರಿಗೆ ಅನೇಕ ಪ್ರಾಣಿಗಳ ಬಗ್ಗೆ ತಿಳಿದಿತ್ತು. ಅವರು ಅನೇಕ ಪ್ರಾಣಿಗಳನ್ನು ಆಹಾರ ಮತ್ತು ಇತರ ಉದ್ದೇಶಕ್ಕೆ ಸಾಕುತ್ತಿದ್ದರು.

ವೈದಿಕ ಕಾಲದ ಸಾಹಿತ್ಯದಲ್ಲೂ ಪ್ರಾಣಿ ಶಾಸ್ತ್ರದ ಬಗ್ಗೆ ಮಾಹಿತಿ ನೀಡುತ್ತದೆ. ಈ ಕೃತಿಗಳು ಪ್ರಾಣಿಗಳ ಬಗ್ಗೆ ಅವುಗಳ ವರ್ಗೀಕರಣ. ಅವುಗಳ ರೂಪುರೇಷೆ, ಭ್ರೂಣಶಾಸ್ತ್ರ ಪ್ರಾಣಿಗಳಿಗೆ ಬರುವ ರೋಗಗಳು ಮತ್ತು ಅವುಗಳನ್ನು ಗುಣಪಡಿಸುವ ರೀತಿಯ ಬಗ್ಗೆ ಮಾಹಿತಿ ನೀಡುತ್ತದೆ.

ಯಜುರ್ವೇದವು ನಮಗೆ 21 ಬಗೆಯ ಹಾವುಗಳು, ಕೀಟಗಳು, ಮತ್ತು ಅನೇಕ ರೀತಿಯ ಬ್ಯಾಕ್ಟೀರಿಯಗಳ ಬಗ್ಗೆ ಮಾಹಿತಿ ನೀಡುತ್ತದೆ. ವಜಸನೆಯ ಸಂಹಿತವು ಕುದುರೆಯ ಮೂಳೆಗಳ ಬಗ್ಗೆ ಮಾಹಿತಿ ನೀಡುತ್ತದೆ.

**ಶರೀರಶಾಸ್ತ್ರ**

ಪ್ರಾಚೀನ ಗ್ರಂಥಗಳಾದ ಯಜುರ್ವೇದ ಮತ್ತು ಶತಪಥ ಬ್ರಾಹ್ಮಣದಲ್ಲಿ ಮಾನವನಲ್ಲಿರುವ 360 ವಿವಿಧ ರೀತಿಯ ಮೂಳೆಗಳ ಬಗ್ಗೆ ಉಲ್ಲೇಖಿಸುತ್ತದೆ.

ಅಥರ್ವಣವೇದ ಮತ್ತು ಬೃಹದಾರಣ್ಯಕ ಉಪನಿಷತ್ ಕೆಲವು ಶಾಸ್ತ್ರ ಚಿಕಿತ್ಸಕ ವಿಧಾನಗಳ ಬಗ್ಗೆ ಮಾಹಿತಿ ನೀಡುತ್ತದೆ. ಆರೋಗ್ಯವನ್ನು ಕಾಯ್ದುಕೊಳ್ಳುವುದಕ್ಕೆ ಶರೀರದ ಮುಖ್ಯ ದ್ರವಗಳಾದ ವಾತ–ಪಿತ್ತ–ಕಫ ಎಂಬ ತ್ರಿವಿಧಗಳನ್ನು ಸಮಪ್ರಮಾಣದಲ್ಲಿ ನಿರ್ವಹಿಸುವುದರ ಕುರಿತು ಹೇಳುತ್ತದೆ.

ಶರೀರ ರಚನೆಯ ನಿಖರ ಮಾಹಿತಿ ಇಲ್ಲದಿರುವಾಗ ಅನುಭವಧಾರಿತ ಶಸ್ತ್ರಚಿಕಿತ್ಸಾ ಪದ್ಧತಿಯನ್ನು ಬೆಳೆಸಿತು ಸಸೇರಿಯನ್ ಚಿಕಿತ್ಸಾ ವಿಧಾನ ಬೆಳೆದಿತ್ತು. ಎಲಬುಗಳ ಜೋಡಣಾ ಕೌಶಲ್ಯ ಭಾರತೀಯರಿಗೆ ತಿಳಿದಿತ್ತು.

**ಔಷಧ ಶಾಸ್ತ್ರ**

ಋಗ್ವೇದದ ಉಪ ವೇದವಾದ "ಆಯುರ್ವೇದ" ನಮಗೆ ಪ್ರಾಚೀನ ಔಷದ ವಿಜ್ಞಾನದ ಬಗ್ಗೆ ಮಾಹಿತಿ ನೀಡುವ ಮೊದಲು ಕೃತಿಯಾಗಿದೆ.

ಚರಕನ 'ಚರಕ ಸಂಹಿತೆ'ಯಲ್ಲಿ ರೋಗದ ಪತ್ತೆ, ರೋಗಗಳ ವರ್ಗೀಕರಣ ಮತ್ತು ರೋಗ ಚಿಕಿತ್ಸೆಯ ಬಗ್ಗೆ ತಿಳಿಸುತ್ತಾನೆ. ತನ್ನ ಕೃತಿಯಲ್ಲಿ ರಕ್ತ ಪರಿಚಲನೆಯ ಬಗ್ಗೆ ಮಾಹಿತಿ ನೀಡಿದ್ದಾನೆ,

ಶುಶ್ರೂತನ 'ಶುಶ್ರುತ ಸಂಹಿತೆ'ಯಲ್ಲಿ ಶಸ್ತ್ರಚಿಕಿತ್ಸೆಯ ಬಗ್ಗೆ ತಿಳಿಸುತ್ತಾನೆ. ಕಬ್ಬಿಣ ಮತ್ತು ಪಾದರಸವನ್ನು ವೈದ್ಯಕೀಯ ಶಾಸ್ತ್ರದಲ್ಲಿ ಬಳಸಿದ್ದು ಪ್ರಾಚೀನ ಭಾರತೀಯರ ಅತ್ಯುನ್ನತ ಕೊಡುಗೆ.

ಚೌಲಮುಗ್ರಾ ಮರದ ಎಣ್ಣೆಯನ್ನು ಕುಷ್ಟರೋಗಕ್ಕೆ ಬಳಸುತ್ತಿದ್ದರು. ಹೀಗೆ ಭಾರತೀಯರು ಮನುಷ್ಯ, ಪ್ರಾಣಿಗಳ ಸಾಲ ಚಿಕಿತ್ಸಾ ವಿಧಾನದಲ್ಲಿ ತುಂಬಾ ಮುಂದೆವರೆದಿದ್ದರು.

**ನೌಕ ನಿರ್ಮಾಣ**

ಪ್ರಾಚೀನ ಭಾರತೀಯರಿಗೆ ಹಡಗು ನಿರ್ಮಾಣ ಕಲೆ ತಿಳಿದಿತ್ತು. ಪ್ರಾಚೀನ ಭಾರತೀಯರ ಹಡಗು/ ನೌಕಾ ನಿರ್ಮಾಣ ಕಲೆಯ ಮೊದಲ ಪುರಾವೆ ದೊರಕಿದ್ದು 'ಲೋಥಾಲ್'ನಲ್ಲಿ ಹಡಗು ಕಟ್ಟೆಯ ದಾಖಲೆ. ಹಡಗು ನಿರ್ಮಾಣಕ್ಕೆ ಸಾಮಾನ್ಯವಾಗಿ ತೇಗದ ಮರ ಬಳಸುತ್ತಿದ್ದರು.

ವೇದಕಾಲವನ್ನು ನೌಕಾ ನಿರ್ಮಾಣ ವಿಷಯದಲ್ಲಿ "ಕತ್ತಲೆಯ ಯುಗ" ಎಂದು ಕರೆಯಲಾಗಿದೆ ಏಕೆಂದರೆ ಈ ಕಾಲದ ದಾಖಲೆಗಳು ಲಭ್ಯವಾಗಿಲ್ಲ.

ರಜಪೂತರ ದೊರೆ ಭೋಜರಾಜ ರಚಿಸಿದ ಗ್ರಂಥ 'ಯುಕ್ತಿ ಕಲ್ಪತರು' ಕೃತಿ ಹಡಗು ನಿರ್ಮಾಣದ ವಿವಿಧ ಮಾಹಿತಿ ನೀಡುತ್ತದೆ. 2 ಮಾದರಿಯ ಹಡಗಿನ ಬಗ್ಗೆ ಹೇಳುತ್ತಾದೆ 1. ಸಾಮಾನ್ಯ 2. ವಿಶೇಷ ಹಡಗು.

ಪ್ರತಿ ಹಡಗು 'ನವ ಭಂದನ ಖಿಲಾ' ಎಂಬ ಗಟ್ಟಿಯಾಗ ಲೋಹದಿಂದ ಮಾಡಿದ ತಳಹದಿಯನ್ನು ಹೊಂದಿತ್ತು. ಸಮುದ್ರಯಾನದ ದಿಕ್ಕನ್ನು ಗುರುತಿಸಲು 'ಮತ್ಸ್ಯ ಯಂತ್ರ'ವನ್ನು ಕಂಡುಹಿಡಿದರು. ಅದನ್ನೇ ಯುರೋಪಿಯನ್ನರು "ಮರಿನರಿ ಕಂಪಾಸ್" ಎಂಬ ಹೆಸರಿನಲ್ಲಿ ಅಭಿವೃದ್ಧಿಗೊಳಿಸಿದರು.

ಛತ್ರಪತಿ ಶಿವಾಜಿ ಮಹಾರಾಜರನ್ನು "ಭಾರತೀಯ ನೌಕಾ ಸೇನೆಯ ಪಿತಾಮಹ" ಎಂದು ಕರೆಯಲಾಗಿದೆ.

**ಲೋಹ ಶಾಸ್ತ್ರ/ಗಣಿಗಾರಿಕೆ**

ಇತರ ವಿಜ್ಞಾನದಂತೆ ಲೋಹ ಶಾಸ್ತ್ರವು ಕೂಡ ಪ್ರಾಚೀನ ಭಾರತದಲ್ಲಿ ಪ್ರಗತಿಯಾಗಿದ್ದು ಅಥರ್ವಣ ವೇದದಲ್ಲಿ ಲೋಹಗಾರಿಕೆಯನ್ನು "ರಸಸಿದ್ಧಿ" ಎಂದು ವರ್ಣಿಸಲಾಗಿದೆ ಅರ್ಥಶಾಸ್ತ್ರದಲ್ಲಿ ರಸವಿದ್ದಂ ಎಂದು ವರ್ಣಿಸಲಾಗಿದೆ. ಅರ್ಥಶಾಸ್ತ್ರ ವೈದ್ಯಕೀಯ ಗ್ರಂಥಗಳಾದ ಅಷ್ಟಾಂಗ ಸಂಗ್ರಹ ಚರಕ ಸಂಹಿತೆಯಲ್ಲಿ ಲೋಹವನ್ನು ಭಸ್ಮ ಮಾಡುವ ವಿಧಾನಗಳು ಗುಣಲಕ್ಷಣಗಳನ್ನು ವರ್ಣಿಸಲಾಗಿದೆ.

ಮೆಹ್ರುಲಿಯಲ್ಲಿರುವ ಉಕ್ಕಿನ ಸ್ತಂಭ ಭಾರತೀಯರ ಲೋಹ ಶಾಸ್ತ್ರದ ಪರಿಣಿತಿಯ ಬಗ್ಗೆ ಉತ್ತಮ ಉದಾಹರಣೆ.

ಪ್ರಾಚೀನ ಭಾರತೀಯರಿಗೆ ಚಿನ್ನ, ಬೆಳ್ಳಿ, ತಾಮ್ರ, ವಜ್ರ, ಅಮೃತಶಿಲೆ ಮುಂತಾದ ಗುಣಗಳನ್ನು ಕಂಡುಹಿಡಿಯುವ ರೀತಿಯು, ಕೆಲಸ ಮಾಡುವ ವಿಧಾನಗಳು ತಿಳಿದಿದ್ದವು ಎಂದು ಮೆಗಸ್ತಾನೀಸ್ ತಿಳಿಸಿದ್ದಾನೆ. ಕೌಟಿಲ್ಯನು ಗಣಿಗಳ ವಿಷಯವನ್ನು ವಿಸ್ತಾರವಾಗಿ ಹೇಳಿರುವನು ವರಾಹಮೀರನು ಬೃಹತ್ ಸಂಹಿತೆಯಲ್ಲಿ ಭೂಕಂಪ ಪ್ರಭೇದಗಳು ಮತ್ತು ಕಾರಣವನ್ನು ಹೇಳಿರುವನು.

**ಇಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪ**

ಪ್ರಾಚೀನ ಭಾರತದಲ್ಲಿ ನಿರ್ಮಾಣವಾಗಿದ್ದ ಸ್ತೂಪಗಳು, ವಿಹಾರಗಳು, ದೇವಾಲಯಗಳು ಅರಮನೆಗಳು ಆಗಿನ ಕಾಲದ ತಾಂತ್ರಿಕ ಕುಶಲತೆಗೆ ಹಿಡಿದ ಕೈಗನ್ನಡಿಯಾಗಿದೆ, ಇದನ್ನು ವಾಸ್ತುಶಿಲ್ಪಗಳ 'ಸ್ಥಾಪತ್ಯ ಶಾಸ್ತ್ರ' ಎಂದು ಕರೆದಿದ್ದಾರೆ.

ಸ್ತೂಪಗಳು – ಸಂಚಿ ಸ್ತೂಪ; ಗೃಹಂತರ ದೇವಾಲಯಗಳು; ಎಲ್ಲೋರ ಎಲಿಫೆಂಟಾ ದೇವಾಲಯಗಳು; ಕೈಲಾಸನಾಥ ದೇವಾಲಯ ಇತ್ಯಾದಿ.

## ಘಟಕ – 1

## ಕಲೆಗಳು:–

ಪ್ರಾಚೀನ ಭಾರತದಲ್ಲಿ ಮೂರ್ತಿ ಶಿಲ್ಪವು ತುಂಬಾ ಅಭಿವೃದ್ಧಿಗೊಂಡಿತು. ಇದರ ಆಧಾರ ನಮಗೆ ಸಿಂಧೂ ಬಯಲಿನ ನಾಗರೀಕತೆಯ ಕಾಲದಲ್ಲಿ ಸಿಗುತ್ತದೆ. ಉದಾ: ಮೆಹಂಜೋದಾರ್‌ನಲ್ಲಿ ಸಿಕ್ಕಿರುವ ನಾಟ್ಯ ಭಂಗಿಯ ಹೆಣ್ಣಿನ ಮೂರ್ತಿ, ಗಡ್ಡವಿರುವ ಮನುಷ್ಯನ ಮೂರ್ತಿ, ಹರಪ್ಪದಲ್ಲಿ ದೊರೆತಿರುವ ಮಾತೃದೇವತೆಯ ವಿಗ್ರಹ; ಲೋಥಾಲನಲ್ಲಿ ಸಿಕ್ಕಿರುವ ಕಂಚಿನ ನಾಯಯ ಮೂರ್ತಿಗಳು.

ಮೌರ್ಯರ ಕಾಲದ ಕಲೆ, ವಾಸ್ತುಶಿಲ್ಪಕ್ಕೆ ಅನೇಕ ಉತ್ತಮ ಉದಾಹರಣೆಗಳು ಸಿಗುತ್ತದೆ.

1. ಸ್ತಂಭಗಳು – ಅಶೋಕನ ಕಾಲದ ಅನೇಕ ಸ್ತಂಭಗಳು ಗಂಗಾನದಿಯ ಪಾತ್ರದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವು ಏಕಶಿಲೆಯಿಂದ ನಿರ್ಮಿತವಾಗಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಸಾರನಾಥ ಸ್ಥಂಬ. ಇವುಗಳನ್ನು ಧರ್ಮಸ್ಥಂಬಗಳೆಂದು ಕರೆದಿದ್ದಾನೆ.
2. ಅರಮನೆಗಳು – ಇವರ ಅರಮನೆಗಳು ಮರದಿಂದ ನಿರ್ಮಾಣವಾಗಿದ್ದರಿಂದ ಕಾಲಚಕ್ರದ ಹೊಡೆತಕ್ಕೆ ಸಿಲುಕಿ ನಾಶವಾಗಿದೆ. ಅದರ ಅವಶೇಷಗಳು ಇತ್ತೀಚೆಗೆ ದೊರೆತಿದೆ. ಪಾಟ್ನಾದಲ್ಲಿ 100 ಕಂಬಗಳ ವಿಶಾಲ ಅಂಗಳ ಪತ್ತೆಯಾಗಿದೆ.

ಇವರ ಅರಮನೆಯ ವೈಭವವನ್ನು ಗ್ರೀಕ ಬರಹಗಾರ ಮೆಗಾಸ್ತನೀಸ್, ಚೀನಿ ಪ್ರವಾಸಿಗ ಷಾಹಿಯಾನ್, ಅಫ್‌ಘಾನಿಸ್ತಾನದ ಕುಮ್ರಹಾರನಲ್ಲಿ ದೊರೆತಿರುವ ಅವಶೇಷಗಳು ಸಮರ್ಥಿಸುತ್ತದೆ.

3. ಗುಹಾಲಯಗಳು – ಜೈನ ಮತ್ತು ಬೌದ್ಧ ಸನ್ಯಾಸಿಗಳ ಧ್ಯಾನಾಸಕ್ತಿಗಾಗಿ ನಿರ್ಮಾಣದಂತವುಗಳು, ಧಾರ್ಮಿಕ ಉದ್ದೇಶಕ್ಕೋಸ್ಕರವೇ ನಿರ್ಮಾಣವಾಗುತ್ತಿರುವ ಮಾನವ ನಿರ್ಮಿತ ಗುಹೆಗಳು ಮುಂದೆ ತುಂಬಾ ಕಲಾತ್ಮಕವಾಗಿ ನಿರ್ಮಾಣವಾಗಿ ಕಲೆಯ ಐಸಿರಿಯನ್ನು ಪ್ರದರ್ಶನ ಮಾಡುತ್ತಿವೆ.
   ಉದಾ:– ಬರಾಬರಾ, ನಾಗಾರ್ಜುನ, ಉದಯಗಿರಿ, ಐಹೊಳೆ ಇತ್ಯಾದಿ.
4. ಸ್ತೂಪಗಳು – ಅಶೋಕನು ಅನೇಕ ಸ್ತೂಪಗಳನ್ನು ಕಟ್ಟಿಸಿದ್ದಾನೆ. ಇಟ್ಟಿಗೆ ಅಥವಾ ಶಿಲೆಯಿಂದ ಗುಮ್ಮಟಾಕಾರದಲ್ಲಿ ರಚಿಸಿರುವ ಆಕೃತಿಯಾ ಸ್ತೂಪ ಇವು ಅಲಂಕಾರಿಕ ದ್ವಾರಗಳನ್ನು ಹೊಂದಿದೆ. ಸೂತ್ತಲೂ ಕಲಾಕೃತಿಗಳಿಂದ ಆವೃತವಾದ ಬೇಲಿಯಾಕಾರದ ರಚನೆಯಿದೆ.
   ಉದಾಹರಣೆ:– ಸಾಂಚಿ ಸ್ತೂಪ.

ಮೌರ್ಯೋತ್ತರ ಕಾಲವನ್ನು ಮೂರ್ತಿ ಶಿಲ್ಪ ಕಲೆಯ "ಸುವರ್ಣಯುಗ" ಎನ್ನುವರು. ಪ್ರಮುಖವಾಗಿ 3 ಕಲೆ ಭಾರತದಲ್ಲಿ ಅಭಿವೃದ್ಧಿಗೊಂಡಿತು (1) ಗಾಂಧಾರ ಕಲೆ (2) ಮಧುರಾ ಕಲೆ (3) ಅಮರಾವತಿ ಕಲೆ

1. ಗಾಂಧಾರ ಕಲೆ – ಪ್ರಮುಖವಾಗಿ ಗ್ರೀಕ್ ಕಲೆಯಿಂದ ಪ್ರಭಾವಿತಗೊಂಡಿತು. ಇದನ್ನು "ಇಂಡೋ–ಗ್ರೀಕ್ ಕಲೆ" ಎನ್ನುವರು. ಈ ಕಲೆಯನ್ನು "ಭಾರತೀಯ ಹೃದಯವನ್ನು ಗ್ರೀಕ್ ಕೈಗಳನ್ನು ಹೊಂದಿದೆ" ಎಂದು ಇತಿಹಾಸಕಾರರು ವರ್ಣಿಸಿದ್ದಾರೆ.

ವಿಗ್ರಹಗಳನ್ನು ನೈಜರೂಪದಲ್ಲಿ ಅಂದರೆ ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಒತ್ತು ನೀಡಿ ನಿರ್ಮಿಸಲಾಗಿದೆ.

ಮಥುರಾ ಕಲೆ – ಈ ಕಲೆ ಸಂಪೂರ್ಣ ದೇಶೀಯ ಕಲೆಯಾಗಿತ್ತು. ಈ ಕಲೆಯ ಪ್ರಮುಖ ವಸ್ತು ಜೈನಧರ್ಮ, ವೈದಿಕಧರ್ಮ ಮತ್ತು ಬೌದ್ಧ ಧರ್ಮ.

ಈ ಕಲೆಯು ಮೂರ್ತಿಗಳನ್ನು ಕೆಂಪು ಮರಳು ಶಿಲೆಯಲ್ಲಿ ನಿರ್ಮಿಸಲಾಗಿದೆ. ಈ ಮೂರ್ತಿಗಳನ್ನು ಹೆಚ್ಚಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಭಾವ ಇತ್ತು.

ಮೊದಲು ಜೈನ ತೀರ್ಥಂಕರ, ಬುದ್ಧ ಹಾಗೂ ಬೋಸತ್ವನ ಮೂರ್ತಿಗಳನ್ನು ನಿರ್ಮಿಸಿದ್ದು ಈ ಮಥುರಾ ಕಲೆ.

ರುಂಡವಿಲ್ಲದ ಕಾನಿಷ್ಕನ ಮೂರ್ತಿಯು ಈ ಕಲೆಯ ಅದ್ಭುತ ರಚನೆ. ಈ ಕಲೆಯು ದಿನನಿತ್ಯದ ಜೀವನಕ್ಕೆ ಸಂಭಂದಿಸಿದ ಮೂರ್ತಿ ಚಿತ್ರಗಳನ್ನು ಅರಣ್ಯ ಚಿತ್ರಗಳನ್ನು, ಪಕ್ಷಿಗಳಿಗೆ ಆಹಾರ ನೀಡುತ್ತಿರುವ ಚಿತ್ರ ರಚಿಸಿದೆ. ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಮತ್ತು ಅವುಗಳ ಚಿನ್ಹೆಗಳನ್ನು ಮೊದಲು ಶಿಲ್ಪರೂಪದಲ್ಲಿ ನಿರ್ಮಿಸಿದ್ದು ಮಥುರಾ ಕಲೆ.

ಅಮರಾವತಿ ಕಲೆ – ದಕ್ಷಿಣ ಭಾರತದಲ್ಲಿ ಅದರಲ್ಲೂ ಆಂಧ್ರಪ್ರದೇಶ ಭಾಗದಲ್ಲಿ ಅಭಿವೃದ್ಧಿಗೊಂಡಂತಹ ಕಲೆ, ಸಂಪೂರ್ಣ ದೇಶಿ ಕಲೆ, ಮಥುರಾ ಕಲೆಯ ಪ್ರಭಾವಕ್ಕೆ ಒಳಗಾಗಿ ಬೆಳೆದಂತಹ ಕಲೆ, ಈ ಕಲೆಯ ಪ್ರಮುಖ ವಸ್ತು ಬೌದ್ಧ ಧರ್ಮ.

ಈ ಕಲೆಯು ಬುದ್ಧನ ಹಾಗೂ ಕೆಲವು ರಾಜರ ಮೂರ್ತಿಗಳನ್ನು ಅಮೃತ ಶಿಲೆಯಲ್ಲಿ ಕೆತ್ತಲಾಗಿದೆ.

ಗುಪ್ತರ ಕಾಲದ ಮೂರ್ತಿ ಶಿಲ್ಪಕಲೆ

ಗುಪ್ತರ ಕಾಲವನ್ನು ಕಲೆ, ವಾಸ್ತುಶಿಲ್ಪ, ಸಾಹಿತ್ಯ ವಿಷಯದಲ್ಲಿ 'ಸುವರ್ಣಯುಗ' ಎಂದು ಕರೆಯಲಾಗಿದೆ. ಭಾರತೀಯ ಕಲಾ ಸಂಪತ್ತು ವಿದೇಶಗಳಲ್ಲೂ ಹರಡಿತು. ಸಾರಾನಾಥದಲ್ಲಿರುವ ಬುದ್ಧನು ತನ್ನ ಪ್ರವಚನವನ್ನು ಭೋಧಿಸುತ್ತಿರುವ ವಿಗ್ರಹ, ಗ್ವಾಲಿಯರ್‌ನ ಅಪ್ಸರೆಯರು, ಶಿವ, ವಿಷ್ಣು, ಸೂರ್ಯ ಕಾರ್ತಿಕೇಯರ ಮೂರ್ತಿಗಳು ಪ್ರಮುಕವಾದವು.

ಗುಪ್ತರು ಮೂರ್ತಿಗಳ ಲಾವಣ್ಯಕ್ಕೆ ಹೆಚ್ಚು ಒತ್ತು ಕೊಡದೆ ಅಂತಃ ಶಕ್ತಿ ಹಾಗೂ ಶಾಂತ ಮುಖಭಾವಕ್ಕೆ ಒತ್ತು ನೀಡಿದ್ದಾರೆ.

**ಚಿತ್ರಕಲೆ**

ಮಾನವನಿಗೆ ಭಾಷೆ ಮತ್ತು ಲಿಪಿ ತಿಳಿದಿರದಿದ್ದ (ಪ್ರಾಗೈತಿಹಾಸ) ಕಾಲದಿಂದಲೂ ಚಿತ್ರಕಲೆ ಬೆಳೆದುಬಂದಿದೆ. ಇದನ್ನು ಆ ಕಾಲದ ಗುಹಾಚಿತ್ರಗಳು ನಿರೂಪಿಸಿದೆ. ಈ ಚಿತ್ರಗಳಲ್ಲಿ ಸಮಾನ್ಯವಾಗಿ ಬಿಳಿ, ಕಪ್ಪು ಮತ್ತು ಕೆಂಪು ಬಣ್ಣವನ್ನು ಬಳಸುತ್ತಿದ್ದರು. ಹೆಚ್ಚಾಗಿ ಬೇಟೆಯಾಡುವ, ಸಂಗೀತ, ಕುದುರೆ, ಸವಾರಿ ಮುಂತಾದ ಚಿತ್ರಗಳನ್ನು ಹೆಚ್ಚಾಗಿ ಕಾಣಬಹುದು.

**ಅಜಂತಾ ಚಿತ್ರಕಲೆ**

ಶಾತವಾಹನರ ಕಾಲದಲ್ಲಿ ಆರಂಭವಾದ ಈ ಚಿತ್ರಕಲೆ – ಒಟ್ಟು ಅಜಂತಾದಲ್ಲಿ 29 ಗುಹೆಗಳ ಪೈಕಿ 16 ಗುಹೆಗಳಲ್ಲಿ ವರ್ಣಚಿತ್ರಗಳಿವೆ ಗುಹೆಯ ಗೋಡೆಗಳ ಹಾಗೂ ಚಾವಣಿಗಳ ಮೇಲೆ ಬುದ್ಧನ ಜೀವನ ಚಿತ್ರವನ್ನು ಚಿತ್ರಿಸಲಾಗಿದೆ. 'ಬುದ್ಧನ ಪ್ರಲೋಭನೆ' ಹಾಗೂ ಪುಲಕೇಶೀಯ ಆಸ್ಥಾನದಲ್ಲಿರುವ ಪರ್ಷಿಯಾ ರಾಯಭಾರಿಯ ದೃಶ್ಯಗಳು ಪ್ರಮುಖವಾಗಿದೆ.

ಅಜಂತಾ ಗುಹೆಯು ಅನೇಕ ಲೌಖಿಕ ಮತ್ತು ಅಲೌಖಿಕ ಚಿತ್ರಗಳನ್ನು ಹೊಂದಿದೆ ಹಾಗೂ ವರ್ಣಚಿತ್ರ ಜಗತ್ತಿನಲ್ಲಿ ಭಾರತೀಯರ ಸಾಧನೆಯನ್ನು ಬಿಂಬಿಸುತ್ತದೆ.

**ಗುಪ್ತರ ಕಾಲದ ಕಲೆ**

1. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಮಹತ್ವದ ಬದಲಾವಣೆ ಕಂಡುಬಂದವು.
2. ಕಲ್ಲುಗಳನ್ನು ಕೆತ್ತಿ ಇಟ್ಟಿಗೆಯಂತೆ ಜೋಡಿಸಿ ಕಟ್ಟಡ ನಿರ್ಮಿಸುವ ಕೆಲಸ ಆರಂಭವಾಗಿದ್ದು ಇದೇ ಕಾಲದಲ್ಲಿ
3. ಗರ್ಭಗೃಹದ ಒಳಗೆ ಯಾವುದೇ ವಿಶೇಷ ಕೆತ್ತನೆಗಳಲ್ಲಿದೆ ಮೈಯಲ್ಲಿ ಅಲಂಕಾರಿಕ ಕೆತ್ತನೆ ಕಂಡುಬಂದವು.
4. ಮೂರ್ತಿ ಕೆತ್ತನೆಗೆ ಕೌಶಲ್ಯಪೂರ್ಣವಾಗಿತ್ತು.

**ಖಜುರಾಹೋ ದೇವಾಲಯಗಳು**

ಮಧ್ಯಪ್ರದೇಶದ ರಜಪೂತ ದೊರೆಗಳಾದ "ಚಂಡೇಲರು" ನಿರ್ಮಾಣಮಾಡಿದಂತಹ ದೇವಾಲಯಗಳು.

ಇಲ್ಲಿನ ದೇವಾಲಯಗಳನ್ನು ಪ್ರಮುಖವಾಗಿ ಈ ರೀತಿ ವಿಂಗಡಿಸಲಾಗಿದೆ.

1. ಪಶ್ಚಿಮದ ಗುಂಪಿನ ದೇವಾಲಯ
2. ಈಶಾನ್ಯ ಗುಂಪಿನ ದೇವಾಲಯ
3. ದಕ್ಷಿಣ ಗುಂಪಿನ ದೇವಾಲಯ
4. ಮೂರ್ತಿ ಶಿಲ್ಪಗಳು

ಒಟ್ಟು 85 ದೇವಾಲಯಗಳು ನಿರ್ಮಾಣವಾಗಿದ್ದು, ಕೇವಲ 23 ದೇವಾಲಯಗಳು ಸುಸ್ಥಿತಿಯಲ್ಲಿ ಉಳಿದಿದೆ.

1. ಪಶ್ಚಿಮ ಗುಂಪಿನ ದೇವಾಲಯ :
   (1) ವರಾಹ ದೇವಾಲಯ
   (2) ಲಕ್ಷಣ ದೇವಾಲಯ
   (3) ಕಂದಾರಿಯ ಮಹಾದೇವ ದೇವಾಲಯ
   (4) ದೇವಿ ಜಗದಂಬಾ ದೇವಾಲಯ
   (5) ಚಿತ್ರ ಗುಪ್ತ ದೇವಾಲಯ
   (6) ವಿಶ್ವನಾಥ ಮತ್ತು ನಂದಿ ದೇವಾಲಯ
   (7) ಚೌನ್ ಸಾಥ್ ಯೋಗಿನಿ ಮತ್ತು ಲಾಲ್‌ಗುಣ ಮಹಾದೇವ ದೇವಾಲಯ
2. ಈಶಾನ್ಯ ಗುಂಪಿನ ದೇವಾಲಯ
   (1) ಪಾರ್ಶ್ವನಾಥ ದೇವಾಲಯ

(2) ಆದಿನಾಥ ದೇವಾಲಯ

(3) ಶಾಂತಿನಾಥ ದೇವಾಲಯ

(4) ಘಗಂತಿ ದೇವಾಲಯ

(5) ಆವಾರಿ ದೇವಾಲಯ

(6) ವಾಮನ ದೇವಾಲಯ

3. ದಕ್ಷಿಣದ ದೇವಾಲಯ

(1) ದುಲಾದಿಯೋ ದೇವಾಲಯ

(2) ಚತುರ್ ಭುಜ ದೇವಾಲಯ

4. ಶಿಲ್ಪಕಲೆ – ಖಜುರಾವೊ ದೇವಾಲಯಗಳು "ಮಿಥುನ ಶಿಲ್ಪ"ಗಳಿಗೆ ಹೆಸರುವಾಸಿಯಾಗಿದೆ ವಾತ್ಸಾಯನನ ಕಾಮಸೂತ್ರದ ಬಹುತೇಕ ಭಂಗಿಗಳನ್ನು ಕೆತ್ತಲಾಗಿದೆ.

ಈ ದೇವಾಲಯಗಳು ಕಾಳಮುಖ ಪಂಥದ ಪ್ರಮುಖ ಕೇಂದ್ರವಾಗಿತ್ತು. ಮೌಂಟ ಅಬುವಿನ ಜೈನ ದೇವಾಲಯಗಳು ಮತ್ತು ಒಡಿಸಿಯಾದ ದೇವಾಲಯಗಳು.

ಮೌಂಟ ಅಬುವಿನ ಜೈನ ದೇವಾಲಯಗಳು – ಇದು ಸೋಳಂಕಿ ರಜಪೂತರ ಕಾಲದ ದೇವಾಲಯಗಳಾಗಿವೆ. 'ರಾಜಸ್ಥಾನದ ಮೌಂಟ ಅಬುವಿನಲ್ಲಿ ನಿರ್ಮಿಸಲ್ಪಟ್ಟಿದೆ. ಇಲ್ಲಿನ ದೇವಾಲಯಗಳು ಎತ್ತರದ ವೇದಿಕೆಯ ಮೇಲೆ ಕಟ್ಟಲಾಗಿದೆ. ಸಾಮಾನ್ಯವಾಗಿ ಒಂದು ಗರ್ಭಗುಡಿ, ಒಂದು ಸಭಾ ಗೃಹವನ್ನು ಮಾತ್ರ ಹೊಂದಿದೆ. ಗರ್ಭ ಗುಡಿಯ ಮೇಲೆ ಬಹುಸಂಖ್ಯೆಯ ಚಿಕ್ಕ ಶಿಖರಗಳಿಂದ ಅಲಂಕೃತವಾಗಿದೆ. ಒಳಮೈಗಳು ಗುಂಬದಂತೆ ಕಾಣುವ ಹಾಗೆ ಕೆತ್ತಲಾಗಿದೆ.

ಈ ಶೈಲಿಯ ಅತ್ಯಂತ ಗಮನಾರ್ಹ ಲಕ್ಷಣವೆಂದರೆ ಇದರ ಸೂಕ್ಷ್ಮ ಸುಂದರ ಅಲಂಕಾರಿಕ ತಂಪಾದ ಬಿಳಿ ಅಮೃತ ಶಿಲೆಯಿಂದ ಕಟ್ಟಲಾದ ದೇವಾಲಯಗಳೇ "ಮೌಂಟ–ಅಬು–ದೇವಾಲಯ" ಒಳಭಾಗಗಳು ಅತ್ಯಂತ ಸೂಕ್ಷ್ಮ ಮತ್ತು ಅಲಂಕಾರಿಕ ಕೆತ್ತನೆಗಳಿಂದ ಕೂಡಿದೆ.

1. ನೇಮಿನಾಥನ ದೇವಾಲಯ
2. ಆದಿನಾಥನ ದೇವಾಲಯ
3. ಋಷಭನಾಥನ ದೇವಾಲಯ ಪ್ರಧಾನ ದೇವಾಲಯಗಳು

**ಒಡಿಸ್ಸಾದ ದೇವಾಲಯಗಳು**

ಇಂಡೋ–ಆರ್ಯನ ಶೈಲಿಯ ದೇವಾಲಯಗಳು ಎಂದು ಕರೆಯುತ್ತಾರೆ. ಇದು ಕಂಡು ಬರುವುದು ಭುವನೇಶ್ವರ, ಪುರಿ, ಕೋನಾರ್ಕ್ ನಗರಗಳ ಸುತ್ತಮುತ್ತ.

ಲಿಂಗರಾಜ ದೇವಾಲಯ – ಅನಂತವರ್ಮನ ಎಂಬ ಒರಿಸ್ಸಾದ ಗಂಗ ಮನೆತನದ ರಾಜ ಇದನ್ನು ನಿರ್ಮಿಸಿದನು.

ಇದು 4 ವಿವಿಧ ರೀತಿಯ ಚಿಕ್ಕ ಮತ್ತು ದೊಡ್ಡ ರೀತಿಯ ಶಿಖರಗಳನ್ನು ಹೊಂದಿದ್ದು ಪ್ರತಿಯೊಂದು ಶಿಖರವು ತನ್ನದೇ ಆದ ಅಕ್ಷದ ಮೇಲೆ ನಿಂತಿರುವಂತಿದೆ. ತುದಿಯ ಮೇಲೆ ಕಲ್ಲಿನ ಚಕ್ರ ಕಿರೀಟವಿದ್ದು, ದೇವಾಲಯದಲ್ಲಿ ಪ್ರಾರ್ಥನಾ ಕೋಣೆ, ನೃತ್ಯ/ನಾಟ್ಯ ಸ್ಥಳ, ಸಭಾಗೃಹ ಮತ್ತು ಗರ್ಭ ಗುಡಿಗಳಿವೆ.

ಈ ದೇವಾಲಯದ ಆವರಣ ಚಿಕ್ಕ ಚಿಕ್ಕ ದೇವಾಲಯಗಳಿಂದ ತುಂಬಿದೆ ಹಾಗೂ ಎಲ್ಲವೂ ಮುಖ್ಯ ದೇವಾಲಯದ ವಿನ್ಯಾಸವನ್ನೇ ಹೊಂದಿದೆ ಎಂಬುದು ವಿಶೇಷ.

ಮುಕ್ತೇಶ್ವರ ದೇವಾಲಯ – ಇದನ್ನು 'ಒರಿಸ್ಸಾ ಕಲೆಯ ರತ್ನ' ಎಂದು ಕರೆಯಲಾಗಿದೆ, ಇದು ತನ್ನ ಕೆತ್ತನೆಗಳಿಂದ ಪ್ರಸಿದ್ಧವಾಗಿದೆ ಕಳಿಂಗ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆ

ಕೊನಾರ್ಕ್ ಸೂರ್ಯ ದೇವಾಲಯ – ಒರಿಸ್ಸಾದ ಪುರಿಜಿಲ್ಲೆಯಲ್ಲಿದೆ ಈ ಉದಾಹರಣೆಯಾಗಿದೆ. ಗಂಗರಾಜ 1ನೇ ನರಸಿಂಹ ಇದನ್ನು ನಿರ್ಮಿಸಿದನು. ಇದನ್ನು 'ಕಪ್ಪು ಪಗೋಡಾ' ಎಂದು ಕರೆಯುತ್ತಾರೆ.

**ಪುರಿಯ ಜಗನ್ನಾಥ**

ಭಾರತ ದೇಶದ ಇನ್ನೊಂದು ಪ್ರಮುಖದೇವಾಲಯ ಪುರಿಯ ಜಗನ್ನಾಥ ದೇವಾಲಯ. ಇದನ್ನು ಗಂಗರಾಜ ಅನಂತವರ್ಮನು ನಿರ್ಮಿಸಿದನು. ಇದನ್ನು "ಬಿಳಿಯ ಪಗೋಡ" ಎಂದು ಕರೆಯುತ್ತಾರೆ.

ದೇವರ ವಿಗ್ರಹ ಮರದ ಪ್ರತಿಮೆಯಾಗಿರುತ್ತದೆ. ಬಾಲಭದ್ರ, ಸುಬದ್ರ, ಜಗನ್ನಾಥನ ಪ್ರತಿಮೆಯನ್ನು ಕೆತ್ತಲಾಗಿದೆ.

ಪಲ್ಲವ, ಚೋಳ ಮತ್ತು ಪಾಂಡ್ಯರ ಕೊಡುಗೆಗಳು

ಪಲ್ಲವ – ದಕ್ಷಿಣ ಭಾರತದಲ್ಲಿ ಕಲೆಗೆ ಪಲ್ಲವರು ನೀಡಿರುವ ಕೊಡುಗೆ ಲಪಾರ, ನಿರ್ಮಾಣ ಕ್ಷೇತ್ರದಲ್ಲಿ ಹೊಸ ಬಗೆಯ ತಂತ್ರವನ್ನು ಬಳಸಿದರು, ಮರದ ಬದಲು ಕಲ್ಲಿನ ಬಳಕೆ ಮಾಡಿದರು ಇದರಿಂದ ಶತಮಾನ ಕಳೆದರು ಇನ್ನು ಗಟ್ಟಿಯಾಗಿ ನಿಂತಿದೆ.

ಮಹೇಂದ್ರವರ್ಮನ ಪಲ್ಲವರ ಪ್ರಸಿದ್ಧ ದೊರೆ. ಇವನ ಅವಧಿಯಲ್ಲಿ (1) ಶಿಲಾ ಸ್ತಂಭಗಳ ಆಧಾರದ ಮೇಲೆ ನಿರ್ಮಾಣಗೊಂಡಿರುವ ಮಂಟಪಗಳು ಇದರ ಒಂದು ಲಕ್ಷಣ.

(2) ಶಿಲಾ ಬಂಡೆಗಳನ್ನು ಕೊರೆಯುವುದರ ಮೂಲಕ ದೇವಾಲಯ ನಿರ್ಮಾಣವಾಗಿದೆ. ಉದಾ: ಅನಂತಶಯನ ಮಂಟಪ,

ನರಸಿಂಹ ವರ್ಮನ 1ನು ನಿರ್ಮಿಸಿದ ಮಹಾಬಲಿಪುರಂ ಕಲೆಗೆ ಪಲ್ಲವರ ಕೊಡುಗೆಯನ್ನು ಸಾರಿ ಹೇಳುತ್ತಿದೆ. ಉದಾ:– ವರಾಹ ಮಂಟಪ; ಬಂಡೆಯ ಮೇಲೆ ಕೆತ್ತಿರುವ ಅರ್ಜುನನ ತಪಸ್ಸು, ಗಂಗಾವತರಣ ಉತ್ತಮ ಉದಾಹರಣೆ: ಕಾಲಕ್ರಮೇಣ ಪಲ್ಲವರ ಶೈಲಿಯಲ್ಲಿ ಅನೇಕ ವ್ಯತ್ಯಾಸ ಕಂಡುಬರುತ್ತದೆ, ಏಕಶಿಲೆಯನ್ನು ಕೊರೆದು ದೇವಾಸ್ಥನ ನಿರ್ಮಿಸಿರುವ ಬದಲು ಕಟ್ಟಡ ರೂಪದಲ್ಲಿ ನಿರ್ಮಾಣವಾದ ದೇವಾಲಯವನ್ನು ಕಾಣುತ್ತೇವೆ ಇದನ್ನು ರಾಜಸಿಂಹ ಶೈಲಿ ಎನ್ನುವರು.

ಉತ್ತಮ ಉದಾಹರಣೆಯೆಂದರೆ ಮಹಾಬಲ್ಲಿಪುರಂನ ತೀರ ದೇವಾಲಯ

ಪಲ್ಲವರ ರಾಜಧಾನಿ ಕಂಚಿ ಕಲಾತ್ಮಕ ನಗರವೆಂದು ಪ್ರಸಿದ್ಧವಾಗಿದೆ.

**ಚೋಳರು**

ದಕ್ಷಿಣ ಭಾರತದ ಚರಿತೆಯಲ್ಲಿ ಪಲ್ಲವರ ನಂತರ ಕಲಾಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡಿದವರೇ ಚೋಳರು. ತಾಂಜಾವೂರಿನ ಬೃಹದೇಶ್ವರ ದೇವಾಲಯ ಚೋಳರ ಕಲಾಸೇವೆಗೆ ಉತ್ತಮ ಉದಾಹರಣೆ 108 ಅಡಿ ಉದ್ದವಾದ ದೇವಾಲಯ ಇರ ವಿಮಾನ 190 ಅಡಿಗಳಷ್ಟು ಎತ್ತರವಾಗಿದೆ, 13 ಅಂತಸ್ತುಗಳಿವೆ.

ಈ ದೇವಾಲಯ ಅರ್ಧಮಂಟಪ, ಮಹಾಮಂಟಪ ಮತ್ತು ನಂದಿ ಮಂಟಪಗಳನ್ನು ಒಳಗೊಂಡಿದೆ. ಇಲ್ಲಿನ ಶಿವಲಿಂಗಕ್ಕೆ **'ಬೃಹದೀಶ್ವರ'** ಎಂಬ ಹೆಸರಿನಿಂದ ಜನಪ್ರಿಯನಾಗಿದ್ದಾನೆ.

ಕ್ರಿ.ಶ.1030 ರಲ್ಲಿ ರಾಜೇಂದ್ರ ಚೋಳನು ತಾಂಜಾವೂರಿನ ಬೃಹದೇಶ್ವರ ದೇವಾಲಯಕ್ಕಿಂತಲೂ ವಿಸ್ತಾರದಲ್ಲಿ ವ್ಯಾಪಕವಾದ ಆದರೆ ಗಾತ್ರದಲ್ಲಿ ಚಿಕ್ಕದಾದ ಗಂಗೈಕೊಂಡ ಚೋಳೇಶ್ವರ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯದಲ್ಲಿ ಭರತನಾಟ್ಯದ ವಿವಿಧ ಭಂಗಿಗಳನ್ನು ಕೆತ್ತಲಾಗಿದೆ.

ಚಿದಂಬರನ ಶಿವದೇವಾಲಯದಲ್ಲಿರುವ ಬೃಹತ್ ಕಂಚಿನ ನಟರಾಜ ವಿಗ್ರಹ ಚೋಳದ ಕಾಲದ ಕಲೆಯ ಉನ್ನತಿಗೆ ಸಾಕ್ಷಿ.

ತಾಂಜಾವೂರಿನ ದೇವಾಲಯದಲ್ಲಿ ಚೋಳದ ಕಾಲದ ಚಿತ್ರಕಲೆಗಳು ಕಂಡುಬರುತ್ತದೆ. ಉದಾ:ಭೂ–ಕೈಲಾಸದ ಚಿತ್ರ ಹುಲಿ ಚರ್ಮದ ಮೇಲೆ ಕುಳಿತಿರುವ ಶಿವ, ಪಕ್ಕದಲ್ಲಿರುವ ನಂದಿ, ಹಾಗೂ ಋಷಿಗಳ ಸಮೂಹ, ಮುಂತಾದವು.

**ಪಾಂಡ್ಯರು**

ದಕ್ಷಿಣ ಭಾರತದ ಇತಿಹಾಸದಲ್ಲಿ ಪಾಂಡ್ಯರದು ಪ್ರಮುಖ ಸ್ಥಾನ ಸಂಗಂ ಯುಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ನಂತರ ಹಂತಹಂತವಾಗಿ ಕಣ್ಮರೆಯಾಗಿದ್ದರು. ಆದರೆ ಕ್ರಿ.ಶ.7ನೇ ಶತಮಾನದ ವೇಳೆಗೆ ಪುನಃ ಪ್ರಭಾವಶಾಲಿಗಳಾದರು.

ಇವರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಉದಾ: ತಿರುತ್ತಂಗಲ್‌ನಲ್ಲಿರುವ ವಿಷ್ಣು ದೇವಾಲಯ, ಮಧುರೈ ಮೀನಾಕ್ಷಿ ದೇವಾಲಯದಲ್ಲಿ ಸೂಕ್ಷ್ಮ ಕೆತ್ತನೆಗಳನ್ನು ನೋಡಬಹುದು.

ಇದಲ್ಲದೆ ಜಟಾವರ್ಮನ ಸುಂದರ ಪಾಂಡ್ಯನು ಚಿದಂಬರಂ ದೇವಾಲಯದ ಪಶ್ಚಿಮ ಗೋಪುರವನ್ನು ಕಟ್ಟಿಸಿದನು. ಅಲ್ಲದೆ ಸುಂದರವಾದ ನಟರಾಜ ವಿಗ್ರಹವನ್ನು ಕೆತ್ತಿಸಿ ಕೊಟ್ಟನು ಇದು ಪಾಂಡ್ಯರಿಗೆ ಕಲೆಯ ಮೇಲಿದ್ದ ಪ್ರೀತಿಯನ್ನು ತೋರಿಸಿ ಕೊಡುತ್ತದೆ.

**ಮೊಗಳರ ವಾಸ್ತುಶಿಲ್ಪ**

ದೆಹಲಿ ಸುಲ್ತಾನರು ಮುಸ್ಲಿಂ ವಾಸ್ತು ಶಿಲ್ಪಕ್ಕೆ ಬುನಾಧಿಯನ್ನು ಹಾಕಿದರು. ಇದರ ಮೇಲೆ ಮೊಗಲರ ವಾಸ್ತಿಶಿಲ್ಪ ಮುಂದುವರೆಯಿತು.

1. ಬಾಬರನ ಕಾಲದ ವಾಸ್ತುಶಿಲ್ಪ–

- ಜಾಮೀ ಮಸೀದಿ – ರೋಹಿಲ್‌ಖಂಡದ ಸಂಬಾಲನಲ್ಲಿದೆ
- ಆಗ್ರಾ ಮಸೀದಿ – ಇದು ಮಂಗೋಲಿಯನ್ ಶೈಲಿಯಲ್ಲಿರುವ ಆಗ್ರಾದ ಹಳೆಯ ಕೋಟೆಯ ಬಳಿ ಇರುವ ಮಸೀದಿ

2. ಹುಮಾಯುನ್ ಕಾಲದಲ್ಲಿ ತನ್ನ ರಾಜಕೀಯ ಅಸ್ಥಿರತೆಯಿಂದ ಹೆಚ್ಚಿನ ಕೊಡುಗೆ ನೀಡಲು ಸಾಧ್ಯವಾಗಲಿಲ್ಲ.
3. **'**ಷೇರ್–ಷಾ–ಸೂರಿಯು (1540–45) ರವರೆಗೆ ಹುಮಾಯೂನ್ ನನ್ನು ಪದಚ್ಯುತಗೊಳಿಸಿ ಆಳ್ವಿಕೆ ನಡೆಸಿದನು. ಈತನ ಕಾಲದಲ್ಲಿ ನಿರ್ಮಾಣವಾದ ಪ್ರಮುಖ ಸ್ಮಾರಕಗಳು ಪುರಾನಾಖೀಲಾ(ಕೋಟೆ) – ದೆಹಲಿ, ಷೇರ್–ಷಾ ಸಮಾದಿ – ಸಸಾರಾಂ ಬಿಹಾರ.

4. ಅಕ್ಬರನ ಕಾಲದಲ್ಲಿ ವಾಸ್ತುಶಿಲ್ಪ ಗಮನಾರ್ಹ ಪ್ರಗತಿಯಾಯಿತು.

- ಆಗ್ರಾ ಕೋಟೆ – ಇದನ್ನು ಕೆಂಪು ಮಿಶ್ರಿತ ಮರಳು ಕಲ್ಲುಗಳಿಂದ ನಿರ್ಮಿತವಾಗಿದೆ.
- ಶೇಖ್ ಸಲಿಂ ಚಿಸ್ತಿ ಸಮಾಧಿ – ತನ್ನ ಗುಜರಾತ್ ದಂಡಯಾತ್ರೆಯ ನೆನಪಿಗೋಸ್ಕರ ನಿರ್ಮಿಸಿದ
- ಅಕ್ಬರನ ಸಮಾಧಿ – ಆಗ್ರಾದ ಬಳಿಯಿದೆ 5 ನೆಲ ಮಾಳಿಗೆಗಳಿಂದ ಕೂಡಿದೆ. ಮೇಲಿನ ಮಹಡಿ ಬಿಳಿ ಅಮೃತಶಿಲೆಯಿಂದ ಕಟ್ಟಿದ್ದಾರೆ.
- ಫತೇಪುರ್ ಸಿಕ್ರಿ, ಬುಲೆಂದ್ ದರ್ವಾಜಾ, ಜೋಧಾಬಾಯಿ ಅರಮನೆ ಅಕ್ಬರನ ಕಾಲದ ಪ್ರಮುಖ ಕಲಾಪ್ರೌಢಿಮೆಗಳು.

**ಜಹಂಗೀರನ ಕಾಲದ ಸ್ಮಾರಕಗಳು – 1605–1628**

ಇತಿಮದ್–ಉದ್–ದೌಲನ ಗೋರಿ – ಆಗ್ರಾ ಇದನ್ನು ಫತ್ರ–ದುರಾದಿಂದ ಅಲಂಕರಿಸಲಾಗಿದೆ.

ಉದಯಪುರದ ಉದ್ಯಾನವನ, ಕಾಶ್ಮೀರ ಶಾಲಿಮಾರ್ ಬಾಗ್ ಉದ್ಯಾನವನ, ಲಾಹೋರ ಸಮೀಪವಿರುವ ಜಹಾಂಗೀರನ ಸಮಾಧಿ ಇತ್ಯಾದಿ.

ಷಹಜಾನನ ಕಾಲದ ಸ್ಮಾರಕ

ಮೊಗಲರ ವಾಸ್ತುಶಿಲ್ಪದ ಸುವರ್ಣಯುಗ ಎಂದು ಕರೆಯಬಹುದು ರಾಜಕೀಯವಾಗಿ ಈತನ ಕಾಲ ಶಾಂತಿ ಯಿಂದ ಕೂಡಿತ್ತು. ಆ ಕಾರಣ ವಾಸ್ತುಶಿಲ್ಪಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು.

ಮೋತಿ ಮಸೀದಿ – ಇದು ಆಗ್ರಾದಲ್ಲಿದೆ ಇದನ್ನು ಮುತ್ತಿನ ಮಸೀದಿ ಎನ್ನುವರು.

ಜಾಮಿ ಮಸೀದಿ – ದೆಹಲಿಯಲ್ಲಿದೆ 'ಮಸ್ಜಿದ–ಜಹನ್‌ನಾಮ' ಎಂದು ಪ್ರಸಿದ್ಧಯಾಗಿದೆ.

ತಾಜಮಹಲ್ – ಇದು ತನ್ನ ಪತ್ನಿಯ ನೆನಪಿಗಾಗಿ ಕಟ್ಟಿದ ಸಮಾಧಿ ಉಸ್ತಾದ್ ಅಹಮದ್ ಲಾಹೊರಿ ಇದರ ಮುಖ್ಯ ನಕ್ಷೆಗಾರ

ಕೆಂಪು ಕೋಟೆ – ಕೆಂಪು ಅರಳು ಮಿಶ್ರಿತ ಕಲ್ಲುಗಳಿಮದ ನಿರ್ಮಿತವಾಗಿದೆ.

ಕ್ಯಾಥೆಡ್ರಾಲ್ ವಾಸ್ತುಶಿಲ್ಪ

ಭಾರತದಲ್ಲಿ ಕ್ರೈಸ್ತ ಧರ್ಮ ಬೇರು ಬಿಟ್ಟ ನಂತರ ಪರಿಚಯವಾದ ಕ್ರೈಸ್ತ ವಾಸ್ತು ಶಿಲ್ಪವೇ ಕ್ಯಾಥೆಡ್ರಲ್ ವಾಸ್ತು ಶಿಲ್ಪವೆಂದು ಕರೆಯುತ್ತಾರೆ. ವಾಸ್ತು ಶಿಲ್ಪವನ್ನು ಪರಿಚಯಿಸಿದವರು ಪೋರ್ಚುಗೀಸರು. ಕಲ್ಕತ್ತಾ, ಗೋವಾ, ಚೆನ್ನೈನಲ್ಲಿ ನಾವು ಕಾಣಬಹುದು.

ಈ ವಾಸ್ತುಶಿಲ್ಪವನ್ನು ಭಾರತದಲ್ಲಿ ಪೋಚುಗೀಸರು ಭಾರತೀಯ ಅರಸರ ಮೇಲೆ ಸಾಧಿಸಿದ ಜಯ ಮತ್ತು ವ್ಯಾಪಾರದಲ್ಲಿ ಆದ ಅಭಿವೃದ್ಧಿಯ ನೆನಪಿಗಾಗಿ ಈ ಹೆಸರಿನ ಚರ್ಚ್‌ಗಳನ್ನು ಗೋಥಿಕ ಶೈಲಿಯಲ್ಲಿ ನಿರ್ಮಿಸಿದರು.

ಬೋಮ ಜೀಸಸ್ ಬೆಸಿಲಿಕಾ – ಇದು ಗೋವಾದಲ್ಲಿದೆ ಬೋಮ ಜೀಸಸ್ ಎಂದರೆ ಪವಿತ್ರವಾದ ಚರ್ಚ ಎಂದರ್ಥ. ಇದು ಭಾರತದ ಮೊದಲ ಉತ್ತಮ ಗುಣಮಟ್ಟದ 'ಬರ್‌ಕ್ಯೂ' ವಾಸ್ತು ಶಿಲ್ಪವಾಗಿದೆ.

ವಾಸ್ತವವಾಗಿ ಇಲ್ಲಿ ಇದ್ದ ಶಿವ ದೇವಾಲಯವನ್ನು ನಾಶಮಾಡಿ ಈ ಚರ್ಚ್‌ನ್ನು ನಿರ್ಮಿಸಲಾಗಿದೆ. ಈ ಚರ್ಚ್ ಭಾರತದ ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಸಂತ ಕ್ಷೆವೀಯರ್ ಈ ಚರ್ಚಿನಲ್ಲಿದ್ದರು.

ಸಂತ ಪೌಲ್ ಚರ್ಚ್, ಕಲ್ಕತ್ತ

ಇದು ಭಾರತ ಆಂಗ್ಲಿಕನ ಕ್ಯಾಥಡ್ರಲ್ ಚರ್ಚಾಗಿದೆ, 1839ರಲ್ಲಿ ಪ್ರಾರಂಭವಾಗಿ 1847ರಲ್ಲಿ ಮುಕ್ತಾಯವಾಯಿತು. ಆದರೆ 1934ರಲ್ಲಿ ಕೋಲ್ಕತ್ತಾದಲ್ಲಿ ಸಂಭವಿಸಿದ ಭಾರೀ ಭೂಕಂಪದಿಂದ ಇದು ಹಾನಿಗೊಂಡು 1938 ರಲ್ಲಿ ಮರು ವಿನ್ಯಾಸಗೊಂಡಿತು. ಇದು ಪಶ್ಚಿಮ ಮುಖಮಂಟಪಕ್ಕೆ ನೆಲೆಗೊಂಡಿದೆ. ಇದರಲ್ಲಿ ಗ್ರಂಥಾಲಯ, ವಿಶಾಲ ಸಭಾಂಗಣ ಅದರ ಗೋಡೆಗಳ ಮೇಲೆ ಪ್ಲಾಸ್ಟಿಕ್ ಆಕಾರದ ವಿನ್ಯಾಸಗಳು ಹಾಗೂ ಕ್ರೈಸ್ತ ಧರ್ಮದ ಚಿಹ್ನೆಗಳನ್ನು ಜೋಡಿಸಲಾಗಿದೆ.

ಈ ಚರ್ಚ್‌ನಲ್ಲಿ ಬ್ರಿಟಿಷರಾಣಿ ಕಳುಹಿಸಿದ ಕ್ಯಾಥಡ್ರಲ್ ಬೆಳ್ಳಿಯ ಲೇಪಿತ ಚಿಟ್ಟೆಯ ಹತ್ತು ತುಣುಕುಗಳನ್ನು ಇಲ್ಲಿ ಇರಿಸಲಾಗಿದೆ.

ಮಿಲಿಟರಿ ಎಂಜಿನಿಯರ್ ಮೇಜರ್ ವಿಲಿಯಂ ನಾರ್‍ನ್ನ ಫೋರ್ಟ್ಸ್ ಎಂಬುವರು ಇದರ ವಿನ್ಯಾಸಗೊಳಿಸಿದ್ದಾರೆ.

ಸೇಂಟ್ ಥಾಮಸ್ ಮೌಂಟ – ಭಾರತದ ಪವಿತ್ರ ಚರ್ಚ್‌ಗಳಲ್ಲೊಂದು ಚೆನ್ನೈನಲ್ಲಿದೆ. ಪ್ರಾಚೀನ ಸಿರಿಯನ್ ಕ್ರಿಶ್ಚಿಯನ್ ಸಮುದಾಯದ ಸೇಂಟ್ ಥಾಮಸ್ ಮೌಂಟ್ ಚರ್ಚಾಗಿವೆ.

ಈ ಚರ್ಚನ ಮಹಾದ್ವಾರವೇ My Lord and My God ಎಂಬ ವಾಕ್ಯೊಂದಿಗೆ ಎಲ್ಲರನ್ನು ಸ್ವಾಗತಿಸುತ್ತದೆ. ಇದು ಸಂತ ಥಾಮಸ್ ಹ್ಯಾರಿಸೆಸ್ ಅಥವಾ ಆಂಗ್ಲೋ ಇಂಡಿಯನ್ ಚರ್ಚ್ ಎಂದು ಜನಪ್ರಿಯವಾಗಿದೆ.

ಒಟ್ಟಾರೆ ಹೇಳುವುದಾದರೆ ಈ ಚರ್ಚುಗಳು ಭಾರತದ ಕ್ರೈಸ್ತರ ಸಂಸ್ಕೃತಿಯ ಪ್ರತೀಕವಾಗಿದೆ.

**ಮೊಗಲ್ ಚಿತ್ರಕಲೆ**

ದೆಹಲಿ ಸುಲ್ತಾನರು ತಮ್ಮ ಆಸ್ಥಾನದಲ್ಲಿ ಚಿತ್ರಕಲೆಯನ್ನು ಪ್ರೋತ್ಸಾಹಿಸಲಿಲ್ಲ ಕಾರಣ ಚಿತ್ರಕಲೆ ಇಸ್ಲಾಂಗೆ ವಿರುದ್ಧವಾದದ್ದು ಆದರೆ ಮೊಗಲರು ಚಿತ್ರಕಲೆಗೆ ಅಪಾರ ಪ್ರೋತ್ಸಾಹ ನೀಡಿದರು. ಬಾಬರನು ಇರಾಕ್‌ನ ಚಿತ್ರಕಾರ ಬೀಜರ್ದ್‌ನ ಚಿತ್ರಗಳನ್ನು ಭಾರತಕ್ಕೆ ತಂದಿದ್ದನು.

ನಂತರ ಹುಮಾಯೂನನು 'ಹುಮ್ಜಾ ನಾಮ' ಎಂಬ ಕೃತಿಯನ್ನು ಸಚಿತ್ರಗೊಳಿಸಲು ಇರಾನ್‌ನ ಖ್ಯಾತ ಚಿತ್ರಕಲಾಕಾರರಾದ "ಅಬ್ದುಸ್ ಸಮದ್" ಮತ್ತು "ಮೀರ್ ಸಯ್ಯದ್ ಅಲಿ" ಯನ್ನು ನೇಮಿಸಿದನು. ಈ ಕೃತಿ 1200 ಚಿತ್ರಗಳನ್ನು ಹೊಂದಿದ್ದು 12 ಸಂಪುಟಗಳನ್ನು ಒಳಗೊಂಡಿದೆ.

ಅಕ್ಬರನ ಕಾಲದಲ್ಲಿ 'ಇಂಡೋ–ಇಸ್ಲಾಮಿಕ್ ಚಿತ್ರಕಲೆ' ಬಹಳ ಪ್ರಖ್ಯಾತವಾಯಿತು. ಫತೇಪುರ್ ಸಿಕ್ರಿಯಲ್ಲಿರುವ ವರ್ಣಭಿತ್ತಿ ಚಿತ್ರ, ಅಕ್ಬರನ ಕಾಲಕ್ಕೆ ಸೇರಿದ್ದಾಗಿದೆ. ಸಂಗೀತಗಾರ 'ತಾನಸೇನ'ನ ವರ್ಣಚಿತ್ರ ಅಕ್ಬರನ ಆಸ್ಥಾನದಲ್ಲಿ ರಚನೆಯಾಗಿದೆ.

ಜಹಾಂಗೀರನ ಕಾಲದಲ್ಲಿ ಚಿತ್ರಕಲೆ ಔನ್ನತ್ಯವನ್ನು ತಲುಪಿತು. ಯಾಕೆಂದರೆ ಜಹಾಂಗೀರನಿಗೆ ಚಿತ್ರಕಲೆಯಲ್ಲಿ ಅಪಾರ ಪಾಂಡಿತ್ಯವಿತ್ತು. ಈತನ ಕಾಲದಲ್ಲಿ ಎರಡು ಅಂಶಗಳು ಚಿತ್ರಕಲೆಯಲ್ಲಿ ಅಭಿವೃದ್ಧಿ ಹೊಂದಿತು. 1) ಮೊಗಲ ಚಿತ್ರಕಾರರ ಮೊಲದಬಾರಿಗೆ ಭಾವಚಿತ್ರ ಬರೆಯುವುದನ್ನು ಕಲಿತರು. 2) ನೇರ ಮುಖಚಿತ್ರವನ್ನು ಬಿಡಿಸುವುದನ್ನು ಕಲಿತರು ಜಗತ್ಪ್ರಸಿದ್ಧ ಚಿತ್ರಕಾರರು ಜಹಾಂಗೀರನ ಆಸ್ಥಾನದಲ್ಲಿದ್ದರು. ಷಹಜಾನನ ಕಾಲದಲ್ಲಿ ಚಿತ್ರಗಳಲ್ಲಿ ಚಿನ್ನದ ಬಳಕೆ ಅಧಿಕಗೊಂಡಿತು. ಹೆಚ್ಚಾಗಿ ರಾಜರ, ನೋಬಲ್ಲರ, ಅವರ ದಾರ್ಬಾರು, ಅಂತಃಪುರದ ಚಿತ್ರಗಳನ್ನು ಬಿಡಿಸಿದ್ದಾರೆ.

ಔರಂಗಜೇಬನ ಕಾಲದಲ್ಲಿ ಚಿತ್ರಕಲೆ ಸಂಪೂರ್ಣ ಅವನತಿ ಕಂಡಿತು. ಎಲ್ಲಾ ಆಸ್ಥಾನ ಚಿತ್ರಕಲಾವಿದರನ್ನು ಓಡಿಸಿದನು ಹಾಗೂ ಚಿತ್ರಕಲೆಯನ್ನು ನಿಷೇಧಿಸಿದನು.

ಹೀಗೆ ಮೊಗಲ ಆಶ್ರಯ ಕಳೆದುಕೊಂಡ ಚಿತ್ರಕಾರರು ಸ್ಥಳೀಯ ರಜಪೂತರ ಆಸ್ಥಾನಗಳಲ್ಲಿ ಆಶ್ರಯ ಪಡೆದರು ಇದರಿಂದ ಮೊಗಲ್ ಚಿತ್ರಕಲೆ ಸ್ಥಳೀಯ ರಜಪೂತ ಚಿತ್ರಕಲೆಯೊಂದಿಗೆ ಬೆರೆತು ಜೈಪುರ ಶೈಲಿ, ಬಿಕನೇರ ಶೈಲಿ, ಬುಂದೇಲಖಂಡ, ಬಸೋಲಿ, ಕಾಂಗ್ರಾ ಹೆಸರಿನಿಂದ ಅಭಿವೃದ್ಧಿಗೊಂಡಿತು.

ರಜಪೂತ ಚಿತ್ರಕಲೆ – ಇದು ಸಂಪೂರ್ಣ ದೇಶಿಯ ಚಿತ್ರಕಲೆ, ಹಿಂದೂ ಧಾರ್ಮಿಕ ವಿಷಯ ಇದರ ಪ್ರಮುಖವಸ್ತು, ಇದು ಜಾನಪದ ಕಲೆಯು ಆಗಿತ್ತು. ಜನಸಾಮಾನ್ಯರು ಅವರ ಜೀವನ ಶೈಲಿ, ಉಡುಗೆ ತೊಡುಗೆ ಈ ಕಲೆಯ ವಸ್ತುವಾಗಿತ್ತು.

ಕಾಲಾನಂತರ ಮೊಗಲ್ ಚಿತ್ರಕಲೆಯ ಪ್ರಭಾವಕ್ಕೊಳಗಾಯಿತು.

**ಸಂಗೀತ ಮತ್ತು ನೃತ್ಯ**

ಸಂಗೀತ ಮತ್ತು ನೃತ್ಯಕಲೆ ಅತ್ಯಂತ ಪ್ರಾಚೀನ ಕಲೆ ಹಾಗೂ ಅಲೌಖಿಕ ಕಲೆಯೆಂಬ ಮಾನ್ಯತೆಯಲ್ಲಿ ಬೆಳದು ಬಂದಿದೆ.

ಶಾಸ್ತ್ರೀಯ ಸಂಗೀತ – ಇದರ ಮೂಲವನ್ನು ವೈದಿಕ ಗ್ರಂಥ ಸಾಮವೇದದಲ್ಲಿ ಕಾಣುತ್ತೇವೆ. ಶ್ಲೋಕಗಳ ಮೂಲಕ ದೇವತೆಗಳ ಸ್ತುತಿಯನ್ನು ಕಾಣಬಹುದು.

"ರಾಗ ಮತ್ತು ತಾಳ" ಈ ಸಂಗೀತದ ಎರಡು ಪ್ರಧಾನ ಲಕ್ಷಣಗಳು

ಕ್ರಿ.ಪೂದಲ್ಲಿ ಜನಿಸಿದ "ಭರತಮುನಿ ರಚಿಸಿದ "ನಾಟ್ಯಶಾಸ್ತ್ರ" ಎಂಬ ಕೃತಿ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದೆ. ಅದೇ ರೀತಿ ಮಾತಂಗನ "ಬೃಹದ್ದೇಶಿ", ಸಾರಂಗದೇವನ "ಸಂಗೀತ ರತ್ನಾಕರ" ಮೂರನೇ ಸೋಮೇಶ್ವರನ "ಮನೋಲ್ಲಾಸ" ಪ್ರಮುಖ ಕೃತಿಗಳು.

ಸಾರಂಗದೇವನು ತನ್ನ ಕೃತಿ "ಸಂಗೀತ ರತ್ನಾಕರ" ದಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದ ಬಗ್ಗೆ ಹೇಳಿದ್ದಾನೆ. ಈ ಕೃತಿಯಲ್ಲಿ "ತುರುಕ್ಷ ತೋಡಿ" ಮತ್ತು "ತುರುಕ್ಷ ಗೌಡ್" ಎಂಬೆರಡು ಸಂಗೀತರಾಗಗಳ ಬಗ್ಗೆ ಹೇಳಿದ್ದಾನೆ.

ಮಧ್ಯಯುಗೀನ ಕಾಲದಲ್ಲಿ ಭಾರತೀಯ ಸಂಗೀತ ಪದ್ಧತಿಯ ಮೇಲೆ ಇಸ್ಲಾಂ ಪ್ರಭಾವ ಬೀರಿದಾಗ ಆದ ಬದಲಾವಣೆಯು ಹಿಂದೂಸ್ತಾನಿ ಸಂಗೀತದಲ್ಲಿ ಕಾಣಿಸಿಕೊಂಡಿತು. ಆದರೆ ಭಾರತೀಯ ಪ್ರಾಚೀನ ಶುದ್ಧರೂಪದ ಪದ್ಧತಿ ದಕ್ಷಿಣದಲ್ಲಿ ಹಾಗೆ ಉಳಿದು ಬಂದಿತು. ಅದನ್ನು ಉಳಿಸಿ ಬೆಳಸಿದ್ದು ನಮ್ಮ ಕರ್ನಾಟಕವೇ ಆದ್ದರಿಂದ ಅದನ್ನು "ಕರ್ನಾಟಕ ಸಂಗೀತ" ಎಂಬ ಹೆಸರು ಪಡೆಯಿತು. ಈ ನಿಟ್ಟಿನಲ್ಲಿ ವಿಜಯನಗರ ಮತ್ತು ಮೈಸೂರು ಅರಸರು ಅಪಾರ ಕಾಣಿಕೆ ನೀಡಿದ್ದಾರೆ.

| ಹಿಂದೂಸ್ತಾನಿ ಸಂಗೀತ | ಕರ್ನಾಟಕ ಸಂಗೀತ |
|---|---|
| 1. ಇದು ಮಧ್ಯಯುಗೀನ ಕಾಲದಲ್ಲಿ ಉತ್ತರ ಭಾರತದಲ್ಲಿ ಉಗಮವಾಯಿತು ಇದು ಉತ್ತರದಲ್ಲಿ ವಿದೇಶಿ ಸಂಗೀತದ ಪ್ರಭಾವಕ್ಕೊಳಗಾಯಿತು. | 1. ದೇಶಿಯ ಪ್ರಾಚೀನ ಸಂಗೀತ ಇದು ಭಾರತೀಯ ಸಂಗೀತದ ಅತ್ಯಂತ ಶುದ್ಧರೂಪ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಅಭಿವೃದ್ಧಿ ಗೊಂಡಿತು. |

| | |
|---|---|
| 2. ಇಲ್ಲಿ 'ನಾದ' ಪ್ರಧಾನವಾಗಿದೆ | 2. ಇಲ್ಲಿ 'ನಾದ ಮತ್ತು ಸಾಹಿತ್ಯ' ಎರಡೂ ಪ್ರಧಾನ |
| 3. ಶೃತಿಗೆ ಹೆಚ್ಚು ಮಹತ್ವ | 3. ತಾಳಕ್ಕೆ ಹೆಚ್ಚು ಮಹತ್ವ |
| 4. ಭಾವನೆಗಳಿಗೆ ಹೆಚ್ಚು ಮಹತ್ವ | 4. ಆಧ್ಯಾತ್ಮಕ್ಕೆ ಹೆಚ್ಚು ಮಹತ್ವ |
| 5. ಸಂಗೀತ ಸಾಧನಗಳಿಗೂ ಇಲ್ಲಿ ಮಹತ್ವವಿದೆ | 5. ಕರ್ನಾಟಕ ಸಂಗೀತದಲ್ಲಿ ಸಂಗೀತ ಅಥವಾ ಹಾಡುಗಾರಿಕೆಗೆ ಮಹತ್ವವಿದೆ. ಸಂಗೀತ ಸಾಧನಗಳಿಗೆ ಅಷ್ಟು ಮಹತ್ವವಿಲ್ಲ |

ಹಿಂದೂಸ್ತಾನಿ ಸಂಗೀತಕ್ಕೆ ಮೊಗಲರ ಕೊಡುಗೆ ತುಸು ಹೆಚ್ಚೆ ಎನ್ನಿಸುವಷ್ಟು ಇದೆ.

ಅಮಿರ್ ಖುಸ್ರು ಈ ಸಂಗೀತವನ್ನು ಪರಿಚಯ ಮಾಡಿದ ಸಿತಾರ ಮತ್ತು ತಬಲ ಈತನ ಪ್ರಮುಖ ಸಂಗೀತ ಸಾಧನಗಳು. ಈತನನ್ನು ಭಾರತದ ಗಿಳಿ ಎಂದು ಕರೆಯಲಾಗಿದೆ.

ಇನ್ನೊರ್ವ ಪ್ರಮುಖ ಸಂಗೀತಗಾರನೆಂದರೆ ತಾನ್‌ಸೇನ್ ಈತನು ಮೇಘರಾಗವನ್ನು ಹಾಡಿ ಮಳೆ ತರಿಸುವಷ್ಟು ಪ್ರತಿಭಾವಂತನಾಗಿದ್ದನು ಎಂದು ಅಬ್ದುಲ್ ಫಜಲ್ ತನ್ನ ಐನೀ–ಇ–ಅಕ್ಬರಿಯಲ್ಲಿ ಹೊಗಳಿದ್ದಾನೆ.

ಹಿಂದೂಸ್ತಾನಿ ಹಾಡುಗಾರಿಕೆಯಲ್ಲಿ ಅನೇಕ ರೂಪಗಳಿವೆ. ಪ್ರಮುಖವಾಗಿ:

1. ದ್ರುಪದ್
2. ಖಯ್ಯಾಲ್ – 4 ಪ್ರಮುಖ ಘರಾನಾಗಳಿವೆ 1. ಗ್ವಾಲಿಯರ್ 2. ಕಿರನಾ 3. ಆಗ್ರಾ 4. ಪಟಿಯಾಲ
3. ತುಮ್ರಿ
4. ತರನಾ
5. ತಪ್ಪ

ಕರ್ನಾಟಿಕ್ ಸಂಗೀತ

ಭಾರತೀಯ ಪ್ರಾಚೀನ ಶುದ್ಧರೂಪದ ಸಂಗೀತ ಯಾವುದೇ ವಿದೇಶಿ ಪ್ರಭಾವಕ್ಕೆ ಒಳಗಾಗದೆ ತನ್ನ ತನವನ್ನು ಇನ್ನು ಉಳಿಸಿ ಬೆಳಸಿಕೊಂಡು ಹೋಗುತ್ತಿರುವ ದಕ್ಷಿಣದ ಶಾಸ್ತ್ರೀಯ ಸಂಗೀತವನ್ನು ಕರ್ನಾಟಿಕ್ ಸಂಗೀತವೆಂದು ಕರೆಯುತ್ತೇವೆ.

ಈ ಸಂಗೀತ ಪರಂಪರೆ ಹುಟ್ಟಿ ಬೆಳೆದು, ಹೆಚ್ಚಿನ ರಾಜಾಶ್ರಯ ಪಡೆದದ್ದು ಕರ್ನಾಟಕದಲ್ಲಿ, ಹಾಗೂ ಪುರಂದರ ದಾಸರನ್ನು ಈ ಸಂಗೀತದ ಪಿತಾಮಹರೆಂದು ಕರೆಯಲಾಗಿದೆ.

ಈ ಪ್ರಕಾರದ ಸಂಗೀತದಲ್ಲಿ "ನಾದ ಮತ್ತು ಸಾಹಿತ್ಯಕ್ಕೆ" ಪ್ರಾಮುಖ್ಯತೆ ಇದೆ. ಪಿತೃಗುಣಗಳು ಅಂದರೆ ಈ ಸಂಗೀತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಅಂದರೆ "ತಾಳ ಅಥವಾ ಲಯಕ್ಕೆ" ಹೆಚ್ಚಿನ ಮಾನ್ಯತೆ ಇದೆ.

ಕರ್ನಾಟಿಕ್ ಸಂಗೀತದಲ್ಲಿ ಪ್ರಮುಖವಾಗಿ 2 ವಿಧಗಳಿವೆ

1. ಪೂರ್ವರಾಗ, ಅಥವಾ ಪ್ರಥಮಾರ್ದ
2. ಉತ್ತರರಾಗ ಅಥವಾ ದ್ವಿತೀಯಾರ್ದ

ಚಾಲುಕ್ಯ ಚಕ್ರವರ್ತಿ ಸೋಮೇಶ್ವರನು ತನ್ನ "ಮನೋಲ್ಲಾಸ" ಕೃತಿಯಲ್ಲಿ ಮೊದಲ ಬಾರಿಗೆ ಕರ್ನಾಟಿಕ್ ಸಂಗೀತವನ್ನು ಉಲ್ಲೇಖಿಸುತ್ತಾನೆ. ಅದೇ ರೀತಿ ಸಾರಂಗ ದೇವ ತನ್ನ "ಸಂಗೀತ ರತ್ನಾಕರದಲ್ಲಿ" ಕರ್ನಾಟಿಕ್ ಮತ್ತು ಹಿಂದೂಸ್ತಾನಿ ಸಂಗೀತದ ಬಗ್ಗೆ ಮಾಹಿತಿ ನೀಡುತ್ತಾನೆ.

ವಿಜಯನಗರ ಅರಸರ ಕಾಲದಲ್ಲಿ ಕರ್ನಾಟಿಕ್ ಸಂಗೀತ ತನ್ನ ಉತ್ತುಂಗವನ್ನು ತಲುಪಿತು ದಾಸಶ್ರೇಷ್ಟರಾದ ಪುರಂದರದಾಸರು ಈ ಕಾಲಘಟ್ಟಕ್ಕೆ ಸೇರಿದವರು. ಇವರು "ಮಾಯಮಾಳವ ಗೌಳ' ರಾಗವನ್ನು ಆರಿಸಿಕೊಂಡು ಅದರಲ್ಲಿ ಸರಳವರಸೆ, ಅಲಂಕಾರ ಮೊದಲಾದವನ್ನು ರಚಿಸಿ ಹೊಸದಾಗಿ ಕಲಿಯುವವರಿಗೆ ಅನುಕೂಲ ಮಾಡಿದರು.

ಕರ್ನಾಟಿಕ್ ಸಂಗೀತದ ಪ್ರಮುಖ ಸಂಗೀತಗಾರರೆಂದರೆ ಬಾಲ ಮುರಳಿ ಕೃಷ್ಣ, ಎಂ.ಎಸ್.ಸುಬ್ಬಲಕ್ಷ್ಮೀ ಮುಂತಾದವರು.

ನಿಜಗುಣ ಶಿವಯೋಗಿಗಳು ಕರ್ನಾಟಿಕ್ ಸಂಗೀತದ ವಾಗ್ಗೇಯಕಾರಾಗಿದ್ದಾರೆ.

**ಸಂಗೀತಕ್ಕೆ ಮೊಗಲರ ಕೊಡುಗೆ**

ಮಧ್ಯಕಾಲೀನ ಯುಗದದಲ್ಲಿ ದೆಹಲಿಯನ್ನಾಳಿದ ದೆಹಲಿ ಸುಲ್ತಾನರು ಸಂಗೀತಕ್ಕೆ ಅಷ್ಟಾಗಿ ಪ್ರೋತ್ಸಾಹ ನೀಡಲಿಲ್ಲ. ಸಂಗೀತ ಇಸ್ಲಾಂ ಧರ್ಮಕ್ಕೆ ವಿರುದ್ಧವಾದುದ್ದರಿಂದ ಆದರೂ ಇವರ ಕಾಲದಲ್ಲಿ ಪರ್ಷಿಯನ್ ಮತ್ತು ಅರೇಬಿಕ್ ಸಂಗೀತದ ಪ್ರಭಾವ ಭಾರತೀಯ ಸಂಗೀತದ ಮೇಲೆ ಬಿದ್ದು ಇಂಡೋ–ಇಸ್ಲಾಮಿಕ್ ಸಂಗೀತ ಆರಂಭವಾಯಿತು. ಈ ಕಾಲದ ಪ್ರಖ್ಯಾತ ಸಂಗೀತಗಾರ "ಅಮೀರ್ ಖುಸ್ರೋ" ಈತನನ್ನು "ಹಿಂದೂಸ್ತಾನಿ ಸಂಗೀತದ ಪಿತಾಮಹ" ಹಾಗೂ "ಖವ್ವಾಲಿ ಪಿತಾಮಹ" ಎಂದು ಕರೆಯುತ್ತಾರೆ. ಈತನು ಭಾರತೀಯ ಸಂಗೀತಕ್ಕೆ ಪರ್ಷಿಯನ್, ಅರೇಬಿಕ್, ಟರ್ಕಿಷ್ ಸಂಗೀತ ಶೈಲಿಯನ್ನು ಅಳವಡಿಸಿದನು.

ಮೊಗಲ್ ಸಾಮ್ರಾಜ್ಯದ ಸ್ಥಾಪಕ ಬಾಬರನು ಸಂಗೀತ ಪ್ರಿಯನಾಗಿದ್ದನು. "ಸಂಗೀತವು ವ್ಯಕ್ತಿಯ ವ್ಯಕ್ತಿತ್ವವನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ ಎಂದು ನಂಬಿದ್ದನು". ಇದನ್ನು "ತುಜಕಿ–ಇ–ಬಾಬರಿ" ಸ್ಪಷ್ಟ ಪಡಿಸುತ್ತದೆ. ಈತ ಟರ್ಕಿ ಭಾಷೆಯಲ್ಲಿ ಅನೇಕ ಪದ್ಯವನ್ನು ಬರೆದಿದ್ದನು ಅದನ್ನು "ದಿವಾನ್" ಎಂದು ಕರೆಯಲಾಗಿದೆ.

ಹುಮಾಯೂನ್ ಕೂಡಾ ಸಂಗೀತಾಸಕ್ತನಾಗಿದ್ದನು. ಪ್ರತಿ ಸೋಮವಾರ ಮತ್ತು ಬುಧವಾರ ತಪ್ಪದೆ ಸಂಗೀತ ಕಛೇರಿಯನ್ನು ಏರ್ಪಡಿಸುತ್ತಿದ್ದನು. ಪ್ರಖ್ಯಾತ ಸಂಗೀತಗಾರ "ಬಾಚು" ಇವನ ಆಸ್ಥಾನಿಕನಾಗಿದ್ದನು "ಮನಕೂತುಹಲ" ಎಂಬ ಕೃತಿ ರಚಿಸಿದನು.

ತದನಂತರ ಅಧಿಕಾರಕ್ಕೆ ಬಂದ ಅಕ್ಬರನು ಸಂಗೀತಕ್ಕೆ ಅಪಾರ ಪ್ರೋತ್ಸಾಹ ನೀಡಿದನು.

"ಅಕ್ಬರನೊಬ್ಬ ಸಂಗೀತ ವಿಜ್ಞಾನದ ಜ್ಞಾನಿಯಾಗಿದ್ದ. ಎಂದು ಅಬು ಫಜಲ್ ತನ್ನ ಕೃತಿ ಐನಿ–ಇ–ಅಕ್ಬರಿಯಲ್ಲಿ ನಮೂದಿಸಿದ್ದಾನೆ.

ತನ್ನ ಆಸ್ಥಾನದಲ್ಲಿ 36 ಜನ ಸಂಗೀನ ವಿದ್ವಾಂಸರಿಗೆ ಆಶ್ರಯ ನೀಡಿದ್ದನು. ಈತನು ಅಸ್ಥಾನದಲ್ಲಿದ್ದ ಪ್ರಮುಖ ಸಂಗೀತಗಾರನೆಂದರೆ "ತಾನಸೇನ" ಸ್ವತಃ ಅಕ್ಬರನು ಈತನಿಗೆ "ಮಿಯಾನ್" ಎಂದು ಬಿರುದು ನೀಡಿ ಗೌರವಿಸಿದ್ದನು.

ಇನ್ನೊಬ್ಬ ಪ್ರಮುಖ ಆಸ್ಥಾನಿಕ ಸಂಗೀತಗಾರನೆಂದರೆ ಪುಂಡರೀಕ ವಿಠಲ ಇತನು "ರಾಗಮಾಲ", "ರಾಗಮಂಜರಿ" ಎಂಬ ಕೃತಿಗಳನ್ನು ರಚಿಸಿದ್ದಾನೆ.

ಅಕ್ಬರನು ಸಂಗೀತ ಸಾಧನ "ನಖ್ರ" ನುಡಿಸುವಲ್ಲಿ ಪರಿಣಿತಿ ಪಡೆದಿದ್ದನು. ಈ ಕಾಲದ ಭಕ್ತಿ ಸಂತರಾದ ಮೀರಾಬಾಯಿ, ಸುರ್‌ದಾಸ್, ತುಳಸಿದಾಸ ಸಂಗೀತಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಜಹಾಂಗೀರನು ಸಂಗೀತ ಪ್ರೇಮಿಯಾಗಿದ್ದನು ತನ್ನ ತಂದೆಯಂತೆ "ನಖ್ರ" ನುಡಿಸುವುದರಲ್ಲಿ ಪರಿಣಿತನಾಗಿದ್ದನು. ಈತನ ಆಸ್ಥಾನದಲ್ಲಿ ನೂರಕ್ಕೂ ಹೆಚ್ಚು ಸಂಗೀತಗಾರರಿದ್ದರು. ತನ್ನ ಪ್ರಯಾಣದ ತಂಗು ಸ್ಥಳದಲ್ಲೂ ಜಹಾಂಗೀರ ಸಂಗೀತ ಕೇಳುತ್ತಿದ್ದನು.

ನಂತರ ಅಧಿಕಾರಕ್ಕೆ ಬಂದ ಷಹಜಾನನು ಉತ್ತಮ ಹಾಡುಗಾರನಾಗಿದ್ದನು ತನ್ನ ಆಸ್ಥಾನದಲ್ಲಿ ಜಗನ್ನಾಥ, ರಾಮದಾಸ, ದುರಂಗಖಾನ್, ಲಾಡಖಾನ್ ಮುಂತಾದ ವಿದ್ವಾಂಸರಿದ್ದರು. ಲಾಡಖಾನ ತಾನಸೇನನ ಅಳಿಯನಾಗಿದ್ದು ಈತನಿಗೆ "ಗುಣಸಾಗರ್" ಎಂಬ ಬಿರುದನ್ನು ಷಹಜಾನ ನೀಡಿದ್ದನು.

ಔರಂಗಜೇಬನು ಸಂಗೀತಕ್ಕೆ ಪ್ರೋತ್ಸಾಹ ನೀಡಲಿಲ್ಲ ಈತನು ಕಟ್ಟಾ ಇಸ್ಲಾಂ ಧರ್ಮದ ಅನುಯಾಯಿಯಾದುದ್ದರಿಂದ ಎಲ್ಲಾ ಲಲಿತಕಲೆಯನ್ನು ನಿಷೇಧಿಸಿದನು. ಎಲ್ಲಾ ಸಂಗೀತಗಾರರನ್ನು ಅಸ್ಥಾನದಿಂದ ಒಡಿಸಿದನು. ಇವರೆಲ್ಲಾ ಸ್ಥಳೀಯ ಹಿಂದೂ ರಾಜರಲ್ಲಿ ಆಶ್ರಯ ಪಡೆದರು.

**ನೃತ್ಯ ಕಲೆ:**

ನೃತ್ಯ ಒಂದು ಕಲೆಯಾಗಿ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅಭಿವೃದ್ಧಿಗೊಂಡಿರುವುದನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯಲ್ಲಿ ನೃತ್ಯ ಕಲೆಗೆ ಒಂದು ದೈವಿಕ ಸ್ಥಾನಮಾನವನ್ನು ನೀಡಲಾಗಿದೆ.

ಭರತ ಮುನಿಯ 'ನಾಟ್ಯಶಾಸ್ತ್ರ'ವನ್ನು ಐದನೇವೇದ ಎಂಬ ಸ್ಥಾನಮಾನ ನೀಡಿದ ದೇಶ ಭಾರತ. ನೃತ್ಯವು ಸಾಮಾನ್ಯವಾಗಿ "ನವರಸವನ್ನು" ಅಭಿವ್ಯಕ್ತಿಯ ಮೂಲಕ ವ್ಯಕ್ತ ಪಡಿಸುತ್ತದೆ.

ಪ್ರಸ್ತುತ ಭಾರತದಲ್ಲಿ ಪ್ರಮುಖ 8 ನೃತ್ಯ ರೂಪಕಗಳಿಗೆ ಶಾಸ್ತ್ರೀಯ ಸ್ತಾನವನ್ನು ನೀಡಲಾಗಿದೆ. ಅವುಗಳೆಂದರೆ

1) ಭರತ ನಾಟ್ಯ – ಸುಮಾರು 2 ಸಾವಿರಕ್ಕಿಂತಲೂ ಹೆಚ್ಚಿನ ಇತಿಹಾಸ ಹೊಂದಿರುವ, ಎಲ್ಲಾ ನೃತ್ಯ ಪದ್ಧತಿಗಳಿಗೂ "ಮೂಲಭೂತ ಆಧಾರವೆಂದು ಹೇಳಲಾಗುವ ನಾಟ್ಯ ಪದ್ಧತಿ. ಇದು ಭಾವ, ರಸ, ತಾಳ ಈ ಮೂರನ್ನು ಒಳಗೊಂಡ ನಾಟ್ಯ ಪದ್ಧತಿ. ಇದರ ಶುದ್ಧ ರೂಪವನ್ನು ಉಳಿಸಿಕೊಂಡು ಬಂದಿರುವುದು ಕರ್ನಾಟಕ ಮತ್ತು ತಮಿಳುನಾಡು. ಪ್ರಮುಖ ಭರತನಾಟ್ಯ ಕಲಾವಿದರೆಂದರೆ ಮೃಣಾಲಿನಿ ಸಾರಾಭಾಯಿ, ಯಾಮಿನಿ, ಕೃಷ್ಣಮೂರ್ತಿ, ಮುಂತಾದವರು.
2) ಕಥಕ್ – ಸಂಸ್ಕೃತದ "ಕಥಾ" ಎಂಬ ಪದದಿಂದ ಹುಟ್ಟಿರುವ ಶಬ್ಧ 'ಕಥಕ್'. ಇದು ಉತ್ತರ ಭಾರತದಲ್ಲಿ ಜನಪ್ರಿಯವಾಗಿರುವ ನೃತ್ಯರೂಪಕ. ಈ ಶೈಲಿಯ ನೃತ್ಯದಲ್ಲಿ ಪ್ರಮುಕವಾಗಿ ಪಾದ ಚಲನೆಗೆ ಮಹತ್ವ, ಈ ಶೈಲಿಯ ಮೇಲೆ ಪರ್ಷಿಯನ್ ಮತ್ತು ಅರೇಬಿಕ್ ನೃತ್ಯ ಶೈಲಿಯ ಪ್ರಭಾವವಿದೆ. ಇಂಡೋ–ಇಸ್ಲಾಮಿಕ್ ನೃತ್ಯವೆಂಬ ಹೆಸರೂ ಕುಡಾ ಇದೆ. ಇದರ ಮುಖ್ಯ ಗುಣವೆಂದರೆ ನರ್ತಕರು ಮತ್ತು ತಬಲಾವಾದಕರ ನಡುವಿನ ಜುಗಲ್ ಬಂದಿ.

3) ಕಥಕ್ಕಲಿ – ಇದು ಕೇರಳ ರಾಜ್ಯದ ಶಾಸ್ತ್ರೀಯ ನೃತ್ಯರೂಪಕ ಕೇರಳದ ದೇವಾಲಯಗಳಲ್ಲಿ ಅಭಿವೃದ್ಧಿಗೊಂಡ ನೃತ್ಯ ಪ್ರಕಾರ ಇದು ಹೆಚ್ಚಿನ ಅಲಂಕಾರ, ವೇಷ ಭೂಷಣಗಳಿಂದ ಕೂಡಿರುತ್ತದೆ. "ಭಕ್ತ" ಈ ನೃತ್ಯದ ಪ್ರಮುಖ ಮತ್ತು ಹೆಚ್ಚಾಗಿ ಪುರುಷರೇ ಪ್ರದರ್ಶಿಸುವ ಕಲೆ.

4) ಕುಚಿಪುಡಿ – ಇದು ಅವಿಭಜಿತ ಆಂಧ್ರಪ್ರದೇಶದ ಕುಚಿಪುಡಿ ಎಂಬ ಗ್ರಾಮದಿಂದ ಜನ್ಮತಾಳಿದ್ದು. ಇದೊಂದು ಭಾವನಾತ್ಮಕ ನೃತ್ಯ. ಈ ನೃತ್ಯಕ್ಕೂ ಪ್ರಮುಖ ವಸ್ತು ಭಕ್ತಿ ಮೊಗಲರ ಕಾಲದ ದಕ್ಷಿಣದ ಉಸ್ತುವಾರಿಗಳು ಈ ನೃತ್ಯವನ್ನು ಅಯೋಜಿಸುತ್ತಿದ್ದರು.

5) ಮಣಿಪುರಿ – ಇದು ಈಶಾನ್ಯ ರಾಜ್ಯದ ಸಾಂಪ್ರಾದಾಯಿಕ ಶಾಸ್ತ್ರೀ ನೃತ್ಯರೂಪಕ. ಇದು ಹೆಚ್ಚು ಅಲಂಕಾರದಿಂದ ಒಳಗೊಂಡ ನೃತ್ಯರೂಪಕ. ಇದು ಮಣಿಪುರಿ ಜನರ ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತದೆ.
ರಾಸಲೀಲಾ ಇದರ ಇನ್ನೊಂದು ಲಕ್ಷಣ, ವಿಷ್ಣುಪುರಾಣ, ಭಾಗವತ ಪುರಾಣ, ಗೀತಗೋವಿಂದಂ. ಈ ನೃತ್ಯಕ್ಕೆ ವಸ್ತುವನ್ನು ಒದಗಿಸಿದೆ.

ರವೀಂದ್ರನಾಥ ಟಾಗೋರರು ತಮ್ಮ ಶಾಂತಿನಿಕೇತನನ್ನು ಇದನ್ನು ಅಪಾರವಾಗಿ ಪ್ರೋತ್ಸಾಹಿಸಿದರು.

6) ಮೋಹಿನಿಅಟ್ಟಂ: ಕೇರಳದ ಶಾಸ್ತ್ರೀಯ ನೃತ್ಯರೂಪಕ ಮೂಲತಃ ಈ ನೃತ್ಯವನ್ನು ಕೇರಳದ ದೇವಸ್ಥಾನಗಳಲ್ಲಿ ದೇವದಾಸಿಯರಿಂದ ಆರಂಭವಾಯಿತು. ಈ ನೃತ್ಯ ಪ್ರಮುಖವಾಗಿ ಮಹಿಳೆಯರೇ ಪ್ರದರ್ಶಿಸುವ ನೃತ್ಯ. ಕ್ರಿ.ಶ.19ನೇ ಶತಮಾನದಲ್ಲಿ "ಸ್ವಾಮಿ ತಿರುನಾಲ್" ರವರು ಈ ನೃತ್ಯವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಗೊಳಿಸಿದರು.

7) ಒಡಿಸ್ಸಿ : ಕ್ರಿ.ಶ.1ನೇ ಶತಮಾನದಲ್ಲಿ ಒರಿಸ್ಸಾದಲ್ಲಿ ಪ್ರಾರಂಭವಾಯಿತು. ಈ ನೃತ್ಯ ದೇವಾಲಯಗಳಲ್ಲಿ ಪ್ರಾಚೀನ ಕಾಲದಲ್ಲಿ ನೃತ್ಯ ಮಾಡುತ್ತಿದ್ದ ದೇವದಾಸಿಯರಿಂದ ಆರಂಭವಾಯಿತು. ಈ ಒಡಿಸ್ಸಿ ನೃತ್ಯಕ್ಕೆ ರಾಮಾಯಣ, ಮಹಾಭಾರತ, ಪುರಾಣಗಳು ಗೀತಗೋವಿಂದ ಮತ್ತು ವಿಷ್ಣುವಿನ ದಶವತಾರ ಕಥೆಗಳು ವಸ್ತುವನ್ನು ಒದಗಿಸಿವೆ.
ಒಡಿಸ್ಸಿ ನೃತ್ಯದಲ್ಲಿ 3 ಪ್ರಕಾರಗಳಿವೆ 1. ಮಹಾರಿ 2. ನರ್ತಕಿ 3. ಗೋತಿಪುರ

8) ಸತ್ತರಿಯಾ – ಇದು ಅಸ್ಸಾಂನ ಶಾಸ್ತ್ರೀಯ ನೃತ್ಯ ರೂಪಕ ಕ್ರಿ.ಶ.15ನೇ ಶತಮಾನದಲ್ಲಿದ್ದ ಅಸ್ಸಾಂನ ವೈಷ್ಣ ಸಂತ "ಶಂಕರ ದೇವ" ಇದನ್ನು ವ್ಯವಸ್ಥಿತಗೊಳಿಸಿದರು. ಈ ನೃತ್ಯವನ್ನು ಬಹುತೇಕ ಪುರುಷರೇ ಪ್ರದರ್ಶಿಸುತ್ತಾರೆ ಭಕ್ತಿ ಈ ನೃತ್ಯದ ಪ್ರಮುಖವಸ್ತು.

ಭಾರತದ ಜಾನಪದ ಕಲೆಗಳು

ಭಾರತ ದೇಶ ವಿಶಾಲವೂ ವೈವಿಧ್ಯವು ಭಿನ್ನ ಸಂಸ್ಕೃತಿಗಳ ತವರೂರು ಅನೇಕತೆಗಳಲ್ಲಿ ಏಕತೆಯನ್ನು ಒಳಗೊಂಡಿರುವ ದೇಶ.

ಈ ಸಾಂಸ್ಕೃತಿಕ ವೈವಿಧ್ಯತೆಯು ಅನೇಕ ಜಾನಪದ ಕಲೆಗಳಿಗೆ ಜನ್ಮ ನೀಡಿದೆ. ಪ್ರತಿರಾಜ್ಯವು ತನ್ನದೇ ಆದ ವಿಶಷ್ಟ ನೃತ್ಯಗಳನ್ನು ಹೊಂದಿದೆ.

1. ಆಂಧ್ರಪ್ರದೇಶ –
   - ಪೆರಿನಿ ತಾಂಡವಂ
   - ಲಂಬಾಡಿ
   - ಕೋಲಾಟಂ
   - ದಿಂಶ ನೃತ್ಯ

2. ಅಸ್ಸಾಂ –

- ಬಿಹು ನೃತ್ಯ
- ಬೋರತಾಲ್ ನೃತ್ಯ

3. ಅರುಣಾಲ ಪ್ರದೇಶ

- ಬೋಡೋ ಚಾಹಂ

4. ಬಿಹಾರ –

- ಬಾಹು ನೃತ್ಯ
- ಪೈಕಾ ನೃತ್ಯ
- ದೋಮ್ ಕೋಚ್

5. ಕರ್ನಾಟಕ –

- ಯಕ್ಷಗಾನ
- ಗೊರವರ ಕುಣಿತ

- ಸುಗ್ಗಿ ಕುಣಿತ – (ಉತ್ತರಕನ್ನಡ)
- ವೀರಗಾಸೆ ಕುಣಿತ
- ಸಿದ್ಧಿ ನೃತ್ಯ – (ಉತ್ತರಕನ್ನಡ)

6. ಗುಜರಾತ್ –

- ಗರ್ಭ ನೃತ್ಯ
- ಸಿದ್ಧ ದೋಮಲ್ ನೃತ್ಯ
- ತಿಪ್ಪಾಣಿ

7. ಗೋವಾ

- ದೇಖ್ನಿ ನೃತ್ಯ

8. ಕೇರಳ

- ಗರುಡ ಪರ್ವ
- ಪದಯಾನಿ
- ಒಪ್ಪನ ಕೋಲ್ ಕಾಳಿ

**ಜಾನಪದ ಚಿತ್ರಕಲೆ**

1. ಪಟ ಚಿತ್ರಕಲೆ – ಓರಿಸ್ಸಾದಲ್ಲಿ ಕಂಡುಬರುವ ಚಿತ್ರಕಲೆ ಬಟ್ಟೆಯ ಮೇಲೆ ಮೂಡಿಬರುವ ಚಿತ್ರಕಲೆ
2. ಮಧುಬನಿ ಜಾನಪದ ಕಲೆ – ಇದು ಬಿಹಾರದ ಜಾನಪದ ಚಿತ್ರಕಲೆ, ಮನೆಯ ಗೋಡೆಯ ಮೇಲೆ ಬಿಡಿಸುವ ಚಿತ್ರಕಲೆ ರಾಮಾಯಣ, ಪ್ರಕೃತಿ, ಪ್ರಾಣಿ ಮತ್ತು ಸಸ್ಯಗಳನ್ನು ಬಿಂಬಿಸುವ ಚಿತ್ರಕಲೆ.
3. ಗೊಂಡರ ಜಾನಪದ ಕಲೆ – ಗೊಂಡರು ಎಂಬ ಬುಡಕಟ್ಟು ಜನರು ತಾವು ವಾಸಿಸುವ ಬೆಟ್ಟಗಳಲ್ಲಿ ಕಂಡಬರುವ ಪ್ರಕೃತಿಯ ಸೊಗಸು, ಗುಡಿಸಲು ಮನೆಗಳು, ಮುಂತಾದ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಚಿತ್ರಿಸುವ ಚಿತ್ರಕಲೆ.

**ಭಾರತದ ಪ್ರಮುಖ ಜಾನಪದ ಗೀತೆಗಳು**

1. ಅರುಣಾಚಲ ಪ್ರದೇಶ – ಜ.ಜಿ–ಲಾ, ಬಾರ್ಯಿ
2. ಅಸ್ಸಾಂ – ಜಿಕಿರ್ಸ್.ಜರಿ
3. ಮಣಿಪುರ – ಕೊಂಗ್ ಜೊಂ ಪರ್ವ
4. ಗೋವಾ – ಮಾಮಡು, ಜವಿ
5. ಕರ್ನಾಟಕ – "ಆನೆ ಬಂತಾನೆ ಯಾವುರ ಆನೆ", ಮಂಟೇಸ್ವಾಮಿ ಗೀತೆಗಳು", 'ಮಲೆ ಮಹಾದೇಶ್ವರ ಗೀತೆಗಳು'.

**ಬಾಹ್ಯ ಜಗತ್ತಿಗೆ ಭಾರತದ ಸಂಸ್ಕೃತಿಯ ಕೊಡುಗೆ ಕೇಂದ್ರ ಏಷ್ಯಾ, ಚೀನಾ, ಜಪಾನ್ ಆಗ್ನೇಯ ಏಷ್ಯಾ ಮತ್ತು ಶ್ರೀಲಂಕಾ**

ಭಾರತ ದೇಶ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಮೂಲಕ ಜಗತ್ತಿನ ಅನೇಕ ದೇಶಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿತ್ತು. ಭೂಮಾರ್ಗ ಮತ್ತು ಜಲಮಾರ್ಗ ಮುಖಾಂತರ ಜನರು ವಲಸೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು.

ಅಜ್ಞಾತ ಲೇಖಕನೊಬ್ಬ ಬರೆದ "ದಿ ಪೆರಿಪ್ಲಸ್ ಆಫ್ ದಿ ಎರಿಥ್ರಿಯನ್ ಸೀ" ಎಂಬ ಗ್ರಂಥದಲ್ಲಿ ಭಾರತ ಮತ್ತು ಪಾಶ್ಚತ್ಯ ದೇಶಗಳ ನಡುವಿನ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳ ಬಗ್ಗೆ ವಿವರವಾಗಿ ತಿಳಿಸುತ್ತದೆ.

**ಭಾರತ ಮತ್ತು ಕೇಂದ್ರ ಏಷ್ಯಾ**

ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಮಧ್ಯೆ ಏಷ್ಯಾ ನಡುವೆ ಅನ್ಯೋನ್ಯ ಸಂಬಂಧವನ್ನು ಕಾಣಬಹುದು. ಮಧ್ಯ ಏಷ್ಯಾದ ಪ್ರಮುಖ ದೇಶಗಳೆಂದರೆ ಈಜಿಪ್ಟ್, ಗ್ರೀಕ್ ಮತ್ತು ರೂಮ್, ಮೆಸಪೋಟೋಮಿಯ ದೇಶಗಳೊಂದಿಗೆ ಭಾರತ ಹೊಂದಿದ್ದ ಸಂಬಂಧ.

ಕ್ರಿ.ಶ. ಪೂರ್ವದಲ್ಲಿ 3000 ದಲ್ಲಿ ಹರಪ್ಪ ಸಂಸ್ಕೃತಿಯು ಈ ದೇಶಗಳೊಂದಿಗೆ ಸಂಬಂಧವನ್ನು ಹೊಂದಿತ್ತು. ಗ್ರೀಕರ ಹೋಮರಿಕ್ ಸಂಸ್ಕೃತಿಯು ಆರ್ಯರ ಸಂಸ್ಕೃತಿಯಿಂದ ಪ್ರಭಾವಿತರವಾಗಿತ್ತು. ಆಫ್ರಿಕಾ ಮತವು ನಿರ್ಗುಣ ಬ್ರಹ್ಮವಾದ, ತಪಸ್ಸು ಭಕ್ತಿ ಚಿತ್ತ ಶುದ್ಧಿ ಮುಂತಾದ ತತ್ವಗಳನ್ನು ಅಂಗೀಕರಿಸಿತ್ತು.

ಕ್ರಿ.ಪೂ. 3 ನೇ ಶತಮಾನದಲ್ಲಿ ಅಶೋಕನು ಬೌದ್ಧ ಬಿಕ್ಷುಗಳನ್ನು ಆಫ್ರಿಕಾ ಖಂಡ, ಗ್ರೀಸ್, ಸಿರಿಯಾ ಮುಂತಾದ ದೇಶಗಳಿಗೆ ಪ್ರಚಾರಕ್ಕಾಗಿ ಕಳುಹಿಸಿದನು.

ಮ್ಯಾಸಿಡೋನಿಯಾ ದೊರೆ ಅಲೆಕ್ಸಾಂಡರ್ ಕ್ರಿ.ಪೂ. 326ರಲ್ಲಿ ಭಾರತದ ಮೇಲೆ ದಾಳಿ ಮಾಡಿದ ಮೇಲೆ ಭಾರತ ಮತ್ತು ಪಾಶ್ಚತ್ಯ ದೇಶಗಳೊಂದಿಗೆ ಸಂಪರ್ಕ ಅಧಿಕಗೊಂಡಿತು.

ಭಾರತದ ಶಿಲ್ಪ ಕಲೆಗಳಿಗೆ ಹೆಲೆನಿಸ್ಟಿಕ್ ಕಲೆಯ ಪ್ರಭಾವ ಬೀರಿದ್ದು ಅನೇಕ ಶಿಲ್ಪಗಳಿಂದ ಸಾಬೀತಾಗಿದೆ ಉದಾಹರಣೆಗೆ ಶಿಲ್ಪಗಳು ಭಾವನಾತ್ಮಕವಾಗಿವೆ ಹೆಚ್ಚಿನ ನೈಜತೆಯನ್ನು ಕಂಡುಬರುತ್ತದೆ. ದೈಹಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ.

ಉದಾ: ಬುದ್ಧನ ಪ್ರತಿಮೆಗಳಲ್ಲಿ ದೈಹಿಕ ಸೌಂದರ್ಯಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ.

**ಭಾರತ ಮತ್ತು ಚೀನಾ**

ಪ್ರಾಚೀನ ಕಾಲದಿಂದಲೂ ವಾಣಿಜ್ಯ ಮತ್ತು ಧಾರ್ಮಿಕ ಸಂಬಂಧವಾಗಿತ್ತು. ಅನೇಕ ಕೃತಿಗಳಲ್ಲಿ ಇದರ ಬಗ್ಗೆ ಉಲ್ಲೇಖವಿದೆ ಕೌಟಿಲ್ಯನ ಅರ್ಥಶಾಸ್ತ್ರ ಮಹಾಭಾರತದಂತ ಕೃತಿ.

ಬೌದ್ಧ ಧರ್ಮವು ಕ್ರಿ.ಪೂ 2 ನೇ ಶತಮಾನದಲ್ಲಿ ಚೀನಾಕ್ಕೆ ಆಗಮಿಸಿತು. ಭಾರತೀಯ ಬೌದ್ಧ ಬಿಕ್ಷುಗಳಾದ ಧರ್ಮ ಧರ್ಮಾರ್ತ ಮತ್ತು ಕಶ್ಯಪ ಮತಾಂಗರು ಮಿಂಗ-ಟೀ ಎಂಬ ರಾಜನ ಆಸ್ಥಾನಕ್ಕೆ ಭೇಟಿ ನೀಡಿದ್ದರು.

ಭಾರತದಿಂದ ಹೊರಟ ಬೌದ್ಧ ಧರ್ಮ ಚೀನಾದಲ್ಲಿ ಬೆಳೆಯಲು ಕಾರಣವಾದ ಪ್ರಮುಖ ಅಂಶವೆಂದರೆ.

ಬುಡಕಟ್ಟು ಧರ್ಮ "ಟಾವೋ ಸಿದ್ಧಾಂತ" ಬೌದ್ಧ ಸಿದ್ಧಾಂತದಷ್ಟು ಗಟ್ಟಿತನ ಇರದ ಕಾರಣ ಇದು ಹಂತ ಹಂತವಾಗಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು.

ಬುದ್ಧನ ತತ್ವ ಸರಳ ಮತ್ತು ಸುಲಭವಾಗಿದ್ದ ಕಾರಣ ಚೀನಿಯರಿಗೆ ಆಕರ್ಷಿತವಾಗಿ ಕಂಡಿತು. ಹಾಗೂ ಬೌದ್ಧ ಧರ್ಮದ "ವಿಶ್ವನೀತಿ" ಚೀನಿ ಜನರ ಜೀವನ ನೀತಿಯಲ್ಲಿ ಬದಲಾವಣೆಗೆ ಕಾರಣವಾಯಿತು.

ಅಶೋಕನ ಧರ್ಮ ಮಹಾಮಾತ್ರರು ತಮ್ಮ ಸತತ ಪ್ರಯತ್ನದ ಮೂಲಕ ಚೀನಾದಲ್ಲಿ ಬೌದ್ಧ ಧರ್ಮ ಹರಡಲು ಕಾರಣರಾದರು.

ಕಶ್ಯಪ ಮಾತಂಗ, ಧರ್ಮರತ್ನ, ಮಹಾಬಲ, ಧರ್ಮಬಲ ಮುಂತಾದ ಭಿಕ್ಷುಗಳು ಚೀನಾದ ಭಾಷೆಗೆ 434 ಗ್ರಂಥಗಳನ್ನು ತರ್ಜುಮೆ ಮಾಡಿದರು. ಚೀನಾದ ರಾಜರಿಗೆ ಭಾರತದ ಬೌದ್ಧ ವಿದ್ವಾಂಸರು ಗುರುವಾಗಿದ್ದರು.

ಇವತ್ತು ಚೀನಾ ಭಾರತಕ್ಕಿಂತಲೂ ದೊಡ್ಡ ಬೌದ್ಧ ರಾಷ್ಟ್ರವಾಗಿ ಬೆಳದಿದೆ.

**ಭಾರತ ಮತ್ತು ಜಪಾನ್**

ಚೀನಾ ಮತ್ತು ಕೊರಿಯಾ ನಂತರ ಬೌದ್ಧ ಧರ್ಮ ಜಪಾನಿಗೂ ಹೊರಡಿತು. ಬೌದ್ಧ ಧರ್ಮ ಜಪಾನಿಗೆ ಪ್ರವೇಶ ಪಡೆದಾಗ ಸ್ಥಳೀಯ ಪಿಂಟೋ ಧರ್ಮ ಪ್ರಚಾರದಲ್ಲಿತ್ತು. ಬೌದ್ಧ ಧರ್ಮ ಪೆಂಟೋ ಧರ್ಮವನ್ನು ವಿರೋಧಿಸದೇ ತನ್ನ ತತ್ವಗಳು ಮತ್ತು ಅದರ ಮಹತ್ವವನ್ನು ಮಾತ್ರ ಪ್ರಚಾರ ಮಾಡಿತು. ಇದರಿಂದ ಜಪಾನ್ ಜನರ ಮನದಲ್ಲಿ ಉಳಿಯಲು ಸಹಾಯವಾಯಿತು. ಜಪಾನ್ ರಾಜ ಶೋಟೂಕು ಈ ಧರ್ಮವನ್ನು ಸ್ವೀಕರಿಸಿದನು. ತೆಂಡೈ-ಬೈ-ಸೈಚೊ ಹಾಗೂ ಶಿಂಗೋನ್-ಬೈ-ಕುರೇ ಎಂಬೆರಡು ಶಿಸ್ತಿನ ಬೌದ್ಧ ಪಂಥಗಳು ಜಪಾನಿ ಜನರಲ್ಲಿ ಏಕತೆಯನ್ನು ಅಥವಾ ಬೌದ್ಧ ರಾಷ್ಟ್ರೀಯತೆಯನ್ನು ಜನಪ್ರಿಯಗೊಳಿಸಿದವು ಪದ್ಧತಿಯ ಮೇಲೆ ಪ್ರಭಾವ ಬೀರಿತು.

18ನೇ ಶತಮಾನದ ವೇಳೆಗೆ ಬೌದ್ಧ ಧರ್ಮ ತತ್ವ ರಾಷ್ಟ್ರೀಯ ಚಿಂತನೆಗಳಿಂದ ರಾಷ್ಟ್ರೀಯ ಧರ್ಮವಾಗಿ ಬೆಳೆಯಿತು.

**ಭಾರತ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳು**

ಭಾರತೀಯ ಸಂಸ್ಕೃತಿಯು ಅನಾದಿಕಾಲದಿಂದಲೂ ತನ್ನ ಸುತ್ತಮುತ್ತಲಿನ ಪ್ರದೇಶಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದೆ. ಅದರ ಕುರುಹಾಗಿ ಅಲ್ಲಿಯ ಕೂಡ ಅಲ್ಲಿಯೂ ಕೂಡ ಭಾರತೀಯ ಸಂಸ್ಕೃತಿ ಪಸರಿಸಿದೆ.

ಮುಖ್ಯವಾಗಿ ಬರ್ಮಾ, ಥೈಲ್ಯಾಂಡ್, ಚಂಪ, ಕಾಂಬೋಜಾ, ಮಲೆಯ, ಜಾವ, ಸುಮತ್ರ ದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಿತ್ತು ಕಾರಣ ಈ ಭಾಗದ ಭೂಮಿಯನ್ನು ಸ್ವರ್ಣ ಭೂಮಿ ಎಂದೇ ಪ್ರಸಿದ್ಧವಾಗಿತ್ತು.

ವಿಯೆಟ್ನಾಂ (ದಕ್ಷಿಣ ಅನ್ನಾಮ್)

ಇಂಡೋ ಚೀನಾದ ಬಲಿಷ್ಠ ರಾಜ್ಯಗಳಲ್ಲಿ ಈಗಿನ ವಿಯೆಟ್ನಾಂ ರಾಜ್ಯವು ಒಂದಾಗಿತ್ತು ಇದರ ಸ್ಥಾಪಕ ಶ್ರೀ ಮಾರ

ರುದ್ರವರ್ಮ, ಹರಿವರ್ಮ, ಇಂದ್ರವರ್ಮ ಇವರು ಪರಾಕ್ರಮಗಳಾಗಿದ್ದು ತಮ್ಮ ನೆರಯವರಾದ ಕಾರಿಭೋಜರು, ಮತ್ತು ಮಂಗೋಲರು ನಾಯಕ ಕುಬ್ಲೆ ಖಾನನ ದಾಳಿಯನ್ನು ಯಶಸ್ವಿಯಾಗಿ ತಡೆದು ತಮ್ಮ ದೇಶವನ್ನು ರಕ್ಷಿಸಿದನು.

ಇದನ್ನು ಚಂಪಾ ರಾಜ್ಯವೆಂದು ಕರೆಯುತ್ತಾರೆ. ಇಲ್ಲಿನ ಜನ ಹಿಂದೂ ಧರ್ಮದ ದೇವತೆಗಳಾದ ಶಿವ ಶಕ್ತಿ ಗಣೇಶ ಸ್ಕಂದ ಮುಂತಾದ ದೇವರನ್ನು ಪೂಜಿಸುತ್ತಿದ್ದರು. ಸಂಸ್ಕೃತ ಭಾಷೆ ಇವರ ಆಡಳಿತ ಭಾಷೆಯಾಗಿತ್ತು.

**ಕಾಂಬೋಡಿಯ (ಕಾಂಬೋಜ)**

ಇಲ್ಲಿ ಹಿಂದೂ ಸಾಮ್ರಾಜ್ಯ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಅನೇಕ ಸ್ಪಷ್ಟ ಉದಾಹರಣೆಗಳು ದೊರೆಯುತ್ತದೆ. ಮುಖ್ಯವಾಗಿ ಜಯವರ್ಮನ ಯಶೋವರ್ಮನ ಸೂರ್ಯವರ್ಮನ ಪ್ರಮುಖ ರಾಜರಾಗಿದ್ದರು.

ಉತ್ತಮ ಉದಾಹರಣೆಯೆಂದರೆ ಯಶೋವರ್ಮನ ಯಶೋಧರ ಪುರವೆಂಬ ಹೊಸನಗರ ನಿರ್ಮಾಣ ಮಾಡಿದನು. ಇನ್ನು ಜಗತ್ತಿನ ಅತಿ ದೊಡ್ಡ ವಿಷ್ಣು ದೇವಾಲಯ ಅಂಗೂರವಾಟ ಅನ್ನು ಎರಡನೇ ಸೂರ್ಯವರ್ಮನು ಸ್ಥಾಪಿಸಿದನು.

**ಮಲೆಯ ಪರ್ಯಾಯ ದ್ವೀಪ**

ಇದು ಹಿಂದೂ ಮಹಾಸಾಗರದಲ್ಲಿ ಕಂಡುಬರುವ ದ್ವೀಪಸ್ತೋಮ. ಜಾವ, ಸುಮಾತ್ರ, ಮಲಯ, ಬಾಲಿ, ಬೋರ್ನಿಯಾ ದ್ವೀಪ ಸಯುಚ್ಛಯಗಳು ಇಲ್ಲಿದೆ.

ಶೈಲೇಂದ್ರ ಸಂತತಿ ರಾಜರು ಈ ದ್ವೀಪ ಸಮೂಹವನ್ನು ಆಳ್ವಿಕೆ ಮಾಡುತ್ತಿದ್ದರು. ಕ್ರಿ.ಶ. 11ನೆಯ ಶತಮಾನದ ವೇಳೆಗೆ ಚೋಳರ ದಾಳಿ ಆರಂಭವಾಗುವವರೆಗೂ ಈ ಸಂತತಿಯವರು ವೈಭವದಿಂದ ಆಳ್ವಿಕೆ ನಡೆಸಿದರು.

**ಜಾವಾ ದ್ವೀಪ**

ಶೈಲೇಂದ್ರ ರಾಜ್ಯದ ಅವನತಿಯ ನಂತರ ಭಾರತದ ಹಿಂದೂ ವಸಾಹತು ಅಸ್ತಿತ್ವಕ್ಕೆ ಬಂತು ಎಂದು ಶಾಸನಗಳು ತಿಳಿಸುತ್ತದೆ. ಪಲ್ಲವರ ಕಾಲದ ಸಂಸ್ಕೃತ ಶಾಸನಗಳು ಹಾಗೂ ಶಿಲ್ಪಗಳಲ್ಲಿ ಜಾವ ದೇಶದಲ್ಲಿ ಹಿಂದೂ ಸಾಮ್ರಾಜ್ಯದ ಸ್ಥಾಪನೆಯ ವಿವರಗಳು ಕಂಡುಬರುತ್ತದೆ. ಕಾಲ ನಂತರ ಇಸ್ಲಾಂ ಧರ್ಮ ಪ್ರಮುಖ ಧರ್ಮವಾಗಿ ಬೆಳೆಯಿತು.

ಕೇಂದ್ರ ಜಾವಾದಲ್ಲಿ ಲಾರ್–ಜೊಂಗ್–ರಂಗ್ ಎಂದು ಪ್ರಖ್ಯಾತ ಹಿಂದೂ ದೇವಾಲಯ ಇಂದಿಗೂ ಇದೆ ಹಾಗೂ ಇದು ತನ್ನ ಹಿಂದೂ ಭಾರತೀಯ ಸಂಸ್ಕೃತಿಯ ಕಥೆ ಹೇಳುತ್ತದೆ.

**ಫಿಲಿಫೈನ್ಸ್**

ಇಲ್ಲಿರುವ 'ಮೋರೂಸ್' ಎಂಬ ಜನರು ಹಿಂದೂಗಳಾಗಿದ್ದರು, ಈಗಲೂ ಶೈವ ವಿಗ್ರಹ ಮೂರ್ತಿ ಮೂರ್ತಿ ಮಲಯಾಳಿ ಶೈಲಿಯ ಕೇಶ ಬಂಧನ ತಗಲಿಂಗ್(ತೆಲುಗು) ಭಾಷೆಯ ಭಾರತೀಯ ಸಂಸ್ಕೃತಿಯನ್ನು ಸೂಚಿಸುತ್ತದೆ.

**ಸಿಲೋನ್ ದೇಶ (ಸಿಂಹಳ)/ಶೀಲಂಕಾ**

ಭಾರತ ಮತ್ತು ಶ್ರೀಲಂಕಾ ಸಂಬಂಧ ಬಿಡಿಸಲಾರದಷ್ಟು ಅಗಾಧ ಮತ್ತು ಗಟ್ಟಿ ಭಾರತೀಯ ಶ್ರೀ ರಾಮನು ಶ್ರೀಲಂಕಾಕ್ಕೆ ಹೋಗಿ ಭಾರತೀಯ ಸಂಸ್ಕೃತಿಯನ್ನು ಲಂಕಾಗೆ ಪರಿಚಯಿಸಿದನು ಎಂಬ ಪ್ರತೀತಿಯಿದೆ. ಅದೇ ರೀತಿ ಅನೇಕ ಭಾರತೀಯ ಅರಸರು ಶ್ರೀಲಂಕಾ ದ್ವೀಪವನ್ನು ವಶಪಡಿಸಿಕೊಂಡು ತಮ್ಮ ಅಧೀನದಲ್ಲಿರಿಸಿಕೊಂಡಿದ್ದರು.

ಬಂಗಾಳದ ರಾಜವಿಜಯನು ಲಂಕಾದ ಮೇಲೆ ದಾಳಿ ಮಾಡಿ ತನ್ನ ಹೊಸತನನ್ನು ಮಾಡಿಕೊಂಡಿದ್ದನ್ನು ಹಾಗೂ ಲಂಕಾ ರಾಜಕುಮಾರಿಯನ್ನು ವಿವಾಹವಾದನು.

ಮೌರ್ಯರ ದೊರೆ ಅಶೋಕನು ತನ್ನ ಮಗ ಮಹೇಂದ್ರ ಮಗಳು ಸಂಗಮಿತ್ರೆಯನ್ನು ಬೌದ್ಧ ಧರ್ಮ ಪ್ರಚಾರಕ್ಕೆ ಕಳುಹಿಸಿದ್ದನು. ಇಂದಿಗೂ ಬೌದ್ಧಧರ್ಮ ಹಾಗೂ ಹಿಂದೂಧರ್ಮ ಶ್ರೀಲಂಕಾದ ಪ್ರಮುಖ ಧರ್ಮವೆನಿಸಿದೆ.

ಹೀಗೆ ಭಾರತ ದೇಶ ತನ್ನ ಸಾಂಸ್ಕೃತಿಕ ರಾಯಭಾರತ್ವದಿಂದ ತನ್ನ ಸುತ್ತಮುತ್ತಲಿನ ಭೂಭಾಗಗಳ ಮೇಲೆ ಪ್ರಭಾವ ಬೀರಿ ತನ್ನ ಸಂಸ್ಕೃತಿಯ ಪತಾಕೆಯನ್ನು ಹಾರಿಸಿದೆ.

## ಭಾರತದ ಧರ್ಮಗಳು

**1) ಹಿಂದೂ ಧರ್ಮ**

ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮವೆಂದರೆ ಅದು ಹಿಂದೂ ಧರ್ಮ. ಭಾರತದಲ್ಲಿರುವ ಬಹುಸಂಖ್ಯಾತರು ಹಿಂದುಗಳು, ಒಂದು ಕಾಲದಲ್ಲಿ ಪ್ರಪಂಚದ ಅನೇಕ ಭಾಗಗಳಲ್ಲಿದ್ದ ಹಿಂದೂ ಧರ್ಮ ಇಂದು ಭಾರತ ಸೇರಿ ಕೆಲವೇ ದೇಶಗಳಿಗೆ ಸೀಮಿತವಾಗಿದೆ. 'ಸಿಂಧೂ' ಎಂಬ ಶಬ್ದದ ಅಪಭ್ರಂಶವೇ 'ಹಿಂದೂ'ವಾಗಿರಬೇಕೆಂಬ ವಾದವಿದೆ. ಇದರ ಜೊತೆಗೆ ಇದನ್ನು 'ಸನಾತನ ಧರ್ಮ'ವೆಂದೂ ಕರೆಯುವರು

**ಹಿಂದೂ ಧರ್ಮದ ಸಾಮಾನ್ಯ ವೈಶಿಷ್ಟ್ಯಗಳು**

1. ಹಿಂದೂ ಧರ್ಮ ಕೇವಲ ಧರ್ಮ ಮಾತ್ರವಲ್ಲದೆ ಅದು ಜೀವನ ವಿಧಾನ ಕೂಡ ಹೌದು ಪ್ರಕೃತಿಯನ್ನು ಆರಾಧಿಸುವ ಪದ್ಧತಿಯೇ ಹಿಂದೂ ಧರ್ಮದ ವೈಶಿಷ್ಟಗಳು
2. ಪ್ರಕೃತಿಯೇ ದೇವರು, ಭೂಮಿತಾಯಿ ರೂಪ ಪ್ರಕೃತಿಯ ಸಕಲ ಜೀವರಾಶಿಗೆ ಗೌರವವನ್ನು ಕೊಡು ಹಾಗೂ ಎಲ್ಲಾ ಜೀವವು ಭಗವಂತನ ದೃಷ್ಟಿಯಲ್ಲಿ ಸಮಾನವೆಂದು ಸಾರಿದ ಉದಾತ್ತ ಧರ್ಮ.
3. ಸ್ತ್ರೀ ಪುರುಷರಿಬ್ಬರಿಗೂ ಸಮಾನ ಅವಕಾಶ, ಹಕ್ಕುಗಳು, ಲಿಂಗಭೇದವನ್ನು ದೂರ ಮಾಡಿದ ಧರ್ಮ.
4. ಈ ಧರ್ಮದಲ್ಲಿ ಯಾವುದೇ ಕಟ್ಟಾಜ್ಞೆ/ಆದೇಶವೆಂಬುದಿಲ್ಲ, ತಮಗೆ ಸರಿಹೊಂದುವ ಆಯ್ಕೆ ಮಾಡಿಕೊಳ್ಳುವ ಮುಕ್ತ ಅವಕಾಶ ನೀಡಿದೆ.
5. ಈ ಧರ್ಮಕ್ಕೆ ಯಾವುದೇ ಪ್ರವಾದಿ/ ಪ್ರವರ್ತಕರಿಲ್ಲದಿದ್ದರೂ ಜಗತ್ತಿನ ಬಲಶಾಲಿ ಧರ್ಮಗಳ ಸಾಲನಲ್ಲಿ ನಿಲ್ಲುತ್ತದೆ.

ಹಿಂದೂ ಧರ್ಮದ ಸಾಮಾನ್ಯ ನಂಬಿಕೆಗಳು

1. ಸತ್ಯ ಧರ್ಮವೇ ಶಾಶ್ವತವಾದದ್ದು
2. ಆತ್ಮ ಶಾಶ್ವತ ಅದಕ್ಕೆ ಸಾವಿಲ್ಲ
3. ಜ್ಞಾನ, ಭಕ್ತಿ, ಕರ್ಮ ಮಾರ್ಗದಿಂದ ಭಗವಂತನನ್ನು ನೋಡಬಹುದು
4. ಮೋಕ್ಷ ಸಂಪಾದನೆಯೇ ಅಂತಿಮ ಗುರಿ
5. ಧರ್ಮರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

**ಪುರುಷಾರ್ಥಗಳು**

**ಚಿತ್ರ**

ಈ ಪುರುಷಾರ್ಥಗಳು ಜೀವನದ ಹಂತಗಳನ್ನು ಕುರಿತು ತಿಳಿಸುತ್ತದೆ

## ಹಿಂದೂ ಧರ್ಮದ ಮತಾಚರಣೆಗಳು ಆಚರಣೆಗಳು ಮತ್ತು ನೀತಿ ಶಾಸ್ತ್ರಗಳು

ಹಿಂದೂ ಧರ್ಮಿಯರ ದೈನಂದಿನ ಆಚರಣೆಗಳೆಂದರೆ ಸೂರ್ಯೋದಯಕ್ಕಿಂತ ಮೊದಲೇ ಎದ್ದು ಮನೆಯ ಶುದ್ಧತೆ ಮಾಡಿ, ಸ್ನಾನ, ಸಂಧ್ಯಾವಂದನೆ, ಪೂಜೆ, ಮಂತ್ರ ಪಠಣ ಇದು ನಿತ್ಯ ಜೀವನದ ಆಚರಣೆಗಳು.

ಸೂರ್ಯ, ಗೋವು, ಸ್ತ್ರೀಯ ಪೂಜೆ, ಹೂ, ತಾಂಬೂಲ ಸಮರ್ಪಣೆ ಗಂಟೆಯನ್ನು ಬಾರಿಸಿ ಶಂಕನಾದ ಆರತಿ ಧ್ಯಾನ ಹಿಂದೂ ಧರ್ಮದ ಪ್ರಮುಖ ಮತ ಚಲನೆಗೆ ಭಾಗಗಳು.

ಮತಚರಣೆಯೆಂದರೆ ಹುಟ್ಟಿನಿಂದ ಸಾಯುವವರೆಗಿನ ಸಂಸ್ಕಾರ ಆಚರಣೆಯು ಪ್ರಮುಖವಾಗಿ 16 ಆಚರಣೆಗಳು ಇದರಲ್ಲಿ ಬರುತ್ತದೆ

1. ಗರ್ಭಧಾರಣ
2. ಪುಂಸವನ
3. ಸೀಮಂತ್ತೋನ್ನಯನ
4. ಜಾತಕ ಕಾರ್ಯ
5. ನಾಮಕರಣ
6. ಉಪನಿಷ್ಕ್ರಮಣ
7. ಅನ್ನಪ್ರಾಶನ
8. ಚೂಡಕರ್ಮ
9. ಕರ್ಣಭೇಧ
10. ಉಪನಯನ
11. ವಿದ್ಯಾರಂಭ
12. ಕೇಶಾಂಸ
13. ಸಮವರ್ತನ
14. ವಿವಾಹ
15. ವಾನಪ್ರಸ್ತ/ಸನ್ಯಾಸ
16. ಅಂತ್ಯಷ್ಠಿ

ಈ ಸಂಸ್ಕಾರಗಳು ಗರ್ಭದಲ್ಲಿ ಆವಿರ್ಭವಿಸದಿಂದ ಮರಣದವರೆಗೂ ನಮ್ಮನ್ನು ಹಿಂಬಾಲಿಸುತ್ತದೆ. ಇವುಗಳ ಆಚರಣೆಯಿಂದ ಮನಸ್ಸಿನ ಕಲ್ಮಶಗಳು ದೂರ ಸರಿಯುತ್ತದೆ.

**ಹಿಂದೂ ಧರ್ಮದ ನೀತಿ ಸೂತ್ರಗಳು**

ನೀತಿ, ನೈತಿಕತೆ, ಔಧಾರ್ಯ, ಪ್ರಾಮಾಣಿಕತೆಗಳಂತಹ ಸದ್ಗುಣಗಳ ಮೇಲೆ ನಿಂತ ಧರ್ಮವೇ ಹಿಂದೂ ಧರ್ಮ. ಈ ಧರ್ಮದಲ್ಲಿ ಆತ್ಮಕ್ಕೆ ಸಾವಿಲ್ಲ, ಅದು ಅಮರ ಎನ್ನುತ್ತದೆ.

ಅದರ ಪ್ರಮುಖ 8 ಸದ್ಗುಣಗಳು

1. ಎಲ್ಲಾ ಜೀವಗಳಲ್ಲಿಯೂ ಸಹಾನುಭೂತಿ
2. ತಾಳ್ಮೆ
3. ತೃಪ್ತಿ
4. ಪರಿಶುದ್ಧತೆ
5. ಪ್ರಾಮಾಣಿಕ ಪ್ರಯತ್ನ
6. ಸದ್ವಿಚಾರಗಳು
7. ದುರಾಸೆಯಿಂದ ಮುಕ್ತಿ
8. ಅಸೂಯೆಯಿಂದ ಮುಕ್ತಿ ಈ ಎಂಟು ಗುಣಗಳು ಹೊಂದಿರುವವನು ಬ್ರಹ್ಮನನ್ನು ಸೇರುತ್ತಾನೆ.

ಯಾವುದೇ ಫಲಾಪೇಕ್ಷೆಯಿಲ್ಲದೆ ಮಾಡುವ ಕೆಲಸ ಭಗವಂತನಿಗೆ ಪ್ರಿಯವಾಗುತ್ತದೆ ಎಂದು ಕರ್ಮದ ಮಹತ್ವವನ್ನು ತಿಳಿಸುವ ಕೆಲಸ ಹಿಂದೂ ಧರ್ಮದ ತಿರುಳು.

ಭಗವದ್ಗೀತೆಯು ವ್ಯಕ್ತಿಯು ಕಡ್ಡಾಯವಾಗಿ ಹೊಂದಿರಬೇಕಾದ ಪ್ರಧಾನ ಗುಣಗಳನ್ನು ಪಟ್ಟಿ ಮಾಡುತ್ತದೆ ಅವೆಂದರೆ ಸತ್ವಗುಣ, ರಜಸ್ವ, ತಮಸ್ಸು

**ಹಬ್ಬಗಳು ಮತ್ತು ಪವಿತ್ರ ದಿನಗಳು**

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳಿಗೆ ಉತ್ತಮ ಉದಾಹರಣೆಯೆಂದರೆ ಹಬ್ಬಗಳು ಮತ್ತು ಪವಿತ್ರ ದಿನಗಳು. ಈ ಹಬ್ಬಗಳ ಆಚರಣೆಯ ಹಿಂದೆ ಪ್ರಕೃತಿಯಲ್ಲಿ ಆಗುವ ಸಹಜ ಬದಲಾವಣೆಯನ್ನು ಗುರುತಿಸಬಹುದು. ಹಬ್ಬಗಳ ಕಾಲ ಮತ್ತು ಋತುಗಳಿಗೆ ಸಂಬಂಧವಿದೆ ಹಾಗೆಯೇ ಸೌರಮಂಡಲದಲ್ಲಿ ಆಗುವ ಬದಲಾವಣೆಗೂ ಹಬ್ಬಗಳಿಗೂ ಸಂಬಂಧವಿದೆ. ಉದಾ: ಸುಗ್ಗಿ ಹಬ್ಬ ಸಂಕ್ರಾಂತಿ ಹಬ್ಬ, ಅಕ್ಷಯ ತೃತೀಯ.

**ಹಿಂದುಗಳ ಪ್ರಮುಖ ಹಬ್ಬಗಳು**

1. ಸಂಕ್ರಾಂತಿ ಹಬ್ಬ
2. ನಾಗರಪಂಚಮಿ
3. ನವರಾತ್ರಿ
4. ದಸರಾ
5. ದೀಪಾವಳಿ
6. ಗಣೇಶ ಚತುರ್ಥಿ
7. ಯುಗಾದಿ
8. ಶಿವರಾತ್ರಿ ಪ್ರಮುಖವಾದವು

**ಹಿಂದೂಗಳ ಯಾತ್ರಾ ಸ್ಥಳಗಳು**

ಹಿಂದುಗಳು ಸಾಮಾನ್ಯವಾಗಿ ತಪ್ಪದೇ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ದೇವರ ಅನುಗ್ರಹ ಪಡೆಯಲು ಅಥವಾ ಮಾಡಿದ ತಪ್ಪಿಗೆ ಪ್ರಾಯಶ್ಚಿತಕಾಗಿ ಅಥವಾ ಹರಿಕೆ ತೀರಿಸುವ ಸಲುವಾಗಿ ಯಾತ್ರಾ ಸ್ಥಳಗಳು ಪವಿತ್ರ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ಆದರೆ ಭೇಟಿ ನೀಡಲೇಬೇಕೆಂಬ ಕಡ್ಡಾಯ ನಿಯಮವಿಲ್ಲ. ಪ್ರಮುಖ ಯಾತ್ರಾ ಕ್ಷೇತ್ರಗಳೆಂದರೆ ವಾರಣಾಸಿ(ಕಾಶಿ), ಅಯೋಧ್ಯ, ಮಥುರಾ, ಕೇದಾರನಾಥ, ಬದರಿನಾಥ, ತಿರುಪತಿ ಇತ್ಯಾದಿ.

**ಹಿಂದೂ ಧಾರ್ಮಿಕ ಪಂಥಗಳು**

ಪ್ರಮುಖವಾಗಿ ಮೂರು ಪಂಥಗಳನ್ನು ಕಾಣಬಹುದು (1) ಶೈವ ಫಂಥ, (2) ವೈಷ್ಣವ ಪಂಥ (3) ಶಾಕ್ತ ಪಂಥ

1. ಶೈವಪಂತ ಶಿವನನ್ನೇ ಕೇಂದ್ರವಾಗಿರಿಸಿಕೊಂಡು ಶಿವರಾಧನೆಯನ್ನು ಧ್ಯೇಯವಾಗಿರಿಸಿಕೊಂಡಿರುವ ಪಂಥ. ಇದರ ಮೊದಲ ಉಲ್ಲೇಖ ನಮಗೆ ಸಿಂಧೂ ಬಯಲಿನ ನಾಗರಿಕತೆಯಲ್ಲಿ ಸಿಗುತ್ತದೆ. ಸಿಂಧೂ ನಾಗರಿಕತೆ ಜನರು ಪಶುಪತಿಯ ರೂಪದಲ್ಲಿ ಶಿವನನ್ನು ಆರಾಧಿಸುತ್ತಿದ್ದರು.

   ಶೈವ ಪಂಥದಲ್ಲಿ ಅನೇಕ ಪಂಥಗಳು ಉಗಮವಾದವು ಅವುಗಳೆಂದರೆ

   1. ಪಶುಪತಪಂಥ – ಇದು ಶೈವ ಮತದ ಹಳೆಯ ಪಂಥ ಕ್ರಿ.ಶ. 1ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಆರಂಭವಾಯಿತು.
   2. ಕಾಶ್ಮೀರ ಶೈವ ಪಂಥ – ಈ ಶೈವ ಪಂಥ ಕಾಶ್ಮೀರದಲ್ಲಿ ವಸುಗುಪ್ತನಿಂದ ಆರಂಭವಾಯಿತು. ಈ ಪದ್ಧತಿಯಲ್ಲಿ ಶಿವನ ಆರಾಧನೆಗೆ ಮಂತ್ರ ತಂತ್ರ ಬಳಸುವುದಿಲ್ಲ.
   3. ಆಗಮ ಪಂಥ – ಮಧ್ಯ ಭಾರತದಲ್ಲಿ ಪ್ರಾರಂಭವಾಯಿತು.
   4. ಮತ್ತ ಮಯೂರ ಪಂಥ – ಇದು ಸಹ ಮಧ್ಯ ಭಾರತದಲ್ಲಿ ಆರಂಭವಾಯಿತು.
   5. ಕಾಲಮುಖ ಮತ್ತು ಕಪಾಲಿಕ – ಈ ಪಂತದಲ್ಲೂ ಸಹ ಈಶಾನ್ಯ ಭಾರತದಲ್ಲಿ ಆರಂಭವಾಯಿತು, ಶಿವನನ್ನು ಮಾಂತ್ರಿಕ ಶಕ್ತಿ ದೇವನೆಂದು ತಿಳಿದು ಮಂತ್ರ ತಂತ್ರದಿಂದ ಆರಾಧಿಸುತ್ತಾರೆ.
   6. ಶೈವ ಅದ್ವೈತ ಪಂಥ – ತಮಿಳುನಾಡಿನಲ್ಲಿ ಆರಂಭವಾಯಿತು.
   7. ವೀರಶೈವ ಅಥವಾ ಲಿಂಗಾಯತ ಪಂಥ – ಕ್ರಿ.ಶ. 12ನೇ ಶತಮಾನದಲ್ಲಿ ಬಸವಣ್ಣ ಕರ್ನಾಟಕದಲ್ಲಿ ಆರಂಭಿಸಿದರು.
   8. ಆರಾಧ್ಯ ಶೈವ ಪಂಥ – ಆಂಧ್ರಪ್ರದೇಶದಲ್ಲಿ ಮಲ್ಲಿಕಾರ್ಜುನ ಪಂಡಿತ ಆರಂಭಿಸಿದರು.

**ವೈಷ್ಣವ ಪಂಥ**

ಹಿಂದೂ ಧರ್ಮದ ಇನ್ನೊಂದು ಪ್ರಮುಖ ಪಂಥ, ವಿಷ್ಣುವರ್ಧನ್ ಪ್ರಮುಖವಾಗಿ ಆರಾಧನೆ ಮಾಡಲಾಗುತ್ತದೆ, ಉತ್ತರ ವೇದ ಕಾಲದಲ್ಲಿ ವಿಷ್ಣುವು ಪ್ರಮುಖ ದೇವತೆಯೆಂದು ತ್ರಿಮೂರ್ತಿಗಳಲ್ಲಿ ಪ್ರಮುಖ ಸ್ಥಾನ ಪಡೆದನು. ವಿಶ್ವದ ಎಲ್ಲಾ ಆಗುಹೋಗುಗಳಿಗೆ ವಿಷ್ಣು ಕಾರಣವೆಂದು ನಂಬಿರುವವರು. ಚತುರ್ಭುಜದಾರಿಯಾಗಿ, ಶಂಕ, ಚಕ್ರ, ಗದೆ, ಕಮಲ ಹಿಡಿದು ಲಕ್ಷ್ಮಿ ಸಮೇತ ಗರುಡ ವಾಹನನಾಗಿರುವನೆಂದು ಪುರಾಣಗಳಲ್ಲಿ ವರ್ಣಿಸಿವೆ. ಜಗತ್ತಿನಲ್ಲಿ ಧರ್ಮ ಸಂಸ್ಥಾಪನೆಗಾಗಿ ವಿಷ್ಣು ಮತ್ತೆ ಮತ್ತೆ ಅವತಾರವನ್ನುತ್ತುತ್ತಾನೆ ಎಂದು ನಂಬಲಾಗಿದೆ.

ಈ ನಿಟ್ಟಿನಲ್ಲಿ ವಿಷ್ಣುವಿನ "ದಶಾವತಾರ"ಗಳು ಪ್ರಮುಖವಾಗಿದೆ. ಗುಪ್ತರು ವೈಷ್ಣವ ಪಂತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ದಕ್ಷಿಣದಲ್ಲಿ ವೈಷ್ಣವ ಪಂಥವು ಶೈವ ಪಂತದಂತೆ ಭಕ್ತಿಪಂಥವಾಗಿ ಬೆಳೆಯಿತು.

ವೈಷ್ಣವ ಮತದ ಉಪ ಪಂಥಗಳು

1. ವೈಶಾಸನ ಪಂಥ – ಈ ಪಂಥದ ಸ್ಥಾಪಕ ವೈಕಾನಸ
2. ಶ್ರೀ ವೈಷ್ಣವ ಪಂಥ – ಈ ಪಂಥದ ಸ್ಥಾಪಕರು ಶ್ರೀ ರಾಮಾನುಜಾಚಾರ್ಯ
   - ವಡಗಲೈ – ಇವರು ವೇದಗಳಿಗೆ ಪ್ರಾಮುಖ್ಯತೆ ನೀಡುವರು
   - ತೆಂಕಲೈ – ಇವರು ನಾಲಾಯಿರ್ ದಿವ್ಯ ಪ್ರಬಂಧಂಗೆ ಮಾನ್ಯತೆ ನೀಡುವರು.

**ಶಾಕ್ತ ಪಂಥ**

ಹಿಂದೂ ಧರ್ಮದ ಇನ್ನೊಂದು ಪ್ರಮುಖ ಪಂಥ **"ಶಕ್ತಿ ಪಂಥ"** ಇವರು ದೇವಿ, ಕಾಳಿಯನ್ನು ಆರಾಧಿಸುವ ಪಂಥ. ಇವರು ದೇವಿಯನ್ನು ಸೃಷ್ಟಿಕರ್ತೆ ಎಂದು ನಂಬಿ ಆರಾಧಿಸಲಾಗುತ್ತದೆ. ಈ ಇಡೀ ಸೃಷ್ಟಿಯು ಮಾತೃ ದೇವತೆಯಿಂದಾಯಿತು ಎಂದು ಈ ಪಂಥದ ಜನರು ನಂಬುತ್ತಾರೆ. ಶಕ್ತವಾದ ಭಾರತದಲ್ಲಿ ದಕ್ಷಿಣ ಭಾರತ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.

ಶಾಕ್ತವಾದದಲ್ಲಿ ಎರಡು ಪಂಥಗಳಿವೆ (1) ಶ್ರೀ ಕುಲ (2) ಕಲಿಕುಲ

ಭಾರತದಲ್ಲಿ 52 ಶಕ್ತಿಗಳ ಶಕ್ತಿ ಪೀಠಗಳಿವೆ. ಪ್ರಮುಖ 4 ಶಕ್ತಿ ಪೀಠಗಳು

1. ವೈಷ್ಣೋದೇವಿ
2. ತಾರತರಣಿ
3. ಕಾಮಾಕ್ಯ
4. ದಕ್ಷಿಣಕಾಳಿಕಾ

**ಉಪನಿಷತ್ ಮತ್ತು ಭಗವದ್ಗೀತೆಯ ತತ್ವ**

ಉಪನಿಷತ್‌ಗಳು – ಹಿಂದೂ ಧಾರ್ಮಿಕ ಪರಂಪರೆಯಲ್ಲಿ ಯಾವಾಗಲೂ ಉಪನಿಷತ್ತುಗಳಿಗೆ ಉನ್ನತ ಸ್ಥಾನ ನೀಡಲಾಗಿದೆ. ಇವುಗಳನ್ನು 'ಶೃತಿ ವೈದಿಕ ಸಾಹಿತ್ಯ' ಎನ್ನುವರು. ಇವುಗಳನ್ನು ವೇದಗಳ ಮೂಲಭೂತ ಲಿಂಗವೆನ್ನುವರು. ಇವು ಕ್ರಿ.ಪೂ 2500 ದಿಣದ 2000 ಅವಧಿಯಲ್ಲಿ ರಚಿತವಾಗಿದೆ.

ಒಟ್ಟು 108 ಉಪನಿಷತ್‌ಗಳಿವೆ ಉಪನಿಷತ್‌ಗಳಲ್ಲಿರುವ ಪ್ರಮುಖ ಸಾರಾಂಶಗಳು

1. ಬ್ರಹ್ಮ
2. ಆತ್ಮ
3. ಸೃಷ್ಟಿ
4. ಬಂಧನ ಮತ್ತು ಮುಕ್ತಿ
5. ಸ್ವರ್ಗ ನರಕ ಇತ್ಯಾದಿ

**ಭಗವದ್ಗೀತೆಯ ತತ್ವ**

ಭಾರತೀಯ ತತ್ವ ಸಿದ್ಧಾಂತದಲ್ಲಿ ಭಗವದ್ಗೀತೆಗೆ ಮಹತ್ವದ ಸ್ಥಾನವಿದೆ. ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣನು ತಾನು ಭಗವಂತನೆಂದು ಬಹಿರಂಗಪಡಿಸಿ ತನ್ನ ವಿಶ್ವರೂಪ ದರ್ಶನ ಮಾಡಿಸಿ ಅರ್ಜುನನಿಗೆ ಬೋಧಿಸುವ ನೀತಿಯಾಗಿದೆ.

ಮನುಷ್ಯನು ಫಲಾಪೇಕ್ಷೆಯಿಲ್ಲದೆ, ಎಲ್ಲವನ್ನು ಭಗವಂತನಿಗೆ ಅರ್ಪಿಸಿ, ಕರ್ಮಗಳನ್ನು ಪೂರ್ಣಗೊಳಿಸಿ ಮೋಕ್ಷ ಸಂಪಾದಿಸುವ ಕರ್ಮವನ್ನು ಗೀತೆಯಲ್ಲಿ ಬೋಧಿಸಿದೆ

ಮೊದಲನೆಯ ಅಧ್ಯಾಯ ಪೀಠಿಕಾ ರೂಪವಾಗಿದೆ ಉಳಿದ ಅಧ್ಯಾಯಗಳಲ್ಲಿ ಆಸೆಯಗಳಿಂದ ಪಾರಾಗುವ ಬಗೆಯನ್ನು, ಆರು ಅಧ್ಯಾಯಗಳಲ್ಲಿ ಭಕ್ತಿ ಯೋಗವು ಪರಮಾತ್ಮನನ್ನು ಪ್ರೀತಿಪೂರ್ವಕವಾಗಿ ಆರಾಧಿಸುವುದನ್ನು ತಿಳಿಸುತ್ತದೆ.

ಸನ್ಯಾಸ ಮತ್ತು ಕರ್ಮ ಯೋಗಗಳು ಮನುಷ್ಯನನ್ನು ಅಲ್ಲದೆ ಅದೇ ಗುರಿಯತ್ತ ಕರೆದುಯ್ಯುತ್ತದೆ ಯೋಗದ ಮೂಲಕ ಮನುಷ್ಯನು ಜ್ಞಾನವನ್ನು ಸಂಪಾದಿಸುತ್ತಾನೆ. ಆಗ ಎಲ್ಲಾ ವಿಷಯಗಳು ಒಂದೇ ಬೆಳಕಿನಲ್ಲಿ ಬೆಳಕಿನಲ್ಲಿ ಗೋಚರವಾಗುತ್ತದೆ.

ಯಾರು ಏಕಾಗ್ರತೆಯಿಂದ ಪರಿಶುದ್ಧವಾಗಿ ಭಕ್ತಿಯಿಂದ ಭಗವಂತನನ್ನು ಧ್ಯಾನಿಸುವರು ಅವರು ಸಾಯುವ ಕಾಲದಲ್ಲಿ ದೇವರ ದರ್ಶನ ಪಡೆಯುವರು.

ಜಗತ್ತಿನ ಏಳು ತರನಾದ ವಸ್ತುಗಳಿವೆ. ಅವುಗಳಲ್ಲಿ ಒಂದು ಪರಿವರ್ತನಾಶೀಲವಾದುದು, (ಮನಸ್ಸು), ಇನ್ನೊಂದು ಪರಿವರ್ತನಾರಹಿತವಾದುದು ಅದೇ ಆತ್ಮ ಮತ್ತು ಪರಮಾತ್ಮ.

**ಪತಂಜಲಿಯ ಯೋಗ ತತ್ವ**

ಪತಂಜಲಿಯ ಯೋಗ ತತ್ವ ಸೂತ್ರವು ಪ್ರಾಚೀನ ಭಾರತದ ಸಾಹಿತ್ಯ ಕೃತಿಯಾಗಿದೆ. ಕ್ರಿ.ಶ. 400 ರಲ್ಲಿ ಬರೆಯಲ್ಪಟ್ಟಿರುವ ಕೃತಿಯಾಗಿದೆ. ಇದು 196 ಭಾರತೀಯ ಸೂತ್ರಗಳನ್ನು ಒಳಗೊಂಡಿದೆ. ಇದು ನಾಲ್ಕು ಭಾಗಗಳನ್ನು ಒಳಗೊಂಡಿದೆ ಅವುಗಳು

1. ಸಮಾಧಿಪಾದ – ಯೋಗದ ಆಳವಾದ ಸ್ಥಿತಿ
2. ಸಾಧನಪಾದ – ಅಭ್ಯಾಸ, ಶಿಸ್ತು, ಇದರಲ್ಲಿ ಬರುತ್ತದೆ
3. ವೈಭೂತಿಪಾದ – ಯೋಗದ ಮೂಲಕ ಸಿದ್ದಿ ಶಕ್ತಿ ಪಡೆಯುವುದು
4. ಕೈವಲ್ಯಪಾದ – ಯೋಗದ ಮೂಲಕ ಸಾಕ್ಷಾತ್ಕಾರ ಪಡೆಯುವುದು

ಯೋಗ ಧಾರ್ಮಿಕ ಕ್ರಿಯೆಗಳಿಗೆ, ಕಠೋರ ಆತ್ಮದಂಡನೆಗೆ ಮತ್ತು ಮುಕ್ತಿಗೆ ಪ್ರಮುಖ ಮಾನಸಿಕ ಸಾಧನವಾಗಿ ಪರಿಗಣಿಸಲ್ಪಟ್ಟಿದೆ. ಮತ್ತು ಮಾನಸಿಕ ತರಬೇತಿಗೆ ಹೆಚ್ಚು ಮಹತ್ವ ನೀಡುತ್ತದೆ.

ಬೌದ್ಧ ಗ್ರಂಥಗಳೂ ಕೂಡ ಯೋಗ ತರಬೇತಿಯನ್ನು ಉಲ್ಲೇಖಿಸಿದೆ. ಪ್ರಮುಖವಾಗಿ ಎಂಟು ರೀತಿಯ ಯೋಗಗಳನ್ನು ಪಟ್ಟಿ ಮಾಡಲಾಗಿದೆ.

1. ಯಾಮ
2. ನಿಯಮ
3. ಆಸನ
4. ಪ್ರಾಣಾಯಾಮ
5. ಪತ್ಯಾಹಾರ
6. ಧಾರಣ
7. ಧ್ಯಾನ
8. ಸಮಾಧಿ

ಯೋಗಾಭ್ಯಾಸಗಳಿಂದ ಕುಂಡಲಿನಿ ಶಕ್ತಿಯು ಜಾಗೃತವಾಗಿ 'ಸುಷುಮ್ನ' ಧಮನಿಯ ಮೂಲಕ ಮನೋಶಕ್ತಿಯು ಯೋಗ ಸಹಸ್ರಾರ ಚಕ್ರವನ್ನು ಸೇರಿ ಯೋಗಿಯ ಆಧ್ಯಾತ್ಮಿಕ ಬಲವನ್ನು ಗಳಿಸುತ್ತಾನೆ.

ಪತಂಜಲಿಯ ಯೋಗಸೂತ್ರವು ಯೋಗಾ, ಧ್ಯಾನ, ಭಕ್ತಿ, ಕರ್ಮ, ಮನೋನಿಗ್ರಹಗಳ ಸಂಗಮ.

**ಜೈನ ಧರ್ಮ**

ಪ್ರಾಚೀನ ಭಾರತದಲ್ಲಿ ಕ್ರಿ.ಪೂ 6ನೇ ಶತಮಾನದ ಆಸುಪಾಸಿನಲ್ಲಿ 2 ಪ್ರಮುಖ ಧರ್ಮಗಳು ಜನ್ಮ ತಳೆದವು.

1. ಜೈನ ಧರ್ಮ
2. ಬೌದ್ಧ ಧರ್ಮ

ಜೈನ ಧರ್ಮವು 24 ತೀರ್ಥಂಕರರ ತತ್ವ ಚಿಂತನೆಗಳಿಂದ ಧರ್ಮವೆನಿಸಿದೆ, ಆದಿನಾಥ/ಋಷಭನಾಥ ಮೊದಲನೆಯ ತೀರ್ಥಂಕರ ಪಾರ್ಶ್ವನಾಥ 23ನೇ ತೀರ್ಥಂಕರ ಮಹಾವೀರನು ಕೊನೆಯ ತೀರ್ಥಂಕರ.

**ಜೈನ ಧರ್ಮದ ತತ್ವಗಳು**

1. ಪಂಚಾನುವ್ರತಗಳು

- ಅಹಿಂಸೆ
- ಸತ್ಯ
- ಆಸ್ತೇಯ
- ಅಪರಿಗ್ರಹ
- ಬ್ರಹ್ಮಚರ್ಯ

ಮೊದಲು 4 ಶೀಲಗಳನ್ನು ಮೊದಲ 23 ಜನ ತೀರ್ಥಂಕರರು ಸೇರಿಸಿದ್ದಾರೆ. ಕೊನೆಯ "ಬ್ರಹ್ಮಚರ್ಯ" ಅಥವಾ "ಇಂದ್ರಿಯ ನಿಗ್ರಹ"ವನ್ನು ಮಹಾವೀರನು ಸೇರಿಸಿ ಪಂಚಶೀಲವನ್ನಾಗಿಸಿದನು.

2. ತ್ರಿರತ್ನಗಳು – ಮಹಾವೀರನು 'ನಿರ್ವಾಣ' ಅಥವಾ 'ಮೋಕ್ಷ ಮಾರ್ಗಕ್ಕೆ' ತ್ರಿರತ್ನಗಳೆಂಬ ಮೂರು ಮಾರ್ಗಗಳನ್ನು ಬೋಧಿಸಿದನು.

ಅವುಗಳು

1. ಸಮ್ಯಕ್ ಜ್ಞಾನ
2. ಸಮ್ಯಕ್ ಚಾರಿತ್ರ್ಯ
3. ಸಮ್ಯಕ್ ದರ್ಶನ

1. ಸಮ್ಯಕ್ ಜ್ಞಾನ – ಸರಿಯಾದ ಜ್ಞಾನವೆಂದರೆ ದೇವರ ಅಸ್ತಿತ್ವ ಇಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಈ ಜಗತ್ತು ಜೀವ (ಆತ್ಮ) ಮತ್ತು ಅಜೀವಗಳಿಂದ ಕೂಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು.
2. ಸಮ್ಯಕ್ ಚಾರಿತ್ರ್ಯ – ಸರಿಯಾದ ನಡತೆ, ಇದನ್ನು ನೀತಿ ಸಂಹಿತೆಗಳು ಎಂದು ಕರೆಯುತ್ತಾರೆ. ಇದರಲ್ಲಿ ಎರಡು ವಿಧಗಳಿವೆ. (1) ಜೈನ ಸನ್ಯಾಸಿಗಳಿಗೆ (2) ಗೃಹಸ್ಥರಿಗೆ

ಜೈನ ಸನ್ಯಾಸಿಗಳಿಗೆ ಮಹಾವೃತ್ತಗಳಿವೆ ಮತ್ತು ಕುಟುಂಬಸ್ಥರು/ಗೃಹಸ್ಥರಿಗೆ ಎರಡು ವೃತ್ತಗಳಿಗೆ

ಸಮ್ಯಕ್ ಚಾರಿತ್ರ್ಯದಲ್ಲಿ ಸತ್ಯ ಮತ್ತು ಅಹಿಂಸೆಯೇ ಪ್ರಮುಖ ಅಂಶಗಳು

1. ಸತ್ಯ – ಯೋಚಿಸಿ ಮಾತನಾಡುವುದು,<br>ಮಾತಿನಲ್ಲಿ ಕೋಪ ಹೊರ ಹಾಕುವುದನ್ನು ನಿಯಂತ್ರಿಸುವುದು<br>ಭಯದಲ್ಲಿ ಸುಳ್ಳು ಹೇಳದಿರುವುದು<br>ಆಡಿದ ಮಾತಿಗೆ ತಪ್ಪದೆ ನಡೆಯುವುದು
2. ಅಹಿಂಸೆ – ಜಗತ್ತಿನಲ್ಲಿ ಎಲ್ಲಾ ಧರ್ಮಗಳು ಅಹಿಂಸೆಯನ್ನು ಪ್ರತಿಪಾದಿಸಿದ್ದರು ಕೂಡ, ಅಹಿಂಸೆಗೆ ಹೆಚ್ಚು ಮಹತ್ವ ನೀಡಿರುವ ಧರ್ಮವೇ ಜೈನ ಧರ್ಮ

"ಅಹಿಂಸ ತತ್ವ"ವು ಕೇವಲ ಪ್ರಾಣಿ ಪಕ್ಷಿಗಳಿಗೆ ಅನ್ವಯವಾಗದೆ ಸಕಲ ಗಿಡಮರ ಜಲಚರ ಜೀವಿಗಳಿಗೂ ಅನ್ವಯವಾಗಿತ್ತು. ಈ ಕಾರಣದಿಂದಲೇ ಜೈನರ ಕೃಷಿಕರಾಗಿ ಹೊರಹೊಮ್ಮದೇ ವಾಣಿಜ್ಯ ವ್ಯಾಪಾರಗಳಲ್ಲಿ ನಿರತರಾದರು

3. ಆಸ್ತೇಯ – ಕಳಂಕದಿಂದ ದೂರವಿರುವುದು ಕಳ್ಳತನ ಮಾಡದಿರುವುದು ಇತ್ಯಾದಿ.
4. ಅಪರಿಗ್ರಹ – ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ಕೂಡಿಡಬಾರದು, ವ್ಯಕ್ತಿಯು ತನ್ನ ಕುಟುಂಬಕ್ಕೆ ತೀರಾ ಅಗತ್ಯವಿರುವ ವಸ್ತುವನ್ನು ಬಳಸಿಕೊಳ್ಳಲು ಮಾತ್ರ ಅನುಮತಿ ನೀಡುತ್ತದೆ.
5. ಬ್ರಹ್ಮಚರ್ಯ – ಅಂದರೆ "ನೈತಿಕ ಪರಿಶುದ್ಧತೆ" ಯಾವುದೇ ವ್ಯಾಮೋಹಗಳಿಗೆ ಬಲಿಯಾಗದೆ ಬ್ರಹ್ಮಚರ್ಯದ ಮೂಲಕ ಮುಕ್ತಿ ಕಾಣುವುದು.

ಸಮ್ಯಕ್ ದರ್ಶನ – ಸರಿಯಾದ ನಂಬಿಕೆ ಎಂದರೆ ಮಹಾವೀರನ ಸರ್ವಜ್ಞತ್ವ ಮತ್ತು ಘನತೆ ನಿರ್ದೋಷತ್ವಗಳಲ್ಲಿ ನಂಬಿಕೆ ಮತ್ತು ಅವುಗಳನ್ನು ಸರ್ವಸ್ವವೆಂದು ನಂಬಿರುವುದು.

**ಜೈನ ಪಂಥಗಳು**

1. ದಿಗಂಬರ ಪಂಥ – ಜೈನ ಮುನಿ ಸ್ಥೂಲಭದ್ರನ ನೇತೃತ್ವದಲ್ಲಿ ಬೆಳೆಯಿತು. ಇವರು ನಗ್ನತೆಯನ್ನು ಆಯ್ದುಕೊಂಡರು ಯಾಕೆಂದರೆ ಕೊನೆಯ ತೀರ್ಥಂಕರರು ನಗ್ನತೆಯನ್ನು ಕಡ್ಡಾಯಗೊಳಿಸಿದರು. ಇದರಲ್ಲಿ 2 ಉಪಪಂಥಗಳಿವೆ.
   (1) ಸ್ಥಾನಕವಾಸಿಯರು
   (2) ಮೂರ್ತಿ ಪೂಜಕರೆ

ಬೌದ್ಧ ಧರ್ಮ – ಗೌತಮ ಬುದ್ಧ ಬೌದ್ಧ ಧರ್ಮದ ಸ್ಥಾಪಕ ಬುದ್ಧನನ್ನು "ಏಷ್ಯಾದ ಬೆಳಕು" ಎಂದು ಕರೆದಿದ್ದಾರೆ.

ಸಿದ್ಧಾರ್ಥಾ ಎಂಬ ಹೆಸರಿನಿಂದ ಕಪಿಲವಸ್ತುವಿನ ಲುಂಬಿನಿ ನಗರದಲ್ಲಿ ಜನಿಸಿದನು. ತನ್ನ ಮಲತಾಯಿ ಪ್ರಜಾಪತಿ ಗೌತಮಿಯು ಸಾಕಿದ್ದಳು ಆದ್ದರಿಂದ ಗೌತಮಿ ಎಂಬ ಹೆಸರು ಬಂದಿತು.

ಅರಮನೆಯಲ್ಲಿದ್ದರೂ ಜೀವನ ನಶ್ವರ ಎಂಬ ರಹಸ್ಯವನ್ನು ಮನಗಂಡ ಸಿದ್ಧಾರ್ಥನಿಗೆ, ಇವೆಲ್ಲವನ್ನು ತ್ಯಜಿಸಬೇಕೆಂಬ ಮನಸ್ಸಾಗಿ ಎಲ್ಲವನ್ನು ತ್ಯಜಿಸಿ ಹೊರಟನು ಆ ದಿನವನ್ನು ಬೌದ್ಧ ಕೃತಿಗಳು 'ಮಹಾಭಿನಿಷ್ಕ್ರಮಣ' ಎಂದು ಕರೆಯುತ್ತಾರೆ.

ಹೀಗೆ ಅಲೆದಾದಿ ಅಂತಿಮವಾಗಿ ಗಯದ ಸಮಿಪ, ಹರಿಯುವ ನದಿಯ ತಟದಲ್ಲಿದ್ದ ಅರಳಿಮರದ ಕೆಳಗೆ ಧ್ಯಾನಮಗ್ನನಾಗಿ ಕುಳಿತನು ಅಂತಿಮವಾಗಿ 49 ನೇ ದಿನ ಪರಮಜ್ಞಾನವನ್ನು ಗಳಿಸಿ "ಬುದ್ಧ" ನಾದನು.

ಜ್ಞಾನೋದಯಗೊಂಡ ಗೌತಮ ಬುದ್ಧನು ವಾರಣಾಸಿಯ ಬಳಿಯ ಸಾರನಾಥ ರಷಿಪಟ್ಟಣದ ಜಿಂಕೆವನದಲ್ಲಿ ತನ್ನ ಮೊದಲ ಸಂದೇಶ ನೀಡಿದನು. ಇದನ್ನು ಬೌದ್ಧ ಧರ್ಮದಲ್ಲಿ 'ಧರ್ಮಚಕ್ರ ಪರಿವರ್ತನ" ಎಂದು ಕರೆಯುತ್ತಾರೆ.

ಹೀಗೆ ಅಲೆದಾಡಿ ಅಂತಿಮವಾಗಿ ಗಯದ ಸಮೀಪ, ಹರಿಯುವ ನದಿಯ ತಟದಲ್ಲಿದ್ದ ಅರಳಿಮರದ ಕೆಳಗೆ ಧ್ಯಾನಮಗ್ನನಾಗಿ ಕುಳಿತನು ಅಂತಿಮವಾಗಿ 49ನೇ ದಿನ ಪರಮಜ್ಞಾನವನ್ನು ಗಳಿಸಿ "ಬುದ್ಧ" ನಾದನು.

ಜ್ಞಾನೋದಯಗೊಂಡ ಗೌತಮ ಬುದ್ಧನು ವಾರಣಾಸಿಯ ಬಳಿಯ ಸಾರನಾಥ ರಷಿಪಟ್ಟಣದ ಜಿಂಕೆವನದಲ್ಲಿ ತನ್ನ ಮೊದಲ ಸಂದೇಶ ನೀಡಿದನು. ಇದನ್ನು "ಭೌದ್ಧ ಧರ್ಮದಲ್ಲಿ 'ಧರ್ಮಚಕ್ರ ಪರಿವರ್ತನ" ಎಂದು ಕರೆಯುತ್ತಾರೆ.

ಅಂತಿಮವಾಗಿ ತನ್ನ 80 ನೇ ವಯಸ್ಸಿನಲ್ಲಿ ಖುಷಿನಗರದಲ್ಲಿ ಮಹಾ ಪರಿನಿರ್ವಾಣಾ ಹೂಡಿದನು.

ನಾಲ್ಕು ಮಹಾ ಸತ್ಯಗಳು

1. ಜಗತ್ತು ದುಃಖದಿಂದ ಕೂಡಿದೆ
2. ಆಸೆಯ ದುಃಖಕ್ಕೆ ಕಾರಣ
3. ಆಸೆಯನ್ನು ತೊರೆದರೆ ದುಃಖ ನಿವಾರಣೆಯಾಗುತ್ತದೆ
4. ಆಸೆಯನ್ನು ತೊರೆಯಲು ಅಷ್ಟಾಂಗ ಮಾರ್ಗ ಅನುಸರಿಸಬೇಕು

**ಅಷ್ಟಾಂಗ ಮಾರ್ಗಗಳು**

ಬುದ್ಧನ ಎಲ್ಲಾ ದುಃಖಗಳಿಗೂ ಕಾರಣವಾದ ಆಸೆಯನ್ನು ತೊರೆಯಲು ಅಷ್ಟಾಂಗ ಮಾರ್ಗವನ್ನು ಬೋಧಿಸುವೆನು, ಶ್ರೇಷ್ಠವಾದ ಎಂಟು ಮಾರ್ಗಗಳು

ಅವುಗಳೆಂದರೆ

1. ಸಮ್ಯಕ್ ದೃಷ್ಟಿ (ಒಳ್ಳೆಯ ನೋಟ)
2. ಸಮ್ಯಕ್ ವಚನ (ಒಳ್ಳೆಯ ಮಾತು)
3. ಸಮ್ಯಕ್ ಜೀವಿಕಾ (ಒಳ್ಳೆಯ ಜೀವನ)
4. ಸಮ್ಯಕ್ ಸ್ಮೃತಿ (ಒಳ್ಳೆಯ ವಿಚಾರ)
5. ಸಮ್ಯಕ್ ಸಂಕಲ್ಪ (ಒಳ್ಳೆಯ ಸಂಕಲ್ಪ)
6. ಸಮ್ಯಕ್ ಕಾರ್ಯ (ಒಳ್ಳೆಯ ಕೆಲಸ)
7. ಸಮ್ಯಕ್ ಯೋಗ (ಒಳ್ಳೆಯ ಪ್ರಯತ್ನ)
8. ಸಮ್ಯಕ್ ಸಮಾಧಿ (ಒಳ್ಳೆಯ ಧ್ಯಾನ)

ಬುದ್ಧನು ಮಧ್ಯಮ ವರ್ಗವನ್ನು ಬೋಧಿಸಿದ್ದಾನೆ. ಅತಿಯಾದ ವೈಭೋಗ, ಅತಿಯಾದ ವೈರಾಗ್ಯ ಇವೆರಡರಿಂದಲೂ ಪಾರಾಗುವ ಮಾರ್ಗವನ್ನು 'ಮಧ್ಯಮ ಮಾರ್ಗ' ಎಂದು ಪ್ರತಿಪಾದಿಸಿದನು.

ಬುದ್ಧನ ಪ್ರಕಾರ ಅತಿಯಾದ ಸನ್ಯಾಸವನ್ನಾಗಲಿ, ಅಹಿಂಸೆಯನ್ನಾಗಲಿ ಅತಿಯಾಗಿ ಹುಚ್ಚು ಹೆಚ್ಚಾಗಿ ಆಚರಿಸಬಾರದು. ಆದ್ದರಿಂದ ಬುದ್ಧನು ಬೋಧಿಸಿದ ಮಧ್ಯಮ ಮಾರ್ಗವನ್ನು "ಸುವರ್ಣ ಮಾಧ್ಯಮ ದರ್ಶನ" ಎಂದು ಸಹ ಕರೆಯುತ್ತಾರೆ.

ಬುದ್ಧನು ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮಕ್ಕೆ ಹೆಚ್ಚು ಪ್ರಶಸ್ತಿಯನ್ನು ನೀಡಿದ್ದಾನೆ ವಿರೋಧಿಸಿದನು.

ನಿರ್ವಾಣ – ಭೌದ್ಧ ಧರ್ಮದ ಪ್ರಕಾರ ನಿರ್ವಾಣ ಎಂದರೆ ಸಂಸಾರದಿಂದ ಮುಕ್ತಿ ಪಡೆಯುವುದು, ಅಥವಾ ಸಾವಿನಿಂದ, ಮುಕ್ತನಾಗುವುದು ಹಿಂದೂ ಧರ್ಮದ ಪ್ರಕಾರ. ಇದನ್ನು "ಮೋಕ್ಷ" ಎನ್ನುತ್ತಾರೆ. ಬೌದ್ಧ ಧರ್ಮದ 'ನಿರ್ವಾಣ' ಎನ್ನುತ್ತಾರೆ. ಬೌದ್ಧ ಧರ್ಮದಲ್ಲಿ ನಿರ್ಮಾಣಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ.

ಗೌತಮ ಬುದ್ಧನು ಕರ್ಮ ಸಿದ್ಧಾಂತ ಮತ್ತು ಪೂರ್ವ ಜನ್ಮದ ಕರ್ಮಗಳು ಮುಂದಿನ ಜನ್ಮಗಳಿಗೆ ಕಾರಣವಾಗುತ್ತದೆ ಎಂದು ಬೋಧಿಸಿದನು.

**ಬೌದ್ಧ ಧರ್ಮದ ನೈತಿಕ ನಿಯಮಗಳು**

ಬುದ್ಧನು ಬುದ್ಧ ಯತಿಗಳಿಗೆ 10 ಆದೇಶ (ದಸ ಸತ್ಯ ಪದ) ಜಾರಿಗೆ ತಂದನು. ಹಾಗೂ ತನ್ನ ಅನುಯಾಯಿಗಳಿಗೆ ಐದು ನೀತಿ ಸಂಹಿತೆಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಬೋಧಿಸಿದನು. ಬುದ್ಧನು ಬೋಧಿಸಿದ ಪಂಚಶೀಲಗಳೆಂದರೆ

1. ಹತ್ತೆ ಮಾಡದಿರುವುದು
2. ಸೋಮಾರಿತನದಿಂದ ದೂರ ಇರುವುದು ಮತ್ತು ಸುಳ್ಳು ಹೇಳದಿರುವುದು
3. ಮಧ್ಯಪಾನದಿಂದ ದೂರವಿರುವುದು
4. ಅನೈತಿಕ ಸಂಪರ್ಕದಿಂದ ದೂರ ಇರುವುದು
5. ಕಳ್ಳತನ ಮಾಡದಿರುವುದು

**ಬೌದ್ಧ ಧರ್ಮದ ಪಂಥಗಳು**

ಎರಡನೇ ಬೌದ್ಧ ಧರ್ಮ ಸಮ್ಮೇಳನದ ವೇಳೆಗೆ ಬೌದ್ಧ ಭಿಕ್ಷುಗಳು ತಾತ್ವಿಕ ಭಿನ್ನಾಭಿಪ್ರಾಯದೊಂದಿಗೆ ಸ್ಥವೀರವಾದಿಗಳು ಮತ್ತು ಮಹಾಸಂಘಿಕರು ಎಂಬ ಗುಂಪುಗಳು ಕಾಣಿಸಿಕೊಂಡವು. ಮುಂದೆ 4ನೇ ಯ ಬೌದ್ಧ ಸಮ್ಮೇಳನದ ವೇಳೆಗೆ ಈ ಪಂಥಗಳು ಹೀನಾಯನ ಮತ್ತು ಮಹಾಯಾನ ಎಂಬೆರಡು ಸಂಘಟನೆಗಳಾಗಿ ಹುಟ್ಟಿಕೊಂಡವು.

ಹೀನಾಯಾನ – ಇವರನ್ನು "ಚಿಕ್ಕ ವಾಹನ"ದವರು ಅಥವಾ ಗುಂಪಿನವರು ಎಂದರ್ಥ

ಸಂಸಾರವನ್ನು ತ್ಯಜಿಸಿ ಸಾಧನೆಗೆ ಒತ್ತು ನೀಡುವವರು. ಹೀನಾಯಾನಿಗಳು ಈ ಪಂಥವು ಸನ್ಯಾಸತ್ವಕ್ಕೆ ಹೆಚ್ಚಿನ ಮನ್ನಣೆ ನೀಡಿತು ಸ್ವಯಂ ನಿಯಂತ್ರಣ ಶಿಸ್ತು ಮತ್ತು ಧ್ಯಾನಗಳ ಮೂಲಕ ಪ್ರತಿಯೊಬ್ಬರು ನಿರ್ವಾಣವನ್ನು ಹೊಂದಬಹುದು.

ಪಾಲಿ ಭಾಷೆಯಲ್ಲಿ ಹೀನಾಯನಿಗಳನ್ನು ಸಾವಿರವಾದಿಗಳು ಅಥವಾ ಹಿರಿಯ ಸಿದ್ಧಾಂತಕರು ಎಂದು ಕರೆಯುತ್ತಾರೆ.

ಇದೊಂದು ಸಾಂಪ್ರದಾಯಿಕ ಪಂಥವಾಗಿತ್ತು ದೇವರ ಪೂಜೆಗೆ ಮತ್ತು ಮೂರ್ತಿ ಪೂಜೆಗೆ ವಿರೋಧವನ್ನು ವ್ಯಕ್ತಪಡಿಸಿದರು.

**ಮಹಾಯಾನ** – ಇದು ಬೌದ್ಧ ಧರ್ಮದ ಉದಾರವಾದಿ ಪಂಥವಾಗಿದೆ. ಇವರು ಮೊದಲು ಮಹಾಸಾಂಘಿಕರು ಎನಿಸಿದ್ದರು. ಇವರು ಬದಲಾಗಿ ಕಾಲಕ್ಕೆ ಹೊಂದಿಕೊಂಡು ಮಹಾಯಾನ ಎಂದರೆ "ಹಿರಿದಾದ ವಾಹನ" ಎಂದು ಗುರುತಿಸಲ್ಪಟ್ಟಿದೆ.

ಈ ಪಂಥ ಕೇವಲ ವೈಯಕ್ತಿಕ ಸಾಧನೆ ಹಾಗೂ ನಿರ್ಮಾಣಗಳಿಗಷ್ಟೇ ಮಹತ್ವ ನೀಡಿದೆ ಎಲ್ಲಾ ಜೀವಿಗಳಿಗೂ ಮೋಕ್ಷ ಸಿಗಬೇಕು, ಎಂಬ ಉದ್ದೇಶ ಒಂದಿತ್ತು. ಹೀಗಾಗಿ ಇದನ್ನು ಮಹಾಯಾನ ಎಂದು ಕರೆಯಲಾಗಿದೆ

ಇವರು "ಬೋಧಿ ಸತ್ವರಲ್ಲಿ" ನಂಬಿಕೆ ಇರಿಸಿಕೊಂಡವರು

ಪ್ರಮುಖ ಬೋಧಿಸತ್ವರು

1. ಅವಲೋಕಿತೇಶ್ವರ
2. ಮಂಜುಶ್ರೀ
3. ವಜ್ರಪಾಣಿ
4. ಅಮಿತಾ ಬಾ್
5. ಕ್ಷಿತಿ ಗರ್ಭ
6. ಪದ್ಮ ಪಾಣಿ
7. ಮೈತ್ರೇಯಿ

ಬೋಧಿ ಸತ್ವ ಸೇರಿದಂತೆ ಬುದ್ಧನನ್ನು ಮೂರ್ತಿ ರೂಪದಲ್ಲಿ ಆರಾಧಿಸುವ ಪಂಥ ಮಹಾಯಾನ. ಈ ಪಂಥದಲ್ಲಿ ಮಾಧ್ಯಮಿಕ ಮತ್ತು ಯೋಗಚಾರ ಗಳಿಂದ ತಾತ್ವಿಕ ಸಂಪ್ರದಾಯಗಳಿವೆ.

**ವಜ್ರಯಾಣ ಪಂಥ**

ಇದು ಕ್ರಿ.ಶ.8ನೇ ಶತಮಾನದಲ್ಲಿ ಈಶಾನ್ಯ ಭಾರತದ ರಾಜ್ಯಗಳಲ್ಲಿ ಕಾಣಿಸಿಕೊಂಡು ತದನಂತರ ಚೀನಾ ಕಾಂಬೋಡಿಯ ಜಪಾನ್ ದೇಶಗಳಿಗೆ ಹರಡಿತ್ತು. ಇದು ಹಿಂದೂ ತಂತ್ರ ಸಿದ್ಧಾಂತದ ಪ್ರಭಾವಿತವಾಗಿದೆ ಹಾಗೂ ಬೌದ್ಧ ಧರ್ಮದ ಮೂಲ ತತ್ವಗಳಿಂದ ಭಿನ್ನವಾಗಿದೆ. ಇವರಲ್ಲಿ ಪ್ರಮುಖವಾಗಿ ಆದಿ ಬುದ್ಧನು ಹಾಗೂ ದೇವಿಯ ಆರಾಧನೆ ಇದೆ. ಇದು ಯೋಗ ಪಂಥವಾಗಿದ್ದು ಆಚರಣೆಯ ವಿವಿಧ ತತ್ವಗಳನ್ನು ತಿಳಿಸುತ್ತದೆ. ಮುಖ್ಯವಾಗಿ (1) ನಿರ್ಮಾಣ ಚಕ್ರ (2) ಧರ್ಮ ಚಕ್ರ (3) ಸಂಭೋಗ ಚಕ್ರ (4) ಸ್ತ್ರೀ ತತ್ವ ಚಕ್ರ

ಬಂಗಾಳದ ರಾಜರಾದ ದೇವಪಾಲ ಮತ್ತು ಮಹಾಪಾಲರು ಇದನ್ನು ಪೋಷಿಸಿದರು.

**ಕ್ರಿಶ್ಚಿಯನ್ ಧರ್ಮ**

ಜಗತ್ತಿನಲ್ಲಿ ಅತಿ ಹೆಚ್ಚಿನ ಅನುಯಾಯಿಗಳನ್ನು ಹೊಂದಿರುವ ಧರ್ಮ ಕ್ರಿಶ್ಚಿಯನ್ ಧರ್ಮ. ಕ್ರೈಸ್ತ ಧರ್ಮದ ಸಂಸ್ಥಾಪಕರು ಯೇಸುಕ್ರಿಸ್ತ ಅವರ ನೆನಪಿಗಾಗಿ ಕಾಲಗತಿಯನ್ನು "ಕ್ರಿಸ್ತಶಕ" ಎಂದು ಕರೆಯುತ್ತಾರೆ.

ಬೆತ್ಲೆಹಮ್‌ನ ದನದ ಕೊಟ್ಟಿಗೆಯಲ್ಲಿ ಯೇಸುವಿನ ಜನನವಾಯಿತು. ಈ ಊರಿನ ಪಕ್ಕದಲ್ಲಿ ನೆಲೆಸಿದ್ದ ಕೆಲವು ಕುರಿಗಾಹಿಗಳಿಗೆ ದೇವವಾಣಿ ಕೇಳಿಸಿ ಅವರೆಲ್ಲಾ "ಭೂಮಿಗೆ ಶಾಂತಿ ತರಲು ಬಂದ ಭಗವಂತ" ಎಂದು ನೇಮಿಸಿದರು.

ಯೇಸು ಹುಟ್ಟಿದಾಗ ಪೂರ್ವದಲ್ಲಿ ಪ್ರಕಾಶಮಾನವಾದ ನಕ್ಷತ್ರವನ್ನು ಕಾಣಿಸಿತು. ಅದನ್ನು ಪೂರ್ವದ ನಕ್ಷತ್ರ (ಸ್ಟಾರ್ ಆಫ್ ಈಸ್ಟ್) ಎಂದು ಪಂಡಿತರು ಕರೆಯುತ್ತಾರೆ. ಅವರು ಅದನ್ನು ಅನುಸರಿಸಿ ಏಸುವಿನ ಬಳಿ ಬಂದು ನೆಲೆಸಿದರು.

ಯೇಸು "ಜಾನ್ ದಿ ಬ್ಯಾಪ್ಟಿಸ್ಟ್" ಎಂಬ ಯೋಗದಿಂದ ದೀಕ್ಷೆಯನ್ನು ಪಡೆದು ಜನರಿಗೆ ಉಪದೇಶ ಮಾಡುತ್ತಾ ಸೇವೆ ಮಾಡುತ್ತಾ ತಿರುಗಿದರು. ಯೇಸುವಿನ ಉಪದೇಶಗಳನ್ನು "ಪರ್ವತ ಪ್ರಸಂಗ" ಎಂದು ಕರೆಯುತ್ತಾರೆ.

ತನ್ನ ಧಾರ್ಮಿಕ ಮತ್ತು ಧಾರ್ಮಿಕ ಚಿಂತನೆಗಳಿಂದ ಯೇಸು "ಕ್ರಿಸ್ತ"ನಾದನು (ಕ್ರಿಸ್ತನೆಂದರೆ ಉದ್ಧಾರಕ) ಹಾಗೂ ತನ್ನನ್ನು "ದೇವರ ಮಗ"ನೆಂದು ಕರೆದುಕೊಂಡನು.

ಯೇಸುವಿನ ಬೋಧನೆಯಲ್ಲಿನ ಸರಳತೆ ಕರುಣೆ ನ್ಯಾಯ, ಪ್ರೀತಿಯನ್ನು ನೋಡಿ ಜನರು ಹೆಚ್ಚೆಚ್ಚು ಆಕರ್ಷಿತರಾದರು. ಅದೇ ರೀತಿ ಶತ್ರುಗಳನ್ನು ಹುಟ್ಟು ಹಾಕಿತು. ರೋಮನ್ನರು ಯೇಸುವನ್ನು ಧರ್ಮ ನಿಂದಕ ಮತ್ತು ದೇಶದ್ರೋಹಿ ಎಂದು ಆರೋಪಿಸಿ ಶಿಲುಬೆಗೇರಿಸಿದರು. ಶುಕ್ರವಾರ ಕ್ರಿ.ಶ. 33 ಏಪ್ರಿಲ್ 3 ರಂದು ಯೇಸುವಿನ ಏಸುವನ್ನು ಶಿಲುಬೆಗೇರಿಸಿದ ದಿನವನ್ನು "ಗುಡ್ ಫ್ರೈಡೆ" ಎಂದು ಆಚರಿಸುತ್ತಾರೆ.

ಯೇಸುವಿನ ಮರಣದ ಮೂರು ದಿನಗಳ ನಂತರ ಅಂದರೆ ಭಾನುವಾರ ಯೇಸು ಜೀವಂತ ಕಾಣಿಸಿಕೊಂಡನು ಎಂಬ ನಂಬಿಕೆ ಇದೆ. ಈ ದಿನವನ್ನು "ಈಸ್ಟರ್ ಭಾನುವಾರ" ಎಂದು ಆಚರಿಸುತ್ತಾರೆ. ಇದನ್ನೇ ಯೇಸುವಿನ ಪುನರುತ್ಥಾನ ಹಿಂದೂ ಕರೆಯುತ್ತಾರೆ.

ಯೇಸು ಕ್ರಿಸ್ತನ ಬೋಧನೆಗಳು

ಯೇಸುವಿನ ಬೋಧನೆಗಳು ಧರ್ಮ ಗ್ರಂಥ ಬೈಬಲ್ ನಲ್ಲಿವೆ ಪ್ರಧಾನವಾಗಿ ಎರಡು ಭಾಗಗಳಾಗಿವೆ

1. ಹಳೆಯ ಒಡಂಬಡಿಕೆ – ಯಹೂದಿಗಳಿಗೂ ಇದು ಪವಿತ್ರ ಗ್ರಂಥ
2. ಹೊಸ ಒಡಂಬಡಿಕೆ – ಯೇಸುವಿನ ನಾಲ್ಕು ಜನ ಶಿಷ್ಯರು ಸಂಗ್ರಹಿಸಿರುವ ದೈವಣಿಗಳು

ಆ ನಾಲ್ಕು ಶಿಷ್ಯರು

1. ಸಂತ ಮಾರ್ಕ
2. ಸಂತ ಲ್ಯೂಕ್
3. ಸಂತ ಮ್ಯೂಧ
4. ಸಂತ ಜಾನ್

ಈ ಭಾಗದಲ್ಲಿ ಯೇಸುವಿನ ಜೀವನ ಮತ್ತು ವಾಣಿಗಳಿಗವೆ

**ಬೋಧನೆಗಳು**

1. ದೇವರು – ದೇವನು ಚೈತನ್ಯ ರೂಪಿಯು, ನಿತ್ಯನು, ದೇಹರಹಿತನು, ಪರಿಪೂರ್ಣನು, ಶಾಶ್ವತನು, ಸರ್ವಶಕ್ತನು ಆಗಿರುವನು ತಾನು ದೇವರ ಮಗನು ಎಂದು ಹೇಳಿದನು.
2. ನೈತಿಕ ನಿಯಮಗಳು – ಪಾಪಗಳಿಂದ ದೂರ ಇರಬೇಕು. ಮನುಷ್ಯನ ನೈತಿಕವಾಗಿ ಬಾಳಬೇಕು.
3. ಸೋದರರತೆಯ ಮಹತ್ವ – ಜಗತ್ತಿನ ಮಾನವರೆಲ್ಲ ಸಹೋದರರು ಇವರ ನಡುವೆ ಬೇಕಾಗಿರುವುದು ನಂಬಿಕೆ ಗೌರವ
4. ಕ್ಷಮಾ ಗುಣದಲ್ಲಿ ನಂಬಿಕೆ – ಯೇಸುವು ಕ್ಷಮಾಗುಣದಲ್ಲಿ ನಂಬಿಕೆ ಹೊಂದಿದ್ದನು. ಮಾನವ ಕುಲವು ನ್ಯಾಯ ನಿಷ್ಠೆ ಕರ್ತವ್ಯಕ್ಕೆ ಒತ್ತು ನೀಡಿದನು. ನೀನು ನಿನ್ನ ನೆರೆಯವರನ್ನು ಪ್ರೀತಿಸು ಮತ್ತು ಕ್ಷಮಿಸು.

5. ವ್ಯಕ್ತಿಯ ಪರಿಪೂರ್ಣತೆಯ ಬಗ್ಗೆ – ಯಾರಿಗೆ ಕ್ಷಮಾಗುಣವಿರುವುದೋ, ಪ್ರಾಪಂಚಿಕ ಸುಖದ ಬಗ್ಗೆ ತಿರಸ್ಕಾರವಿರುತ್ತೋ ಆ ವ್ಯಕ್ತಿ ಜಗತ್ತಿನಲ್ಲಿ ಪರಿಪೂರ್ಣನಾಗುವನು.
6. ಸದ್ಗತಿಗೆ ಸರಳ ಮಾರ್ಗಗಳು – ವ್ಯಭಿಚಾರ ಮಾಡದಿರುವುದು, ಕುಡಿಯದಿರುವುದು, ಹಿರಿಯರನ್ನು ಗೌರವಿಸುವುದು, ಗೌರವಿಸುವುದು ತಂದೆ ತಾಯಿಯನ್ನು ಗೌರವಿಸುವುದು.

ಕ್ರಿಶ್ಚಿಯನ್ ಪಂಥಗಳು

1. ರೋಮನ್ ಕ್ಯಾಥೋಲಿಕರು – ಇದು ಕ್ರೈಸ್ತ ಧರ್ಮದ ಮೂಲ ಪಂಥ ಎಂತಲೂ, ಪೋಪ್‌ನಲ್ಲಿ ನಂಬಿಕೆ ಇಟ್ಟಿರುವವರು. ಚರ್ಚನ್ನು ಸ್ವರ್ಗಕ್ಕೆ ದಾರಿ ಮತ್ತು ಪೋಪ್‌ನನ್ನು ದೇವರ ಪ್ರತಿನಿಧಿ ಎಂದು ನಂಬಿರುವರು.
2. ಪ್ರೋಟೆಸ್ಟಂಟರು – ರೋಮನ್ ಕ್ಯಾಥೋಲಿಕ್ ಚರ್ಚಿನ ದೋಷಗಳನ್ನು ಬಯಲಿ\ ಗೆಳೆಯುತ್ತಾ ಕ್ರಿಸ್ತನ ಮೂಲಭೋಧನೆಯಲ್ಲಿ ನಂಬಿಕೆ ಇಟ್ಟವರು.

**ಭಾರತದಲ್ಲಿ ಧರ್ಮ ಪ್ರಚಾರಕ ಚಟುವಟಿಕೆಗಳು**

"ಸಂತ ಥಾಮಸ್" ಎಂಬ ರೋಮನ್ ಕ್ಯಾಥೋಲಿಕ್ ಪಾದ್ರಿ ಮದ್ರಾಸಿನಲ್ಲಿ ಧರ್ಮ ಪ್ರಚಾರಕ್ಕೆ ತೊಡಗಿದ್ದ ಎಂದು "ಮಾರ್ಕೊಪೋಲೋ" ತನ್ನ ಲೇಖನದಲ್ಲಿ ನಮೂದಿಸಿದ್ದ ಆದ್ದರಿಂದ ಉತ್ತರ ಭಾರತಕ್ಕಿಂತ ಮೊದಲು ದಕ್ಷಿಣ ಭಾರತದಲ್ಲಿ ಕ್ರೈಸ್ತ ಧರ್ಮ ಆರಂಭವಾಯಿತು.

ಭಾರತದಲ್ಲಿ ಬೆಳವಣಿಗೆಯಾದ ಕ್ರೈಸ್ತ ಧರ್ಮದ ಶಾಖೆಗಳು

1. ಸಿರಿಯನ್ ಚರ್ಚ್
2. ರೋಮನ್ ಕ್ಯಾಥೋಲಿಕ್
3.

1. ಸಿರಿಯನ್ ಚರ್ಚ್ – ಸಿರಯನ್ ಕ್ರೈಸ್ತರೆಂಬ ಹೆಸರಿನ ದಕ್ಷಿಣ ಭಾರತದ ಕ್ರೈಸ್ತರು ಧರ್ಮ ಪ್ರಚಾರವನ್ನು ದಕ್ಷಿಣ ಭಾರತದ ಕಾಂಗ್ರನೂರು ಮಲಬಾರ ಪ್ರದೇಶಗಳಲ್ಲಿ ಪ್ರಾರಂಭಿಸಿ, ಚರ್ಚಿಗಳನ್ನು ಪ್ರಾರಂಭಿಸಿದರು. "ಸಂತ ಮಾರಥಾಯ" ಎಂಬ ಪಾದ್ರಿ ಧರ್ಮ ಪ್ರಚಾರ ಮಾಡಿದ ಬಗ್ಗೆ "ಕ್ರಿಶ್ಚಿಯನ್ ಟೋಪಗ್ರಫಿ" ಎಂಬ ಕೃತಿ ಮಾಹಿತಿ ನೀಡುತ್ತದೆ. ಇವರಿಗೆ ಸಿರಿಯಾಯಿಕ್ ಭಾಷೆಯಲ್ಲಿ ಮಾತನಾಡುವ ಮತ್ತು ಬರೆದ ಸಿದ್ಧಾಂತದೊಂದಿಗೆ ಸಂಬಂಧ ಹೊಂದಿದ್ದ ಕಾರಣ, ಅವರಿಗೆ ಹೆಸರು ಬಂದಿತು ಸಂತ ಡೈಯಾನಿಕ್, ಸಂತ ಜೋರ್ಡಾನ್ ಈ ಪಂಥದ ಪ್ರಮುಖರು.
2. ರೋಮನ್ ಕ್ಯಾಥೋಲಿಕ್ ಚರ್ಚ್ – ಭಾರತದಲ್ಲಿ ರೋಮನ್ ಕ್ಯಾಥೋಲಿಕ್ ಕ್ರೈಸ್ತ ಧರ್ಮವು ಅಧಿಕೃತವಾಗಿ ಪೋರ್ಚುಗೀಸರ ಆಗಮನದೊಂದಿಗೆ ಭಾರತಕ್ಕೆ ಬಂದಿತು.

ಫ್ರಾನ್ಸಿಸ್ ಕ್ಷೇವಿಯರ್ ಹಾಗೂ ರೋಬೋಟ್ ಡೆ ನೋಬಿಲಿಯ ಇವರಿಬ್ಬರು ಭಾರತದಲ್ಲಿ "ಯೇಸು ಸಂಘ" ಸ್ಥಾಪಿಸಿದರು. ಗೋವಾ, ಕೊಚ್ಚಿನ್ ಕಾಂಗನೂರುಗಳಲ್ಲಿ ಕ್ರೈಸ್ತರು ಪಾಠಶಾಲೆಗಳನ್ನು ಸ್ಥಾಪಿಸಿದರು. ಧರ್ಮ ಪ್ರಚಾರದ ಜೊತೆ ನಿರ್ದಿಷ್ಟ ಮಿತಿಯಲ್ಲಿ ಶೈಕ್ಷಣಿಕ ಉತ್ತೇಜನ ನೀಡಿದರು.

1813ರ ಚಾರ್ಟರ್ ಕಾಯ್ದೆ ಭಾರತದಲ್ಲಿ ಕ್ರೈಸ್ತ ಮಿಷನರಿಗಳು ಧರ್ಮ ಪ್ರಚಾರ ಮತ್ತು ಶಿಕ್ಷಣಕ್ಕೆ ಅನುಮತಿಯನ್ನು ನೀಡಿದ್ದರಿಂದ ಕ್ರಿಯಾಶೀಲರಾದರು.

ಮಿಷಿನರಿಗಳು ಕೇವಲ ಧರ್ಮ ಪ್ರಚಾರವಲ್ಲದೆ, ಈ ದೇಶದ ಭಾಷೆ ಹಾಗೂ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯು ಅಪಾರ ದ್ರಾವಿಡ ಭಾಷೆಗಳಲ್ಲಿ ಬೈಬಲಿನ ಭಾಷಾಂತರ ಹಾಗೂ ಇತರ ಕ್ರೈಸ್ತ ಸಾಹಿತ್ಯ ರಚನೆಯು ಭಾಷೆಗಳು ಬೆಳೆಯಲು ಸಹಕಾರಿಯಾದವು. ಡಾ॥ ಕಾಲ್ಡ್‌ವೆಲ್ ರವರು ಕಾವ್ಯ, ನಾಟಕ, ಗದ್ಯ, ಕಥೆ, ವ್ಯಾಕರಣಗಳ ರಚನೆಯಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದಾರೆ.

ಮುದ್ರಣಾಲಯಗಳ ಪ್ರಾರಂಭದಿಂದ ಸಾಹಿತ್ಯ ಕ್ಷೇತ್ರಕ್ಕೆ ಬಹಳ ಅನುಕೂಲವಾಯಿತು. ಧಾರವಾಡದ ಕಿಟೆಲ್ ರವರು ವಿದ್ವತ್ಪೂರ್ಣವಾಗಿ ಕನ್ನಡ–ಇಂಗ್ಲಿಷ್ ವ್ಯಾಕರಣ ಮತ್ತು ನಿಘಂಟು ರಚಿಸಿದ್ದಾರೆ.

ಮಿಷನರಿಗಳ ಸಾಹಿತಿಕ ಪ್ರಯತ್ನಗಳ ಇನ್ನೊಂದು ಅಂಶವೆಂದರೆ ಭಾಷಾಂತರ ಕಾರವಾಗಿ ಕೆಲಸ ಮಾಡಿದ್ದು ಸಂಸ್ಕೃತ ಹಾಗೂ ಇತರೆ ಭಾರತೀಯ ಭಾಷೆಗಳ ಕೃತಿಗಳನ್ನು ಭಾಷಾಂತರ ಮಾಡಿ ಭಾರತೀಯ ಚಿಂತನೆಗಳನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಟ್ಟರು. ಹಲವು ಮಾನವೀಯ ಕಾರ್ಯಗಳಲ್ಲೂ ಮಿಷನರಿಗಳ ಪ್ರಭಾವವನ್ನು ಕಾಣಬಹುದು.

ಭಾರತೀಯ ಸಮಾಜ ಇಂಗ್ಲಿಷ್ ಶಿಕ್ಷಣ ಪಡೆಯುವಲ್ಲಿ ಕ್ರೈಸ್ತ ಮಷೀನರಿಗಳ ಪಾತ್ರ ಮಹತ್ವದ್ದು.

**ಇಸ್ಲಾಂ ಧರ್ಮ**

ಜಗತ್ತಿನ ಧರ್ಮಗಳಲ್ಲಿ ಎರಡನೆಯ ದೊಡ್ಡ ಧರ್ಮ ಏಷ್ಯಾ ನೈರುತ್ಯ ಭಾಗದಲ್ಲಿರುವ ಅರೇಬಿಯಾದಲ್ಲಿ ಉದಯಿಸಿತು. ಮಹಮ್ಮದ್ ಪೈಗಂಬರ್ ಇವರು ಸ್ಥಾಪಿಸಿದ ಧರ್ಮವೇ ಇಸ್ಲಾಂ ಧರ್ಮ. 'ಇಸ್ಲಾಂ' ಎಂದರೆ ಶರಣಾಗತಿ ಎಂಬರ್ಥ. ಈ ಪದವು ಸಲಾಂ ಎಂಬ ಪದದ ರೂಪಂತರ "ಸಲಾಂ" ಎಂದರೆ 'ಶಾಂತಿ' ಇಸ್ಲಾಂ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವವರೇ ಮುಸ್ಲಿಮರು.

'ದೇವರ ಸಂದೇಶ ಹಾಗೂ ಇಚ್ಛೆಗಳನ್ನು ಜನರಿಗೆ ತಿಳಿಸಲು ಹುಟ್ಟಿದ ಕಟ್ಟಕಥೆಯ ಪ್ರವಾದಿಯೇ ಮಹಮ್ಮದ್ ಪೈಗಂಬರ ಇವರು ಅರಬ್ಬರ ಸಾಮಾಜಿಕ ನೈತಿಕ ಹಾಗೂ ಸಾಂಸ್ಕೃತಿಕ ದಾರಿಗೆ ತರಲು ಕೈಗೊಂಡ ಕಾರ್ಯದ ಫಲ ಶ್ರುತಿ 'ಇಸ್ಲಾಂ ಧರ್ಮದ ಸ್ಥಾಪನೆ'.

ಮಹಮ್ಮದರು ತಮ್ಮ ಬಹುಪಾಲು ಸಮಯವನ್ನು ಧ್ಯಾನ, ಉಪವಾಸಗಳಲ್ಲಿಯೇ ಕಳೆದರು ಒಂದು ದಿನ "ಹಿರಾ" ಎಂಬ ಬೆಟ್ಟದ ಗುಹೆಯಲ್ಲಿ ಧ್ಯಾನಮಗ್ನರಾಗಿದ್ದಾಗ "ಗೇಬ್ರಿಯಲ್' ಎಂಬ ದೇವದೂತನು ಪೈಗಂಬರರಿಗೆ ಉಪದೇಶಿಸಿದನು. ನಂತರ ಅವರ ಶಿಷ್ಯರು ಕುರಾನ್ ನಲ್ಲಿ ದಾಖಲಿಸಿದರು ಮಹಮ್ಮದರ ಹೆಂಡತಿ ಮಗಳು ಅಳಿಯ ಸ್ನೇಹಿತ ಅಬೂಬಕರ್ ಸೇವಕ ಸಯ್ಯದ್ ಮೊಹಮ್ಮದ್‌ರ ಮೊದಲ ಶಿಷ್ಯರು ಮೆಕ್ಕಾದ ಜನರಿಗೆ ತನ್ನ ಹೊಸ ಧರ್ಮದ ತತ್ವಗಳನ್ನು ಬೋಧಿಸಲಾರಂಭಿಸಿದರು. ಅರ್ಥಹೀನ ಆಚರಣೆಗಳಾದ ಬಹು ದೇವತಾರಾಧನೆ ಮೂಢನಂಬಿಕೆಗಳನ್ನು ಟೀಕಿಸಿದರು "ಅಲ್ಲಾ ಒಬ್ಬನೇ ದೇವರು" ಆತನಲ್ಲಿ ನಂಬಿಕೆ ಸತ್ಯ ಪರಿಶುದ್ಧ ಜೀವನವನ್ನು ಪ್ರತಿಪಾದಿಸಿದರು ಇವರ ಅನುಯಾಯಿಗಳು ಇವರನ್ನು 'ಪ್ರವಾದಿ' ಎಂದು ಕರೆದರು.

ಇವರ ಮೇಲೆ ಸಿಟ್ಟಿಗೆದ್ದ ಕೆಲವರು ಇವರನ್ನು ಕೊಲ್ಲಲು ನಿಶ್ಚಯಿಸಿದರು. ಆಗ ಪೈಗಂಬರ ಮೆಕ್ಕಾವನ್ನು ಬಿಟ್ಟು ಯಾದ್ರಿಬ್ ಪಟ್ಟಣಕ್ಕೆ ಸೇರಿದರು. ಅಂದಿನಿಂದ ಮುಸ್ಲಿಮರು "ಹಿಜಿರಾ ಶಕ" ಪ್ರಾರಂಭವಾಯಿತು. ಯಾದ್ರಿಬ್ ಪಟ್ಟಣವನ್ನು "ಮದೀನಾ" ಎಂದು ಕರೆದರು. ಇದು ಮುಸ್ಲಿಮರ ಎರಡನೆಯ "ಪವಿತ್ರ ಯಾತ್ರಾ" ಸ್ಥಳವಾಗಿದೆ. ಮೆಕ್ಕಾದ 402 ಕಿ.ಮೀ ದೂರದಲ್ಲಿದೆ. ಇಲ್ಲಿ ಮಹಮದ್ ಪೈಗಂಬರರ ಗೋರಿ ಇದೆ. ಪೈಗಂಬರರು ಕ್ರಿ.ಶ 627ರಲ್ಲಿ ತಮ್ಮ 62ನೇ ವಯಸ್ಸಿನಲ್ಲಿ ನಿಧನರಾದರು.

ಮೆಕ್ಕಾದಲ್ಲಿರುವ "ಕಾಬಾ" ಇವರ ಪವಿತ್ರ ಸ್ಥಳ, ಮೆಕ್ಕಾ ಯಾತ್ರಿಕರು ಏಳು ಸಲ ಪ್ರದಕ್ಷಣೆ ಮಾಡಿ ಕಲ್ಲನ್ನು ಚುಂಬಿಸುತ್ತಾರೆ.

ಅರ್ಧಚಂದ್ರ, ನಕ್ಷತ್ರ ಈ ಧರ್ಮದ ಚಿನ್ಹೆ, "ಮಸೀದಿ" ಇವರ ಧಾರ್ಮಿಕ ಕೇಂದ್ರ ಕುರಾನ್ ಪವಿತ್ರ ಗ್ರಂಥ. ಇಸ್ಲಾಂನಲ್ಲಿ ಷರಿಯತ್‌ಗೆ ಹೆಚ್ಚಿನ ಮಹತ್ವವಿದೆ. ಇದು ಪ್ರವಾದಿಯವರು ವಿಧಿಸಿದ ನ್ಯಾಯಗಳ ಸಂಕಲನ.

**ತತ್ವಗಳು ಮತ್ತು ಆಚರಣೆಗಳು**

ಪ್ರವಾದಿ ಮಹಮ್ಮದರು ಬೋಧಿಸಿದ, ಅನುಸರಿಸಿದ ಅಂಶಗಳೇ ತತ್ವಗಳು ಮತ್ತು ಆಚರಣೆಗಳು ಮುಖ್ಯವಾಗಿ ಇಸ್ಲಾಂಗೆ ನಿಷ್ಠರಾಗಿರುವುದು, ಸತ್ಯವಂತರಾಗಿರುವುದು ನಂಬಿಕೆಗೆ ಅರ್ಹರಾಗಿರುವುದು, ಸದ್ಗುಣಿಯಾಗಿರುವುದು, ನಿಷ್ಠೆಯಿಂದ ಇಸ್ಲಾಂನ ನಿಯಮಗಳನ್ನು ಅನುಸರಿಸುವುದು. ಪ್ರಧಾನವಾಗಿದೆ ಅದಲ್ಲದೆ

1. ಜ್ಞಾನ ಪ್ರೇಮತ್ವ
2. ಜ್ಞಾನದ ಮೂಲಕ ಪ್ರಭುವಿನ ಪಾರಮ್ಯವನ್ನು ಅರಿಯುವುದು
3. ವಿಶ್ವದಲ್ಲಿ ಮಾನವನ ಸ್ಥಾನ ಮತ್ತು ಅವನ ಕರ್ತವ್ಯವನ್ನು ಕುರಿತು ಇಸ್ಲಾಂ ಹೇಳುತ್ತದೆ.
4. ಪರಮಾತ್ಮನಲ್ಲಿ ಮಾನವನ ಮನೋಭಾವ ಹೇಗಿರಬೇಕೆಂದು ಹೇಳಿದೆ ಅಂದರೆ

- ಪ್ರತಿನಿತ್ಯ ಐದು ಬಾರಿ ನಮಾಜ್
- ರಂಜಾನ್ ತಿಂಗಳಲ್ಲಿ ಉಪವಾಸ
- ತನ್ನ ಆದಾಯದಲ್ಲಿ ಕೆಲವು ಭಾಗವನ್ನು ದಾನ ಮಾಡಬೇಕು
- ಒಮ್ಮೆಯಾದರೂ ಹಜ್ ಯಾತ್ರೆ ಮಾಡಬೇಕು
- ಕುರಾನನಲ್ಲಿರುವ ನಿರ್ದೇಶನವನ್ನು ಪಾಲಿಸಬೇಕು

**ಇಸ್ಲಾಂ ಧರ್ಮದ ಆಧಾರ ಸ್ತಂಭಗಳು –**

ಇಸ್ಲಾಂ ಧರ್ಮದ ಪ್ರಕಾರ ಪ್ರತಿಯೊಬ್ಬ ಮುಸ್ಲಿಂ ಇದನ್ನು ಕಡ್ಡಾಯವಾಗಿ ಅನುಸರಿಸಬೇಕು. ಅವೆಂದರೆ

1. ಕಲೀಮು (ನಂಬಿಕೆ) – ಇಸ್ಲಾಂ ಧರ್ಮದಲ್ಲಿ ನಂಬಿಕೆ ಇಡಬೇಕು
2. ಸಲಾತ್ (ನಮಾಜ್) – ಪ್ರತಿಯೊಬ್ಬ ಮುಸಲ್ಮಾನನು ಐದು ಬಾರಿ ನಮಾಜ್ ಮಾಡಬೇಕು.
3. ಜಕಾತ್ (ಧಾರ್ಮಿಕ ತೆರಿಗೆ) – ಇದನ್ನು ಶ್ರೀಮಂತ ಮುಸ್ಲಿಮರ ಮೇಲೆ ವಿಧಿಸಲಾಗುತ್ತದೆ. ತಮ್ಮ ಸಂಪತ್ತಿನ 25% ಧಾರ್ಮಿಕ ಉದ್ದೇಶಗಳಿಗೆ ಬಳಸಬೇಕು.
4. ರೋಜಾ (ಉಪವಾಸ) ರಂಜಾನ್ ಮಾಸದಲ್ಲಿ ಉಪವಾಸ ಮಾಡಬೇಕು
5. ಹಜ್ (ಮೆಕ್ಕಾ ಯಾತ್ರೆ) – ಜೀವನದಲ್ಲಿ ಒಮ್ಮೆಯಾದರೂ ನೆಕ್ಕಾಗಿ ಹೋಗಬೇಕು

**ಇಸ್ಲಾಂ ಸಮಾಜದಲ್ಲಿ ಕುಟುಂಬ ವ್ಯವಸ್ಥೆ**

ಇಸ್ಲಾಂ ಸಮಾಜದಲ್ಲಿ ಕುಟುಂಬವು ಅತ್ಯಂತ ಕೆಳಹಂತದ ಘಟಕ. ಇಸ್ಲಾಂ ಧರ್ಮವು ಕುಟುಂಬದ ಸದಸ್ಯರಿಗೆ ಕೆಲವು ನಿರ್ಬಂಧನೆಗಳನ್ನು ಮತ್ತು ಕಾನೂನು ಹಕ್ಕುಗಳನ್ನು ತಿಳಿಸಿದೆ. ಕುಟುಂಬದಲ್ಲಿ ತಂದೆಗೆ ಪ್ರಮುಖ ಸ್ಥಾನ ನೀಡಲಾಗಿದೆ. ಇಸ್ಲಾಂ ಧರ್ಮದ

ಪ್ರಕಾರ ಪುರುಷ ನಾಲ್ಕು ಪತ್ನಿಯರನ್ನು ಹೊಂದಲು ಅವಕಾಶವಿದೆ. ಆದರೆ ಪ್ರತಿ ವಧುವಿಗೆ ಆಹಾರ, ವಸತಿ, ಬಟ್ಟೆಗಳನ್ನು ಒದಗಿಸುವ ಸಾಮರ್ಥ್ಯವಿರಬೇಕು. ಮಹಿಳೆಯರಿಗೆ ಇಸ್ಲಾಂನಲ್ಲಿ ಹೆಚ್ಚಿನ ಸ್ಥಾನಮಾನ ನೀಡಿಲ್ಲ. ಬಹುಪತ್ನಿತ್ವ, ತ್ರಿವಳಿ ತಲಾಖ್, ಪರ್ದಾ ಪದ್ಧತಿಯನ್ನು ಮುಸ್ಲಿಂ ಧಾರ್ಮಿಕ ಕಾನೂನಿನಲ್ಲಿ ಅವಕಾಶ ನೀಡಿದೆ.

**ಷರಿಯತ್**

ಇಸ್ಲಾಂ ಧರ್ಮದ ಕಾನೂನಿಗೆ 'ಷರಿಯತ್' ಎನ್ನುತ್ತಾರೆ. ಇದರ ಮೂಲ ಕುರಾನ್, ಹಾದಿತ್, ಷರಿಯತ್, ನೈತಿಕ ಮತ್ತು ಇಸ್ಲಾಂ ಧಾರ್ಮಿಕ ನಿಯಮಗಳನ್ನು ಒಳಗೊಂಡಿದೆ. ಜಗತ್ತಿನ ಅನೇಕ ದೇಶಗಳು ಶರೀರತ್ನ ತಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿದೆ.

ಇಸ್ಲಾಂನ ಪವಿತ್ರ ಸ್ಥಳಗಳು

- ಮೆಕ್ಕಾ ಮತ್ತು ಮದೀನಾ (ಸೌದಿ ಅರೇಬಿಯಾ)
- ಜೇರುಸೇಲಂ – ಇಸ್ರೇಲ್
- ಕರ್ಬಾಲ – (ಇರಾಕ್) ಷಿಯಾ ಮುಸ್ಲಿಮರಿಗೆ ಪವಿತ್ರ ಸ್ಥಳ
- ನತಾಪ – (ಇರಾಕ್) ಷಿಯಾ ಮುಸ್ಲಿಮರಿಗೆ ಪವಿತ್ರ ಸ್ಥಳ

ಪವಿತ್ರ ದಿನಗಳು

1. ಈದ್–ಉಲ್–ಫೀತರ್ – ರೋಜಾ/ಉಪವಾಸದ ದಿನಗಳು ಮುಗಿದ ಮೇಲೆ ಆಚರಿಸುವ ಹಬ್ಬ.
2. ಈದ್–ಅಲ್–ಅದಾ
3. ಮೊಹರಂ – ಇಸ್ಲಾಂನಲ್ಲಿ ನೂತನ ವರ್ಷ

**ಇಸ್ಲಾಂ ಧಾರ್ಮಿಕ ಪಂಥಗಳು**

ಪ್ರವಾದಿರ ಮುಹಮ್ಮದರ ನಿಧನದ ನಂತರ ಇಸ್ಲಾಂ ಧರ್ಮ ಇಬ್ಭಾಗವಾಯಿತು. ಇಸ್ಲಾಂನ ಮುಖಂಡರು ಯಾರಾಗಬೇಕು ಎಂಬ ಭಿನ್ನಾಭಿಪ್ರಾಯ ತಲೆದೋರಿ ಇಸ್ಲಾಂ ಧರ್ಮ ಸುನ್ನ ಮತ್ತು ಷಿಯಾ ಪಂಥವಾಗಿ ವಿಭಾಗಗೊಂಡಿತು.

1. ಸುನ್ನಿ ಪಂಥ – ಇಸ್ಲಾಂ ಧರ್ಮದ ಬಹಳ ಪ್ರಮುಖ ಮತ್ತು ಸಂಪ್ರದಾಯವಾದಿ ಪಂಥ. 80% ರಿಂದ 90% ರಷ್ಟು ಮುಸ್ಲಿಮರು ಈ ಪಂಥವನ್ನು ಅನುಸರಿಸುತ್ತಿದ್ದಾರೆ. ಪ್ರವಾದಿಯ ಮರಣಾನಂತರ ಕುರಾನ್ ನಲ್ಲಿ ಹಾಗೂ ಹಾದಿತ್‌ನಲ್ಲಿ ನಂಬಿಕೆಯಿಟ್ಟಿರುವ ತಮ್ಮಲ್ಲೇ ಒಬ್ಬರಾದ ಅಬೂ–ಬಕರ್‌ನನ್ನು ಪ್ರವಾದಿಯ ಉತ್ತರಧಕಾರಿಯಾಗಿ ನೇಮಿಸಿದರು ಹಾಗೂ ಅವರನ್ನು 'ಖಲೀಫಾ' ಎಂದು ಕರೆದರು. ಇಲ್ಲಿಂದ ಸುನ್ನಿ ಪಂಥ ಉದಯವಾಯಿತು. ಇವರು ಕುರಾನ್, ಹನಾದಿ, ಹನಬಲಿ, ಮಾಲಿಕಿ, ಷಪಿ ಎಂಬ ನಾಲ್ಕು ಮುಸ್ಲಿಂ ಕಾನೂನು ಚಿಂತನೆಗಳು.
2. ಷಿಯಾ ಪಂಥ – ವಿಶ್ವದ ಶೇಕಡಾ 10 ರಿಂದ 20ರಷ್ಟು ಮುಸ್ಲಿಮರು ಇದನ್ನು ಅನುಸರಿಸುತ್ತಾರೆ. ಇವರು ಖಲೀಫನನ್ನು ಇಸ್ಲಾಂನ ಮುಖಂಡ ಎಂಬುದನ್ನು ಒಪ್ಪಲು ನೀರಾಕರಿಸಿದರು. ಷಿಯಾ ಪಂಥದವರು ತಮ್ಮ ಮುಖಂಡನೆಂದು ಪ್ರವಾದಿ ಮಹಮ್ಮದ್ ಅಳಿಯ ಅಲಿ–ಇಬನ್–ಅಬಿ–ತಬೀಬ್‌ನನ್ನು ಘೋಷಿಸಿದರು. ಇವರು ಅಲಿ–ಇಬನ್–ಅಬಿ–ತಬೀಬರನ್ನು "ಇಮಾಮ್" ಎಂದು ಕರೆದರು ಮತ್ತು ಸುನ್ನಿ ಧಾರ್ಮಿಕ ಮುಖಂಡರಾದ ಖಲೀಫಾರನ್ನು ಇಸ್ಲಾಂ ಧರ್ಮದ ಧಾರ್ಮಿಕ ಮುಖಂಡರೆಂದು ಒಪ್ಪಲು ನಿರಾಕರಿಸಿದರು.

**ಕರ್ನಾಟಕದಲ್ಲಿ ಸೂಫಿ ಸಂತರು**

ಸೂಫಿಗಳು ಇಸ್ಲಾಂ ಧರ್ಮದ ಧಾರ್ಮಿಕ ಸಂತರು. ಈ ಸೂಫಿ ಪಂಥ ಮೊದಲು ಅರೇಬಿಯಾದಲ್ಲಿ ಹುಟ್ಟಿ ನಂತರ ಭಾರತಕ್ಕೆ ಬಂದಿತು. ಇದು ಇಸ್ಲಾಂ ಧರ್ಮದ "ಪುನರುಜ್ಜೀವನ ಚಳುವಳಿ"ಯಾಗಿದೆ.

ಈ ಸೂಫಿ ಪಂಥ ಮಧ್ಯಯುಗೀನ ಕಾಲದಲ್ಲಿ ಕರ್ನಾಟಕಕ್ಕೂ ಬಂದಿತು, ಮಧ್ಯಯುಗೀನ ಕಾಲದಲ್ಲಿ ಕರ್ನಾಟಕದ ಉತ್ತರ ಭಾಗವನ್ನು ಬಹುಮನಿ ಸುಲ್ತಾನರ ಬಿಜಾಪುರದಲ್ಲಿ ಬಿಜಾಪುರ ಸುಲ್ತಾನರು ಆಶ್ರಯ ನೀಡಿ ಬೆಳೆಸಿದರು. ಕರ್ನಾಟಕದ ಬೀದರ್, ಗುಲ್ಬರ್ಗ, ಬೆಳಗಾಂ, ಧಾರವಾಡ, ಬಿಜಾಪುರ ಸೂಫಿ ಪಂಥದ ಪ್ರಮುಖ ಕೇಂದ್ರಗಳಾಗಿದ್ದವು.

**ಸೂಫಿ ಪಂಥದ ತತ್ವಗಳು**

1. ಸೂಫಿ ಸಂತರು ಏಕೋದೇವೋ ಪಾಸನೆಯಲ್ಲಿ ನಂಬಿಕೆಯಿಟ್ಟದ್ದರು.
2. ಸೂಫಿ ಸಂತರು ಇಸ್ಲಾಂ ಧರ್ಮದಲ್ಲಿ ಭಕ್ತಿ ಮಾರ್ಗ ಬೋಧಿಸಿದರು
3. ಸೂಫಿ ಸಂತರು ಮಾನವತೆ ಮತ್ತು ವಿಶ್ವಭ್ರಾತೃತ್ವದಲ್ಲಿ ನಂಬಿಕೆಯಿಟ್ಟಿದ್ದರು
4. ದೇವರೊಬ್ಬನೇ ಮತ್ತವನು ಸರ್ವಶಕ್ತ ಎಂದು ನಂಬಿದ್ದರು
5. ಸೂಫಿ ಪಂಥದ ವೇದಾಂತ ತತ್ವಜ್ಞಾನದಂತೆ ಮುಕ್ತಿಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಿತು.

**ಸೂಫಿ ಪಂಥದ ಪಂಗಡಗಳು**

ಮಧ್ಯಯುಗೀನ ಕಾಲದಲ್ಲಿ ಸೂಫಿ ಪಂಥದ ನಾಲ್ಕು ಪಂಗಡಗಳು ಉಗಮವಾದವು. ಅವುಗಳೆಂದರೆ

1. ಚಿಸ್ತಿ ಪಂಗಡ – ಇರಾನ್‌ನಿಂದ ಗುಲ್ಬರ್ಗಕ್ಕೆ ಬಂದು ನೆಲೆಸಿದರು. ಷೇಕ್ ಬಂದೇನವಾಜ, ಷೇಕ್ ಅಜೀಜ–ಉದ್–ದೀನ್ ಪ್ರಮುಖ ಸಂತರು.
2. ಖಾದ್ರಿಯ ಪಂಗಡ – ಇವರು ಇರಾಕ್‌ನಿಂದ ಬಂದು ಗುಲ್ಬರ್ಗದಲ್ಲಿ ನೆಲೆಸಿದರು. ಈ ಖಾದ್ರಿಯಾ ಪಂಗಡದ ಪ್ರಮುಖ ಸಂತರೆಂದರೆ ಇಸ್ಮಾಯಿಲ್ ಖಾದ್ರಿ, ಇಬ್ರಾಹಿಂ ಖಾದ್ರಿ, ಅಬ್ದುಲ್ ರಜಾಕ್ ಖಾದ್ರಿ.
3. ನಕ್ಷ ಬಂದಿಯಾ ಪಂಗಡ – ಇವರು ಇರಾನ್‌ನಿಂದ ಬಂದಿದ್ದರು. ಪ್ರಮುಖವಾಗಿ ಬಿಜಾಪುರ ಮತ್ತು ಗೋಲ್ಕೊಂಡದಲ್ಲಿ ಕಂಡು ಬರುತ್ತಾರೆ. ಒಬೇದುಲ್ಲಾ ಷೇಕ್, ಬಹಾವುದ್ದೀನ ಪ್ರಮುಖರು
4. ಸತ್ತಾರಿಯಾ ಪಂಗಡ – ಈ ಪಂಗಡದ ಸಂತರು ಪ್ರಮುಖವಾಗಿ ಗುಲ್ಬರ್ಗದಲ್ಲಿ ಕಂಡು ಬರುತ್ತಾರೆ. ಅಬ್ದುಲ್ ಸತ್ತರಿಯಾ ಜಲಾಲ್–ಉದ್–ದೀನ್ ದಿವಾನಿ ಪ್ರಮುಖರು

ಸೂಫಿ ಸಂತರ ಉಪದೇಶಗಳು ಮೂಲಭೂತವಾಗಿ ಎಲ್ಲಾ ದೇವರು ಒಂದೇ ಆದರೆ ಅದರ ಪೂಜಾ ಪದ್ಧತಿ ಮತ್ತು ವಿಧಿ ವಿಧಾನಗಳು ಬೇರೆ ಇರಬಹುದು. ಅಂತಿಮ ಗುರಿ ಒಂದೇ ಆದರೆ ಮಾರ್ಗಗಳು ಬೇರೆ ಬೇರೆ. ಅಂತಿಮವಾಗಿ ದೇವರ ಸಾಕ್ಷಾತ್ಕಾರ ಪಡೆಯುವುದು.

**ಕರ್ನಾಟಕದಲ್ಲಿ ನೆಲೆಸಿದ್ದ ಪ್ರಮುಖ ಸೂಫಿ ಸಂತರು**

1. ಬಂದೇ ನವಾಜ್ (ಗುಲ್ಬರ್ಗ)
2. ಹಜರತ್ ಸೈಯದ್ ಕ್ವಾತ–ಉಲ್–ಷಾ (ಬೆಳಗಾವಿ)
3. ಮುರ್ತಜ್ ಖಾನ್ (ಬಿಜಾಪುರ)
4. ಹಜರತ್–ಬುರನ–ಉದ್–ದೀನ್–ಷಾ (ಬಾಬಾಬುಡನ ಗಿರಿ)

ಸಿಖ್ ಧರ್ಮ – ಶ್ರೀ ಗುರುನಾನಕರು ಸಿಖ್ ಧರ್ಮದ ಸ್ಥಾಪಕರು. ಗುರುನಾನಕರು ಮಧ್ಯಕಾಲೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರಲ್ಲಿ ಒಬ್ಬರು. ಇವರು ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿ ಪರ್ಷಿಯ ತುರ್ಕಮೇನಿಸ್ತಾನ ಇರಾಕ್ ಮೆಕ್ಕಾಗಳನ್ನು ಸಂದರ್ಶಿಸಿದರು. ಇವರು ಕ್ರಿ.ಶ. 1469ರಲ್ಲಿ ಪಂಜಾಬಿನ ತಾಳ ಮಂಡಿಯಲ್ಲಿ ಜನಿಸಿದರು. ಇವರು ರಚಿಸಿದ ಸ್ತೋತ್ರಗಳು ಸಿಖ್ಖರ ಪವಿತ್ರ ಗ್ರಂಥವಾದ "ಗುರು ಗ್ರಂಥ ಸಾಹಿಬ್" ತಿರುಳಾಗಿದೆ.

**ಸಿಖ್ ಧರ್ಮದ ತತ್ವಗಳು**

ಗುರುನಾನಕರ ತತ್ವವು 3 ಪ್ರಮುಖ ವಿಚಾರಗಳಿಂದ ಕೂಡಿದೆ. ಅವುಗಳೆಂದರೆ

1. ಗುರು – ಮಾರ್ಗದರ್ಶನಕ್ಕೋಸ್ಕರ
2. ಸಂಬಾದ್ – ಒಳ್ಳೆಯ ತತ್ವ
3. ಸಂಘ – ಒಗ್ಗಟ್ಟು

ಗುರು ನಾನಾಕರು ಜನರಿಗೆ ಒಳ್ಳೆಯ ಮಾರ್ಗದಲ್ಲಿ ನಡೆಯಲು ಪ್ರಮುಖ 'ಪಂಚನೀತಿ ಸಂಹಿತೆ'ಯನ್ನು ಬೋಧಿಸಿದರು. ಅವುಗಳು

1. ಸಚ್ – ಸತ್ಯ
2. ಹಲಾಲ್ – ಒಳ್ಳೆಯ ಮಾತು
3. ಕೈಕ – ಬೇರೆಯವರಿಗೆ ಒಳ್ಳೆಯದನ್ನು ಬಯಸುವುದು
4. ನಿಯತ್ – ಒಳ್ಳೆಯ ನಡತೆ
5. ದೇವರ ಸೇವೆ

ಗುರು ನಾನಕರು ಏಕದೇವೋಪಾಸನೆಯನ್ನು ಬೋಧಿಸಿದರು. ಮಾನವನ ಆತ್ಮವು ದೇವರಲ್ಲಿ ಭಕ್ತಿ ಮತ್ತು ಪ್ರೀತಿಯ ಮೂಲಕ ಐಕ್ಯವಾಗಬೇಕೆಂದು ಬೋಧಿಸಿದರು. ದೇವರು ಸರ್ವಶಕ್ತ, ನಿರಾಕಾರ, ನಿರಾಮಯನೆಂದು ಕರೆದರು.

ಗುರುನಾನಕರು ಮಾನವ ಸಮಾನತೆಯನ್ನು ಬೋಧಿಸಿದರು. ಅದಕ್ಕಾಗಿ ಸಾಮೂಹಿಕ ಭೋಜನ "ಲಿಂಗರ" ಅನ್ನು ಜಾರಿಗೆ ತಂದರು. ಗುರುನಾನಕರ ಮರಣಾ ನಂತರ ಸಿಖ್ ಪಂಥದ ಒಂದು ಧರ್ಮವಾಗಿ ರೂಪಗೊಂಡಿತು. 9 ಜನ ಗುರುಗಳು ಸಿಖ್ ಧರ್ಮವನ್ನು ಪ್ರಚಾರ ಮಾಡಿ ಅಭಿವೃದ್ಧಿಗೊಳಿಸಿದರು.

**ಪ್ರಮುಖ ಗುರುಗಳು**

1. ಗುರು ಅಂಗದ (ಕ್ರಿ.ಶ. 1538–1542) – ಗುರುನಾನಕರ ಬೋಧನೆಗಳನ್ನು ಮತ್ತು ಜೀವನ ಚರಿತ್ರೆಯನ್ನು ಸಂಪಾದಿಸಿದರು ಮತ್ತು ಸಿಖ್ ಧರ್ಮದಲ್ಲಿ ಗುರುಮುಖಿ ಲಿಪಿಯನ್ನು ಜಾರಿಗೆ ತಂದರು.
2. ಗುರು ಅಮರದಾಸ (ಕ್ರಿ.ಶ 1575–1581) – ಇವರು ಲಂಗರ ಪದ್ದತಿಯನ್ನು ಹೆಚ್ಚು ಜನಪ್ರಿಯಗೊಳಿಸಿದರು ಮತ್ತು ಸತಿ ಪದ್ಧತಿಯನ್ನು ವಿರೋಧಿಸಿದರು.

3. ಗುರು ರಾಮದಾಸ್ (ಕ್ರಿ.ಶ 1575–1581) – ಇವರು ಪಂಜಾಬಿನ ಅಮೃತ್ಸರದಲ್ಲಿ ಗುರುದ್ವಾರ ದೇವಾಲಯ ನಿರ್ಮಾಣ ಆರಂಭಿಸಿದರು.
4. ಗುರು ಅರ್ಜುನ ದೇವ್ (ಕ್ರಿ.ಶ. 1581–1606) – ಇವರು ಅಮೃತ್ಸರ ದೇವಾಲಯವನ್ನು ಪೂರ್ಣಗೊಳಿಸಿದರು. ಗ್ರಂಥ ಸಾಹೇಬನ ಎಲ್ಲಾ ಶ್ಲೋಕಗಳನ್ನು ಒಟ್ಟುಗೂಡಿಸಿ "ಗುರು ಗ್ರಂಥ ಸಾಹೇಬ್" ಎಂದು ಮರುನಾಮಕರಣ ಮಾಡಿದರು.

ಜಹಾಂಗೀರ್ ಮೊದಲ ದೊರೆ ಇವರನ್ನು ಹಿಂಸಿಸಿ ಹತ್ಯೆ ಮಾಡಿದನು ಇದರಿಂದ ಇಡೀ ಸಿಖ್ ಸಮುದಾಯ ಒಗ್ಗಟ್ಟಾಗಿ ಮೊಘಲರ ವಿರುದ್ಧ ಸಿಟ್ಟಿಗೆದ್ದು ನಿಂತಿತು.

5. ಗುರು ಹರಗೋವಿಂದ (ಕ್ರಿ.ಶ 1606–1644) ಸಿಖ್ ವಿರೋಧಿ ಚಟುವಟಿಕೆಗಳನ್ನು ತಡೆಯಲು ಸಿಖ್‌ರಲ್ಲಿ ಮತ್ತು ಗುರುಗಳಲ್ಲಿ ಉಡುಪಿನ ಬದಲಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು. ಮುಖ್ಯವಾಗಿ ಪೇಟಕ್ಕೆ ಬದಲಾಗಿ ಕಿರೀಟ ಧಾರಣೆ ಹಾಗೆಯೇ ಎರಡು ಖಡ್ಗಗಳನ್ನು ಧರಿಸಿದರು. ಸಿಖ್ಖರು ಮತ್ತು ಹಿಂದುಗಳ ರಕ್ಷಣೆಗಾಗಿ ಸಿಖ್ ದುರ್ಗಾ ದರ್ಗಾವನ್ನು ಸ್ಥಾಪಿಸಿದರು. ಸಿಖ್ಖ್‌ರನ್ನು ಒಗ್ಗೂಡಿಸಿ ಮೊಘಲರ ವಿರುದ್ಧ ಶಸ್ತ್ರ ಹಿಡಿದ ಮೊದಲ ಸಿಖ್ ಗುರು.
6. ಗುರು ಹರಿರಾಯ್ (1630–1661) – ಇವರು ಔರಂಗಜೇಬನೊಂದಿಗೆ ಸಂಘರ್ಷಕ್ಕೆ ಇಳಿದಿದ್ದರು. ಆಗ ಅವರಂಗಜೇಬ್ ಈ ಗುರುವಿನ ಮಗ "ರಾಮರಾಯ" ಸೆರೆಹಿಡಿದು ಸಂಧಾನಕ್ಕಾಗಿ ಅವರನ್ನು ಒತ್ತೆಯಾಳಾಗಿ ಬಳಸಿಕೊಂಡ.
7. ಗುರು ಹರಿಕಿಷನ್ (1621–75) – ಇವರು ತನ್ನ ಐದನೇ ವಯಸ್ಸಿಗೆ ಎಂಟನೇ ಗುರುವಾದರೂ. ಇವರು ಸಹ ಮೊಘಲ ವಿರೋಧಿ ಬಾಮನೋಭಾವನೆ ಹೊಂದಿದ್ದಾರೆಂದು ಮೊಗಲ್ ಚಕ್ರವರ್ತಿ ಸೆರೆಯಲ್ಲಿಟ್ಟಿದ್ದನು ತಮ್ಮ ಎಂಟನೇ ವಯಸ್ಸಿನಲ್ಲಿ ಸೆರೆಮನೆಯಲ್ಲಿ ನಿಧನರಾದರು.
8. ಗುರು ತೇಜ್ ಬಹುದ್ದೂರ್ (1664–71) – ಇವರು ತಮ್ಮ ಪೂರ್ವಿಕರಂತೆಯೇ ಇವರು ಮೊಘಲ ಹೋರಾಟವನ್ನು ಮುಂದುವರಿಸಿದರು. ಮುಖ್ಯವಾಗಿ ಔರಂಗಜೇಬನ ಧಾರ್ಮಿಕ ನೀತಿಯನ್ನು ವಿರೋಧಿಸಿದ್ದರಿಂದ ಅಲ್ಲದೆ ಔರಂಗಜೇಬನು ಇಸ್ಲಾಂಗೆ ಮತಾಂತರವಾಗುವಂತೆ ಬಲವಂತ ಪಡಿಸಿ ಒಪ್ಪದಿದ್ದಾಗ ತೇಗ ಬಹದ್ದೂರನನ್ನು 1675ರಲ್ಲಿ ಹತ್ಯ ಮಾಡಿಸಿದ.
9. ಗುರು ಗೋವಿಂದ್ ಸಿಂಗ್ (1675–1708) – ಇವರು ಸಿಖ್‌ರ ಕೊನೆಯ ಗುರು ಅತ್ಯಂತ ಪ್ರಮುಖ ಗುರು ಮೊಘಲರ ವಿರುದ್ಧ ಹೋರಾಡುವ ಉದ್ದೇಶದಿಂದ ಗುರು ಗೋವಿಂದರು 'ಖಾಲ್ಸಾ' ಎಂಬ ಯುದ್ಧಸಕ್ತ ದೇವ ಪ್ರಭುತ್ವ ಸಂಘಟನೆಯನ್ನು ಸ್ಥಾಪಿಸಿದರು. ಗುರುಗಳು ಅನುಕ್ರಮವಾಗಿ ಅಧಿಕಾರಕ್ಕೆ ಬರುವ ಪದ್ಧತಿಯನ್ನು ತೆಗೆದು ಹಾಕಿ ಗುರುವಾಗಿದ್ದ ಪವಿತ್ರ ಸ್ಥಾನವನ್ನು "ಗ್ರಂಥ ಸಾಹಿಬ್'ಗೆ ನೀಡಿದರು. ಸಿಖ್ ಧರ್ಮ ರಕ್ಷಣೆಗಾಗಿ ತನ್ನಿಬ್ಬರು ಮಕ್ಕಳನ್ನು ಕಳೆದುಕೊಂಡರು.

**ಖಾಲ್ಸಾ ಆಚರಣೆ ಮತ್ತು ಪ್ರಾಮುಖ್ಯತೆ**

ಇದು ಗುರು ಗೋವಿಂದ್ ಸಿಂಗರು ಕ್ರಿ.ಶ. 1069ರಲ್ಲಿ "ಬೈಸಾಕಿ ಹಬ್ಬದ" ದಿನ ಆನಂದಪುರದಲ್ಲಿ ಬಹಿರಂಗ ಸಭೆಯನ್ನು ಸಂಘಟಿಸಿದರು. ಈ ಸಭೆಯಲ್ಲಿ ಧರ್ಮದ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಿದ್ದ 5 ಜನರನ್ನು ಆಯ್ಕೆ ಮಾಡಿ ಖಾಲ್ಸಾ ಸ್ಥಾಪನೆಗೆ ಅಡಿಗಲ್ಲು ಹಾಕಿದರು ಹೀಗೆ ಶಾಂತಿ ಪ್ರಿಯರಾಗಿದ್ದ ಸಿಖ್ಖರನ್ನು ಮಿಲಿಟರಿ ಯೋಧರನ್ನಾಗಿಸಲು ಹುಟ್ಟಿಕೊಂಡ ಸಂಘವೇ ಖಾಲ್ಸಾ.

ತಮ್ಮ ಅನುಯಾಯಿಗಳಿಗೆ ಹೆಸರಿನೊಂದಿಗೆ "ಸಿಂಗ್' ಅಥವಾ "ಸಿಂಹ" ಎಂದು ಸೇರಿಸಿಕೊಳ್ಳುವಂತೆ ಕರೆ ನೀಡಿದರು.

ದೀಕ್ಷೆ ಪಡೆಯುವ ಸಂದರ್ಭದಲ್ಲಿ ಈ ಕೆಳಕಂಡಂತೆ ನಡೆಯುವಂತೆ ಕರೆ ನೀಡಿದರು.

1. ಒಳ ಉಡುಪು (ಕಚ್) ಧರಿಸುವುದು
2. ಬಲತೋಳಿನಲ್ಲಿ ಕಬ್ಬಿಣದ ಖರಾ(ಖಡ್ಗ) ಧರಿಸುವುದು
3. ಸ್ವ–ರಕ್ಷಣೆ ಆಕ್ರಮಣ ತಡೆಯಲು ಕೃಪಾಣ ಧರಿಸಬೇಕು
4. ಬಲದ ಸಂಕೇತವಾಗಿ ಉದ್ದವಾದ ಕೂದಲನ್ನು ಬಿಡುವುದು
5. ಕೂದಲನ್ನು ಸ್ವಚ್ಛವಾಗಿ ಇರಿಸಿಕೊಳ್ಳುವುದಕ್ಕಾಗಿ ಬಾಚಣಿಕೆ(ಕಂಘ)ವನ್ನು ಸದಾ ಇಟ್ಟುಕೊಳ್ಳುವುದು

**ಖಾಲ್ಸಾದ ನೀತಿ ಸಂಹಿತೆಗಳು**

1. ಖಾಲ್ಸಾವು ಯಾರನ್ನು ಉತ್ತರಧಿಕಾರಿಯಂತೆ ಬಿಂಬಿಸುವುದಿಲ್ಲ
2. ವ್ಯಬಿಚಾರವನ್ನು ನಿಷೇಧಿಸುತ್ತದೆ
3. ತಂಬಾಕು ಸೇವನೆಯನ್ನು ನಿಷೇಧಿಸಿದೆ
4. ಪ್ರಾಣಿ ಹತ್ಯೆ ಮತ್ತು ಮಾಂಸಹಾರ ನಿಷೇಧಿಸು
5. 10 ಗುರುಗಳನ್ನು ಗೌರವಿಸುವುದು.
6. ಮಾನವ ದೇಹವನ್ನು ವಿರೋಪಗಳಿಸುವುದನ್ನು ನಿಷೇಧಿಸಿದೆ
7. ಶಿಶು ಹತ್ಯ, ಸ್ತ್ರೀ ಹತ್ಯೆ ನಿಷೇಧಿಸಿವೆ

# ಘಟಕ – 2

## ಪರಿವರ್ತನೆಯತ್ತ ಭಾರತೀಯ ಸಮಾಜ: ಚಿಂತನೆಯ ಪ್ರಮುಖ ಮಾರ್ಗಗಳು, ಆಧುನಿಕ ಭಾರತದ ಇತಿಹಾಸ–19ನೇ ಶತಮಾನದ ಪ್ರಾರಂಭದಿಂದ: ಸುಧಾರಣೆಗಳು ಮತ್ತು ಸುಧಾರಕರು

### I. ಸಾಮಾಜಿಕ ಮತ್ತು ಧಾರ್ಮಿಕ ದೋಷಗಳ ನಿರ್ಮೂಲನೆ

19ನೇ ಶತಮಾನದಲ್ಲಿ ಭಾರತದ ಪುನರುಜ್ಜೀನವು ಸಾಮಾಜಿಕ ವ್ಯವಸ್ಥೆಯಲ್ಲಿ ಉಗಮಗೊಂಡಿತು. ಇದಕ್ಕೆ ಕಾರಣವಾದದ್ದು ಭಾರತೀಯ ಸಮಾಜದ ಪುನರ್ ಸಂಶೋಧನೆ, ಪುನರ್ ಪರಿಶೀಲನೆ ಮತ್ತು ಪುನರ್ ಉನ್ನತೀಕರಣ. ಭಾರತದ ಸಮಾಜದಲ್ಲಿ ಜಡ್ಡುಗಟ್ಟಿದ ಸಂಪ್ರದಾಯ, ಆಚರಣೆಗಳನ್ನು ದೂರ ಮಾಡಲು ಅನೇಕ ಸಮಾಜ ಸುಧಾರಕರು ಪ್ರಯತ್ನಿಸಿದ್ದಾರೆ. ಅದರ ಜೊತೆಗೆ ಬ್ರಿಟಿಷ್ ಸರ್ಕಾರವು ಬೆಂಬಲವಾಗಿ ನಿಂತು ಸಾಮಾಜಿಕ – ಮಾನವೀಯತೆಯನ್ನು ಮೆರೆದರು.

**ಸಾಮಾಜಿಕ ಮತ್ತು ಧಾರ್ಮಿಕ ದೋಷಗಳು** →
- ಹೆಣ್ಣು ಶಿಶು ಹತ್ಯೆ
- ಸತಿ ಪದ್ಧತಿ
- ಗುಲಾಮಗಿರಿ ರದ್ಧತಿ
- ಬಾಲ್ಯ ವಿವಾಹ ನಿಷೇಧ
- ಮಹಿಳಾ ವಿಮೋಚನೆ
- ಅಸ್ಪೃಶ್ಯತೆ ವಿರುದ್ಧ ಜಾಗೃತಿ

**A) ಹೆಣ್ಣು ಶಿಶು ಹತ್ಯೆ**

✓ ಉತ್ತರ ಭಾರತದ (ಪ್ರಮುಖ ಸ್ಥಳಗಳಲ್ಲಿ ಜಾರಿಯಲ್ಲಿತ್ತು.

✓ ಮುಖ್ಯವಾಗಿ ಪೂರ್ವ ಬಂಗಾಳ, ಗುಜರಾತಿನ ಕಾಥೇವಾಡ, ಕಚ್ಛ್ ಕಡೆಗಳಲ್ಲಿ ಜಾರಿಯಲಿತ್ತು.

✓ 1789 ರಲ್ಲಿ ಇಂಗ್ಲೀಷ್ ಶಿಕ್ಷಣ ತಜ್ಞ ಜೋನಾಥನ್ ಡಂಕನ್ – ಹೆಣ್ಣು ಶಿಶು ಹತ್ಯೆ ಕುರಿತಾಗಿ ವರದಿಯನ್ನು ಸಿದ್ಧಪಡಿಸಿದ.

✓ ಈ ವರದಿಯನ್ವಯ 1789 ರಲ್ಲಿ ರಜಪೂತರೊಂದಿಗೆ ಹೆಣ್ಣು ಶಿಶುಹತ್ಯೆ ನಿಷೇಧದ ಕುರಿತಾಗಿ ಒಪ್ಪಂದ ಮಾಡಿಕೊಳ್ಳಲಾಯಿತು.

✓ 1795 ರಲ್ಲಿ ಬಂಗಾಳದ ಗೌರ್‍ನರ್ ಸರ್.ಜಾನ್ ಶೋರ್‌ರವರು Bengal Regulation-1795 ಮೂಲಕ ಹೆಣ್ಣು ಶಿಶು ಹತ್ಯೆಯನ್ನು ಕೊಲೆ ಎಂದು ಪರಿಗಣಿಸುವುದಾಗಿ ಘೋಷಿಸಿದೆ.

**B) ಸತಿ ಪದ್ಧತಿ**

✓ ಸಮುದ್ರಗುಪ್ತನ ಕಾಲದ Eran Inscription - ಸತಿ ಪದ್ಧತಿಯನ್ನು ಉಲ್ಲೇಖಿಸಿದ ಮೊದಲ ಶಾಸನ.

✓ ಅರ್ಥ – ಸತಿಯು ಮೃತ ಪತಿಯ ಚಿತೆಯಲ್ಲಿ ಜೀವಂತವಾಗಿ ದಹಿಸಿಕೊಳ್ಳುವುದು.

✓ 1817 ರಲ್ಲಿ ಬಂಗಾಳದಲ್ಲಿಯೇ ಸುಮಾರು 700 ಜನಕ್ಕೂ ಹೆಚ್ಚು ಮಹಿಳೆಯರು ಬಲಿಯಾಗಿದ್ದರು.

✓ ರಾಜಾರಾಮ್ ಮೋಹನ್‌ರಾಯರು ಸತಿಪದ್ಧತಿ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರ.

✓ 1829 ರಲ್ಲಿ ವಿಲಿಯಂ ಬೆಂಟಿಕ್ – ಸತಿಪದ್ಧತಿ ರದ್ದುಗೊಳಿಸಿದರು.

**C) ಗುಲಾಮಗಿರಿ ರದ್ಧತಿ**

✓ ದೆಹಲಿ ಸುಲ್ತಾನರು ಮತ್ತು ಮೊಘಲ ಕಾಲದಿಂದಲೂ ಅಸ್ತಿತ್ವದಲ್ಲಿತ್ತು.

✓ 1807 ರಲ್ಲಿ ಗುಲಾಮ ವ್ಯಾಪಾರವನ್ನು ಬ್ರಿಟಿಷ್ ಸಂಸತ್ತು ರದ್ದುಗೊಳಿಸಿತ್ತು.

✓ ಭಾರತದಲ್ಲಿ ಬ್ರಿಟಿಷ್ ಗೌರ್‍ನರ್ ಜನರಲ್ ಎಲಿನ್‌ಬರೂ–1843 ರ ಕಾಯಿದೆಯ ಮೂಲಕ ಗುಲಾಮಗಿರಿಯನ್ನು ರದ್ದುಗೊಳಿಸಿದ.

✓ 1861 ರ ಅಪರಾಧಿ ಶಿಕ್ಷಾ ಸಂಹಿತೆ ಪ್ರಕಾರ – ಗುಲಾಮಗಿರಿ ಆಚರಣೆ ಶಿಕ್ಷಾರ್ಹ ಅಪರಾಧ.

**D) ಬಾಲ್ಯ ವಿವಾಹ ನಿಷೇಧ**

✓ ಇದು ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿತ್ತು.

✓ 1872 ರಲ್ಲಿ ಬಾಲ್ಯವಿವಾಹ ನಿಷೇಧಿಸಲಾಯಿತು.

- ✓ ಸ್ಥಳೀಯ ವಿವಾಹ ಕಾಯಿದೆ–1872 ಮೂಲಕ–ಸ್ತ್ರೀ–ಪುರುಷರಿಬ್ಬರ ವಿವಾಹ ವಯೋಮಿತಿಯನ್ನು ಸರ್ಕಾರ ಸ್ಪಷ್ಟಪಡಿಸಿತು & ಅಂತರ ಜಾತಿಯ ವಿವಾಹಕ್ಕೆ ಉತ್ತೇಜನ ನೀಡಿತು.
- ✓ ಭಾರತ ಸರ್ಕಾರ 1856 ರಲ್ಲಿ ವಿಧವಾ ಪುನರ್ ವಿವಾಹ ಕಾಯಿದೆ ಜಾರಿಗೊಳಿಸಿತು.
- ✓ 1864 ರಲ್ಲಿ ಕೇಶವ ಚಂದ್ರಸೇನರಿಂದ ಜಾಗೃತಿ ಕಾರ್ಯ.
- ✓ 1864 ರಲ್ಲಿ ವಿಧವಾ ಸಂಘ– M.G.ರಾನಡೆ ಸ್ಥಾಪಿಸಿದರು.

**E) <u>ಮಹಿಳಾ ವಿಮೋಚನೆ</u>**

- ✓ ಸ್ತ್ರೀಯು ಮುಖ್ಯವಾಗಿ ಸತಿಪದ್ಧತಿ, ಶಿಶುಹತ್ಯಾ, ಗೋಷಾ ಪದ್ಧತಿ, ದೇವದಾಸಿ ಪದ್ಧತಿ, ಬಹುಪತ್ನಿತ್ವ, ವಿಧವಾ ಪದ್ಧತಿ, ಬಾಲ್ಯ ವಿವಾಹ, ಅನಕ್ಷರತೆ – ಇನ್ನು ಮುಂತಾದವುಗಳಿಂದ ಭಾರತದ ಮಹಿಳೆ ಶೋಷಣೆ ಅನುಭವಿಸಿದ್ದಾಳೆ.
- ✓ ಇದರ ವಿರುದ್ಧ ರಾಜಾರಾಮ್‌ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ಕೇಶವ ಚಂದ್ರಸೇನ್‌ರಂತಹ ಸಮಾಜ ಸುಧಾರಕರು ಹೋರಾಟ ನಡೆಸಿದರು.
- ✓ ಆರ್ಯಸಮಾಜ ಸ್ತ್ರೀ ಶಿಕ್ಷಣಕ್ಕಾಗಿ ಕನ್ಯಾ–ಗುರುಕುಲಗಳ ಸ್ಥಾಪಿಸಿತು.
- ✓ ಪಂಡಿತ್ ರಮಾಬಾಯಿ – ವಿಧವೆಯರಿಗಾಗಿ ಶಿಕ್ಷಣ ಕೇಂದ್ರ ಸ್ಥಾಪನೆ.
- ✓ 1926 ರಲ್ಲಿ – ಅಖಿಲ ಭಾರತ ಮಹಿಳಾ ಸಮ್ಮೇಳನ–ದೇಶವ್ಯಾಪಿ ಸ್ತ್ರೀ–ಜಾಗೃತಿ ಇದರ ಉದ್ದೇಶವಾಗಿತ್ತು.

**F) <u>ಅಸ್ಪೃಶ್ಯತೆ ವಿರುದ್ಧ ಜಾಗೃತಿ – [Article– 17] ಅಸ್ಪೃಶ್ಯತೆ ನಿಷೇಧ.</u>**

- ✓ ಅಸ್ಪೃಶ್ಯತೆ – ಭಾರತದ ಸಾಮಾಜಿಕ ವ್ಯವಸ್ಥೆಯ ಅನಿಷ್ಟತೆಯಲ್ಲೊಂದು.
- ✓ ಸಾಮಾಜಿಕ–ಸಮಾನತೆ, ಸಾಮಾಜಿಕ – ಜಾಗೃತಿ ಮತ್ತು ಸವಲತ್ತುಗಳಿಗಾಗಿ ಹೋರಾಟ.
- ✓ 1873 ರಲ್ಲಿ – ಸತ್ಯಶೋಧಕ ಸಮಾಜ – ಜ್ಯೋತಿಬಾಪುಲೆಯವರಿಂದ ಸ್ಥಾಪನೆ.
- ✓ Self – respect movement – E.V. ರಾಮಸ್ವಾಮಿ ನಾಯ್ಕರ್‌ರವರು ಜಾಗೃತಿ ಮೂಡಿಸಿದರು.
- ✓ ಗಾಂಧೀ 'ಹರಿಜನ ಸೇವಾ ಸಂಘ'ದ ಮೂಲಕ ಅಸ್ಪೃಶ್ಯತೆ ನಿವಾರಣೆಗಾಗಿ ಜಾಗೃತಿ ಮೂಡಿಸಿದರು.
- ✓ ಡಾ|| ಬಿ. ಆರ್ ಅಂಬೇಡ್ಕರ್‌ರು ಅಸ್ಪೃಶ್ಯತೆ ನಿರ್ಮೂಲನೆಗಾಗಿ ಪ್ರಮುಖ ಪಾತ್ರ ವಹಿಸಿದರು.

**II. <u>ಎಲ್ಲರಿಗಾಗಿ ವೇದಗಳು – ಜಾತ್ಯಾತೀತ ಸಮಾಜ</u>**

- ➢ ಆಧುನಿಕ ಭಾರತದಲ್ಲಿ ವೇದಗಳ ಮಹತ್ವ ಮತ್ತು ಅವುಗಳ ಅಗತ್ಯತೆ ಕುರಿತು ತಿಳಿಸಿದವರು ಶ್ರೀ ಸ್ವಾಮಿ ದಯಾನಂದ ಸರಸ್ವತಿ ಮತ್ತು ಶ್ರೀ ಅರವಿಂದ ಘೋಷ್.
- ➢ ದಯಾನಂದ ಸರಸ್ವತಿಯವರು ಆರ್ಯಸಮಾಜದ ಸ್ಥಾಪಕರು. ಅವರ **'ವೇದಗಳಿಗೆ ಹಿಂದಿರುಗಿ' [Back to vedas]** ಎಂಬ ಘೋಷಣೆ ಪ್ರಸಿದ್ಧಿಯಾಗಿದೆ.
- ➢ ಆರ್ಯಸಮಾಜದ ದಶ– ತತ್ವಗಳು ರೂಪುಗೊಂಡಿರುವುದೇ ವೇದಗಳ ಆಧಾರದಿಂದ.
- ➢ ವೇದಗಳಲ್ಲಿ ಎಲ್ಲಿಯೂ ಜಾತಿ, ಮತ, ಬಣ್ಣ, ಭೇದಭಾವಗಳಿಲ್ಲ.
- ➢ ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ "ಸತ್ಯಾರ್ಥ ಪ್ರಕಾಶ" ಗ್ರಂಥದಲ್ಲಿ "ಭಾರತೀಯರ ಬದುಕಿಗೆ ದಾರಿದೀಪಗಳಾಗಿ ವೈದಿಕ ಉಪನಿಷತ್‌ಗಳಿರಬೇಕೇ ಹೊರತು ಪಾಶ್ಚಿಮಾತ್ಯ ವಿಚಾರಗಳಲ್ಲ." ಎಂದಿದ್ದಾರೆ.
- ➢ "ಸಮಾಜ ಸುಧಾರಣೆಯಿಂದ ಮಾತ್ರ ರಾಷ್ಟ್ರನಿರ್ಮಾಣದ ಐಕ್ಯತೆ ಸಾಧ್ಯ" ಎಂದು ನಂಬಿ, ಸಮಾಜದ ನ್ಯೂನತೆಗಳನ್ನು ಸರಿಪಡಿಸದ ಹೊರತೂ ಜಾತ್ಯಾತೀತತೆಯು ಅಸಾಧ್ಯವೆಂದು ತಿಳಿಸಿದರು.
- ➢ ಜಾತ್ಯಾತೀತ ಪರಿಕಲ್ಪನೆಗೆ ಆರ್ಯ ಸಮಾಜದ ವತಿಯಿಂದ ಮಹಿಳಾ ಶಿಕ್ಷಣ, ಅಂತರ್ ಜಾತಿ ವಿವಾಹಗಳಿಗೆ ಪ್ರೇರಣೆ ನೀಡಿದರು.
- ➢ ಋಗ್ವೇದ ಕಾಲದಲ್ಲಿ ಸಮಾಜವು ಜಾತಿ ರಹಿತವಾಗಿತ್ತು. ಮೇಲು–ಕೀಳು ಎಂಬ ಅಸಮಾನತೆಗಳಿಂದ ಮುಕ್ತವಾಗಿತ್ತು. ಜನತೆ ಶಾಂತಿ – ನೆಮ್ಮದಿಯಿಂದ ಸಮೃದ್ಧಿ ಜೀವನ ನಡೆಸುತ್ತಿದ್ದರು ಎನ್ನುವ ಕಾರಣಗಳಿಂದ, ಪುನಃ ವೇದ ಕಾಲದ ಸಮಾಜವನ್ನು ಆಧುನಿಕ ಕಾಲದಲ್ಲಿ ಮರು ಸ್ಥಾಪಿಸಲು ವೇದಗಳಿಗೆ ಹಿಂದಿರುಗಿ ಎಂದು ಕರೆ ನೀಡಿದರು.
- ➢ ಒಟ್ಟಾರೆಯಾಗಿ, ರಾಷ್ಟ್ರೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಭಾರತವನ್ನು ಒಂದುಗೂಡಿಸುವ ಆದರ್ಶ ಕಾರ್ಯರೂಪಕ್ಕೆ ಬರುವುದಕ್ಕಾಗಿಯೇ ಎಲ್ಲರಿಗಾಗಿ ವೇದಗಳು ಸಹಕಾರಿಯಾಗಿವೆ.

**III. <u>ಆದರ್ಶ ಸೇವೆ [Ideal Service]</u>**

- ಭಾರತೀಯ ಇತಿಹಾಸ ಸಂಸ್ಕೃತಿ ಮತ್ತು ಪರಂಪರೆಗೆ ಕಿರೀಟದಂತಿರುವ ಲಕ್ಷಣವೇ ಆದರ್ಶಸೇವೆ – ಇದು ಪ್ರಾಚೀನ ಭಾರತದಿಂದ ಇಂದಿನವರೆಗೂ ಹಾಸುಹೊಕ್ಕಾಗಿದೆ.

**ಉದ್ದೇಶ:–** ನಮ್ಮ ನಮ್ಮಲ್ಲಿ ಉತ್ತಮ ಬಾಂಧವ್ಯಗಳನ್ನು ಮೂಡಿಸುವುದು, ನಾವೆಲ್ಲ ವಿವಿಧ ಧರ್ಮ, ಜಾತಿ, ಸಮುದಾಯ ಮತ್ತು ಮತಗಳಿಗೆ ಸೇರಿದ್ದರೂ – ನಾವೆಲ್ಲ ಈ ದೇಶದ ಜನರು, ನಾವೆಲ್ಲ ಒಂದೇ ಎಂದು ಸಾರುವುದಾಗಿದೆ.

- ವಿವಿಧ ಧರ್ಮಶಾಸ್ತ್ರ, ಧರ್ಮಸೂತ್ರ ಮತ್ತು ಉಪನಿಷತ್ತಿಗಳಲ್ಲಿ ಹತ್ತು ರೀತಿಯ ಆದರ್ಶ ಸೇವೆಗಳನ್ನು ಕಾಣಬಹುದು ಅವುಗಳೆಂದರೆ.
  1) **ತನ್ನ ಕರ್ತವ್ಯದ ಸೇವೆ [Duty towars service honest] -** ನಿರಂತರವಾಗಿ ಕರ್ತವ್ಯದಲ್ಲಿ ನಿರತನಾಗುವುದು, ಇದು ಆರೋಗ್ಯ, ಮಾನಸಿಕ ಸ್ಥಿರತೆಗೆ, ಶುದ್ಧತೆಗೆ ಮತ್ತು ಆಧ್ಯಾತ್ಮಿಕ ಕಡೆಗೆ ಕರೆದೊಯ್ಯುತ್ತದೆ.
  2) **ದೈವತ್ವದ ಕಡೆಗೆ ಸೇವೆ [Duty towards God] –** ದೈವತ್ವ ನಮ್ಮ ದೇಹ ಮತ್ತು ಮನಸ್ಸಿನಲ್ಲಿ ಅಂತರ್ಗತವಾಗಿದೆ, ವ್ಯಕ್ತಿಯ ಉದಾತ್ತ ಚಿಂತನೆಗಳು ದೈವ ಸಾನಿಧ್ಯಕ್ಕೆ ಹತ್ತಿರವಾಗುತ್ತವೆ.
  3) **ಪೂರ್ವಿಕರ ಸೇವೆ [Duty towards Ancestors] –** ವೇದಗಳು ಹೇಳುವಂತೆ ನಿನ್ನ ಆತ್ಮವು ನಿನ್ನ ಪೂರ್ವಿಕರ ಪ್ರಪಂಚದಲ್ಲಿ ಅಡಕವಾಗಿದೆ. ನಿನ್ನ ಹುಟ್ಟು ಮತ್ತು ಬೆಳವಣಿಗೆಗೆ ನಿನ್ನ ಪೂರ್ವಿಕರೇ ಕಾರಣ, ಹಾಗಾಗಿ ನೀನು ನಿನ್ನ ಪೂರ್ವಿಕರಿಗೆ ಕೃತಜ್ಞನಾಗಿರಬೇಕು.
  4) **ಮಾನವೀಯತೆಯ ಕಡೆಗೆ –** 'ನೀನು ಬದುಕು, ನಿನ್ನಂತೆ ಇತರರನ್ನು ಬದುಕಲು ಬಿಡು' ಎಂಬಂತೆ ಸ್ವಾರ್ಥ ರಹಿತ ವ್ಯಕ್ತಿಯಾಗಿ ಮಾನವೀಯತೆಯ ಸೇವೆಯೇ ದೇವರ ಸೇವೆ.
  5) **ಇತರೆ ಜೀವಿಗಳ ಕಡೆಗೆ –** ಈ ಸೃಷ್ಟಿಯಲ್ಲಿ ಜೀವಿಸಿರುವ ಪ್ರತಿಯೊಂದು ಪ್ರಾಣಿ ಪಕ್ಷಿ ಮತ್ತು ಕೀಟಗಳು ಈ ಭೂಮಿಯ ಮೇಲೆ ಬದುಕಲು ಹಕ್ಕನ್ನು ಪಡೆದಿವೆ ಅದು ದೈವತ್ವದ ಒಂದು ಭಾಗ.
  6) **ಸಾಮಾಜಿಕ ಸೇವೆ – [Duty towards society]–** ಸಮಾಜದ ಶಾಖೆಗಳಾದ ಕುಟುಂಬ, ಜಾತಿ, ಸಮುದಾಯ, ಇವುಗಳ ಮಧ್ಯ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯು ನೈತಿಕತೆ, ಆಧ್ಯಾತ್ಮಿಕತೆಗಳ ಜ್ಞಾನ ಮೈಗೂಡಿಸಿಕೊಳ್ಳಬೇಕು.
  7) **ವೃತ್ತಿಪರ ಸೇವೆ [Professional duty] -** ಪ್ರತಿಯೊಬ್ಬ ವ್ಯಕ್ತಿಯು ತನ್ನ ವೃತ್ತಿಯಲ್ಲಿ ಪ್ರಾಮಾಣಿಕತೆ, ಶ್ರದ್ಧೆ, ವೃತ್ತಿನಿಷ್ಠೆ, ಆಮಿಷಕ್ಕೆ ಬಲಿಯಾಗದಿರುವುದು, ದೇವರ ಸೇವೆ – ಎಂಬೆಲ್ಲಾ ಮನೋಭಾವ ಹೊಂದುವುದು.
  8) **ನೈತಿಕ ಕರ್ತವ್ಯ ಮತ್ತು ಸೇವೆ –** ನಮ್ಮ ವ್ಯಕ್ತಿತ್ವದಲ್ಲಿ ಘನತೆ, ಶುದ್ಧತೆ, ತ್ಯಾಗ ಮನೋಭಾವನೆ, ಅಹಿಂಸೆ ಪಾಲನೆ, ಸತ್ಯಸಂದತೆ, ಕಳ್ಳತನ, ಮೋಸದಿಂದ ದೂರವಿರುವುದು, ಹಿರಿಯರಲ್ಲಿ ಗೌರವ ಮತ್ತು ಅವರ ಹಾರೈಕೆ, ಮಕ್ಕಳ ಉತ್ತಮ ಭವಿಷ್ಯಕ್ಕೆ ಶ್ರಮಿಸುವುದು ನೈತಿಕ ಕರ್ತವ್ಯ.

## IV. ಶೋಷಿತ ವರ್ಗದವರ ವಿಮೋಚನೆ

19ನೇ ಶತಮಾನದಲ್ಲಾದ ಪುನರುಜ್ಜೀವನ ಚಳುವಳಿಯ ಪ್ರಭಾವದಿಂದಾಗಿ, ಹಿಂದುಳಿದ, ಶೋಷಿತ ವರ್ಗಗಳು ವಿಮೋಚನೆಗಾಗಿ ಹೋರಾಡಲು ಪ್ರೇರೇಪಣೆ ಪಡೆದವು. ಅದರಲ್ಲಿ ಮುಖ್ಯವಾಗಿ, ಪ್ರಮುಖ ನಾಯಕರುಗಳೆಂದರೆ...

### 1) ಜ್ಯೋತಿಬಾಪುಲೆಯವರ ಪಾತ್ರ

- ಬ್ರಾಹ್ಮಣೇತರ ಚಳುವಳಿಯ ನಾಯಕ ಮತ್ತು ಮಾಲಿ ಜನಾಂಗಕ್ಕೆ ಸೇರಿದವರು.
- ಥಾಮಸ್ ಪೆಯಿನ್‌ರ್ Rights of men's ಗ್ರಂಥದ ಪ್ರಭಾವಕ್ಕೆ ಒಳಗಾಗಿದ್ದರು.
- 1873ರಲ್ಲಿ ಸತ್ಯಶೋಧಕ ಸಮಾಜದ ಸ್ಥಾಪನೆ – ಪೂನಾ.

**ಧ್ಯೇಯ**

- ಶೂದ್ರರಿಗೆ ತಮ್ಮ ಹಕ್ಕು – ಬಾಧ್ಯತೆಗಳೇನು ಎಂಬುದನ್ನು ಅರಿಯುವಂತೆ ಮಾಡುವುದು.
- ಪುಲೆಯವರು ಶಿಕ್ಷಣಕ್ಕೆ ಮಹತ್ವ ನೀಡಿದರು – 1848ರಲ್ಲಿ ಮಹಿಳಾ ಪಾಠಶಾಲೆ, ಕೆಳಜಾತಿಯವರಿಗೆ ಶಾಲೆಗಳನ್ನು ಪೂನಾದಲ್ಲಿ ಸ್ಥಾಪಿಸಿದರು.
- ಶೂದ್ರರಿಗೆ –
  - → ಸಾಮಾಜಿಕ ನ್ಯಾಯ
  - → ಸಾಮಾಜಿಕ ಸಮಾನತೆ
  - → ಸಾಮಾಜಿಕ ಸವಲತ್ತು

  } ಒದಗಿಸಿಕೊಡುವುದು
- "ಪುಲೆಯವರ ಚಳುವಳಿ ಕೇವಲ ಸಾಮಾಜಿಕ, ಶೋಷಿತ ವರ್ಗದವರ ಚಳುವಳಿಯಾಗಿರದೇ ಸಾಂಸ್ಕೃತಿಕ ಆಯಾಮವನ್ನು ಹೊಂದಿತ್ತು" ಎಂದರೆ ತಪ್ಪಾಗಲಾರದು.

**ಫುಲೆಯವರ ಪ್ರಮುಖ ಕೃತಿಗಳು**

- ಬ್ರಾಹ್ಮಣಾಚೇ ಕಸಬ್ – ಜಾತಿ ಪದ್ಧತಿಯ ಉಗಮವನ್ನು ವಿಶ್ಲೇಷಿಸಿದ್ದಾರೆ.
- ಗುಲಾಮಗಿರಿ, ಶೂದ್ರ–ಅತಿಶೂದ್ರರ, ಹಕ್ಕುಗಳ ಬಗ್ಗೆ ಪ್ರತಿಪಾದನೆ.
- ಶೇತ್ಕಾರ್ಯಚ
- ಸಾರ್ವಜನಿಕ ಸತ್ಯಧರ್ಮ ಪುಸ್ತಕ.

**2) ಶ್ರೀ ನಾರಾಯಣ ಗುರುಗಳ ಪಾತ್ರ [1856 – 1928]**

- ಕೇರಳದ ಹಿಂದುಳಿದ ವರ್ಗಗಳ ಸಾಮಾಜಿಕ – ಧಾರ್ಮಿಕ ಹರಿಕಾರ.
- ಮೌನ ಕ್ರಾಂತಿಯ ಪಿತಾಮಹ ಮತ್ತು ಕೇರಳದ ಈಳವ ಎಂಬ ಹಿಂದುಳಿದ ಜಾತಿಯಲ್ಲಿ ಜನನ.
- ಆಧುನಿಕ ಕೇರಳದ ಒಂದು ಜಾತಿ ರಹಿತ, ವರ್ಣ–ರಹಿತ ಸಮಾಜದ ನಿರ್ಮಾಣಕ್ಕಾಗಿ ಜೀವನವನ್ನು ಮುಡಿಪಾಗಿಟ್ಟ ಮಹಾನ್ ವ್ಯಕ್ತಿ.
- **ಆಶಾನ್ ಚಳುವಳಿ** – ಜನರು ಸಮಾನರಾಗಿ ಬದುಕುವಂತೆ ಮಾಡುವ ನಿಟ್ಟಿನಲ್ಲಿ ನಾರಾಯಣ ಗುರುಗಳ ಚಿಂತನೆಯಲ್ಲಿ ರೂಪುಗೊಂಡ ಚಳುವಳಿ.
- ಒಂದೇ ಜಾತಿ, ಒಂದು ಧರ್ಮ, ಒಬ್ಬನೇ ದೇವರು" – ನಾರಾಯಣ ಗುರುಗಳ ಚಿಂತನೆ
- ಕೃತಿ – ಜಾತಿ ಮೀಮಾಂಸ.
- 1903ರಲ್ಲಿ **"ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ"** ಎಂಬ ಸಂಸ್ಥೆ ಸ್ಥಾಪಿಸಿದರು.
- **ಸಂಸ್ಕೃತಾ** – ಸಂಸ್ಕೃತಿ ಪರ ಚಳುವಳಿ ಎಂದರೆ ಬ್ರಾಹ್ಮಣ ಸಂಸ್ಕೃತಿಯ ಅನುಕರಣೆ ಅದುವೇ ಸಂಸ್ಕೃತೀಕರಣ.
- 1888ರಲ್ಲಿ ಅರವಿಪುರಂನಲ್ಲಿ ಶಿವದೇವಾಲಯ ಸ್ಥಾಪಿಸಿ, ದೇಗುಲ ಸ್ಥಾಪನಾ ಚಳುವಳಿಗೆ ಚಾಲನೆ ನೀಡಿದರು.
- 1904ರಲ್ಲಿ ವರ್ಕಲದಲ್ಲಿ ಶಿವಗಿರಿ ಮಠ ಸ್ಥಾಪನೆ.
- 1907ರಲ್ಲಿ ಪಾಲ್ಘಟ್‌ನಲ್ಲಿ ಶಿವ ದೇಗುಲ ಸ್ಥಾಪನೆ.
- 1924ರಲ್ಲಿ ಕೇರಳದಲ್ಲಿ ವೈಕಂ ಸತ್ಯಾಗ್ರಹ ಪ್ರಾರಂಭಿಸಿದರು.
- ಇವರು ಮೌನ ಕ್ರಾಂತಿಯಿಂದಾಗಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದರು.
- 1928ರಲ್ಲಿ ಶ್ರೀ ನಾರಾಯಣ ಗುರುಗಳು ನಿಧನರಾದರು.

**3) ಪೆರಿಯಾರ್‌ರವರ ಪಾತ್ರ**

- ತಮಿಳುನಾಡಿನ ಈರೋಡಿನಲ್ಲಿ 1879ರಲ್ಲಿ ಜನನ
- ಪೂರ್ಣ ಹೆಸರು – E.V. ರಾಮಸ್ವಾಮಿ ನಾಯ್ಕರ್.
- 1925ರಲ್ಲಿ ಆತ್ಮ ಗೌರವ ಚಳುವಳಿ [Self – respect movement] ಪ್ರಾರಂಭಿಸಿದರು.
- ಪ್ರಗತಿಪರ ಹಾಗೂ ವೈಚಾರಿಕತೆಯನ್ನು ಜನರಿಗೆ ತಲುಪಿಸಲು ಕುಡಿಯರಸು ಎಂಬ ಪತ್ರಿಕೆ ಪ್ರಾರಂಭಿಸಿದರು.
- 1937 ರಲ್ಲಿ ಹಿಂದಿ ಭಾಷೆ ವಿರೋಧಿ ಚಳುವಳಿ ಆರಂಭಿಸಿದರು.
- 1944 ರಲ್ಲಿ ದ್ರಾವಿಡ ಕಜಗಂ ಸ್ಥಾಪನೆ.

**ಉದ್ದೇಶಗಳು**

- ಜಾತಿ ರಹಿತ ಸಮಾಜದ ಸ್ಥಾಪನೆ
- ವಿಧವಾ ವಿವಾಹಕ್ಕೆ ಪ್ರೋತ್ಸಾಹ
- ಅಂತರ್–ಜಾತಿಯ ವಿವಾಹಕ್ಕೆ ಪ್ರೋತ್ಸಾಹ
- ಮೂರ್ತಿ ಪೂಜೆಯ ತಿರಸ್ಕಾರ
- ದ್ರಾವಿಡ ಗಣರಾಜ್ಯದ ಸ್ಥಾಪನೆ
- ಬ್ರಾಹ್ಮಣರ ಪೌರೋಹಿತಕ್ಕೆ ಬಹಿಷ್ಕಾರ

**V. ಎರಡು ರಾಷ್ಟ್ರದ ಸಿದ್ಧಾಂತ & ಇಸ್ಲಾಮಿಕ್ ಧರ್ಮದ ಪುನರುಜ್ಜೀವನ**

- ದ್ವಿ–ರಾಷ್ಟ್ರ ಸಿದ್ಧಾಂತ– ಭಾರತದ ಸ್ವಾತಂತ್ರ್ಯ ಚಳುವಳಿಯ ದಿಕ್ಕನ್ನು ಬದಲಾಯಿಸಿದ ಸಿದ್ಧಾಂತವಾಗಿದೆ.
- ಮಾರ್ಚ್ 23, 1940 ರಂದು ಇವತ್ತಿನ ಪಾಕಿಸ್ತಾನದ ಲಾಹೋರ್‌ನಲ್ಲಿ ಅಧಿಕೃತವಾಗಿ ಗೋಚರಿಸಿತು.
- ಪಾಕಿಸ್ತಾನದ ಸ್ಥಾಪನೆ ಅಥವಾ ಭಾರತೀಯ ಮುಸ್ಲಿಂರ ರಾಜ್ಯವೊಂದರ ಸ್ಥಾಪನೆಯು ಮುಸ್ಲಿಂ ಲೀಗ್‌ನ ಅಂತಿಮಗುರಿ ಎಂದು ಘೋಷಿಸಿತು.
- ಚೌಧರಿ ರೆಹಮತ್ ಆಲಿಖಾನ್ – ಪಾಕಿಸ್ತಾನ ಎಂಬ ಸ್ವತಂತ್ರ ರಾಜ್ಯದಲ್ಲಿ ಪಂಜಾಬ್, ಅಫ್ಘಾನಿಸ್ತಾನ, ಕಾಶ್ಮೀರ, ಸಿಂಧ್ & ಬಲೂಚಿಸ್ತಾನ್‌ಗಳೆಂಬ ಒಕ್ಕೂಟ ಸ್ಥಾಪನೆಗೆ ಪ್ರತಿಪಾದಿಸಿದನು.

ದ್ವಿರಾಷ್ಟ್ರ ಸಿದ್ಧಾಂತ ಹಿನ್ನೆಲೆಯನ್ನು ಗಮನಿಸಿದರೆ, ಇದು ಏಕಾಏಕಿ ಉದ್ಭವವಾದುದಲ್ಲ, ಇದು ಹಂತ ಹಂತವಾಗಿ ಬೆಳೆಯಿತು.

- ಸರ್.ಸೈಯದ್ ಅಹಮ್ಮದ್ ಖಾನರ ಪಾತ್ರ:– ಇವರು ಸೈಂಟಿಫಿಕ್ ಸೊಸೈಟಿ ಮತ್ತು ಅಲಿಘರ್‌ನಲ್ಲಿ ಆಂಗ್ಲೋ–ಮಹಮದ್‌ನ ಓರಿಯಂಟಲ್ ಕಾಲೇಜನ್ನು ಸ್ಥಾಪಿಸಿ ಅಲಿಘರ ಚಳುವಳಿಯ ಮೂಲಕ ಮುಸ್ಲಿಂರಲ್ಲಿ ಜಾಗೃತಿ ಮೂಡಿಸಿದರು.
- ಆಂಗ್ಲರ ಒಡೆದು ಆಳುವ ನೀತಿ:– ರಾಷ್ಟ್ರೀಯ ಚಳುವಳಿ ರಾಷ್ಟ್ರೀಯ ಜಾಗೃತಿ ಪ್ರಬಲವಾಗುವುದರ ಮೂಲಕ ಭಾರತದಲ್ಲಿನ ಬ್ರಿಟಿಷ್ ಆಡಳಿತದ ಸ್ಥಿರತೆಗೆ ಅಪಾಯ ತಂದೊಡ್ಡುತ್ತದೆ. ಎಂದು ಭಾವಿಸಿ ಒಡೆದು ಆಳುವ ನೀತಿಯನ್ನು ಅನುಸರಿಸಿದರು.
- ಅಖಿಲ ಭಾರತ ಮುಸ್ಲಿಂ ಲೀಗ್ –1906 → 1906 ರಲ್ಲಿ ಢಾಕಾದಲ್ಲಿ ಮುಸ್ಲಿಂ ಜಮೀನ್ದಾರರಿಂದ ಅಸ್ತಿತ್ವಕ್ಕೆ ಬಂದಿತು. ಇದು ಮುಸ್ಲಿಂ ಹಿತಾಸಕ್ತಿಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಹಂತಹಂತವಾಗಿ ಪ್ರತ್ಯೇಕತೆ ವಾದವನ್ನು ಮಂಡಿಸಿತು.
- 1937 ರ ಚುನಾವಣಾ ಫಲಿತಾಂಶಗಳು – ಮುಸ್ಲಿಂ ಲೀಗ್ ಈ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವಲ್ಲಿ ವೈಫಲ್ಯ ಕಂಡಿತು. ಪರಿಣಾಮ ಪ್ರತ್ಯೇಕ ರಾಷ್ಟ್ರ ಚಿಂತನೆಗೆ ಮಹತ್ವ ನೀಡಿತು.
- ಆಗಸ್ಟ್ ಕೊಡುಗೆಯಲ್ಲಿ ಮುಸ್ಲಿಂ ಲೀಗ್‌ನ ಬೇಡಿಕೆಗೆ ಯಾವುದೇ ಉಲ್ಲೇಖವಿಲ್ಲವೆಂದು ಲೀಗ್ ತಿರಸ್ಕರಿಸಿತು.
- 1942 ರಲ್ಲಿ ಕಾಂಗ್ರೆಸ್ 'ಬ್ರಿಟಿಷರೇ ದೇಶ ಬಿಟ್ಟು ತೊಲಗಿ' ಎಂಬ ಘೋಷಣೆಯನ್ನು ಅಳವಡಿಸಿಕೊಂಡರೆ, ಮುಸ್ಲಿಂ ಲೀಗ್ ಮಾತ್ರ ವಿಭಜಿಸಿ ಮತ್ತು ನಂತರ ಹೊರಡಿ (Divide & Quit) ಎಂಬ ಘೋಷಣೆಯನ್ನು 1943ರ ಕರಾಚಿ ಅಧಿವೇಶನದಲ್ಲಿ ಅಳವಡಿಸಿಕೊಂಡಿತು.
- ಲೀಗ್, 1944 ರ ರಾಜಾಜಿ ಸಲಹೆಗಳು & ದೇಸಾಯಿ–ಲಿಯಾಖತ್ ಅಲಿ ಒಪ್ಪಂದ 1945 ಗಳನ್ನು ತಿರಸ್ಕರಿಸಿತು.
- 1946 ಕ್ಯಾಬಿನೆಟ್ ಆಯೋಗವು ಮುಸ್ಲಿಂ ಲೀಗ್‌ನ ಪ್ರತ್ಯೇಕ ರಾಷ್ಟ್ರ ಬೇಡಿಕೆಯನ್ನು ತಿರಸ್ಕರಿಸಿತು. ಆದರೆ ಮುಸ್ಲಿಂ ಲೀಗ್ ಆಗಸ್ಟ್ 16, 1946 ರನ್ನು **ನೇರ ಕ್ರಮದ ದಿವಸ** (Direct action day) ಎಂದು ಆಚರಿಸಿ ಪಾಕಿಸ್ತಾನ ರಚನೆಯ ಪ್ರತಿಪಾದನೆಯನ್ನು ಬಲಗೊಳಿಸಿದರು.
- 1947 ರ ಮೌಂಟ್ ಬ್ಯಾಟನ್ ಯೋಜನೆಯ ಮೂಲಕ ಡೊಮಿನಿಯನ್ ಪಾಕಿಸ್ತಾನವಾಗಿ ಹೊರ ಬಂದು ಇಸ್ಲಾಮಿಕ್ ಧರ್ಮದ ಪುನರ್ ಜೀವನಕ್ಕೆ ಕಾರಣವಾಯಿತು.

**VI. ಧರ್ಮ ಮತ್ತು ಶಿಕ್ಷಣದ ಮೂಲಕ ಶೋಷಿತ ವರ್ಗದವರ ಸಬಲೀಕರಣ / ದಲಿತರ ವಿಮೋಚನೆಗಾಗಿ ಹೋರಾಟ & ಅವರ ಸಬಲೀಕರಣ.**

ಶೋಷಿತ ವರ್ಗದ ಅಥವಾ ದಲಿತ ವರ್ಗಕ್ಕೆ ಸಾಮಾಜಿಕ–ನ್ಯಾಯಕ್ಕಾಗಿ, ಸಾಮಾಜಿಕ ಸಮಾನತೆಗಾಗಿ & ಸಾಮಾಜಿಕ ಸವಲತ್ತುಗಳಿಗಾಗಿ ಹೋರಾಟ ದಕ್ಷಿಣ ಭಾರತದಲ್ಲಿ ಪ್ರಾರಂಭವಾಯಿತು.

**ಧರ್ಮದಲ್ಲಿ ಸಬಲೀಕರಣ**

→ ಮೂರ್ತಿ ಪೂಜೆಗೆ ವಿರೋಧ

→ ಧಾರ್ಮಿಕ ಸಂಪ್ರದಾಯಗಳಿಗೆ ವಿರೋಧ

→ ಮನು ಸಿದ್ಧಾಂತಕ್ಕೆ ವಿರೋಧ

→ ಪುರೋಹಿತ ಶಾಹಿಯ ಪ್ರಾಬಲ್ಯ ಖಂಡನೆ

→ ಸಂಸ್ಕೃತ ವಾದದ ಖಂಡನೆ

→ ಮೂಢನಂಬಿಕೆಯ ಆಚರಣೆಯ ವಿರೋಧ

**ಶಿಕ್ಷಣದ ಮೂಲಕ ಸಬಲೀಕರಣ**

- ಜ್ಯೋತಿಬಾ ಫುಲೆಯವರ ಪಾತ್ರ = 1848 ರಲ್ಲಿ ಕೆಳಜಾತಿ ಹಾಗೂ ಅಸ್ಪೃಶ್ಯರಿಗೆ ಒಂದು ಪಾಠಶಾಲೆಯನ್ನು ತೆರೆಯುವುದರ ಮೂಲಕ, 1851 ರಲ್ಲಿ ಪೂನಾದಲ್ಲಿ ಒಂದು ಮಹಿಳಾ ಕಾಲೇಜನ್ನು ಸ್ಥಾಪಿಸಿದರು.
- ಶ್ರೀ ನಾರಾಯಣ ಗುರುಗಳ ಪಾತ್ರ = "ಶಿಕ್ಷಣದಿಂದ ಸಂಘಟಿತರಾಗಿ, ಸಂಘಟನೆಯಿಂದ ಬಲಶಾಲಿಗಳಾಗಿ" ಇದು ನಾರಾಯಣ ಗುರುಗಳ ಶೈಕ್ಷಣಿಕ ಸಂದೇಶ.
  - ಆಧುನಿಕ ಶಿಕ್ಷಣವನ್ನು ಗಳಿಸುವುದರ ಮೂಲಕ ಕೆಳಸ್ತರದವರು ಆಧುನೀಕರಣಗೊಳ್ಳಬೇಕೆಂದು ಪ್ರತಿಪಾದಿಸಿದರು. ಈ ವರ್ಗದವರ ಶೈಕ್ಷಣಿಕ ಪ್ರಗತಿಗಾಗಿ ಶೈಕ್ಷಣಿಕ ನಿಧಿ (Education Fund) ಸ್ಥಾಪಿಸಿದರು.
  - "ವಿದ್ಯೆಯಿಂದ ಸ್ವತಂತ್ರರಾಗಿ, ದೇವಸ್ಥಾನಗಳನ್ನು ಕಟ್ಟುವುದನ್ನು ಇನ್ನು ಸಾಕು ಮಾಡಿರಿ. ಬದಲಾಗಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿರಿ" ಎಂದು ಕರೆ ನೀಡಿದರು.
- ಪೆರಿಯಾರ್‌ರವರ ಪಾತ್ರ – ಪೆರಿಯಾರ್‌ರವರ ಆತ್ಮಗೌರವ ಚಳುವಳಿಯ ತಳಹದಿಗಳೇ ತಮಿಳು–ಸಂಸ್ಕೃತಿ ಮತ್ತು ತಮಿಳು ಶಿಕ್ಷಣ" ಅಂದರೆ ಪಾಶ್ಚಿಮಾತ್ಯ ಶಿಕ್ಷಣದ ಮೂಲಕ ಅದನ್ನು ಜನಪ್ರಿಯಗೊಳಿಸುವುದು. ಇದಕ್ಕಾಗಿ ಕೆಳಜನತೆಯು ಶೈಕ್ಷಣಿಕವಾಗಿ ಪ್ರಗತಿಯಾಗಬೇಕು ಎಂಬ ನಿಲುವನ್ನು ಹೊಂದಿದ್ದರು.
- ಅಂಬೇಡ್ಕರ್‌ರವರ ಪಾತ್ರ – ಬಾಂಬೆ & ಪೂನಾದಲ್ಲಿ ಅಧ್ಯಯನ ಕೇಂದ್ರಗಳ ಸ್ಥಾಪನೆ. 1927ರ ಮಹದ್ ಸಮಾವೇಶದಲ್ಲಿ ಅಸ್ಪೃಶ್ಯರಿಗೆ ಶುದ್ಧೀಕರಣ & ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದರು.
  - ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂದು ಕರೆ ನೀಡಿದರು.

ಒಟ್ಟಾರೆಯಾಗಿ, ಧರ್ಮ ಮತ್ತು ಶಿಕ್ಷಣದಲ್ಲಿ ಆದ ಮೂಲಭೂತ ಬದಲಾವಣೆಯೇ ಮುಂದೆ ಸ್ವಾತಂತ್ರ್ಯ ಚಳುವಳಿ ಬೆಳೆಯಲು ಸಹಾಯಕವಾದವು.

## VII. ಹಿಂದುತ್ವ ಮತ್ತು ದೇಶಭಕ್ತಿ

- ಹಿಂದೂ ಧರ್ಮ ಆಧಾರಿತ ಸಂಸ್ಕೃತಿ ಮತ್ತು ಮನೋಭಾವನೆಯನ್ನು ಹಿಂದುತ್ವ & ದೇಶಭಕ್ತಿಯನ್ನು ಕಾಣುತ್ತೇವೆ. ಇದನ್ನು ಮೂಡಿಸಿದವರು ವಿ.ಡಿ. ಸಾವರ್ಕರ್,
- ಸಾವರ್ಕರ್‌ರವರು ಹಿಂದುತ್ವ–ಹಿಂದೂ ಯಾರು? ಎಂಬ ಕೃತಿಯನ್ನು ರಚಿಸಿ, ಅದರಲ್ಲಿ ಹಿಂದೂ–ರಾಷ್ಟ್ರ ರಚನೆ ಮತ್ತು ಅಖಂಡ ಭಾರತ ಎಂಬ ಪರಿಕಲ್ಪನೆಗಳನ್ನು ಭಾರತೀಯರಿಗೆ ಪರಿಚಯಿಸಿದರು.
- ಹಿಂದೂಯಿಸಂ ಎನ್ನುವುದು ಧಾರ್ಮಿಕ ಪದ್ಧತಿ. ಹಿಂದುತ್ವ ಎನ್ನುವುದು ರಾಜಕೀಯ ಸಿದ್ಧಾಂತವೆಂದು ವಿಭಾಗಿಸುತ್ತಾರೆ. ಇದರ ಮೂಲಕ ಭೌಗೋಳಿಕ ಪಾವಿತ್ರತೆಯ ಸಿದ್ಧಾಂತವನ್ನು ಮಂಡಿಸುವರು.
- ಗಾಂಧೀಜಿಯವರು 'ಹಿಂದೂ ಧರ್ಮವೆಂದರೆ ಸತ್ಯ, ಅಹಿಂಸೆ, ಏಕತೆ, ದೇವರ ಅಸ್ತಿತ್ವ, ಪ್ರತಿಸತ್ಯ' ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ಸಾವರ್ಕರು "ಭಾರತವನ್ನು ಜನನಿ, ಜನ್ಮಭೂಮಿ & ಪುಣ್ಯಭೂಮಿ" ಎಂಬ ಪರಿಕಲ್ಪನೆಗಳನ್ನು ಬಳಸುತ್ತಾರೆ.
- ಸಾವರ್ಕರ್‌ರವರ ಇನ್ನೊಂದು ಕೃತಿ – "ಹಿಂದು ಪದ್ ಪದಶಾಯಿ" – ಇದರಲ್ಲಿ ಹಿಂದೂ ರಾಷ್ಟ್ರೀಯತೆ ಮತ್ತು ಭಾರತದ ರಾಷ್ಟ್ರೀಯತೆಗಳನ್ನು ಬೇರೆ ಬೇರೆಯಾಗಿ ವ್ಯಾಖ್ಯಾನಿಸುತ್ತದೆ.
- ಸಾವರ್ಕರ್‌ರವರು ಹಿಂದುತ್ವದ ಭವ್ಯತೆಯನ್ನು ತೋರಿಸಲು ಮರಾಠರ ಇತಿಹಾಸದ ಹಿಂದೂ–ಪದ್ ಪದಶಾಯಿಯನ್ನು ಹಿಂದೂ ಭವ್ಯತೆಯನ್ನು ತೋರಿಸಲು ಬಳಸಿಕೊಂಡಿದ್ದಾರೆ.

## VIII. ದ್ರಾವಿಡ ಚಳುವಳಿ

- ಭಾರತದ ದಕ್ಷಿಣ ಭಾಗವನ್ನು ದ್ರಾವಿಡ ಪ್ರದೇಶ ಎನ್ನಲಾಗಿದೆ. ಅಂದರೆ ತಮಿಳುನಾಡು, ಕೇರಳ, ಕರ್ನಾಟಕ & ಆಂಧ್ರಪ್ರದೇಶ ಮುಂತಾದ ಪ್ರದೇಶಗಳನ್ನು ನೋಡಬಹುದು.
- ಬ್ರಿಟೀಷರ ಏಕಮಾದರಿಯ ಆಡಳಿತ ಪದ್ಧತಿ, ಅವರ ನಾಗರಿಕತೆ & ಶಿಕ್ಷಣ, ಸಮಾಜದ ಕೆಳ ಸಮುದಾಯದವರ ಮೇಲೂ ಬೀರಿ ಸಾಮಾಜಿಕ ಸಮಾನತೆ ಮತ್ತು ನ್ಯಾಯ ಪ್ರಾರಂಭವಾದವು. ಅದರಲ್ಲಿ ದ್ರಾವಿಡ ಚಳುವಳಿಯು ಒಂದು.
- ಈ ಚಳುವಳಿ ರೂಪುಗೊಳಿಸುವಲ್ಲಿ ಪ್ರಮುಖರು – ಡಾ॥ ಸಿ. ನಟೇಶ ಮೊದಲಿಯಾರ್, ತ್ಯಾಗರಾಜ ಚೆಟ್ಟಿ, ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯ್ಕರ್.

**ಚಳುವಳಿಯ ವೈಶಿಷ್ಟ್ಯ**

- ➢ ಬ್ರಾಹ್ಮಣೇತರ ವರ್ಗದ ಸಾಮಾಜಿಕ, ಶೈಕ್ಷಣಿಕ ಹಿನ್ನೆಡೆಗೆ ಕಾರಣಗಳನ್ನು ಗುರುತಿಸಿ. ಅವರಿಗೆ ಒಂದು ರಾಜಕೀಯ ವೇದಿಕೆ ನಿರ್ಮಿಸಿತು.
- ➢ ಮಾನವ ಹಕ್ಕುಗಳ ಶ್ರೇಷ್ಠತೆಯನ್ನು ಪ್ರತಿಪಾದಿಸಿತು.
- ➢ ಆತ್ಮಾಭಿಮಾನ ಚಳುವಳಿಯ ಮೂಲಕ ರಾಷ್ಟ್ರೀಯ ಚಳುವಳಿಗೆ ಮುಖಾಮುಖಿಯಾಗಿ ಚಿಂತನೆಯನ್ನು ಕಟ್ಟಿ ಬೆಳೆಸಿತ್ತು.
- ➢ ಇದು ಜನಪರ ಚಳುವಳಿಯಾಗಿದ್ದು, ಬೌದ್ಧಿಕ ಕಸರತ್ತುಗಳಾದ ಸಂವಾದ, ಉಪನ್ಯಾಸ, ಪ್ರದರ್ಶನ ಭಾಷಣಗಳಲ್ಲಿ ಅಡಕವಾಗಿತ್ತು.
- ➢ ಇದು ಮೇಲ್ವರ್ಗದವರ ಚಳುವಳಿಯಾಗಿ ಸೀಮಿತಗೊಳ್ಳಲಿಲ್ಲ.

**ಹಿಂದಿ–ಭಾಷಾ ವಿರೋಧಿ ಚಳುವಳಿಯಾಗಿ – 1937**

- ➢ "ದ್ರಾವಿಡ ನಾಡು" ಚಳುವಳಿಯ ಆರಂಭ – ಹಿಂದಿ ಭಾಷೆಯ ವಿರೋಧಿ ಚಳುವಳಿಯಲ್ಲಿ ಬ್ರಾಹ್ಮಣೇತರ ಒಗ್ಗಟ್ಟಿನಿಂದ ಪ್ರೇರಿತರಾದ ಪೆರಿಯಾರ್ ಪ್ರತ್ಯೇಕ ದ್ರಾವಿಡ ರಾಜ್ಯದ ಸ್ಥಾಪನೆಗೆ ಪೆರಿಯಾರ್ ಪ್ರತ್ಯೇಕ ದ್ರಾವಿಡ ರಾಜ್ಯದ ಸ್ಥಾಪನೆಗೆ ಕರೆ ನೀಡಿದ್ದರು.
- ➢ ದ್ರಾವಿಡ ಕಜಗಂ ಪಕ್ಷ 1944 ರಲ್ಲಿ ಸ್ಥಾಪಿತಗೊಂಡಿತು.

**IX. ದಲಿತರ ವಿಮೋಚನೆಗಾಗಿ ಹೋರಾಟ & ಅವರ ಸಬಲೀಕರಣ**

ದಲಿತರ ವಿಮೋಚನೆ ಎಂದರೆ ದಲಿತರಿಗೆ ಸಾಮಾಜಿಕ ನ್ಯಾಯ, ಸಾಮಾಜಿಕ ಸಮಾನತೆ, ಸಾಮಾಜಿಕ ಸವಲತ್ತುಗಳನ್ನು ನೀಡುವುದು. ಈ ದಲಿತರ ವಿಮೋಚನೆ ಮತ್ತು ಸಬಲೀಕರಣಕ್ಕಾಗಿ ಹೋರಾಡಿದ ಪ್ರಮುಖರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್‌ರ ಪಾತ್ರ ಮಹತ್ವದ್ದು.

**ಅಂಬೇಡ್ಕರ್‌ರ ಪಾತ್ರ**

1) ಬಹಿಷ್ಕೃತ ಹಿತಕರಣ ಸಭಾ – 1924 ರಲ್ಲಿ ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಸ್ಥಾಪನೆ.

2) 1027 ರ ಬಾಂಬೆ ಶಾಸನ – ಈ ಶಾಸನದನ್ವಯ ಸಾರ್ವಜನಿಕ ಸ್ಥಳಗಳಲ್ಲಿ ದೇವಸ್ಥಾನ, ಕೆರೆ, ಬಾವಿ ಮತ್ತು ಶಾಲೆಗಳಲ್ಲಿ ಅಸ್ಪೃಶ್ಯರನ್ನು ಬಹಿಷ್ಕರಿಸುವಂತಿರಲಿಲ್ಲ.

3) 1927ರ ಮಹದ್ ಸಮ್ಮೇಳನ – ಇಲ್ಲಿ ಅಂಬೇಡ್ಕರ್‌ರು "ನಾವೀಗ ಮೇಲು–ಕೀಳು ಎಂಬುದನ್ನು ನಮ್ಮ ಮನಸ್ಸುಗಳಿಂದ ಕಿತ್ತು ಹಾಕಬೇಕಾಗಿದೆ. ಸ್ವಾವಲಂಬನೆಯನ್ನು ಕಲಿತು ಆತ್ಮಗೌರವವನ್ನು ಗಳಿಸಿಕೊಂಡಲ್ಲಿ ನಮ್ಮ ಉದ್ಧಾರ ಸಾಧ್ಯ" ಎಂದು ಕರೆ ನೀಡಿದರು.

4) ಚೌದಾರ್ ಕೆರೆಯ ನೀರಿಗಾಗಿ ಹೋರಾಟ – ಈ ಸಂದರ್ಭದಲ್ಲಿಯೇ ಬಹಿಷ್ಕೃತ ಭಾರತ ಎಂಬ ಪತ್ರಿಕೆಯನ್ನು (1927) ಪ್ರಾರಂಭಿಸಿದರು.

5) ಕಲಾರಾನ ದೇವಸ್ಥಾನದ ಪ್ರವೇಶಕ್ಕಾಗಿ ಹೋರಾಟ – 1930.

6) ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು.

7) ಪೂನಾ ಒಪ್ಪಂದ 1932 – ಈ ಮೂಲಕ ದಲಿತರಿಗೆ ರಾಜಕೀಯ ಹಕ್ಕುಗಳು ದೊರಕಿದವು.

8) ದಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ 1936 – ಭೂ–ಹಿಡುವಳಿಗಳಿಗೆ ಸಂಬಂಧಿಸಿದ್ದ ಖೋಟಿ ಪದ್ಧತಿಯನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು.

9) ಪೀಪಲ್ಸ್ ಎಜುಕೇಷನ್ ಸೊಸೈಟಿ(1945) – ಆಧುನಿಕ ಶಿಕ್ಷಣ ನೀಡುವುದರ ಮೂಲಕ ತುಳಿತಕ್ಕೆ ಒಳಗಾದವರಿಗೆ ಶಿಕ್ಷಣ, ಹಕ್ಕುಗಳು ಇನ್ನೂ ಮುಂತಾದವುಗಳ ಮನೋಭಾವನೆಯನ್ನು ಮೂಡಿಸಿದರು.

10) ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ – ವಿಧಿ 17ರ ಮೂಲಕ ಅಸ್ಪೃಶ್ಯತೆಯನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದದ್ದು.

**ದಲಿತರ ಸಬಲೀಕರಣದ ಅಂಶಗಳು**

1) ಸಾಮಾಜಿಕ ಜಾಗೃತಿಯನ್ನು ಮೂಡಿಸುವುದು = ಮೂಕನಾಯಕ & ಬಹಿಷ್ಕೃತ ಹಿತಕರಣಿ ಸಭಾದ ಮೂಲಕ ಅಂಬೇಡ್ಕರ್ ಸಾಮಾಜಿಕ ಜಾಗೃತಿ ಮೂಡಿಸಿದರು.

2) ಆರ್ಥಿಕವಾಗಿ ಉಳಿತಾಯದ ಮನೋಭಾವನೆಯನ್ನು ಉತ್ತೇಜಿಸುವುದು.

3) ಸರ್ಕಾರದ ವಿವಿಧ ಯೋಜನೆಗಳನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅರಿವು ಮೂಡಿಸುವುದು.

4) ಆಧುನಿಕ ತಂತ್ರಜ್ಞಾನದ ಬಗ್ಗೆ ಅವರಲ್ಲಿ ಅರಿವನ್ನು ಮೂಡಿಸುವುದು.

5) ದಲಿತರಲ್ಲಿ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಿಳಿಸುವುದು.

**X. ಸಮಾಜವಾದಿ ಪ್ರಸ್ತಾವನೆ & ಸಂಪೂರ್ಣ ಕ್ರಾಂತಿ**

- ಸಮಾಜವಾದ ಎಂಬುದು ಇಂಗ್ಲೆಂಡಿನಲ್ಲಿ 16ನೇ ಶತಮಾನದಲ್ಲಿ ಬೆಳವಣಿಗೆಯಾಯಿತು.

ವ್ಯಾಖ್ಯೆ : ವ್ಯಕ್ತಿಯ ಇಚ್ಛೆಯನ್ನು ಸಮಾಜದ ಇಚ್ಛೆಗಾಗಿ ಒಪ್ಪಿಸುವುದೇ ಸಮಾಜವಾದ" – ಜಯಪ್ರಕಾಶ ನಾರಾಯಣ.

**ಸಮಾಜವಾದದ ತತ್ವಗಳು**

- ವ್ಯಕ್ತಿವಾದಕ್ಕೆ ವಿರೋಧ
- ಬಂಡವಾಳಶಾಯಿ ಪದ್ಧತಿಗೆ ವಿರೋಧ
- ಪೈಪೋಟಿಗೆ ಬದಲಾಗಿ ಸಹಕಾರ
- ಸಮಾನತೆಯ ತತ್ವ
- ಉತ್ಪಾದನಾ ಅಂಗಗಳ ಮೇಲೆ ರಾಜ್ಯದ ಹತೋಟಿ
- ವ್ಯಕ್ತಿಗೆ ಸ್ವಾತಂತ್ರ್ಯ
- ಶಾಂತಿಯುತ ಬದಲಾವಣೆ
- ಖಾಸಗಿ ಆಸ್ತಿ ರದ್ದು
- ಆರ್ಥಿಕ ಯೋಜನಾ ವ್ಯವಸ್ಥೆ

**ಇದರಲ್ಲಿರುವ ಪ್ರಕಾರಗಳು**

- ಕಾಲ್ಪನಿಕ ಸಮಾಜವಾದ
- ಫಬಿಯನ್ ಸಮಾಜವಾದ
- ಗಿಲ್ಡ್ ಸಮಾಜವಾದ
- ಪ್ರಜಾಸತ್ತಾತ್ಮಕ ಸಮಾಜವಾದ
- ವೈಜ್ಞಾನಿಕ ಸಮಾಜವಾದ

- 1936 ರ ಕಾಂಗ್ರೆಸ್ ಅಧಿವೇಶನದಲ್ಲಿ ಸಮಾಜವಾದಿ ಕಾಂಗ್ರೆಸ್‌ನ ಗುರಿ ಎಂದು ಘೋಷಿಸಲಾಯಿತು.
- ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಸಮಾಜವಾದ ಎನ್ನುವುದನ್ನು 42ನೇ ತಿದ್ದುಪಡಿ ಮೂಲಕ 1976 ರಲ್ಲಿ ಸೇರಿಸಲಾಯಿತು.

**ಸಂಪೂರ್ಣ ಕ್ರಾಂತಿ**

- ಜಯಪ್ರಕಾಶ್ ನಾರಾಯಣ – ಆಧುನಿಕ ಭಾರತದಲ್ಲಿ ಸಂಪೂರ್ಣ ಕ್ರಾಂತಿಗೆ ಕರೆ ನೀಡಿದರು. (Total Revolution)
- 1974 ರಲ್ಲಿ ಬಿಹಾರದಲ್ಲಿ ಈ ಸಂಪೂರ್ಣ ಕ್ರಾಂತಿ ಚಳುವಳಿ ಪ್ರಾರಂಭವಾಯಿತು.

**ಗುರಿ**

- ಸಾಮಾಜಿಕ, ರಾಜಕೀಯ, ಆರ್ಥಿಕ, ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಮಾನವೀಯತೆಯ ಆಧಾರದ ಮೇಲೆ ನಿಲ್ಲಿಸಲು ಮತ್ತು ಸಮಾಜದ ಎಲ್ಲಾ ಸ್ತರಗಳಲ್ಲೂ ಮೂಲಭೂತ ಬದಲಾವಣೆಗಳನ್ನು ತರುವುದು.

**ಸಂಪೂರ್ಣ ಕ್ರಾಂತಿಯ ಮೂಲ ಚಿಂತನೆಗಳು**

1) ವ್ಯಕ್ತಿಯ ಮೂಲಭೂತ ಅವಶ್ಯಕತೆಗಳನ್ನು ಮೊದಲು ಪೂರೈಸಬೇಕು. ಮುಖ್ಯವಾಗಿ ಆಹಾರ, ಬಟ್ಟೆ ಮತ್ತು ವಸತಿ.
2) ನಮ್ಮ ಬೇಡಿಕೆಗಳಿಗೆ ಸ್ವಯಂ ನಿಯಂತ್ರಣ ಅಗತ್ಯ.
3) ನಗರಗಳು ಮತ್ತು ಹಳ್ಳಿಗಳು ತೀವ್ರಗತಿಯಾಗಿ ಬೆಳೆಯಬಾರದು.
4) ಗೃಹ ಮತ್ತು ಮಾಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಸಾಕಷ್ಟು ಸ್ಥಾಪನೆ ಮಾಡಿ, ಪ್ರತಿಯೊಂದು ಕುಟುಂಬಕ್ಕೆ ಉದ್ಯೋಗವನ್ನು ನೀಡುವುದು.
5) ಕಾರ್ಖಾನೆಗಳು ಮತ್ತು ಇಲ್ಲಿ ದುಡಿಯುವ ಕಾರ್ಮಿಕರು ಧರ್ಮದರ್ಶಿಯಾಗಿ ಸಮಾಜಕ್ಕೆ ಸೇವೆಯನ್ನು ಸಲ್ಲಿಸಬೇಕು.
6) ಕಾರ್ಮಿಕರಿಗೆ ಸಮರ್ಪಕವಾದ ವೇತನ ಅಂತರ ಕನಿಷ್ಠ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುವುದು.
7) ಸಮಾಜದ ಮೂಲಭೂತ ಸ್ವಾತಂತ್ರ್ಯ, ವಿಕೇಂದ್ರೀಕರಣ, ಸಾಮೂಹಿಕ ಸಹಕಾರಗಳನ್ನು ಉತ್ತೇಜಿಸುವುದು.

## XI. ಗ್ರಾಮ ಸ್ವರಾಜ್, ಸತ್ಯಾಗ್ರಹ & ಭೂ–ದಾನ ಚಳುವಳಿ

**ಗ್ರಾಮ ಸ್ವರಾಜ್**

- ಗಾಂಧೀಜಿಯವರ ಪ್ರಕಾರ **"ಭಾರತದ ಪ್ರಗತಿಯು ಭಾರತದ ಹಳ್ಳಿಗಳ ಏಳಿಗೆಯಲ್ಲಿದೆ"** ಎಂಬುದಕ್ಕೆ ಅವರ ಗ್ರಾಮ ಸ್ವರಾಜ್ ಉತ್ತಮ ಉದಾಹರಣೆಯಾಗಿದೆ.
- ಗ್ರಾಮಗಳು ಸ್ವಾವಲಂಬಿಯಾಗಬೇಕಾದರೆ ಸ್ವ–ಸರ್ಕಾರವನ್ನು ಅಳವಡಿಸಿಕೊಳ್ಳಬೇಕು ಎನ್ನುವುದು ಅವರ ನಿಲುವು.
- **'ನನ್ನ ಆದರ್ಶ ಗ್ರಾಮ'** ಕೃತಿಯಲ್ಲಿ ಗ್ರಾಮ ಸ್ವ ರಾಜ್ಯ ಪರಿಕಲ್ಪನೆಯನ್ನು ವಿವರಿಸಲಾಗಿದೆ.

**ಗ್ರಾಮಸ್ವರಾಜ್‌ದ ಅಂಶಗಳು**

1) ಗ್ರಾಮ ಸರ್ಕಾರ ಸ್ಥಳೀಯ ಜನತೆಯಿಂದ ಆಯ್ಕೆಯಾಗಬೇಕು.
2) ಗ್ರಾಮ ಪಂಚಾಯಿತಿಯನ್ನು ಗ್ರಾಮ ತಹಸಿಲ್ ಸಮಿತಿಯಿಂದ ಶಿಫಾರಸ್ಸು.
3) ಯಾರಿಗೂ ಬಹಿಷ್ಕಾರ ಹೇರಬಾರದು.
4) ಗ್ರಾಮಪಂಚಾಯಿತಿಯು ತನ್ನ ಮಿತಿಯ ಒಳಗೆ, ಪಕ್ಷ ಭೇದ ಮರೆತು ಕಾರ್ಯ ನಿರ್ವಹಿಸಬೇಕು.

- ಗಾಂಧೀಜಿಯವರು ಹೇಳುವಂತೆ ಪಂಚಾಯತ್ ರಾಜ್ ಅಥವಾ ಗ್ರಾಮ ಸ್ವರಾಜ್ ಪ್ರಜಾಪ್ರಭುತ್ವದ ಪ್ರತಿನಿಧಿಯಾಗಿದೆ. ಜನಸಾಮಾನ್ಯರು ಅಧಿಕಾರವನ್ನು ಹೊಂದುವುದಕ್ಕೆ ಸಾಧ್ಯವಾಗುತ್ತದೆ**"** ಎಂದಿದ್ದಾರೆ.

**ಗ್ರಾಮ ವಿಧಾಯಕ ಕಾರ್ಯಕ್ರಮಗಳು**

1) ಕೋಮು ಸೌಹಾರ್ದತೆಯನ್ನು ಕಾಪಾಡಬೇಕು
2) ಅಸ್ಪೃಶ್ಯತಾ ನಿವಾರಣೆ
3) ಪಾನ ಪ್ರತಿಬಂಧ
4) ಖಾದಿಗೆ ಆದ್ಯತೆ
5) ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ
6) ಹಳ್ಳಿಗಳ ನೈರ್ಮಲ್ಯಕ್ಕೆ ಆದ್ಯತೆ
7) ಮೂಲ ಶಿಕ್ಷಣಕ್ಕೆ / ಹೊಸ ಶಿಕ್ಷಣಕ್ಕೆ ಕ್ರಮ
8) ಗ್ರಾಮಾಡಳಿತದ ಕಲ್ಪನೆ.

**ಸತ್ಯಾಗ್ರಹ**

- ಸತ್ಯಾಗ್ರಹವೆಂದರೆ ಸತ್ಯಕ್ಕಾಗಿ ಆಗ್ರಹಿಸುವುದು. ಸತ್ಯಕ್ಕೆ ಅಂಟಿಕೊಂಡಿರುವುದು ಅಥವಾ ಸತ್ಯವನ್ನು ಹಿಂಬಾಲಿಸುವುದು.
- ಸತ್ಯಾಗ್ರಹಿಯು ತನ್ನ ಶಕ್ತಿಯ ಬಲದಿಂದ ತನ್ನ ವೈರಿಯ ಹೃದಯ ಪರಿವರ್ತನೆ ಮಾಡಲು ಪ್ರಯತ್ನ ಪಡುತ್ತಾನೆ.

**ಸತ್ಯಾಗ್ರಹದ ತಂತ್ರಗಳು**

- ಅಸಹಕಾರ
- ಉಪವಾಸ
- ಮುಷ್ಕರ
- ಹಿಜರತ್
- ಸವಿನಯ ಕಾನೂನು ಭಂಗ

1) ಅಸಹಕಾರ – ಪ್ರಜೆಗಳ ಸಹಕಾರವಿಲ್ಲದೆ ಸರ್ಕಾರ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಜನರು ಬಲತ್ಕಾರ, ಶೋಷಣೆ ಮುಂತಾದ ಅನ್ಯಾಯಗಳನ್ನು ಅಸಹಕಾರದ ಮೂಲಕ ಧೈರ್ಯವಾಗಿ ಸತ್ಯಾಗ್ರಹದ ಮೂಲಕ ಎದುರಿಸಬೇಕು.

ವಿಧಗಳು –

- ಹರತಾಳ – ತಾನು ಮಾಡುವ ಕಾರ್ಯ ನಿಲ್ಲಿಸುವುದು / ಮುಷ್ಕರ
- ಸಾಮಾಜಿಕ ಬಹಿಷ್ಕಾರ
- ತಡೆಗಾವಲು

2) ಉಪವಾಸ – ಅನ್ಯಾಯದ ವಿರುದ್ಧ ಹೋರಾಟದಲ್ಲಿ ಅನ್ಯಾಯ ಎಸಗುತ್ತಿರುವವರ ಮನಸ್ಸನ್ನು ಪರಿವರ್ತಿಸಲು ಈ ಅಸ್ತ್ರವನ್ನು ಬಳಸಬಹುದು.

3) ಮುಷ್ಕರ – ಬಂಡವಾಳಗಾರರ ಅನ್ಯಾಯವನ್ನು ತಡೆಗಟ್ಟಲು ಕಾರ್ಮಿಕರು ಇದನ್ನು ಬಳಸಬಹುದು.

4) ಹಿಜರತ್ – ತಾವು ವಾಸಿಸುವ ಸ್ಥಳವನ್ನು ಸ್ವ–ಪ್ರೇರಿತವಾಗಿ ತ್ಯಜಿಸುವುದು. ಅನ್ಯಾಯದ ವಿರುದ್ಧ ಅಹಿಂಸಾತ್ಮಕವಾಗಿ ಪ್ರತಿಭಟಿಸುವುದು ಅಸಾಧ್ಯವೆಂದಾಗ ಆ ಸ್ಥಳವನ್ನು ಬಿಟ್ಟು ಜನರು ಬೇರೆಡೆಗೆ ವಲಸೆ ಹೋಗುವುದು.

5) ಸವಿನಯ ಕಾನೂನು ಭಂಗ – ಸರ್ಕಾರ ಅನ್ಯಾಯ ಮಾಡಿದೆ, ಜನರಿಗೆ ದ್ರೋಹ ಬಗೆಯುತ್ತಿದೆ. ಎಂದು ಕಂಡು ಬಂದಾಗ ಸರ್ಕಾರದ ಕಾಯಿದೆಗಳನ್ನು ಗೌರವಿಸದೇ ಮತ್ತು ಪಾಲಿಸದೇ ಇರುವುದು ಅದರ ವಿರುದ್ಧವಾಗಿ ನಡೆದುಕೊಳ್ಳುವುದು.

**ಭೂ–ದಾನ ಚಳುವಳಿ (1951–60)**

- ಇದು ಸ್ವಾತಂತ್ರ್ಯ ನಂತರದಲ್ಲಿ ನಡೆದ ಭೂ – ಸುಧಾರಣಾ ಚಳುವಳಿ.
- ಗಾಂಧೀ ತತ್ವದ ಆಧಾರದ ಮೇಲೆ ನಡೆದು ದೇಶವ್ಯಾಪಿ ಪ್ರಭಾವ ಬೀರಿತು.
- ಇದರ ಮೂಲಕ ಭೂ–ಹೀನರಿಗೆ ಭೂಮಿಯನ್ನು ವಿತರಿಸುವ ಚಳುವಳಿಯಾಗಿ ಮಾರ್ಪಟ್ಟಿತು.
- ಆಚಾರ್ಯ ವಿನೋಬಾ ಭಾವೆಯವರಿಂದ ಗಾಂಧೀವಾದದ ಧರ್ಮದರ್ಶಿತ್ವ ತತ್ವದ ಮೇಲೆ ಪ್ರಾರಂಭಿಸಲಾಯಿತು.
- 1951 ರ ಏಪ್ರಿಲ್ 18 ರಂದು ಆಂಧ್ರಪ್ರದೇಶದ ಪೊಚಂಪಲ್ಲಿಯಲ್ಲಿ ಅಹಿಂಸಾತ್ಮಕ ಸಾಮಾಜಿಕ ಬದಲಾವಣೆ ಚಳುವಳಿಯಾಗಿದೆ.

**ಉದ್ದೇಶ**

- ಇದು ಪಾದಯಾತ್ರೆಯಿಂದ ಗ್ರಾಮದಿಂದ ಗ್ರಾಮಗಳಿಗೆ ತೆರಳಿ ಭೂ–ಮಾಲೀಕರ ಮನಸ್ಸನ್ನು ಬದಲಾಯಿಸಿ ಅವರಲ್ಲಿರುವ ಭೂಮಿಯಲ್ಲಿ ಕನಿಷ್ಠ ಪಕ್ಷ 1/6 ಭಾಗದಷ್ಟು ಭೂಮಿಯನ್ನು ದಾನವಾಗಿ ಪಡೆದು ಭೂ–ಹೀನರಿಗೆ ಅದರಲ್ಲೂ ಭೂ–ಹೀನ ಅಸ್ಪೃಶ್ಯರಿಗೆ ಹಂಚಬೇಕು ಎನ್ನುವುದು ಇದರ ಉದ್ದೇಶವಾಗಿತ್ತು.
- 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' – ತತ್ವ.
- ಮಾರ್ಚ್ 1956 ರ ವೇಳೆಗೆ ಸುಮಾರು 4 ಮಿಲಿಯನ್ ಎಕರೆಯಷ್ಟು ಜಮೀನನ್ನು ಭೂ–ಹೀನರಿಗೆ ಹಂಚಿ ಯಾವ ಸರ್ಕಾರವೂ ಮಾಡದ ರೀತಿಯಲ್ಲಿ ಜನರ ಮನಸ್ಸನ್ನು ಪರಿವರ್ತಿಸಿ ಗಾಂಧಿ ತತ್ವಗಳಿಗೆ ಮೌಲ್ಯ ನೀಡಿದರು.
- 1955 ರ ವೇಳೆಗೆ ಈ ಚಳುವಳಿ ಗ್ರಾಮದಾನ ಚಳುವಳಿಯಾಗಿ ಮಾರ್ಪಟ್ಟಿತು.
- ಇಲ್ಲಿ ಇಡೀ ಗ್ರಾಮವನ್ನೇ ದಾನವಾಗಿ ಪಡೆದು ಅದನ್ನು ಸಾಮೂಹಿಕ ಒಡೆತನಕ್ಕೆ ಒಪ್ಪಿಸಿ ಅಲ್ಲಿರುವ ಭೂಮಿಗೆ ಸಮಾನ ಪಾಲುದಾರರನ್ನಾಗಿಸುವುದು ಇದರ ಉದ್ದೇಶ.
- 1960 ರ ವೇಳೆಗೆ ಸುಮಾರು 4500 ಗ್ರಾಮದಾನಗಳನ್ನು ಮಾಡಲಾಯಿತು.

  ಓರಿಸ್ಸಾ – 1946 ಗ್ರಾಮದಾನಗಳು,

  ಆಂಧ್ರಪ್ರದೇಶ – 483 ಗ್ರಾಮದಾನಗಳು

  ಮಹಾರಾಷ್ಟ್ರ – 603 ಗ್ರಾಮದಾನಗಳು

  ತಮಿಳುನಾಡು – 250 ಗ್ರಾಮದಾನಗಳು
- ಈ ಚಳುವಳಿಯು ಭಾರತದ ಈಶಾನ್ಯ ರಾಜ್ಯಗಳಲ್ಲಿ ಅಲ್ಲಿಯ ಬುಡಕಟ್ಟು ರಾಜ್ಯದಲ್ಲಿ ಹೆಚ್ಚಿನ ಯಶಸ್ಸನ್ನು ಪಡೆಯಿತು.
- ಇಡೀ ಚಳುವಳಿಯಿಂದ ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ನೈತಿಕ ಪರಿಸರವನ್ನು ಸೃಷ್ಟಿಸಿ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ತತ್ವಕ್ಕೆ ಮನ್ನಣೆ ನೀಡಿತು.

# UNIT – 3

## ಕದಂಬರಿಂದ ಹೊಯ್ಸಳರವರೆಗೆ

### 1) ಕರ್ನಾಟಕ ಪ್ರಾಚೀನತೆ

ಪ್ರಾಚೀನ ಕಾಲದಲ್ಲಿ ಕರ್ನಾಟಕದ ಭೌಗೋಳಿಕ ವಿಸ್ತಾರ ದಕ್ಷಿಣದಲ್ಲಿ ಕಾವೇರಿಯಿಂದ ಉತ್ತರದಲ್ಲಿ ಗೋದಾವರಿಯವರೆಗೆ ಇತ್ತು ಎಂದು ಕ್ರಿ.ಶ.9ನೇ ಶತಮಾನದಲ್ಲಿ ರಚಿತವಾದ ಕೃತಿ "ಕವಿರಾಜ ಮಾರ್ಗ"ದಿಂದ ತಿಳಿದು ಬರುತ್ತದೆ.

ಪ್ರಾಚೀನ ಕಾಲದಿಂದಲ್ಲೂ ಕನ್ನಡ ನಾಡಿಗೆ "ಕರ್ನಾಟಕ" ಎಂಬ ಹೆಸರು ಬಳಕೆಯಲ್ಲಿತ್ತು ಎಂಬುದಕ್ಕೆ ಅನೇಕ ಸ್ಪಷ್ಟ ಉಲ್ಲೇಖ ನಮಗೆ ಮಹಾಭಾರತದ ಸಭಾಪರ್ವ, ಭೀಷ ಪರ್ವದಲ್ಲಿ ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಕನಾಟಕವನ್ನು "ಮಹಿಷ ಮಂಡಲ' ಮತ್ತು "ಕುಂತಲ" ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಪಾಣಿನಿ ತನ್ನ ಕೃತಿ "ಅಷ್ಟಾಧ್ಯಾಯಿ" ಕೃತಿಯಲ್ಲಿ "ಕರ್ನಾಟಕ" ಪದದ ಉಲ್ಲೇಖ ಮಾಡಿದ್ದಾನೆ ಹಾಗೆ ಶೂದ್ರಕ ತನ್ನ "ಮೃಚ್ಛಕಟಿತ"ದಲ್ಲಿ ಕರ್ನಾಟಕವನ್ನು "ಕರ್ನಾಟ ದೇಶ" ಎಂದು ಕರೆದಿದ್ದಾನೆ. ಹೀಗೆ ಅನೇಕ ಪ್ರಾಚೀನ ಕಾಲದ ಸಾಹಿತಿಕ ಕೃತಿಯಲ್ಲಿ ಕರುನಾಡನ್ನು ಕರ್ನಾಟಕ ಎಂಬ ಹೆಸರಿನಿಂದ ಕರೆದ ಬಗ್ಗೆ ಉಲ್ಲೇಖವಿದೆ.

ಅದೇ ರೀತಿ ಕೆಲವು ಶಾಸನಗಳು ಸಾಹಿತ್ಯ ಕೃತಿಗಳು ಮತ್ತು ನಾಣ್ಯಗಳು ಕನ್ನಡ ಭಾಷೆಯ ಪ್ರಾಚೀನತೆಯನ್ನು ತಿಳಿಸಿದವು ಅದರಲ್ಲಿ ಕೆಲವು ಪ್ರಮುಖವಾಗಿ

1. ಅಶೋಕನ ಬ್ರಹ್ಮಗಿರಿಯ ಶಾಸನ
2. ಶಾತವಾಹನರ ಶಾಸನ ಮತ್ತು ನಾಣ್ಯಗಳು
3. ಹಾಲನ ಗಾಥಾ ಸಪ್ತಶತಿ
4. ಹಲ್ಮಿಡಿಯ ಶಾಸನ
5. ನೃಪತುಂಗನ ಕವಿರಾಜ ಮಾರ್ಗ

**ಕನ್ನಡ ಭಾಷೆ ಮತ್ತು ಸಾಹಿತ್ಯ**

1) **ಭಾಷೆ:–** ದಕ್ಷಿಣ ಭಾರತದ ಪ್ರಾಚೀನ ಭಾಷೆಗಳಲ್ಲಿ ಕನ್ನಡವು ಒಂದು ಇದನ್ನು ದ್ರಾವಿಡ ಭಾಷೆ ಎಂದು ಕರೆಯುತ್ತಾರೆ.

ಈ ಭಾಷೆಯ ಹಿರಿತನವನ್ನು ಪರಿಗಣಿಸಿ ಭಾರತ ಸರ್ಕಾರದ "ಭಾಷಾಧಾರಿತ ಸಮಿತಿ"ಯ ಶಿಫಾರಸ್ಸಿನ ಮೇರೆಗೆ 2011ರಂದು ಶಾಸ್ತ್ರೀಯ ಸ್ಥಾನಮಾನ ಕೊಟ್ಟು ಗೌರವಿಸಿದೆ.

ಕನ್ನಡ ಭಾಷೆಯ ಅವಸ್ಥಾಂತರಗಳು 3 ರೀತಿಯಲ್ಲಿದೆ.

1. ಹಳೆಗನ್ನಡ – ಕ್ರಿ.ಶ 450 – 1200
2. ನಡುಗನ್ನಡ – ಕ್ರಿ.ಶ 1200 – 1700
3. ಹೊಸಗನ್ನಡ – 1700 ರಿಂದ ಇತ್ತೀಚಿನವರೆಗೂ.

ಇದು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳ ಪ್ರಭಾವವನ್ನು ಹೊಂದಿದೆ. ಕನ್ನಡ ಭಾಷೆಯನ್ನು ವಿದ್ವಾಂಸರು ಹೇಳುವಂತೆ ಕ್ರಿ.ಪೂ. 3 ನೇ ಶತಮಾನದಿಂದ ಇಂದಿನವರೆಗೂ ಮಾತನಾಡುವ ಭಾಷೆಯಾಗಿ ಉಳಿದುಕೊಂಡು ಬಂದಿದೆ".

ಕನ್ನಡ ಭಾಷೆಯನ್ನು ಅಧ್ಯಯನ ಮಾಡುವಾಗ ನಮಗೆ ಕೆಲವು ಶಾಸನಗಳು ಸಹಾಯ ಮಾಡುತ್ತವೆ ಅದೆಂದರೆ.

1) ಹಲ್ಮಿಡಿ ಶಾಸನ
2) ಕಪ್ಪೆ ಅರಭಟ್ಟನ ಶಾಸನ
3) ನಂದಿ ಸೇನನ ಶಾಸನ

ಕ್ರಿ.ಶ ಆರಂಭದಲ್ಲಿ ಕನ್ನಡವನ್ನು ಅಂದರೆ ಹಳೆಗನ್ನಡವನ್ನು "ಬನವಾಸಿಯ ಭಾಷೆ"ಎಂದು ಕರೆಯಲಾಗಿದೆ.

ಶಾತವಾಹನ ರಾಜ ಹಾಲನ "ಗಾಥಾ ಸಪ್ತಶತಿ"ಯಲ್ಲಿ ಕೆಲವು ಕನ್ನಡ ಪದಗಳಿವೆ ಉದಾ:– ತುಪ್ಪ, ಪೆಟ್ಟು, ಪೊಟ್ಟು ಇತ್ಯಾದಿ.

ಗ್ರೀಕ್ ಪ್ರವಾಸಿ "ಪ್ಲೀನಿ" ತನ್ನ ನ್ಯಾಚುರಲ್ ಹಿಸ್ಟರಿ"ಯಲ್ಲಿ ಕರ್ನಾಟಕದ ಕರಾವಳಿ ಭಾಗದಲ್ಲೂ ಮಂಗ್ಲುರು (ಇಂದಿನ ಮಂಗಳೂರು) ಬಾನೂಸಿ (ಬನವಾಸಿ)

ಒಟ್ಟಾರೆ ಕನ್ನಡ ಭಾಷೆ ಭಾರತದ ಪುರಾತನ ಭಾಷೆಯಾಗಿದ್ದು ತನ್ನದೇ ಆದ ಮಹತ್ವವನ್ನು ಹೊಂದಿದೆ.

**ಸಾಹಿತ್ಯ**

ಸಾಹಿತಿಕವಾಗಿ ಕನ್ನಡ ಭಾಷೆ ಬಹಳ ಸ್ರೀಮಂತವಾಗಿದೆ ಎಂಬುದಕ್ಕೆ ಈ ಭಾಷೆಯಲ್ಲಿ ರಚಿತವಾಗಿರುವ ಗ್ರಂಥಗಳೇ ಉತ್ತಮ ಉದಾಹರಣೆಗಳು

ಕವಿರಾಜ ಮಾರ್ಗ, ದಂಡಿಯ "ಕಾವ್ಯಾದರ್ಶ" ಪಂಪನ ಆದಿ ಪುರಾಣ, ಮತ್ತು ವಿಕ್ರಮಾರ್ಜುನ ವಿಜಯ, ಕನ್ನಡ ಭಾಷೆಯಲ್ಲಿ ರಚಿತವಾದ ಮೇರು ಗಂಥಗಳು. ಇನ್ನು ಜನ್ನನ 'ಯಶೋಧರ ಚರಿತೆ', ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ಕೇಶಿರಾಜನ ಶಬ್ದಮಣಿದರ್ಪಣ, ಕುಮಾರವ್ಯಾಸನ ಗುದುಗಿನ ಭಾರತ, ಕನಕದಾರಸರ ಮೋಹನ ತರಂಗಿಣಿ, ಹರಿಭಕ್ತಿಸಾರ, ರಾಮಧಾನ್ಯ ಚರಿತೆ ಲಕ್ಷ್ಮೀಶನ ಜೈಮಿನಿ ಭಾರತ, ರತ್ನಾಕರವರ್ಣಿಯ ಭರತೇಶ ವೈಭವ ಇನ್ನು ಅನೇಕ ಕೃತಿಗಳು ಕನ್ನಡ ಭಾಷೆಯ ಮಹತ್ವವನ್ನು ಸಾರುತ್ತದೆ.

**ಕನ್ನಡ ನಾಡಿನ ವ್ಯಾಪ್ತಿ**

ಕರ್ನಾಟಕವು 1,91,773 ಚ.ಕಿ.ಮಿ ವಿಸ್ತೀರ್ಣವನ್ನು ಹೊಂದಿದ್ದು ಸಮುದ್ರ ಮಟ್ಟದಿಂದ ಸುಮಾರು 2,000 ಅಡಿಗಳಷ್ಟು ಉತ್ತರದಲ್ಲಿದೆ ಪೂರ್ವದಿಂದ ಪಶ್ಚಿಮಕ್ಕೆ 400ಕಿ.ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ 700ಕಿ.ಮೀ ಇದೆ.

ಕನ್ನಡ ನಾಡನ್ನು ಆಳ್ವಿಕೆ ಮಾಡಿದ ಪ್ರಮುಖ ರಾಜ ಮನೆತನಗಳೆಂದರೆ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು. ವಿಜಯನಗರ ಅರಸರು ಮತ್ತು ಮೈಸೂರು ಅರಸರು ಹೀಗೆ ಕನ್ನಡ ನಾಡು ವಿಶಾಲವಾಗಿತ್ತು.

ಆದರೆ 4ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬ್ರಿಟೀಷರು, ನಿಜಾಮರು, ಮರಾಠರು ಮತ್ತು ಮೈಸೂರು ಅರಸರ ನಡುವೆ ಹಂಚಿ ಹೋಯಿತು. ಕ್ರಿ.ಶ. 1956 ನವೆಂಬರ್ 1 ರಂದು ಕನ್ನಡ ಭಾಷಾ ಪ್ರಾಂತ್ಯಗಳನ್ನು ಒಂದು ಗೂಡಿಸಿ ಮೈಸೂರು ರಾಜ್ಯ ಅಸತಿತ್ವಕ್ಕೆ ಬಂದಿತು. ನವೆಂಬರ್ 1973ರಂದು ಮೈಸೂರು ರಾಜ್ಯವನ್ನು "ಕರ್ನಾಟಕ" ಎಂದು ಕರೆಯಲಾಯಿತು.

**ರಾಜ್ಯ ಮತ್ತು ಜಿಲ್ಲಾ ಗೆಜೆಟಿಯರಗಳು**

ಗೆಜೆಟಿಯರ ಬ್ರಿಟಿಷರಿಂದ ಪರಿಚಯಿಸಲ್ಪಟ್ಟ ಸರ್ಕಾರದ ಸುದ್ಧಿಗಳನ್ನು ಪ್ರಕಟಿಸಲು ಅಧಿಕೃತವಾದ ರಾಜ್ಯ ಪತ್ರವನ್ನು ಹೊರಡಿಸುವ ಸಂಪ್ರದಾಯವನ್ನು ಆರಂಭ ಮಾಡಿದರು.

ಕ್ರಿ.ಶ 1815ರಲ್ಲಿ ಈಸ್ಟ ಇಂಡಿಯಾ ಕಂಪನಿಯು ಇದನ್ನು ಆರಂಭಿಸಿತು. ಆದರೆ ಕ್ರಿ.ಶ. 1854ರಲ್ಲಿ ಈಸ್ಟ ಇಂಡಿಯಾ ಕಂಪನಿಯ ಗೆಜೆಟಿಯರ್ ಎಂದು ಕರೆಯಲಾಯಿತು.

1866ರಲ್ಲಿ ರಿಚರ್ಡ್ ಟಿಂಪಲ್ ಎಂಬುವವರು ಮೊದಲ ಬಾರಿಗೆ ಅಧಿಕೃತವಾದ ಕೇಂದ್ರ ಪ್ರಾಂತ್ಯದ ಬಂಡಾರ ಜಿಲ್ಲೆಯ ಗೆಜೆಟಿಯರನ್ನು ಪ್ರಕಟಿಸಿದರು.

**ಜಿಲ್ಲಾ ಗೆಜೆಟಿಯರ್‌ಗಳು**

**ಮೈಸೂರು ಗೆಜೆಟಿಯರ್ : ಇದು ದಕ್ಷಿಣ ಭಾರತದ ಮೊದಲ ಗೆಜೆಟಿಯರ್**

ಇದನ್ನು ಬೆಂಜಮಿನ್ ಲೂಯಿಸ್ ರೈಸ ರಚಿಸಿದ್ದಾರೆ. ಇವರು ಬ್ರಿಟಿಷ್ ಇತಿಹಾಸಕಾರ. ಇವರು ಮೈಸೂರು ಸಾಮ್ರಾಜ್ಯಕ್ಕೆ ಸಂಬಂಧಿಸಿದ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಶಾಸನಗಳನ್ನು ಸಂಗ್ರಹಿಸಿ, ಸಂಪಾದಿಸಿ. ಮೈಸೂರು, ಕೂರ್ಗ ಎಪಿಗ್ರಾಫಿ ಕರ್ನಾಟಕ ಗೆಜೆಟಿಯರ್‌ನಲ್ಲಿ ಪ್ರಕಟಿಸಿದ್ದಾರೆ.

ಮೈಸೂರು ಗೆಜೆಟಿಯರ್‌ನಲ್ಲಿ ಮೈಸೂರು ಭಾಗದ

1) ಭೌಗೋಳಿಕ ಲಕ್ಷಣಗಳು
2) ಜಿಯೋಲಾಜಿ
3) ಮೆಟ್ರೊಲಾಜಿ
4) ಅರಣ್ಯ ಮತ್ತು ಪ್ರಾಕೃತಿಕ ಲಕ್ಷಣ
5) ಒಳ್ಳೆಯ ಪದ್ಧತಿ ಮತ್ತು ಮಳೆಯ ಪ್ರಮಾಣ

ಗೆಜೆಟಿಯರ್‌ಗಳು ಇತಿಹಾಸ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳ ಮೇಲೆ ಬಳಕೆ ಚೆಲ್ಲುತ್ತದೆ.

ಉದಾ:– ಮೈಸೂರು ಕಮಿಷನರ ಕಾಲದಲ್ಲಿ ಆಡಳಿತ.

2) 1863 – 1891ರ ವರೆಗಿನ ಕಂದಾಯ ಮತ್ತು ಹಣಕಾಸು ವಿಭಾಗಗಳ ತಿದ್ದುಪಡಿ.

**ಎಪಿಗ್ರಾಪಿಯ ಕರ್ನಾಟಕ**

ಇದು ಹಳೆಯ ಮೈಸೂರು ಪ್ರಾಂತ್ಯದ ಕಾಲಾಯುಗದ ಕಾಲದಿಂದ ತಾಮ್ರದ ಯುಗದವರೆಗೆ ಇರುವ 9,000 ಶಾಸನಗಳ ಯಥಾ ನಕಲುನೊಂದಿಗೆ ಇರುವ ಆಕರಗಳನ್ನು "ಬೆಂಜಮಿನ್ ಲೂಯಿಸ್ ರೈಸ್"ರವರು ಪ್ರಕಟಿಸಿದ್ದಾರೆ. ಇದನ್ನು ಮೈಸೂರು ಪುರಾತತ್ವ ಇಲಾಖೆಯ ನಿರ್ದೇಶಕರ ನೇತೃತ್ವದಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ

1) ಶ್ರವಣಬೆಳಗೊಳದ ಶಾಸನಗಳು
2) ಮೈಸೂರು ಜಿಲ್ಲೆಯ ಶಾಸನಗಳು
3) ಹಾಸನ ಜಿಲ್ಲೆಯ ಶಾಸನಗಳು ಹೀಗೆ ಹಲವು ಇಡೀ ಶಾಸನಗಳನ್ನು ಸರ್ಕಾರದ ಮೂಲಕ ಅಧಿಕೃತವಾಗಿ ಪ್ರಕಟಿಸುವ ಸಂಪ್ರದಾಯವನ್ನು ಆರಂಭಿಸಿದರು.

**ಕರ್ನಾಟಕದ ವಸ್ತು ಸಂಗ್ರಹಾಲಯಗಳು**

ಧಾರವಾಡದಲ್ಲಿ "ಪ್ರಾಚ್ಯ ಕಲಾ ವಸ್ತು ಸಂಗ್ರಹಾಲಯ" ಅಸ್ತಿತ್ವಕ್ಕೆ ಬಂದಿತು. ತದನಂತರ ಖಾಸಗಿ ಮತ್ತು ಸರ್ಕಾರಿ ವಸ್ತು ಸಂಗ್ರಹಾಲಯಗಳು ಅಸ್ತಿತ್ವಕ್ಕೆ ಬಂದವು. ಸದ್ಯ ಒಟ್ಟು 28 ವಸ್ತು ಸಂಗ್ರಹಾಲಯಗಳಿವೆ.

ಇವು ನಿರ್ದೇಶಕರು ಪ್ರಾಕ್ತನ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.

1865ರಲ್ಲಿ ಶೇಷಾದ್ರಿ ಅಯ್ಯರ್ ಕಾಲದಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿತು.

ಬೆಂಗಳೂರು ವಸ್ತು ಸಂಗ್ರಹಾಲಯ ಕಲಾ ವಸ್ತುವನ್ನು 4 ರೀತಿಯ ವರ್ಗೀಕರಿಸಲಾಯಿತು.

1. ಕಲಾ ವಿಭಾಗ
2. ಪ್ರಾಕ್ತನ ವಸ್ತು ವಿಭಾಗ
3. ಜನಾಂಗೀಯ ವಿಭಾಗ
4. ಸ್ವಾಭಾವಿಕ ಇತಿಹಾಸ ವಿಭಾಗ.

ಬೆಂಗಳೂರಿನ ವಸ್ತು ಸಂಗ್ರಹಾಲಯದಲ್ಲಿ ಶಿಲ್ಪಗಳು, ನಾಣ್ಯಗಳು ಶಾಸನಗಳನ್ನು ಸಂರಕ್ಷಣೆ ಮಾಡಲಾಗಿದೆ. ಕದಂಬರ ಕಾಲದ ಪ್ರಸಿದ್ಧ "ಹಲ್ಮಿಡಿ ಶಾಸನ"ವನ್ನು ಇಲ್ಲಿ ಸಂರಕ್ಷಣೆ ಮಾಡಲಾಗಿದೆ.

**ಪ್ರಮುಖ ವಸ್ತು ಸಂಗ್ರಹಾಲಯಗಳು**

**1)** ಕೆಂಪೇಗೌಡ ವಸ್ತು ಸಂಗ್ರಹಾಲಯ: ಬೆಂಗಳೂರು
**2)** ವಿಜ್ಞಾನ ವಸ್ತು ಸಂಗ್ರಹಾಲಯ ಬೆಂಗಳೂರು
**3)** H.A.L ಬಾಹ್ಯಾಕಾಶ ಪರಂಪರೆಯ ವಸ್ತು ಸಂಗ್ರಹಾಲಯ
**4)** ಕರ್ನಾಟಕ ಜಾನಪದ ಕಲೆ ಮತ್ತು ವಸ್ತು ಸಂಗ್ರಹಾಲಯ ರಾಮನಗರ
**5)** ಗಾಂಧಿ ಭವನ ವಸ್ತು ಸಂಗ್ರಹಾಲಯ
6) ಪ್ರಾಕ್ತನ ವಸ್ತು ಸಂಗ್ರಹಾಲಯ – ಹಂಪಿ
7) ಜಾನಪದ ವಸ್ತು ಸಂಗ್ರಹಾಲಯ – ಮೈಸೂರು ವಿಶ್ವವಿದ್ಯಾಲಯ

**ಕರ್ನಾಟಕ ಪತ್ರಾಗಾರಗಳು**

ಭಾರತೀಯ ಇತಿಹಾಸ ಮತ್ತು ಸಾಂಸ್ಕೃತಿಕ ಇತಿಹಾಸ ದಾಖಲಾತಿಗಳನ್ನು ರಕ್ಷಿಸಿ, ಸಂರಕ್ಷಣೆ ಮಾಡುತ್ತಿರುವ 2 ಸರ್ಕಾರಿ ಇಲಾಖೆಗಳೆಂದರೆ ಒಂದು ಭಾರತೀಯ ಪುರಾತತ್ವ ಇಲಾಖೆ ಮತ್ತು ಭಾರತೀಯ ಪತ್ರಾಗಾರ ಇಲಾಖೆ.

1891ರಲ್ಲಿ ವೈಸರಾಯ ಲಾರ್ಡ್ ಲ್ಯಾನ್ಸಪೌನನಿಂದ ಅಸ್ತಿತ್ವಕ್ಕೆ ಬಂದಿತು. 1950ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾಲಯವು ಪ್ರಾದೇಶಿಕ ಸರ್ವೇಕ್ಷಣ ಸಮಿತಿಯನ್ನು ಪ್ರಾರಂಭಿಸಿತು. ಇದೇ ಇಲಾಖೆಯು ನವೆಂಬರ್ 1972ರಲ್ಲಿ ರಾಜ್ಯ ಪತ್ರಾಗಾರ ಇಲಾಖೆಯಾಗಿ ಮಾರ್ಪಾಟಾಯಿತು.

**ಉದ್ದೇಶಗಳು:–**

1) ಕರ್ನಾಟಕ ಸರ್ಕಾರದ ಎಲ್ಲಾ ದಾಖಲಾತಿಗನ್ನು, ಕಡತಗಳನ್ನು ವೈಜ್ಞಾನಿಕವಾಗಿ ಸಂರಕ್ಷಣೆ ಮಾಡುವುದು.

2) ತನ್ಮೂಲಕ ಸರ್ಕಾರದ ಅತ್ಯಂತ ಹಳೆಯ/ವಿನಾಶದ ಅಂಚಿನಲ್ಲಿರುವ ಎಲ್ಲಾ ಇಲಾಖೆಗಳ ದಾಖಲಾತಿಯನ್ನು ರಕ್ಷಿಸಿತು ಮುಂದಿನ ಪೀಳಿಗೆಯು ಉಪಯೋಗಕ್ಕೆ ಲಭ್ಯವಾಗುತ್ತದೆ.
3) ಸರ್ಕಾರದ ಗೌಪ್ಯವಲ್ಲದ ದಾಖಲಾತಿಗಳನ್ನು, ಸಾಧನೆಗಳನ್ನು ಕುರಿತು ಜನತೆಗೆ ತಿಳಿಸಲು ಅನುಕೂಲವಾಗುತ್ತದೆ.
4) ಐತಿಹಾಸಿಕ ದಾಖಲಾತಿಗಳ ಪ್ರಕಾಶನದ ಪ್ರತಿಗಳನ್ನು ಇಲ್ಲಿ ನೋಡಬಹುದು.

**ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಮತ್ತು ರಕ್ಷಣೆ**

ಐತಿಹಾಸಿಕ ಸ್ಮಾರಕಗಳು ನಮ್ಮ ಗತವೈಭವದ ಸಾಕ್ಷಿಗಳು ಅವುಗಳ ಸಂರಕ್ಷಣೆ ಮಾಡುವುದು ಎಲ್ಲರ ಆದ್ಯ ಕರ್ತವ್ಯ.

**ಐತಿಹಾಸಿಕ ವಸ್ತುಗಳು ಹಾಳಾಗುವುದಕ್ಕೆ ಕಾರಣವಾದ ಅಂಶಗಳು.**

1) **ನೈಸರ್ಗಿಕ ಅಂಶಗಳು** – ಮಳೆ, ಗಾಳಿ, ಸೂರ್ಯನ ಶಾಖ, ಫಂಗಸ್, ಸೂಕ್ಷ್ಮ ಜೀವಿಗಳು.
2) **ಮಾನವ ನಿರ್ಮಿತ ಕಾರಣಗಳು:–** ಐತಿಹಾಸಿಕ ವಸ್ತುಗಳೊಂದಿಗೆ ವ್ಯವಹರಿಸುವಾಗ ನಿರ್ಲಕ್ಷ್ಯದಿಂದಾಗುವ ಸಮಸ್ಯೆಗಳು, ಅಪಘಾತ, ಬೆಂಕಿ
3) ಸಾಮಗ್ರಿಯಲ್ಲಿರುವ ರಾಸಾಯನಿಕ ಪದಾರ್ಥಗಳು ಕೆಲವೊಮ್ಮೆ ಐತಿಹಾಸಿಕ ವಸ್ತುಗಳು ಹಾಳಾಗಲು ಕಾರಣವಾಗುತ್ತದೆ. ಉದಾ:– ಕಾಗದದಲ್ಲಿರುವ ಆಮ್ಲ, ಕಲ್ಲುಗಳಲ್ಲಿರುವ ಲವಣ ಮುಂತದವು ಐತಿಹಾಸಿಕ ವಸ್ತುಗಳನ್ನು ಹಾಳುಮಾಡುತ್ತದೆ.

**ಸಂರಕ್ಷಣಾ ಕ್ರಮಗಳು:–**

1) ಬೆಳಕಿನ ಪರಿಣಾಮವನ್ನು ನಿಗ್ರಹಿಸಿ ನೈಸರ್ಗಿಕ ಮತ್ತು ಕೃತಕ ಬೆಳಕು ಕೆಲವು ಪ್ರಕಾರದ ಪ್ರಾಚ್ಯ ವಸ್ತು ಹಾಳಾಗುವುದಕ್ಕೆ ಕಾರಣವಾಘುತ್ತದೆ. ಉದಾ:– ಬಟ್ಟೆ, ಕಾಗದ, ಬಣ್ಣ
2) ಕ್ರಿಮಿ ಕೀಟಗಳಿಂದ ರಕ್ಷಣೆ:– ಸಾವಯವ ವಸ್ತುಗಳ ವೈರಿಯೆಂದರೆ ಕ್ರಿಮಿ ಕೀಟಗಳು, ಗೆದ್ದಲು, ಜರಳೆ ಮುಂತಾದ ಕೀಟಗಳ ಹಾವಳಿಯಿಂದ ಐತಿಹಾಸಿಕ ವಸ್ತುಗಳಾದ ಚಿತ್ರಕಲೆ, ತಾಳೆಗರಿ ಮುಂತಾದ ವಸ್ತುಗಳು ಹಾಳಾಗುತ್ತದೆ.
3) ಮಾನವನಿಂದಾಗುವ ಹಾನಿಯ ನಿಗ್ರಹ – ಥರ್ಮಾಕೋಲಿನಂತಹ ವಸ್ತುವಿನ ಬಳಕೆ
4) ಬೆಂಕಿಯಿಂದಾಗುವ ಹಾನಿಯಿಂದ ರಕ್ಷಣೆ – ಅಗ್ನಿ ಶಾಮಕ ಸಾಧನಗಳನ್ನು ಇಡಬೇಕು.
5) ವಸುಗಳಲ್ಲಿರುವ ರಾಸಾಯನಿಕ ಪದಾರ್ಥ ಪರಿಣಾಮದ ನಿಗ್ರಹ– ಪೇಪರ್ ಪಲ್ಸ್ ವಿಧಾನ, ರೆಸಿನ್‌ದಂತಹ ವಸ್ತುಗಳ ಬಳಕೆ.

**ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ**

1861 ಡಿಸೆಂಬರ್ 1 ರಂದು ಅಸ್ತಿತ್ವಕ್ಕೆ ಬಂದಿತು. ಇದರ ಸ್ಥಾಪಕ ಲಾರ್ಡ್ ಕ್ಯಾನಿಂಗ್ ಭಾರತದ ಮೊದಲ ವೈಸರಾಯ. ಇದರ ಮೊದಲ ಸರ್ವೇಕ್ಷಣಾಕಾರರೆಂದರೆ ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂ

1904ರ ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯಿದೆಯ ಅನ್ವಯ ಇದು ಸ್ವಾಯತ್ತ ಸ್ಥಾನಮಾನ ಪಡೆಯಿತು.

ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂರು ಗಯಾ, ಸಾಂಚಿ, ತಕ್ಷಶಿಲೆ, ಮುಂತಾದ ಕಡೆ ಐತಿಹಾಸಿಕ ಶೋಧನೆಗಳನ್ನು ನಡೆಸಿದನು ಹರಪ್ಪಾ ನಾಗರೀಕತೆಯ ಅವಶೇಷಗಳು ಈತನ ಉತ್ಖನನದಲ್ಲಿ ಪತ್ತೆಯಾಯಿತು ಹೀಗಾಗಿ ಕನ್ನಿಂಗ್ ಹ್ಯಾಂನನ್ನು ಭಾರತೀಯ ಪುರಾತತ್ವ ಇಲಾಖೆಯ ಪಿತಾಮಹಾ ಎಂದು ಕರೆಯಲಾಗಿದೆ.

ಪುರಾತತ್ವ ಇಲಾಖೆ ದೇಶದಾದ್ಯಂತ ಇರುವ ಪ್ರಾಚ್ಯ ವಸ್ತಗಳ ಕುರಿತು ಅಧ್ಯಯನ ಮಾಡಲು 24 ವೃತ್ತಗಳಾಗಿ ವರ್ಗೀಕರಿಸಿದೆ. ಪ್ರತಿ ವೃತ್ತಕ್ಕೂ ವಿಶೇಷ ಪರಿಣಿತರನ್ನು ನೇಮಕಮಾಡಿ ತನ್ನ ಅಧ್ಯಯನವನ್ನು ಮಾಡುತ್ತದೆ. ಇದುವರೆಗೆ 3650 ಸ್ಮಾರಕಗಳು ಮತ್ತು ಪ್ರಾಚೀನ ನೆಲೆಯನ್ನು ರಕ್ಷಿಸಿದೆ.

**ಕರ್ನಾಟಕದಲ್ಲಿ ವಿಶ್ವ ಪರಂಪರಿಕ ತಾಣಗಳು**

ಯುನೆಸ್ಕೋ ಸಂಸ್ಥೆಯ ಮಾನ್ಯತೆಗೆ ಒಳಗಾಗಿರುವ ಕರ್ನಾಟಕ 2 ಪ್ರಮುಖ ಸ್ಥಳಗಳೆಂದರೆ

1) ಪಟ್ಟದ ಕಲ್ಲು
2) ಹಂಪಿ

ಪಟ್ಟದ ಕಲ್ಲು:– ಬಾದಾಮಿ ಚಾಲುಕ್ಯರ ಕಾಲದ ಸ್ಥಳವಾಗಿದೆ. ಮಲಪ್ರಭಾ ನದಿಯ ದಂಡೆಯಲ್ಲಿದೆ. ಇಲ್ಲಿ ಚಾಲುಕ್ಯ ರಾಜರಾದ ವಿಜಯಾದಿತ್ಯ ಮತ್ತು 2ನೇ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣಗೊಂಡಿರುವ 10 ದೇವಾಲಯಗಳೀವೆ. ಅವುಗಳಲ್ಲಿ ದ್ರಾವಿಡ, ವೇಸರ ಶೈಲಿಯ ದೇವಾಲಯಗಳಿವೆ.

**ದ್ರಾವಿಡ ಶೈಲಿಯ ದೇವಾಲಯಗಳು**

1) ವಿರೂಪಾಕ್ಷ ದೇವಾಲಯ
2) ಮಲ್ಲಿಕಾರ್ಜುನ ದೇವಾಲಯ
3) ಸಂಗಮೇಶ್ವರ ದೇವಾಲಯ
4) ಗಳಗನಾಥ ದೇವಾಲಯ
5) ಜೈನ ನಾರಾಯಣ ಗುಡಿ

**ವೇಸರ ಶೈಲಿಯ ದೇವಾಲಯ**

1) ಪಾಪನಾಥ ದೇವಾಯಲ
2) ಜಂಬುಲಿಂಗೇಶ್ವರ ದೇವಾಲಯ
   1986ರಲ್ಲಿ ಇದನ್ನು ವಿಶ್ವಪಾರಂಪರಿಕ ಪಟ್ಟಿಗೆ ಸೇರಿಸಿದರು

ಹಂಪಿ:– 1987ರಲ್ಲಿ ವಿಶ್ವಪಾರಂಪರಿಕ ಪಟ್ಟಿಗೆ ಸೇರಿಸಲ್ಪಟ್ಟಿತು ವಿಜಯನಗರ ಅರಸರ ತವರೂರಾಗಿದ್ದ ಹಂಪಿ ಇಂದು ಕೇವಲ ಅವಶೇಷವಾಗಿ ಉಳಿದಿದೆ. ಆದ್ದರಿಂದ ಇದನ್ನು 'ಬಯಲು ಸೀಮೆಯ ವಸ್ತು ಸಂಗ್ರಹಾಲಯ ಎಂದು ಕರೆಯಲಾಗಿದೆ.

**ಹಂಪಿಯ ಸ್ಮಾರಕಗಳು:–**

1) ಹಿಂದೂ ದೇವಾಲಯ
2) ಜೈನ ವಾಸ್ತು ಶಿಲ್ಪಿ
3) ಇಸ್ಲಾಮಿಖ್ ವಾಸ್ತು ಶಿಲ್ಪಿ
4) ಪೌರ ವಾಸ್ತು ಶಿಲ್ಪಿ

**ಪ್ರಮುಖ ದೇವಾಲಯಗಳು:–**

1) ವಿರೂಪಾಕ್ಷ ದೇವಾಲಯ
2) ವಿಜಯ ವಿಠ್ಠಲ ದೇವಾಲಯ
3) ಹಜಾರ ರಾಮಸ್ವಾಮಿ ದೇವಾಲಯ
4) ಮಹಾನವಮಿ ದಿಬ್ಬ ಪ್ರಮುಖವಾದವು

**2. ಕದಂಬರಿಂದ ಹೊಯ್ಸಳರವರೆಗೆ: ವಾಸ್ತು ಶಿಲ್ಪಿ, ಶಲ್ಪ, ಸಾಹಿತ್ಯ ಮತ್ತು ಧರ್ಮ**

**1) ಕದಂಬರ ಕಾಲದ ವಾಸ್ತುಶಿಲ್ಪಿ:–** ಕರ್ನಾಟಕದ ಮೊದಲ ಕನ್ನಡ ರಾಜ ಮನೆತನದವರು ಕದಂಬರು. ಇವರ ದೇವಾಲಯಗಳು ಸರಳವಾಗಿ ರಚನೆಯಾಗಿದ್ದು, ಒಂದು ಗರ್ಭಗ್ರಹ, ತೆರೆದ ಮೊಸಸಾಲೆ, ಇವಲ್ಲದೆ ದೇವಾಲಯದ ಗೋಡೆಗಳ ಮೇಲೆ ಅಡ್ಡವಾಗಿ ಕೆತ್ತಲಾದ ಅಲಂಕಾರದ ಕೆತ್ತನೆ. ಗರ್ಭಗೃಹದ ಮೇಲೆ ಮೆಟ್ಟಿಲು ಮೆಟ್ಟಿಲು ಕಿರಿದಾಗುವ ಗೋಪುರಗಳನ್ನು ಕಾಣಬಹುದು ಇದನ್ನು "ಕದಂಬ ಸಾಗರ"

ಉದಾಹರಣೆ:– 1) ಹಲಸಿಯ ಕಲ್ಲೇಶ್ವರ ದೇವಾಲಯ

2) ಬನವಾಸಿಯ ಮಧುಕೇಶ್ವರ ದೇವಾಲಯ

3) ತಾಳಗುಂದದ ಪ್ರಣವೇಶ್ವರ ದೇವಾಲಯ

ಕದಂಬರನ್ನು "ಕರ್ನಾಟಕ ದೇವಾಲಯದ ವಾಸ್ತುಶಿಲ್ಪದ ಮೂಲ ಕತೃಗಳು ಎಂದು ಕರೆಯಲಾಗಿದೆ

2) **ಗಂಗರ ಕಾಲದ ದೇವಾಲಯಗಳು** – ಕದಂಬರ ಸಮಕಾಲೀನರಾಗಿದ್ದ ಗಂಗರು ಕರ್ನಾಟಕದ ದಕ್ಷಿಣ ಭಾಗವನ್ನು ಅಳಿದರು. ಇವರ ಕಾಲದ ಕೆಲವೇ ದೇವಾಲಯಗಳು ಉಳಿದಿವೆ.

ಮೊದಲು ಇಟ್ಟಿಗೆಯನ್ನು ಬಳಸಿ ದೇವಾಲಯವನ್ನು ನಿರ್ಮಿಸಿದರು ನಂತರ ಕಲ್ಲಿನ ಬಳಕೆ ಮಾಡಿದರು. ಚತುರಾಕಾರದ ತಳವಿನ್ಯಾಸದ ಮೇಲೆ ನಿರ್ಮಾಣವಾಗುತ್ತಿದ್ದ ದೇವಾಲಯಗಳಲ್ಲಿ ಗರ್ಭ ಗೃಹದ ಜೊತೆ ಸುಖನಾಸಿನಿ ಮತ್ತು ನವರಂಗಗಳಿದ್ದವು.

ಇವರ ಕಾಲದ ದೇವಾಲಯದ ಎತ್ತರ ಕಡಿಮೆ, ನವರಂಗದಲ್ಲಿ ಮಾತ್ರ ಕಂಬಗಳ ಬಳಕೆ, ತಳಭಾಗ ಚೌಕ ಮತ್ತು ಮೇಲ್ಭಾಗ ವೃತ್ತಾಕಾರ ದೇವಾಲಯದ ಹೊರಗೋಡೆಯ ಮೇಲೆ ಕುಬ್ಜರ ಸಾಲು, ಕಿರುಗಂಬಗಳು, ನೃತ್ಯ ಭಂಗೀಯ ಶಿಲ್ಪಿಗಳು. ಮಣ್ಣಿಯ ಕಪಲೇಶ್ವರ ದೇವಾಲಯದ ದ್ವಾರಪಾಲಕರು ಮತ್ತು ಜಲಾಂದ್ರಗಳ ಕೆತ್ತನೆ ಅತ್ಯಂತ ಸುಂದರವಾಗಿದೆ.

### 3. ಬಾದಾಮಿಯ ಚಾಲುಕ್ಯರ ಕಾಲದ ವಾಸ್ತುಶಿಲ್ಪಿ

ದಕ್ಷಿಣದಲ್ಲಿ ಒಂದು ಹೊಸ ಕಲಾ ಪರಂಪರೆಯನ್ನು ಸೃಷ್ಟಿಸಿದವರೇ ಬಾದಾಮಿ ಚಾಲುಕ್ಯರು, ಇವರ ಹೊಸ ಪ್ರಯತ್ನಗಳನ್ನು ಬಾದಾಮಿ, ಐಹೊಳೆ ಮತ್ತು ಪಟ್ಟದ ಕಲ್ಲುಗಳಲ್ಲಿ ಮಾಡಿದ್ದಾರೆ.

ಬಾದಾಮಿಯು ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧ. ಇಲ್ಲಿ 4 ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧ. ಒಂದು ಶೈವ, 2 ವೈಷ್ಣವ, ಒಂದು ಜೈನ ಗುಹೆಯಾಗಿದೆ. ಇಲ್ಲಿನ ಒಂದು ಗುಹೆಯ ವಿನ್ಯಾಸವು ಇನ್ನೊಂದು ಗುಹೆಯ ವಿನ್ಯಾಸಕ್ಕಿಂತ ವಿಭಿನ್ನವಾಗಿದೆ.

ಭೂತನಾಥ ದೇವಾಲಯ, ಜಂಬು ಲಿಂಗೇಶ್ವರ ದೇವಾಲಯ ಇವರ ಕಾಲದ ಅಮೂಲ್ಯ ವಾಸ್ತು ಶಿಲ್ಪಿಗಳು.

ಐಹೊಳೆಯಲ್ಲಿ ರಚನಾತ್ಮಕ ದೇವಾಲಯಗಳೇ ಹೆಚ್ಚು. ಇಲ್ಲಿಯ ಗುಹಾಲಯಗಳೆಂದರೆ, ರಾವಣನ ಗುಹೆ ಮತ್ತು ಜೈನ ಗುಹಾಲಯು ಮುಖ್ಯವಾದವು ಇಲ್ಲಿ ಸಣ್ಣ ಗರ್ಭ ಗೃಹ, ಮತ್ತೆ ಅದರ ಮುಂದೆ ಸ್ಥಂಭ ಸಹಿತ ವಿಶಾಲ ಮಂಟಪ ಮುಖ್ಯ ರಚನೆಗಳು. ಇಲ್ಲಿ 125ಕ್ಕಿಂತ ಹೆಚ್ಚು ದೇವಾಲಯಗಳಿದ್ದು ಇವುಗಳಲ್ಲಿ ಲಾಡಖಾನ್ ದೇವಾಲಯ ಮತ್ತು ದುರ್ಗಾದೇವಾಲಯಗಳು ಪ್ರಮುಖ ದೇವಾಲಯಗಳು.

ಪಟ್ಟದಕಲ್ಲಿನ ಒಂದೇ ಆವರಣದಲ್ಲಿ ದ್ರಾವಿಡ, ನಾಗರ ಮತ್ತು ವೇಸರ ಶೈಲಿಯ ಹಲವಾರು ದೇವಾಲಯಗಳಿವೆ. ಅತಿ ಸರಳವಾದ ರಚನೆಯಿಂದ ಆರಂಭಿಸಿ ಅತ್ಯಂತ ವಿಶಾಲವಾದ ಮತ್ತು ಭವ್ಯವೆನಿಸುವ ದೇವಾಲಯಗಳ ರಚನೆ ಪಟ್ಟದ ಕಲ್ಲಿನಲ್ಲಿಯೇ ಆಗಿರುವುದು.

### 4. ರಾಷ್ಟ್ರಕೂಟ ಕಾಲದ ದೇವಾಲಯಗಳ ವಾಸ್ತು ಶಿಲ್ಪಿ

ಇವರ ಕಾಲದಲ್ಲಿ 2 ರೀತಿಯಲ್ಲಿ ವರ್ಗೀಕರಿಸಬಹುದು

1) ಕಲ್ಲಿನಲ್ಲಿ ಕೊರೆದ ವಾಸ್ತುಶಿಲ್ಪಿ
2) ರಚನಾತ್ಮಕ ದೇವಾಲಯ

ಕಲ್ಲಿನಲ್ಲಿ ಕೊರೆದು ಮಾಡಿದ ದೇವಾಲಯದಲ್ಲಿ ಪ್ರಮುಖವಾಗಿ ರಾವಣ ಕಾಲದ ಖಾಯ್ ದಶಾವತಾರ ಗುಹೆ (ಗುಹೆ 15), ಇಂದ್ರಸಭಾ(33), ಹಾಘು ಕೈಲಾಸನಾಥ ದೇವಾಲಯ ಅತಿ ಮುಖ್ಯವಾದುದು. ಇದು ಬಂಡೆಯನ್ನು ಮೇಲಿನಿಂದಲೇ ಕೊರೆದು ಮಾಡಿದ ಏಕಶಿಲಾ ದೇವಾಲಯ, ಗರ್ಭಗುಡಿಯ ಲಿಂಗ ಸಹಿತವಾಗಿ

### 5. ಕಲ್ಯಾಣಿ ಚಾಲುಕ್ಯರ ಕಾಲದ ಆಸ್ತುಶಿಲ್ಪಿ

ಈ ಕಾಲದ ದೇವಾಲಯಗಳು ಹೊಯ್ಸಲ ವಾಸ್ತುಶಿಲ್ಪಿಶೈಲಿಗಳ ಬೇರುಗಳಂತಿವೆ.

ದೇವಾಲಯದ ತಲ ವಿನ್ಯಾಸವು ಚೌಕ ಅಥವಾ ಆಯತಾಕಾರದಲ್ಲಿದೆ ಹಾಗೂ ಬಹುತೇಕ ದೇವಾಲಯದಲ್ಲಿ ಪ್ರದಕ್ಷಿಣಾ ಪಥವಿಲ್ಲ; ಪ್ರವೇಶದ್ವಾರವು ತೀರ ಅಲಂಕೃತವಾಗಿದ್ದು ಗೋಡೆಗಂಬಗಳು ಕೆತ್ತನೆಯನ್ನು ಹೊಂದಿದೆ; ಗರ್ಭಗೃಹದ ಇಕ್ಕಲ್‌ಗಳಲ್ಲು ಕಿಟಕಿಗಳಿದ್ದು ಅದರ ಮೂಲಕ ಸೂರ್ಯನ ಕಿರಣ ಗರ್ಭಗೃಹ ಪ್ರವೇಶಿಸಲು ಅನುಕೂಲವಾಗಿದೆ; ಪ್ರತಿಯೊಂದು ದೇವಾಲಯವು ಒಂದು ಗರ್ಭಗೃಹ, ಅರ್ಧಮಂಟಪ, ಅಂತರಾಳ, ಒಂದು ಮಹಾಮಂಟಪಗಳನ್ನು ಹೊಂದಿದೆ.

ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಇಟಗಿಯ ಮಹಾದೇವ ದೇವಾಲಯ ಇವರ ಕಾಲದ ಶ್ರೇಷ್ಠ ರಚನೆ. ಇಟಗಿ ಮಹಾದೇವ ದೇವಾಲಯವನ್ನು "ದೇವಾಲಯಗಳ ಚಕ್ರವರ್ತಿ" ಎಂದು ಕರೆಯುತ್ತಾರೆ.

### 6. ಹೊಯ್ಸಳರ ಕಾಲದ ದೇವಾಲಯಗಳ ವಾಸ್ತು ಶಿಲ್ಪಿ

ಕರ್ನಾಟಕದ ದೇವಾಲಯಗಳ ಚರಿತ್ರೆಯಲ್ಲಿ ಹೊಯ್ಸಳರ ವಾಸ್ತು ಶಿಲ್ಪದ ಶ್ರೇಷ್ಠತೆ ಅಧಿಕವಾಗಿದೆ. ಇವರ ವಾಸ್ತುಶಿಲ್ಪದ ಪ್ರಮುಖ ಅಂಶಗಳು:–

1) ದೇವಾಲಯಗಳ ತಲ ವಿನ್ಯಾಸವು ಕೋನಾಕಾರ ಅಥವಾ ನಕ್ಷತ್ರಾಕಾರವಾಗಿದೆ. ಇದು ಭೂ ಮಟ್ಟದಿಂದ 4 ರಿಂದ 6 ಅಡಿ ಎತ್ತರದ ಜಗುಲಿಯಂತೆ ಇದ್ದು.
2) ದೇವಾಲಯದ ಗೋಡೆಗಳಲ್ಲಿ ಒಂದು ಸಮತಲ ಪ್ರಭಾವವನ್ನು ಕಾಣಬಹುದು. ದೇವಾಲಯದ ಸುತ್ತಲೂ ಇರುವ ಅಲಂಕಾರಿಕ ಪಟ್ಟಿಗಳು ಗೋಡೆಗಳ ವೈಶಿಷ್ಟ್ಯ. ಅತ್ಯಂತ ಕೆಳಗಡೆ ಇರುವ ಆನೆಗಳ ಸಾಲು ದೇವಾಲಯದ ಸುತ್ತ ಉತ್ಸವ ಹೊರಟಂತಿದೆ. ಆನೆಗಳ ಸಾಲಿನ ಮೇಲೆ ಕುದುರೆಯನ್ನೇರಿ ಹೊರಟಿರುವ ಸವಾರರ ಸಾಲು, ನದಿಯ ಚಿತ್ರಗಳು.
3) ಕಂಬಗಳ ನಿರ್ಮಾಣದಲ್ಲಿ ಕಂಡು ಬಂದಿರುವ ಕಂಬಗಳ ರಚನೆ, ಇವು ಸಾಮಾನ್ಯವಾಗಿದ್ದು ದುಂಡಾಗಿದೆ.
4) ದೇವಾಲಯದ ರಂಗಮಂಟಪದಲ್ಲಿ ಮೇಲ್ಛಾವಣಿಯ ಅಲಂಕೃತ ಒಳಭಾಗಗಳಿವೆ. ಉದಾ:– ಬೇಲೂರಿನ ಚನ್ನಕೇಶವ ದೇವಾಲಯ, ಕೇಶವ ದೇವಾಲಯ ಸೋಮನಾಥಪುರ.

**ಕದಂಬರಿಂದ ಹೊಯ್ಸಳರವರೆಗಿನ ಮೂರ್ತಿ ಶಿಲ್ಪಿ**

ವಾಸ್ತುಶಿಲ್ಪದ ಜೊತೆಯಲ್ಲಿಯೇ ಬೆಳೆದಿರುವ ಕಲೆಯೇ ಶಿಲ್ಪಕಲೆ ಅಥವಾ ಮೂರ್ತಿ ಶಿಲ್ಪ. ಇದರಲ್ಲಿ ಪ್ರಧಾನವಾಗಿ 2 ಬೇಧಗಳನ್ನು ತಿಳಿಸುತ್ತದೆ:–

1) ಧ್ರುವ ಬೇರ – ಗರ್ಭಗೃಹದ ವಿಗ್ರಹ
2) ಚಲ ಬೇರ – ಉತ್ಸವ ಮೂರ್ತಿಗಳು

**(1) ಕದಂಬರ ಕಾಲದ ಮೂತಿ ಶಿಲ್ಪ**

ಕದಂಬರ ಕಾಲದಲ್ಲಿ ಸರಳ ಹಾಗೂ ಹೆಚ್ಚು ಅಲಂಕಾರಿಕವಲ್ಲದ ಮೂರ್ತಿ ಕಾಣಬಹುದು. ಇವರ ಕಾಲದ ಪ್ರಾಚೀನ ಮೂರ್ತಿಯನ್ನು ಸೊರಬದ ಜಂಬೇನಹಳ್ಳಿಯ "ದುರ್ಗಾ ವಿಗ್ರಹ" ಬನವಾಸಿಯ ಮಧುಕೇಶ್ವರ ದೇವಾಲಯದ ಆವರಣದಲ್ಲಿನ ಚತುರ್ಬಾಹು ವಿಷ್ಣು ಶಿಲ್ಪವು ಸುದರ್ಶನ ಚಕ್ರವನ್ನು ಹಿಡಿದು ಕಿರೀಟವನ್ನು ಹೊಂದಿದೆ.

ಅದೇ ರೀತಿ ಮಹಿಷಾಸುರ ಮರ್ದಿನಿ ಶಿಲ್ಪಗಳು, ಬನವಾಸಿಯಲ್ಲಿ ದೊರೆತ ಕಾರ್ತಿಕೇಯ ಶಿಲ್ಪ, ದಾವಣಗೆರೆಯ ಹರಿಹರ ಶಿಲ್ಪಗಳು ಕದಂಬರ ಮೂರ್ತಿ ಶಿಲ್ಪ ಸಂಪ್ರದಾಯದ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ.

**(2) ಗಂಗರ ಕಾಲದ ಮೂರ್ತಿ ಶಿಲ್ಪಗಳು**

ಗಂಗರು ಶಿಲ್ಪವನ್ನು ಕೆತ್ತುವುದಕ್ಕೆ ಗಟ್ಟಿಯಾದ ಕಪ್ಪು ಕಲ್ಲುಗಳನ್ನು ಬಳಸಿದ್ದಾರೆ, ಕಲ್ಲಿನ ಅಳತೆಗೆ ತಕ್ಕಂತೆ ಶಿಲ್ಪವನ್ನು ಕೆತ್ತುತ್ತಿದ್ದರು. ಉಬ್ಬು ಶಿಲ್ಪಕ್ಕೆ ಹೆಚ್ಚಿನ ಆದ್ಯತೆ, ಇವರ ಶಿಲ್ಪಗಳಲ್ಲಿ ನಗುಮುಖ ಮತ್ತು ಉಗ್ರ ಸ್ವರೂಪಿ ರೂಪವನ್ನು ಕಾಣಬಹುದು. ಮುಖ್ಯವಾಗಿ ಶಿಲ್ಪಗಳು ಶೈವ, ವೈಷ್ಣವ ಮತ್ತು ಶಕ್ತಿ ಆರಾಧಾನೆಗೆ ಸಂಬಂಧಿಸಿದೆ ಪ್ರಮುಖ ಮೂರ್ತಿಗಳು:–

1) ಉಮಾ ಮಹೇಶ್ವರ ಮೂರ್ತಿ (ಅರಳುಗುಪ್ಪೆ)
2) ನಟರಾಜ ಶಿಲ್ಪ – ಅಷ್ಟ ದಿಕ್ಪಾಲಕರ ಮಧ್ಯೆ ಇರುವ ನಾಟ್ಯ ಶಿಲ್ಪಗಳನ್ನು ಕಾಣಬಹುದು ಉದಾ:– ಅರ್ಕೇಶ್ವರ ದೇವಾಲಯ, ಅರಳುಗುಡ್ಡ ಕಲ್ಲೇಶ್ವರ ದೇವಾಲಯ.
3) ನಂದಿ:– ಕರ್ನಾಟಕದ ಬಹುತೇಕ ದೇವಾಲಯಗಳಲ್ಲಿ ನಂದಿ ವಿಗ್ರಹ ಲಿಂಗದ ಮುಂದೆ ಅಂತರಾಳ ಅಥವಾ ನವರಂಗದಲ್ಲಿ ಪ್ರತಿಷ್ಠಾಪಿಸಿದಾರೆ. ಗಂಗರ ಕಾಲದ ನಂದಿಗಳು ತಲೆಯನ್ನು ಕೊಂಚ ತಗ್ಗಿಸಿದಂತೆ, ಬಲಗಾಲನ್ನು ಮುಂದಕ್ಕೆ ಚಾಚಿ ಸಹಜವಾಗಿ ಮಲಗಿರುವಂತೆ ಕೆತ್ತಲಾಗಿದೆ.
4) ಭೈರವ ವಿಗ್ರಹ ರುಂಡಮಾಲೆ, ಜಟಾಮುಕುಟ, ಕೈಯಲ್ಲಿ ಕಪಾಲ, ಮತ್ತು ಶೂಲವನ್ನು ಹಿಡಿದಿದ್ದಾನೆ. ಉದಾ:– ಹುಸ್ಗುಂದದ ಬೈರವ ವಿಗ್ರಹ

**ಬಾದಾಮಿ ಚಾಲುಕ್ಯರ ಕಾಲದ ಮೂರ್ತಿ ಶಿಲ್ಪ**

ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ಸಂಖ್ಯೆ ಹೆಚ್ಚಿತು. ಅದರಂತೆ ಮೂರ್ತಿಗಳ ಸಂಖ್ಯೆಯೂ ಹೆಚ್ಚಿತು. ಕೇವಲ ಗರ್ಭಗುಡಿಯು ವಿಗ್ರಹವಲ್ಲದೆ ದೇವಾಲಯಗಳ ಗೋಡೆಯ ಮೇಲೆ, ಕಂಬಗಳ ಮೇಲೆ ಮೂರ್ತಿಯನ್ನು ನಿರ್ಮಿಸುವ ಕ್ರಮ ಬೆಳೆಯಿತು.

**ವೈಷ್ಣವ ಶಿಲ್ಪಗಳು**

1. **ವಿಷ್ಣುಶಿಲ್ಪ** – ಬಾದಾಮಿಯ 3ನೇ ಗುಹೆಯಲ್ಲಿದೆ ಇಲ್ಲಿ ವಿಷ್ಣು ಶೇಷ ಶಯನಾಗಿ ಸರ್ಪವೇ ಆತನ ಪೀಠವಾಗಿದೆ. ವಿಷ್ಣು ಕುಳಿತಿರುವ ಭಂಗಿ ಅಪರೂಪವಾಗಿದ್ದು ಶಂಖ, ಚಕ್ರ ಹಾಗು ಕೆಳಗಿನ ಕೈಯಲ್ಲಿ ಹಣ್ಣನ್ನು ಹಿಡಿದಿರುವಂತೆ ಕೆತ್ತಲಾಗಿದೆ.
2. **ವರಾಹ:**– ಚಾಲುಕ್ಯರ ರಾಜ ಲಾಂಛನವಾಗಿತ್ತು. ಬಾದಾಮಿಯ ವೈಷ್ಣವ ಗುಹೆಯಲ್ಲಿ, ಐಹೊಳೆಯಲ್ಲಿ ದೊಡ್ಡಗಾತ್ರದ ವರಾಹ ಮೂರ್ತಿಗಳಿವೆ
3. **ನರಸಿಂಹ** – ಅಷ್ಟಭುಜದ ನರಸಿಂಹನು ಅಸುರ ಸಂಹಾರದ ಶಿಲ್ಪ ಬಾದಾಮಿಯಲ್ಲಿದೆ.
4. **ವಾಮನ :**– ಬಾದಾಮಿಯ ಗುಹೆಯಲ್ಲಿನ ಅಷ್ಟಭುಜ ತ್ರಿವಿಕ್ರಮಿ ಬಲಗಾಲಿನಿಂದ ಭೂಮಿಯನ್ನು, ಎಡಗಾಲಿನಿಂದ ಆಕಾಶವನ್ನು ಅವರಿಸಿರುವ ಕೆತ್ತನೆಯಿದೆ.

### ಶೈವ ಶಿಲ್ಪಿಗಳು

ಬಾಧಾಮಿಯ ಶೈವ ಗುಹೆಯಲ್ಲಿನ 18 ಕೈಗಳುಳ್ಳ ನಟರಾಜನ ಮೂರ್ತಿಯು ಅತ್ಯಂತ ಪ್ರಸಿದ್ಧವಾಗಿದೆ.

ಐಹೊಳೆಯ 10 ಕೈಗಳುಳ್ಳ ನಟರಾಜನ ವಿಗ್ರಹ ಬೃಹತ್ ಶಿಲ್ಪಕಲೆಯಾಗಿದೆ ಬಾದಾಮಿಯ ಶೈವಗುಹೆಯಲ್ಲಿನ ಇನ್ನೊಂದು ಬೃಹತ್ ಶಿಲ್ಪವೆಂದರೆ ಅದು ಅರ್ಧನಾರೀಶ್ವರ. ಈ ಸಂಯುಕ್ತ ಕೆತ್ತನೆಯ ಎಡಬದಿಯಲ್ಲಿ ಸುರರೂಪದ ಸ್ತ್ರೀ ಶಿಲ್ಪ. ಬಲಬದಿಯಲ್ಲಿ ಕುರೂಪದ ಅಸ್ತಿಪಂಜರಗಳ ವಿಶಿಷ್ಟ ರಚನೆಯಿದೆ.

ಚಾಲುಕ್ಯರ ಯುದ್ಧೋತ್ಸಾಹದ ಪ್ರತೀಕವೆಂಬಂತೆ ಕೆತ್ತಲಾಗಿರುವ ತ್ರಿಪುರಾಂತಕ ಮೂರ್ತಿ ಚಾಲುಕ್ಯರ ಶಿಲ್ಪ ಕಲೆಯ ಮಹೋನ್ನತ ಪ್ರತೀಕಗಳು.

### ಜೈನ ಶಿಲ್ಪಗಳು

ಚಾಲುಕ್ಯರು ಜೈನ ಮತಕ್ಕೂ ಕೂಡಾ ಮಹತ್ವವನ್ನು ನೇಡಿದ್ದರು ಅದಕ್ಕೆ ಉತ್ತಮ ಉದಾಹರಣೆಗಳು ಐಹೊಳೆ, ಬಾದಾಮಿ ಪಟ್ಟದಕಲ್ಲಿನಲ್ಲಿ ಸಿಗುತ್ತದೆ.

ಉದಾಹರಣೆಗೆ:– ಬಾಹುಬಲಿ (ಗೊಮ್ಮಟ) – ಐಹೊಳೆ, ಪಟ್ಟದಕಲ್ಲಿನಲ್ಲಿ ಗೊಮ್ಮಟನ ವಿಗ್ರಹವನ್ನು ಕಾಣಬಹುದು, ಹಾವು ಸುತ್ತಿಕೊಂಡಿರುವ ಹುತ್ತದ ಪರಿಕಲ್ಪನೆಯನ್ನು ಅದ್ಭುತವಾಗಿ ಕೆತ್ತಲಾಗಿದೆ.

ಪಾರ್ಶ್ವಾನಾಥ, ಮಹಾವೀರ, ಯಕ್ಷ – ಯಕ್ಷಿಣಿಯರು ಇವೆಲ್ಲವೂಗಳ ಸುಂದರ ಮೂರ್ತಿಶಿಲ್ಪಿಗಳು ಬಾದಾಮಿಯ ಗುಹೆಗಳಲ್ಲಿ ಕಂಡುಬರುತ್ತದೆ.

ಇವಿಷ್ಟಲ್ಲದೇ ಲೌಖಿಕ ಶಿಲ್ಪಗಳಾದ ಅರಸರ ಶಿಲ್ಪಗಳು, ಮೈಥುನ ಶಿಲ್ಪ, ಸಾಲ ಭಂಜಿಕೆಯರ ಶಿಲ್ಪ ಚಾಲುಕ್ಯರ ಕಲಾ ಪ್ರೌಡಿಮೆಯನ್ನು ಸೂಚಿಸುತ್ತದೆ.

### ರಾಷ್ಟ್ರಕೂಟರ ಕಾಲದ ಶಿಲ್ಪಕಲೆ

ರಾಷ್ಟ್ರಕೂಟರ ಕಾಲವನ್ನು ಕರ್ನಾಟಕದ ಇತಿಹಾಸದಲ್ಲಿನ ಉಜ್ವಲ ಯುಗ ಎನ್ನುವರು. ಇದು ಇವರ ವಾಸ್ತು ಶಿಲ್ಪ ಮತ್ತು ಶಿಲ್ಪ ಕಲೆಗಳಿಗೂ ಅನ್ವಯವಾಗುತ್ತದೆ. ಇದಕ್ಕೆ ಅನೇಕ ಉದಾಹರಣೆಗಳು ಸುಗುತ್ತವೆ

1) **ಕೈಲಾಸನಾಥ ದೇವಾಲಯ** – ಇದು ಒಂದನೇ ಕೃಷ್ಣನಿಂದ ಕ್ರಿ. ಶ 770ರಲ್ಲಿ ನಿರ್ಮಿತವಾಯಿತು. ಗೋಡೆಗಳ ಮೇಲೆ ರಾಮಾಯಣ, ಮಹಾಭಾರತದ ದೃಶ್ಯಗಳನ್ನು ನಿರೂಪಿಸುವ ಶಿಲ್ಪಿಗಳ ಸಾಲುಗಳು.

ಈ ದೇವಾಲಯಕ್ಕೆ ಕೈಲಾಸ ದೇವಾಲಯ ಎನ್ನಲು ಮುಖ್ಯ ಕಾರಣವೇಣದರೆ "ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ಶಿಲ್ಪ" ಇದೊಂದು ಅದ್ಭೂತ ಕಲಾಕೃತಿ ಎಂಬುವುದರಲ್ಲಿ ಉತ್ತ್ರೇಕ್ಷೆಯಿಲ್ಲ ಕೈಲಾಸ ಭಾರಕ್ಕೆ G©âgÀÄªÀ gÁªÀt£À vÉÆÃ¼ÀÄUÀ¼ÀÄ, ¥ÀªÀðvÀ ¨sÁgÀPÉÌ vÀVÎgÀÄªÀ CªÀ£À 10 vÀ¯ÉUÀ¼ÀÄ, ²ªÀ£À ªÀÄÄRzÀ°è£À D£ÀAzÀ ¨sÁªÀ, ¥ÁªÀðwAiÀÄ ªÀÄÄRzÀ°è£À DvÀAPÀ J®èªÀ£ÀÄß PÁt§ºÀÄzÀÄ EzÀÄ CªÀgÀ PÀ¯Á ¥sËærªÉÄUÉ ¸ÁQë.

**ತಲೆದಂಡ ರಾವಣನ ಶಿಲ್ಪ** – ತನ್ನ ತಲೆಯನ್ನು ಶಿವನಿಗೆ ಅರ್ಪಿಸುತ್ತಿರುವ ರಾವಣನ ಶಿಲ್ಪವು ಅತ್ಯಂತ ಆಕರ್ಷಕವಾಗಿದೆ.

ಗಂಗೆಯನ್ನು ಭೂಮಿಗೆ ಕರೆತರುತ್ತಿರುವ ಗಂಗಾವತರಣ ಇಲ್ಲಿ ಗಂಗೆಯ ರಭಸವನ್ನು ತಡೆಯಲು ಶಿವ ತನ್ನ ಜಟೆಯನ್ನು ಅಡ್ಡಲಾಗಿ ಹಿಡಿದು ನಿಂತಿರುವುದು ಶಿಲ್ಪ ಪ್ರೌಡಿಮೆಯಾಗಿದೆ.

ದಶಾವತಾರ ಗುಹೆ, ರಾಮೇಶ್ವರ ಗುಹೆ, ಎಲಿಪೆಂಟಾದ ಗುಹೆಗಳಲ್ಲಿ "ತ್ರಿಮೂರ್ತಿ ವಿಗ್ರಹ" ಇವರ ಕಾಲದ ಕಲಾ ಪ್ರೌಡಿಮೆಗಳು.

**ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಕಲೆ.**

ಇವರು ಶಾಸ್ತ್ರಗಳಲ್ಲಿ ವರ್ಣಿತವಾದಂತೆ ಧಾರ್ಮಿಕ ದೇವತೆಗಳ ಮೂರ್ತಿಗಳನ್ನು ಕೆತ್ತಿದ್ದಾರೆ.

ಕಲ್ಯಾಣ ಚಾಲುಕ್ಯರ ಮೂರ್ತಿಗಳು ಕಲಾತ್ಮಕ ಸಂಸ್ಕರಣವನ್ನು ಹೆಚ್ಚಾಗಿ ಹೊಂದಿದ್ದವು

ಇವರ ಶಿಲ್ಪಗಳಲ್ಲಿ ಅತ್ಯಬ್ಬು, ಉಬ್ಬು ಮತ್ತು ಅರೆ ಉಬ್ಬುಗಳ ವಿಂಗಡಿಸಬಹುದು.

ಮೂರ್ತಿಯ ಹಿಂಭಾಗದಲ್ಲಿ ವಿಶಾಲವಾದ ಫಲಕವನ್ನು ಒಟ್ಟು ಮೂರ್ತಿಯ ಉಬ್ಬು ಶಿಲ್ಪವನ್ನಾಗಿಸಿದ್ದಾರೆ.

ಬಹುತೇಕ ವಿಗ್ರಹಗಳು 'ಶಿವನಿಗೆ' ಸಂಬಂಧಿಸಿದೆ,

ಬಳ್ಳಿಗಾವೆಯ ತ್ರಿಪುರಾಂತರ ದೇವಾಲಯದಲ್ಲಿ ಪಂಚತಂತ್ರ ಕಥೆಗಳಿದ್ದು ಪ್ರಾಣಿಗಳನ್ನು ಸುಂದರವಾಗಿ ಕೆತ್ತಲಾಗಿದೆ.

ಗದುಗಿನ ತ್ರಿಕೂಟೇಶ್ವರ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯ ಇತ್ಯಾದಿ ಇವರ ಕಾಲದ ರಚನೆಗಳು.

**ಹೊಯ್ಸಳರ ಕಾಲದ ಶಿಲ್ಪಕಲೆ**

- ಇವರು ದೇವಾಲಯಗಳು ಮತ್ತು ಶಿಲ್ಪಗಳ ನಿರ್ಮಾಣಕ್ಕೆ ಕಣ ಶಿಲೆಗಳನ್ನು ಅಥವಾ ಹಸಿರು ಮಿಶ್ರಿತ ಕಪ್ಪು ಬಣ್ಣದ ಬಳಪದ ಕಲ್ಲು ಬಳಸಿದರು.
- ಹಳೆಬೀಡಿನ ಹೊಯ್ಸಳರ ದೇವಾಲಯ ಇವರ ಶೈಲಿಯ ದೊಡ್ಡ ದೇವಾಲಯ ಮಾವುತ ಸಮೇತರಾಗಿರುವ ಆನೆಗಳು. ಚೆಲ್ಲಾಟವಾಡುತ್ತಿರುವ ಆನೆಗಳು ಇನ್ನು ಅನೇಕ ರಚನೆಗಳು ಶಿಲ್ಪಕಲೆಗೆ ಉತ್ತಮ ಉದಾಹರಣೆ
- ಬೇಲೂರಿನ ಚನ್ನಕೇಶ್ವರ ದೇವಾಲಯ – ಇಲ್ಲಿನ ಕೇಶವ ವಿಗ್ರಹ 9 ಅಡಿಗಳ ಉತ್ತರದ ದಿವ್ಯಾಭರಣ ಭೂಷಿತ ಮುಕುಟದಾರಿಯಾದ ಈ ವಿಗ್ರಹ ಎಡಬಲಗಳಲ್ಲಿ ಶ್ರೀ ದೇವಿ ಮತ್ತು ಭೂದೇವಿಯರು ನಿಂತಿದ್ದಾರೆ
- ಸೋಮನಾಥಪುರದ ಕೇಶವ ದೇವಾಲಯ
- ಲಕ್ಷ್ಮಿನರಸಿಂಹ ದೇವಾಲಯ ನುಗ್ಗೆನಹಳ್ಳಿ
- ಹಾರನ ಹಳ್ಳಿಯ ಭೋಗ ನರಸಿಂಹ ಸ್ವಾಮಿ ದೇವಾಲಯ

ಇದಲ್ಲದೆ ಮದನಿಕರು ಹೊಯ್ಸಳ ಶಿಲ್ಪ ಕಲೆಯ ಸರ್ವಾಂಗಿಣ ಸುಂದರ ಕೊಡುಗೆಗಳು.
ನವರಂಗದಲ್ಲಿರುವ ಮದನಿಕೆಯೊಬ್ಬಳು ತೋಳ ಮೇಲೆ ಕುಳಿತ ಗಿಣಿಗೆ ಹಣ್ಣು ನೀಡುತ್ತಿರುವ ಶಿಲ್ಪ ಅತ್ಯಂತ ಆಕರ್ಷಕವಾಗಿದೆ.

**ಸಾಹಿತ್ಯ**

**ಕದಂಬರ ಕಾಲದ ಸಾಹಿತ್ಯ:** ಕ್ರಿ. ಶ 450ರ ಸುಮಾರಿನ ಹಲ್ಮಿಡಿ ಶಾಸನವೇ ಸದ್ಯಕ್ಕೆ ಕನ್ನಡದ ಮೊದಲ ಲಿಖಿತ ದಾಖಲೆ ಎನ್ನಬಹುದು 2ನೇ ಕಾಳಿದಾಸನ "ಕುಂತಳೇಶ್ವರ ದೌತ್ಯ", ಶಾಂತಿನಾಥನ 'ಸುಕುಮಾರ ಚರಿತೆ' ಚಂದ್ರರಾಜನ 'ಮದನ ತಿಲಕ' ನಾಗವರ್ಮನ ಚಂದ್ರ ಚೂಡಾಮಣಿಗಳು ಕನ್ನಡ ಸಾಮ್ರಾಜ್ಯದಲ್ಲಿ ರಚಿಸಲ್ಪಿಟ್ಟಿದ್ದರೂ.

**ಗಂಗರ (ತಲಕಾಡಿನ) ಕಾಲದಲ್ಲಿ ಸಾಹಿತ್ಯ**

ಇವರ ಕಾಲದಲ್ಲಿ ಹಾಗೂ ಸಂಸ್ಕೃತ ಸಾಹಿತ್ಯಗಳೆರಡು ಅಭಿವೃದ್ಧಿ ಹೊಂದಿದವು.

ದುರ್ವಿನೀತನು (ಗಂಗರಾಜ) ಭಾರವಿಯ 'ಕಿರಾತಾರ್ಜುನೀಯ' ದ ಕೆಲ ಭಾಗಗಳು ಮೇಲೆ ಭಾಷ್ಯಬರೆದನು ಹಾಗೂ ವಡ್ಡಾರಾಧನೆಯನ್ನು ಸಂಸ್ಕೃತಕ್ಕೆ ಭಾಷಾಂತರಿಸಿದನು. ಹೀಗಾಗಿ ಕವಿರಾಜಮಾರ್ಗ ಈತನನ್ನು 'ಕನ್ನಡದ ಕವಿ" ಎಂದು ವ್ಯಾಖ್ಯಾನಿಸಿದೆ.

ಸೈಗೊಟ್ಟ ಶಿವಕುಮಾರನ 'ಗಜಾಷ್ಟಕ' ಎಂಬ ಕೃತಿಯನ್ನು ರಚಿಸಿದನು. ಸಂಸ್ಕೃತದಲ್ಲಿ 'ಗಜಮಾತಾ ಕಲ್ಪನಾ' ಎಂಬ ಕೃತಿಯನ್ನು ಸಹ ರಚಿಸಿದನು.

ಚಾವುಂಡರಾಯನು "ಚಾವುಂಡರಾಯ ಪುರಾಣವನ್ನು' ರಚಿಸಿದನು ಬಾದಾಮಿ ಚಾಲುಕ್ಯರ ಕಾಲದಲ್ಲಿ ಸಾಹಿತ್ಯ

ಸಾಹಿತ್ಯಕ್ಕಿಂತ ಕಲೆ, ವಾಸ್ತುಶಿಲ್ಪಕ್ಕೆ ಮಹತ್ವ ನೀಡಿದ್ದರು ಈ ಅವಧಿಯಲ್ಲಿ ರಚಿಸಲ್ಪಟ್ಟ ಪ್ರಸಿದ್ಧ ಸಂಸ್ಕೃತ ನಾಟಕವೆಂದರೆ "ಕೌಮುದಿ ಮಹೋತ್ಸವ" ಇದನ್ನು ವಿಜಯ ಭಟ್ಟಾರಿಕೆ ರಚಿಸಿದರು.

**ರಾಷ್ಟ್ರಕೂಟರ ಕಾಲದಲ್ಲಿ ಕನ್ನಡ ಸಾಹಿತ್ಯ**

ಕನ್ನಡ ಸಾಹಿತ್ಯದ ಪ್ರೌಡಿಮೆಯ ಕಾಲಗಳು ಎನ್ನಬಹುದು ಪ್ರಮುಖ ಸಂಸ್ಕೃತ ಸಾಹಿತ್ಯಗಳು:–

1) ನೆಳಭಂಪು – ತ್ರಿವಿಕ್ರಮ ಪಂಡಿತ
2) ಕವಿ ರಹಸ್ಯ – ಹಲಾಯುಧನು ರಚಿಸಿದನು
3) ಯಶಸ್ವಿತಿಲಕ ಜೈನ ಕಾವ್ಯ – ಸೋಮದೇವ ಸೂರಿ
4) ಗಣಿತ ಸಾರ ಸಂಗ್ರಹ – ಮಹಾವೀರಾಚಾರ್ಯ.

**ಕನ್ನಡ ಸಾಹಿತ್ಯದಲ್ಲೂ ಅನೇಕ ಕೃತಿಗಳು ರಚಿತವಾದವು:_**

ಪಂಪ, ಪೊನ್ನರು ಈ ಕಾಲದ ಗಣ್ಯ ಕನ್ನಡ ಕವಿಗಳು ಪಂಪನ 'ಆದಿಪುರಾಣ' ಮತ್ತು ವಿಕ್ರಮಾರ್ಜುನ ವಿಜಯ ಪೊನ್ನನ ಶಾಂತಿಪುರಾಣ, ಭುವನೈಕ್ಯ ರಾಮಾಭ್ಯದಯಂ ಎಂಬ ಕೃತಿಗಳು ಪ್ರಮುಖವಾಗಿವೆ. ಅಂತೆಯೇ ಕನ್ನಡದ ಮೊದಲ ಉಪಲಬ್ಧ ಕೃತಿ 'ಕವಿರಾಜ ಮಾರ್ಗ'ವನ್ನು ನೃಪತುಂಗನ ಆಸ್ಥಾನಿಕ ಶ್ರೀ ವಿಜಯನು ರಚಿಸಿದನು.

**ಕಲ್ಯಾಣಿ ಚಾಲುಕ್ಯರ ಕಾಳದಲ್ಲಿ ಸಾಹಿತ್ಯ.**

ಸುಮಾರು 10 ರಿಂದ 12ನೇ ಶತಮಾನಗಳ ಕಾಲ ಇವರದ್ದು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಕೃತಿಗಳು ರಚನೆಯಾದವು

**ಸಂಸ್ಕೃತ ಗ್ರಂಥಗಳು:–** ಬಿಲ್ಹಣನ "ವಿಕ್ರಮಾಂಕದೇವ ಚರಿತೆ", ವಿಜ್ಞಾನೇಶ್ವರನ "ಮಿತಾಕ್ಷರ ಸಂಹಿತೆ", 3ನೇ ಸೋಮಶ್ವರನ "ಮನೋಲ್ಲಾಸ" ಪ್ರಮುಖ ಸಂಸ್ಕೃತ ಕೃತಿಗಳು

**ಕನ್ನಡ ಸಾಹಿತ್ಯ.**

ರನ್ನನ 'ಗದಾಯುದ್ಧ' ಮತ್ತು 'ಅಜಿತ ಪುರಾಣ' ರನ್ನನನ್ನು "ಕವಿ ಚಕ್ರವರ್ತಿ" ಎಂಬ ಬಿರುದನ್ನು ಕೂಡಾ ನೀಡಿದ್ದರು.

1ನೇ ನಾಗ ವಮನ "ಕರ್ಣಾಟ ಕಾದಂಬರಿ" ಮತ್ತು 'ಛಂದೋ ಬುದಿ' ಪ್ರಮುಖ ಕೃತಿಗಳು ದುರ್ಗಸಿಂಹನ ಪಂಚತಂತ್ರ, ನಾಗಚಂದ್ರನ ರಾಮಚಂದ್ರ ಚರಿತ ಪುರಾಣ (ಕನ್ನಡದ ಜೈನರಾಮಾಯಣ) ಈ ಕಾಲದ ಪ್ರಮುಖ ಸಾಹಿತ್ಯ ಕೃತಿಗಳು

12ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲವನ್ನು "ವಚನ ಸಾಹಿತ್ಯದ ಕಾಲ" ಎಂದು ಕರೆಯುತ್ತಾರೆ.

ಪ್ರಮುಖ ವಚನಕಾರರು – ಜೇಡರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣನವರು ಪ್ರಮುಖರು.

**ಹೊಯ್ಸಳರ ಕಾಲದಲ್ಲಿ ಸಾಹಿತ್ಯ.**

ಇವರ ಕಾಲದಲ್ಲಿ ಕನ್ನಡ ಭಾಷೆ ಹೊಸ ಆಯಾಮದೊಂದಿಗೆ ಆರಂಭವಾಯಿತು.

ಧಾರ್ಮಿಕ ಚೌಕಟ್ಟಿನಿಂದ ಹೊರಬಂದು ಇತರ ಕ್ಷೇತ್ರಗಳಿಗೂ ಹಬ್ಬಿತು, ಪಂಡಿತರಿಂದ ಸಾಮಾನ್ಯರವರೆಗೂ ಸಾಹಿತ್ಯ ಹರಡಿತು ಕನ್ನಡ ಸಾಹಿತ್ಯ ಸಂಸ್ಕೃತ ಮತ್ತು ಪ್ರಭಾವದಿಂದ ಹೊರಬಂದು ಸ್ವತಂತ್ರ ಸಹಿತ್ಯವಾಗಿ ಹೊರ ಹೊಮ್ಮಿತು. ಚಂಪೂ ಶೈಲಿ, ಷಟ್ಪದಿ, ರಗಳೆ, ವಚನಗಳೆಂಬ ಪ್ರಕಾರದಲ್ಲಿ ಹೊರಹೊಮ್ಮಿತು.

**ಕನ್ನಡದ ಪ್ರಮುಖ ಕೃತಿಗಳು.**

ಜನ್ನನ ಯಶೋಧರ ಚರಿತೆ, ಅನಂತನಾಥ ಪುರಾಣ, ರುದ್ರಭಟ್ಟನ ಜಗನ್ನಾಥ ವಿಜಯ.

ಹರಿಹರನ ಗಿರಿಜಾಕಲ್ಯಾಣ, ಶಿವಶರಣ ರಗಳೆ, ಬಸವರಾಜ ದೇವರ ರಗಳೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸಿದ್ಧಾರಾಮ ಪುರಾಣ ಕೇಶರಾಜನ ಶಬ್ದಮಣಿ ದರ್ಪಣ, ಮುಂತಾದವು ಪ್ರಮುಖ ಕನ್ನಡ ಸಾಹಿತ್ಯ ಕೃತಿಗಳು

**ಧರ್ಮ, ಕದಂಬರಿಂದ ಹೊಯ್ಸಳರವರೆಗೆ**

1) **ಕದಂಬರ ಕಾಲದಲ್ಲಿ:–** ವೈಧಿಕ ಧರ್ಮ ಚಾಲ್ತಿಯಲ್ಲಿ ಬನವಾಸಿಯ ಮಧುಕೇಶ್ವರ ಇವರ ಆರಾಧ್ಯ ದೇವರಾಗಿತ್ತು. ಇವರು ಬ್ರಾಹ್ಮಣರಾಗಿದ್ದರೂ ಕ್ಷತ್ರಿಯರಂತೆ 'ವರ್ಮ ಎಂಬ ಉಪನಾಮ ಸ್ವೀಕರಿಸಿದರು.

ವಿಷ್ಣು ವರ್ಮ ಇನ್ನೊಬ್ಬ ಕದಂಬ ಅರಸ ತನ್ನನ್ನು "ಬ್ರಾಹ್ಮಣ ಧರ್ಮದ ರಕ್ಷಕ'ನೆಂದು ಕರೆದುಕೊಂಡಿದ್ದಾನೆ.

ಇತರ ಅರಸರು ವೈಷ್ಣವ ಧರ್ಮವನ್ನು ಅನುಸರಿಸುತ್ತಿದ್ದರು ಬನವಾಸಿ ಬೌದ್ಧಕೇಂದ್ರವಾಗಿತ್ತು. ಹಾಗೆಯೇ ಮೃಗೇಶ ವರ್ಮನಿಗೆ "ಶ್ರುತ ಕೀರ್ತಿ" ಎಂಬ ಜೈನ ಸೇನಾನಿ ಇದ್ದ ಒಟ್ಟಾರೆಯಾಗಿ "ಸರ್ವಧರ್ಮ ಸಹಿಷ್ಣುತಾ" ಮನೋಭಾವನೆ ಹೊಂದಿದ್ದರು.

2) **ಗಂಗರ ಕಾಲದಲ್ಲಿ** – ಜೈನ, ವೈಧಿಕ ಸಂಪ್ರಧಾಯಗಳೆರಡೂ ಪ್ರಬಲವಾಗಿದ್ದವು ಬೌದ್ಧ ಸಂಪ್ರದಾಯ ರಾಜಾಶ್ರಯವಿದ್ದರೂ ಮಹತ್ವವಿರಲಿಲ್ಲ ಈ ಸಾಮ್ರಾಜ್ಯದ ಅರಸರು "ಗೋಬ್ರಾಹ್ಮನ ರಕ್ಷಕರೆಂದು" ಕರೆದು ಕೊಂಡಿದ್ದಾರೆ.

ಜೈನ ಧರ್ಮ ರಾಜ್ಯ ಧರ್ಮವಾಗಿ ಬೆಳೆಯಿತು ಇವರ ಕಾಲದ ಭವ್ಯ ಮೂರ್ತಿ ಶಿಲ್ಪವೇ "ಗೊಮ್ಮಟನ ಅಥವಾ ಬಾಹುಬಲಿಯ ಮೂರ್ತಿ ಶಿಲ್ಪ". ಇವರ ಕಾಲವನ್ನು ಕರ್ನಾಟಕದ ಜೈನಧರ್ಮದ ಚರಿತೆಯಲ್ಲಿ ಸುವರ್ಣ ಯುಗ" ಎನ್ನುವರು.

3) **ಬಾದಾಮಿ ಚಾಲುಕ್ಯರ ಕಾಲದಲ್ಲಿ.**

ವೈದಿಕ ಧರ್ಮ:– ಇವರ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಅಥವಾ ವೈದಿಕ ದೇವಾಲಯಗಳನ್ನು ನಿರ್ಮಿಸಿದರು. ಇವರು ಧರ್ಮದ ಅನುಯಾಯಿಗಳಗಿದ್ದರು. ಶಿವ, ವಿಷ್ಣು, ಕಾರ್ತಿಕೇಯ, ಗಣಪತಿ, ಸೂರ್ಯ ಮತ್ತು ಸಪ್ತ ಮಾತೃಕೆಯನ್ನು ಶಿಲ್ಪಗಳನ್ನು ನಿರ್ಮಿಸಿ ಮಹತ್ವ ನೀಡಿದರು

ಜೈನಧರ್ಮ ಮತ್ತು ಬೌದ್ಧ ಧರ್ಮಕ್ಕೆ ಕೂಡಾ ಚಾಲುಕ್ಯರ ಕಾಲದಲ್ಲಿ ಮನ್ನಣೆ ಮತ್ತು ಮಾನ್ಯತೆಯಿತ್ತು. ಇದಕ್ಕೆ ಉತ್ತಮ ಉದಾಹರಣೆ ಜೈನ ವಿದ್ವಾಂಸರಿಗೆ ಮನ್ನಣೆ ನೀಡಿದ್ದರು. ಎರಡನೇಯ ಪುಲಕೇಶಿಯ ದಂಡನಾಯಕ ರವಿಕೀರ್ತಿಯು ಜೈನ ಧರ್ಮದವನಾಗಿದ್ದು, ಐಹೊಳೆಯಲ್ಲಿ ಮೇಗುತಿ ದೇವಾಲಯ ನಿರ್ಮಿಸಿದನು.

ಚಾಲುಕ್ಯ ರಾಜ್ಯದಲ್ಲಿ 100 ಬೌದ್ಧ ಸಂಘಗಳು ಹಾಗೂ 10,000 ಭೌದ್ಧ ಬಿಕ್ಷುಗಳಿದ್ದರು ಎಂಬುದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

4) **ರಾಷ್ಟ್ರಕೂಟರ ಕಾಲದಲ್ಲಿ**

ಇವರು ಶೈವ ಮತ್ತು ವೈಷ್ಣವ ಧರ್ಮದ ಅನುಯಾಯಿಗಳಗಿದ್ದರು ಇವರ ಲಾಂಛನ ಕೂಡಾ ಗರುಡ ಪಕ್ಷಿ.

ಇವರು ಬಹುತೇಕ ಶಾಸನಗಳು ಶಿವ ಮತ್ತು ವಿಷ್ಣುವಿನ ಸ್ತುತಿಯಿಂದ ಆರಂಭವಾಗುತ್ತದೆ.

ನಾಗರ ಪೂಜೆ, ಶಕ್ತಿಯ ಆರಾಧನೆ, ವೃಷಭದ ಆರಾಧನೆ ಈ ಕಾಲದ ಹಿಂದೂ ಧರ್ಮದಲ್ಲಿ ಕಂಡುಬರುವ ವಿಶೇಷ.

**ಜೈನ ಧರ್ಮ** – ಇವರ ಕಾಲದಲ್ಲಿ ರಾಜಾಶ್ರಯವನ್ನು ಪಡೆದಿದ್ದು ಅತ್ಯುತ್ತಮ ಸಾಹಿತ್ಯ ಹೊರಹೊಮ್ಮಿತು.

**ಭೌದ್ಧ ಧರ್ಮ** – ವೈದಿಕ ಮತ್ತು ಜೈನ ಧರ್ಮಗಳಿಗೆ ಹೋಲಿಸಿದರೆ ಅಷ್ಟೇನು ಪ್ರಾಮುಖ್ಯತೆ ಹೊಂದಿರಲಿಲ್ಲ. ಡಂಬಲ, ಕನ್ಹೇರಿ ಪ್ರಮುಖ ಭೌದ್ಧ ಕೇಂದ್ರಗಳಾಗಿದ್ದವು

**ಇಸ್ಲಾಂ ಧರ್ಮ:–** ಕರ್ನಾಟಕಕ್ಕೆ ಇಸ್ಲಾಂ ಧರ್ಮ ಆಗಮನವಾಯಿತು ಅರಬ ಪ್ರವಾಸಿಗ ಸುತ್ವಿಮಾನ ಅಮೋಘವರ್ಷನ ಆಸ್ಥಾನಕ್ಕೆ ಭೇಟಿ ನೀಡಿದ್ದರು. ರಾಷ್ಟ್ರಕೂಟ ಅರಸರು ಪಶ್ಚಿಮ ಕರಾವಳಿಯಲ್ಲಿ ಇಸ್ಲಾಂ ವರ್ತಕರಿಗೆ ಮಸಿದಿ ಕಟ್ಟಿಕೊಳ್ಳಲು ಅನುಮತಿ ನೀಡಿದನು. ಇವರನ್ನು ಸೈನಿಕರನ್ನಾಗಿ. ನೇಮಿಸಿಕೊಳ್ಳಲು ಆದೇಶಿಸಿದ್ದನೆಂದು ತಿಳಿದು ಬರುತ್ತದೆ

5) **ಕಲ್ಯಾಣಿ ಚಾಲುಕ್ಯರ ಕಾಳದಲ್ಲಿ**

ಇವರು ವೈಧಿಕ ಧರ್ಮದ ಅನುಯಾಯಿಗಳಾಗಿದ್ದರು. ಶೈವಧರ್ಮ" ಜನಪ್ರಿಯವಾಗಿತ್ತು ಶೈವ ಧರ್ಮದ ಶಾಖಾಗಳಾದ "ಪಾಶುಪಥ ಕಾಳಮುಖ" ಪಂಥಗಳು ಅಸ್ತಿತ್ವಕ್ಕೆ ಬಂದವು.

ಇವರ ಕಾಲದಲ್ಲಿ ವಚನ ಚಳುವಳಿ ಆರಂಭವಾಯಿತು.

6) **ಹೊಯ್ಸಳರ ಕಾಲದಲ್ಲಿ:–** ವೈದಿಕ ಧರ್ಮ ಜನಪ್ರಿಯವಾಗಿತ್ತು. ಎಲ್ಲ ಧರ್ಮವನ್ನು ಸಮನಾಗಿ ನೋಡುತ್ತಿದ್ದರು. ಹಿಂದೂ, ಜೈನ, ಬೌದ್ಧ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿ ತಮ್ಮನ್ನು 'ಚತುಸ್ಸಮಯ' ಉದ್ಧಾರಕರೆಮದು ಕರೆದುಕೊಂಡರು.

ಹೊಯ್ಸಳರು ಅನೇಕ ಜೈನ ದೇವಾಲಯ ಮತ್ತು ಬಸದಿಗಳನ್ನು ನಿರ್ಮಿಸಿ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಪ್ರಾರಂಭದಲ್ಲಿ ಜೈನ ದೊರೆ ವಿಷ್ಣುವರ್ಧನ ನಂತರ ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವನಾದನು

ಶೈವ ಧರ್ಮದ ಕಾಳಮುಖಕ ಮತ್ತು ಪಾಶುಪತ ಮತಗಳು ಅಸ್ತಿತ್ವದಲ್ಲಿದ್ದವು.

ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಧರ್ಮ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳು ಜನಪ್ರಿಯವಾಯಿತು ಮತ್ತು ಮೇಲುಕೋಟೆಯು ಚೆಲುವನಾರಾಯಣ ದೇವಾಲಯವನ್ನು ಕಟ್ಟಿಸಿ ಅಲ್ಲಿ ರಾಮಪ್ರಿಯ ಎಂಬ ವಿಷ್ಣು ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಬೌದ್ಧ ಧರ್ಮ ಇವರ ಕಾಲದಲ್ಲಿ ಕ್ಷೀಣಿಸಿತು.

## ಘಟಕ – 4

## ವಿಜಯನಗರ ಸಾಮ್ರಾಜ್ಯ ಮತ್ತು ನಂತರದ ಕಾಲ

**(1) ಸಾಮ್ರಾಜ್ಯದ ಉದಯ, ಉದ್ದೇಶ ಮತ್ತು ಮಹತ್ವಾಕಾಂಕ್ಷೆ**

ಕ್ರಿ.ಶ. 1336 ರಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡ ವಿಜಯನಗರ ಸಾಮ್ರಾಜ್ಯ ಸುಮಾರು 250 ವರ್ಷಗಳ ಆಳ್ವಿಕೆ ನಡೆಸಿ ಇಂದಿಗೂ ಜನಮಾನಸದಲ್ಲಿ ಜೀವಂತವಾಗಿದೆ. ವೈಭವದ ಅನ್ವರ್ಥಕ ಪದವೇ ವಿಜಯನಗರ ಎನ್ನುವಷ್ಟರ ಮಟ್ಟಿಗೆ.

ಈ ಸಾಮ್ರಾಜ್ಯದ ಉದಯವಾಗಲು ಪ್ರೇರಣೆ ನೀಡಿದ ಕೆಲವು ಅಂಶಗಳನ್ನು ಇತಿಹಾಸಕಾರರು ಈ ಕೆಳಗಿನ ರೀತಿ ವಿಶ್ಲೇಷಿಸಿದ್ದಾರೆ.

- ದಕ್ಷಿಣ ಭಾರತದ ರಾಜಕೀಯ ಶಕ್ತಿಯ ಸಮತೋಲನ ನಾಶವಾಗಿದ್ದು ಕಾರಣ ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣದ ದಂಡಯಾತ್ರೆ.
- ಮಹಮದ್ ಬಿನ್ ತುಘಲಕನ ದಕ್ಷಿಣ ದಂಡಯಾತ್ರೆ ಮತ್ತು ಅವನ ಅಸಮರ್ಥ ಆಡಳಿತ.
    - ದಕ್ಷಿಣವನ್ನು ತನ್ನ ನೇರ ಆಳ್ವಿಕೆಗೆ ಒಳಪಡಿಸಿದ ಮಹಮದ್–ಬಿನ್–ತುಘಲಕನು ದಕ್ಷಿಣಕ್ಕೆ ಸ್ಥಿರ ಆಡಳಿತ ಕೊಡುವಲ್ಲಿ ವಿಫಲನಾದನು. ಅದರ ಫಲವಾಗಿ ರಾಜಕೀಯ ಶೂನ್ಯತೆ ಕಾಣಿಸಿಕೊಂಡಿತು.
- ದಕ್ಷಿಣದಲ್ಲಿ ರಾಜಕೀಯ ಭದ್ರತೆ ಮತ್ತು ಶಾಂತಿಯ ಸ್ಥಾಪನೆಗಾಗಿ ಒಂದು ವಿಶಾಲ ಸಾಮ್ರಾಜ್ಯದ ಅವಶ್ಯಕತೆ ಕಾರಣವಾಯಿತೆನ್ನಬಹುದು.
    - ವಿಜಯನಗರ ಸ್ಥಾಪನೆಯ ಮೂಲ ಉದ್ದೇಶಗಳಲ್ಲಿ ಪ್ರಮುಖ ಅಂಶವೇನೆಂದರೆ, ವಿದೇಶಿ ಮುಸ್ಲಿಂರ ದಾಳಿಯಿಂದ ದಕ್ಷಿಣ ಭಾರತವನ್ನು ರಕ್ಷಿಸುವುದಾಗಿತ್ತು. ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸುವುದಾಗಿತ್ತು. ಒಟ್ಟಾರೆ ಹಿಂದೂ ಧರ್ಮ, ಜನರ ರಕ್ಷಣೆಯೇ ಮೂಲ ಉದ್ದೇಶವಾಗಿತ್ತು.

**ವಿದ್ಯಾರಣ್ಯರ ಪಾತ್ರ**

ಹರಿಹರ ಮತ್ತು ಬುಕ್ಕರಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಸುಮಾರು 250 ವರ್ಷಗಳಿಗೂ ಅಧಿಕ ಕಾಲ ಅಧಿಕಾರದಲ್ಲಿದ್ದು, ದಕ್ಷಿಣ ರಾಜ್ಯಗಳಲ್ಲಿ ರಾಜಕೀಯ ಶೂನ್ಯತೆಯನ್ನು ಹೋಗಲಾಡಿಸಿ ಹಿಂದಿನಿಂದ ಬೆಳೆದು ಬಂದಿದ್ದ ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಿತು. ಇದೆಲ್ಲದರ ಮೂಲ ಪ್ರೇರಕ ಶಕ್ತಿ ಶೃಂಗೇರಿಯ ಗುರುಗಳಾದ ಶ್ರೀ ವಿದ್ಯಾರಣ್ಯರು,

- ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದ ಹರಿಹರ–ಬುಕ್ಕರಾಯರನ್ನು ಮರಳಿ ಹಿಂದೂ ಧರ್ಮಕ್ಕೆ ಮರಳಿಸಿ ವಿಶಾಲ ವಿಜಯನಗರ ಸಾಮ್ರಾಜ್ಯವನ್ನು '1336 ರಲ್ಲಿ' ಸ್ಥಾಪಿಸಲು ಮಾರ್ಗದರ್ಶನ ಮತ್ತು ಆಶೀರ್ವಾದವನ್ನು ನೀಡಿದ ಗುರುಗಳ ಹಿರಿಮೆ ದೊಡ್ಡದು.
- ಶ್ರೀ ವಿದ್ಯಾರಣ್ಯರನ್ನು 2ನೇ ಹರಿಹರನು ತನ್ನ ಶಾಸನದಲ್ಲಿ **"ದಿವ್ಯ ಜ್ಯೋತಿ ಅವತಾರ"** ಎಂದು ಕರೆದಿದ್ದಾನೆ.

**ವಿಜಯನಗರದ ರಾಜಕೀಯ ಇತಿಹಾಸ**

**1) ಹರಿಹರ(1336–56)** – ಈತನು ವಿಜಯನಗರ ಸಾಮ್ರಾಜ್ಯದ ಮೂಲ ಪುರುಷ ಮತ್ತು ಸಂಗಂ ಸಂತತಿಯ ಮೊದಲ ದೊರೆ ಮತ್ತು ಸ್ಥಾಪಕ. ಈತನಿಗೆ **"ವೇದಮಾರ್ಗ ಸ್ಥಾಪನಾಚಾರ್ಯ"** ಎಂಬ ಬಿರುದಿದೆ.

**2) 1ನೇ ಬುಕ್ಕರಾಯ(1356–1372)** – ಈತನ ಕಾಲದಲ್ಲಿಯೇ ಬಹುಮನಿ ಮತ್ತು ವಿಜಯನಗರ ನಡುವೆ ಕೃಷ್ಣೆ–ತುಂಗಭದ್ರಾ ನದಿಗಳ ನಡುವಿನ ದೋ–ಹಬ್‌ನ ನಿಯಂತ್ರಣಕ್ಕೆ ಕದನ ಆರಂಭವಾಯಿತು.

- ಇವನ ಹಿರಿಯ ಮಗ ಕಂಪಣ್ಣನು ಮಧುರೆಯ ಸುಲ್ತಾನನನ್ನು ಸೋಲಿಸಿ ಶ್ರೀರಂಗಂನ್ನು ಗೆದ್ದು "ಶ್ರೀ ರಂಗನಾಥ ಸ್ವಾಮಿಯ ವಿಗ್ರಹವನ್ನು ಪುನರ್ ಪ್ರತಿಷ್ಠಾಪಿಸಿದನು" ಇದರ ಕುರಿತು ಇವನ ಹೆಂಡತಿ "ಮಧುರ ವಿಜಯಂ" ಎಂಬ ಕೃತಿ ರಚಿಸಿದ್ದಾಳೆ.

**3) <u>ಇಮ್ಮಡಿ ದೇವರಾಯ(1424–1446)</u>** – ಈತನು ಸಂಗಂ ಸಂತತಿಯ ಪ್ರಸಿದ್ಧ ರಾಜನು ಈತನಿಗೆ "ಗಜ ಬೇಂಟೆಗಾರ" ಎಂಬ ಬಿರುದಿತ್ತು. ಈತನ ಸೇನಾನಿ ಲಕ್ಕಣ್ಣ ದಂಡೇಶನು ಸಿಂಹಳಕ್ಕೆ ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಆದ್ದರಿಂದ ದೇವರಾಯನಿಗೆ **"ದಕ್ಷಿಣ ಸಮುದ್ರಾಧಿಪತಿ"** ಎಂಬ ಬಿರುದಿತ್ತು.

- ಅಬ್ದುಲ ರಜಾಕ್ ಎಂಬ ಪರ್ಷಿಯಾ ರಾಯಭಾರಿ ಇವನ ಆಸ್ಥಾನಕ್ಕೆ ಭೇಟಿ ನೀಡಿ ವೈಭವವನ್ನು ಹಾಡಿ ಹೊಗಳಿದ್ದಾನೆ.

ಇವನು ವಿದ್ವಾಂಸನಾಗಿದ್ದು ಸ್ವತ: **"ಮಹಾನಾಟಕ ಸುಧಾನಿದಿ"** ಹಾಗೂ **"ಬ್ರಹ್ಮಸೂತ್ರ ವೃತಿ"** ಎಂಬ ಸಂಸ್ಕೃತ ಕೃತಿಯನ್ನು ರಚಿಸಿದ್ದನು.

**4) <u>ಕೃಷ್ಣದೇವರಾಯ (1509–1529)</u>** – ವಿಜಯನಗರ ಅರಸರಲ್ಲಿ ಅತ್ಯಂತ ಶ್ರೇಷ್ಠ ಮತ್ತು ಧೈರ್ಯಶಾಲಿ ರಾಜನು, ಯೋಧನು ಆಗಿದ್ದನು. ತನ್ನ ಎಲ್ಲಾ ಯುದ್ಧದಲ್ಲೂ ಜಯಗಳಿಸಿ, ತನ್ನ ಸಾಮಂತರನ್ನು ನೆರೆ–ಹೊರೆಯ ನಾಯಕರನ್ನು ಅಂಕೆಯಲ್ಲಿಟ್ಟಿದ್ದನು.

- ಒರಿಸ್ಸಾದ ಗಜಪತಿಯ ಪ್ರತಾಪರುದ್ರನೊಂದಿಗೆ 7 ವರ್ಷಗಳ ಕಾಲ ಸೆಣಸಿ ಅದನ್ನು ಗೆದ್ದನು.
- ಪೋರ್ಚುಗೀಸರೊಂದಿಗೆ ಮಧುರ ಬಾಂಧವ್ಯ ಹೊಂದಿದ್ದು, "ಕುದುರೆಗಳು ಹಾಗೂ ಇತರ ವಸ್ತುಗಳನ್ನು ಆಮದು ಮಾಡುತ್ತಿದ್ದನು".
- ಈತನಿಗೆ **"ಯವನರಾಜ್ಯ ಪ್ರತಿಷ್ಠಾಪನಾಚಾರ್ಯ"** ಎಂಬ ಬಿರುದಿದೆ.
- ಸ್ವತ: ವಿದ್ವಾಂಸನಾಗಿದ್ದ ಕೃಷ್ಣದೇವರಾಯ **"ಅಮುಕ್ತ ಮೌಲ್ಯ"**ದ ಅಥವಾ **"ವಿಷ್ಣು ಚಿತ್ತಯಮು"** ಎಂಬ ಕೃತಿಯನ್ನು ತೆಲುಗಿನಲ್ಲೂ, **"ಜಾಂಬವತಿ ಕಲ್ಯಾಣ"** ಸಂಸ್ಕೃತದಲ್ಲೂ ರಚಿಸಿದನು.

**5) <u>ಅಳಿಯ ರಾಮರಾಯ(1543–1565)</u>**

ರಾಮರಾಯ ಒಬ್ಬ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಯಾಗಿದ್ದು ವಿಜಯನಗರಕ್ಕೆ ಹಿಂದಿನ ವೈಭವವನ್ನು ಮರಳಿ ಗಳಿಸಿ ಕೊಟ್ಟನು. ಇವನು ತೆಲುಗು ಅರವೀಡು ವಂಶಕ್ಕೆ ಸೇರಿದವನಾಗಿದ್ದು, ಕೃಷ್ಣದೇವರಾಯನ ಮಗಳು ತಿರುಮಲಾಂಬೆಯನ್ನು ಮದುವೆಯಾದನು.

ದಕ್ಷ ಆಡಳಿತಗಾರ, ರಾಜತಾಂತ್ರಿಕ ನಿಪುಣ, ವೀರಸೇನಾನಿಯಾಗಿದ್ದು ವಿಜಯನಗರವನ್ನು ಉನ್ನತಸ್ಥಾನಕ್ಕೆ ಏರಿಸಬೇಕೆಂಬ ಅಧಮ್ಯ ಇಚ್ಛೆಯುಳ್ಳವನಾಗಿದ್ದ. ಇವನ ಆಸೆ ಆಕಾಂಕ್ಷೆಗಳೇ ವಿಜಯನಗರ ಪತನಕ್ಕೂ ಕಾರಣವಾಯಿತು.

**<u>ತಾಳಿಕೋಟೆ ಕದನ ಮತ್ತು ಅದರ ಪರಿಣಾಮಗಳು</u>**

ಕ್ರಿ.ಶ. 1565 ಜನವರಿ 23 ರಂದು ಈ ಕದನವು ಆರಂಭವಾಯಿತು. ಅಳಿಯ ರಾಮರಾಯನು ಬಿಜಾಪುರದ ಸುಲ್ತಾನನ ರಾಯಚೂರು–ಮುದ್ಗಲ್ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ಇದು ಯುದ್ಧಕ್ಕೆ ಪ್ರಮುಖ ಕಾರಣವಾಯಿತು.

ಬಿಜಾಪುರದ ಅಲಿ ಆದಿಲ್ ಷಾಹಿಗೆ ಇತರ ಷಾಹಿ ಸುಲ್ತಾನರು ಅಂದರೆ ಬೀದರ್‌ನ ಬರಿದ್ ಷಾಹಿ, ಗೋಲ್ಕಂಡದ ಕುತುಬ್ ಷಾಹಿ, ಮತ್ತು ಅಹಮದ್ ನಗರದ ನಿಜಾಂ ಷಾಹಿಗಳು ಬೆಂಬಲಿಸಿದರು. ಆದರೆ **ಬಿರಾರ್‌ನ ಬರಿದ್ ಷಾಹಿ** ಇದರಲ್ಲಿ ಭಾಗವಹಿಸಿರಲಿಲ್ಲ.

- ವಿಜಯನಗರದ ಸೇನೆಯ ನೇತೃತ್ವವನ್ನು ವಯೋವೃದ್ಧ ರಾಮರಾಯ ಮತ್ತು ಅವನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ವಹಿಸಿದ್ದರು.
- ಯುದ್ಧದ ಆರಂಭದಲ್ಲಿ ವಿಜಯನಗರ ಸೇನೆ ಜಯವನ್ನು ಸಾಧಿಸಿದರೂ ಅಂತಿಮ ಹಂತದಲ್ಲಿ ಹಿನ್ನಡೆಯಾಯಿತು.
- ಕಾರಣವೇನೆಂದರೆ ವಿಜಯನಗರ ಸೇನೆಯಲ್ಲಿದ್ದ ಮುಸ್ಲಿಂ ಸೇನಾಧಿಪತಿ ಗಿಲಾನಿ ಸಹೋದರರ ನಂಬಿಕೆ ದ್ರೋಹ.

ಇದೇ ಸಮಯದಲ್ಲಿ ರಾಮರಾಯನನ್ನು ಸೆರೆಹಿಡಿದ ಮುಸ್ಲಿಂ ಸೈನ್ಯ ರಾಮರಾಯನ ತಲೆ ಕತ್ತರಿಸಿ ರಣರಂಗದಲ್ಲಿ ಪ್ರದರ್ಶನ ಮಾಡಿದರು. ಇದರಿಂದ ಸೈನ್ಯ ದಿಕ್ಕಾಪಾಲಾಯಿತು.

**<u>ವಿಜಯನಗರದ ಸೋಲಿಗೆ ಕಾರಣ</u>**

(1) ಸರಿಯಾದ ತರಬೇತಿ ಹೊಂದಿಲ್ಲದ ಅಸಮರ್ಥ ಸೇನೆಯಾಗಿತ್ತು.

(2) ಪರ್ಷಿಯಾದ ಕುದುರೆಗಳ ಬಳಕೆ ನಿಲ್ಲಿಸಿದ್ದು

(3) ಸೇನೆಯಲ್ಲಿ ಆನೆಗಳ ಬಳಕೆಗೆ ಪ್ರಾಧಾನ್ಯತೆ ನೀಡಿದ್ದು, ತಮ್ಮ ಸೈನ್ಯದ ಮೇಲೆ ಗಾಬರಿಯಿಂದ ಆನೆಗಳು ಓಡಿ ಹೋದ ಹಲವು ಉದಾಹರಣೆಗಳಿವೆ.

(4) ಗಿಲಾನಿ ಸಹೋದರರ ವಿಶ್ವಾಸ ದ್ರೋಹ.

(5) ಶತ್ರುಗಳು ಆಧುನಿಕ ಯುದ್ಧ ಉಪಕರಣಗಳ ಬಳಕೆ ಮಾಡುತ್ತಿದ್ದರು.
(6) ಅಳಿಯ ರಾಮರಾಯನು ವಯೋವೃದ್ಧನಾಗಿದ್ದು ಅವನ ಸಹೋದರರು ಸಹ ಅಸಮರ್ಥರಾಗಿದ್ದು, ವಿಜಯನಗರದ ಸೋಲಿಗೆ ಮೇಲ್ಕಟ್ಟದ ಕಾರಣಗಳಾಗಿವೆ.

**ಈ ಯುದ್ಧದ ಪರಿಣಾಮಗಳು:**

ವಿಜಯನಗರ ಸೈನ್ಯ ಸೋಲನ್ನು ಅನುಭವಿಸಿದ್ದು, ಪ್ರಪಂಚದ ಇತಿಹಾಸದಲ್ಲೊಂದು ಕರಾಳ ಘಟನೆಯಾಯಿತು.

1) **ವೈಭವದ ಹಂಪೆ ಹಾಳು ಹಂಪೆಯಾಯಿತು:–** ರಾಮರಾಯನ ನಂತರ ತಿರುಮಲ ಹೇಡಿಯಂತೆ ವರ್ತಿಸಿ, ರಾಜಧಾನಿಯ ರಕ್ಷಣೆಗೆ ನಿಲ್ಲುವ ಬದಲು ಹೇಡಿಯಂತೆ ಅಪಾರ ಸಂಪತ್ತಿನೊಂದಿಗೆ ಚಂದ್ರಗಿರಿಗೆ ಪಲಾಯನ ಮಾಡಿದನು.

2) **ತುಳು ವಂಶದ ಆಳ್ವಿಕೆ ಕೊನೆಯಾಯಿತು:–** 1570 ರ ಸದಾಶಿವರಾಯನನ್ನು ಕೊಲ್ಲಲಾಯಿತು. ಇಲ್ಲಿಗೆ ತುಳುವ ಸಂತತಿ ಕೊನೆಯಾಯಿತು.

3) **ಸ್ವತಂತ್ರ ಸಾಮಂತರ ಉದಯ:–** ಈ ಸಾಮ್ರಾಜ್ಯದ ಅಧೀನ ಸಾಮಂತರಾಗಿದ್ದ ಚಿತ್ರದುರ್ಗದ ಪಾಳೇಗಾರರು, ಕೆಳದಿಯ ನಾಯಕರು, ಮಾಗಡಿಯ ಕೆಂಪೇಗೌಡ. ಮಧುರೈ ಸುಲ್ತಾನರು, ತಮ್ಮ ಸ್ವಾತಂತ್ರತೆಯನ್ನು ಘೋಷಿಸಿಕೊಂಡರು.

4) **ಅರವೀಡು ಸಂತತಿಯ ಸ್ಥಾಪನೆ:** ಈ ಯುದ್ಧದ ನಂತರ ಅರವೀಡು ಸಂತತಿಯು ತಿರುಮಲರಾಯನಿಂದ 1570 ರಲ್ಲಿ ಸ್ಥಾಪಿತವಾಯಿತು.

5) **ಬಿರಾರ್ ರಾಜ್ಯದ ಮೇಲೆ ದಾಳಿ:** ಇತರೆ ಸುಲ್ತಾನರು ಬಿರಾರ್‌ನ ಮೇಲೆ ದಾಳಿ ಮಾಡಿದರು. ಇದರಿಂದ ಆಂತರಿಕ ಕಲಹವಾಗಿ ಷಾಹಿ ಸುಲ್ತಾನರು ದುರ್ಬಲರಾದರು.

**ರಾಜಧಾನಿಯ ವೈಭವ**

➢ ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ವಿಜಯನಗರದ ವೈಭವದ ಬಗ್ಗೆ ವಿವರವಾಗಿ ದಾಖಲಿಸಿದ್ದಾರೆ. ಇವರ ಪ್ರಕಾರ ಈ ರಾಜಧಾನಿ 7 ಸುತ್ತಿನ ಕೋಟೆಯಿಂದ ಆವೃತವಾಗಿತ್ತು ಎಂದಿದ್ದಾರೆ.

- ಕ್ರಿ.ಶ. 1420 ರಲ್ಲಿ ಭೇಟಿ ನೀಡಿದ ಇಟಲಿಯ ಪ್ರವಾಸಿಗ **"ನಿಕಲೋ ಕಂಟಿ"** – ಈ ನಗರವನ್ನು ಸುಮಾರು 90,000 ಸಾವಿರ ಸೈನಿಕರಿಂದ ರಕ್ಷಣೆಗೊಳಪಟ್ಟಿತ್ತು ಎಂದಿದ್ದಾರೆ.
- ಪರ್ಷಿಯಾದ ಪ್ರವಾಸಿಗ → ಅಬ್ದುಲ್ ರಜಾಕ್ 1442–43 ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಇವನು ತನ್ನ 'ಪರ್ಷಿಯಾದ ಇತಿಹಾಸ' ಕೃತಿಯಲ್ಲಿ **'ಭೂಮಿಯ ಮೇಲೆ ಇಲ್ಲಿಯವರೆಗೆ ವಿಜಯನಗರದಂತಹ ನಗರವನ್ನು ಕಣ್ಣಿಂದ ನೋಡಿಲ್ಲ. ಕಿವಿಯಿಂದ ಕೇಳಿಲ್ಲ'** ಎಂದಿದ್ದಾನೆ.
- ಪೋರ್ಚುಗೀಸ್ ಪ್ರವಾಸಿಗ **'ಡೋಮಿಂಗೋ ಪಯಾಸ್'**ನು **"ರೋಂ ನಗರಕ್ಕಿಂತಲೂ ಈ ರಾಜಧಾನಿ ದೊಡ್ಡದು ಮತ್ತು ವಿಶ್ವದ ಅತ್ಯಂತ ಜನಭರಿತ ನಗರಗಳಲ್ಲೊಂದು"** ಎಂದಿದ್ದಾನೆ. ಹಾಗೂ ಮಹಾನವಮಿ ಹಬ್ಬದ ಆಚರಣೆಯ ಕುರಿತು ಉಲ್ಲೇಖಿಸಿದ್ದಾನೆ.

**ಆಡಳಿತ ವ್ಯವಸ್ಥೆ**

ವಿಜಯನಗರ ಆಡಳಿತ ವಿಕೇಂದ್ರಿಕೃತವಾಗಿತ್ತು. ಮತ್ತು ಪ್ರಬಲ ಕೇಂದ್ರ ಸರ್ಕಾರವನ್ನು ಹೊಂದಿತ್ತು. ವಿಜಯನಗರ ಆಡಳಿತವನ್ನು ಕೇಂದ್ರೀಯ ಆಡಳಿತ ಮತ್ತು ಪ್ರಾಂತೀಯ ಆಡಳಿತಗಳೆಂದು ವಿಭಾಗಿಸಲಾಗಿತ್ತು.

- ಕೇಂದ್ರದಲ್ಲಿ ರಾಜನೇ ಸರ್ವೋಚ್ಚ ನಾಯಕನಾಗಿದ್ದನು. ಸಮಸ್ತ ಅಧಿಕಾರ ಆತನ ನಿಯಂತ್ರಣದಲ್ಲಿತ್ತು.
- ಕೇಂದ್ರ ಸರ್ಕಾರದಲ್ಲಿ ರಾಜನೇ ಮುಖ್ಯಸ್ಥನಾಗಿದ್ದನು.
- **ಯುವರಾಜ** – ಅರಸನ ಹಿರಿಯ ಪುತ್ರನನ್ನು ಯುವರಾಜನನ್ನಾಗಿ ನೇಮಿಸುತ್ತಿದ್ದರು.
- **ಮಂತ್ರಿಮಂಡಲ** – ರಾಜನಿಗೆ ಪ್ರಧಾನಮಂತ್ರಿ, ರಾಜಪುರೋಹಿತ, ದಂಡನಾಯಕ, ಕಾರ್ಯಕರ್ತ, ಖಜಾಂಚಿಗಳೆಂಬ ಮಂತ್ರಿಮಂಡಲವಿತ್ತು. **"ರಾಯಸ, ನಾಯಕ"** ಎಂಬ ವಿವಿಧ ಮಂತ್ರಿಗಳಿದ್ದರು. ಮುಖ್ಯ ಕಾರ್ಯದರ್ಶಿಯನ್ನು **"ರಾಯಸಸ್ವಾಮಿ"** ಎಂದು ಕರೆಯಲಾಗುತ್ತಿತ್ತು.
- **ಸೈನ್ಯ ಆಡಳಿತ** – ವಿಜಯನಗರವು ಸುಸಜ್ಜಿತ, ದಕ್ಷ ಸೈನಿಕ ವ್ಯವಸ್ಥೆಯನ್ನು ಹೊಂದಿತ್ತು. ಸೈನ ವಿಭಾಗವನ್ನು **"ಕಂದಾಚಾರ"** ಇಲಾಖೆ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಸ್ಥಾಯಿ ಸೇನೆ ಮತ್ತು ಎತ್ತುವಳಿಗಳೆಂಬ 2 ವಿಭಾಗಗಳಿದ್ದವು.
- ಸ್ಥಾಯಿಸೇನೆಯೆಂದರೆ **"ಸಾಮ್ರಾಟನ ಅಥವಾ ರಾಜನ ಸೈನ್ಯ"** ಎತ್ತುವಳಿಯೆಂದರೆ (ಮಾಂಡಲೀಕರ ಸೈನ್ಯ). ನೌಕಾಪಡೆ (ಹಡಗು ಸೈನ್ಯದ) ಬಗ್ಗೆಯೂ ಪ್ರಭು ಶಾಸನದಲ್ಲಿ ಉಲ್ಲೇಖವಿದೆ.

**ನಾಯಕರ ಪದ್ಧತಿ / ಅಮರ ನಾಯಂಕರ ಪದ್ಧತಿ –**

ಇದು ವಿಜಯನಗರದ 'ಸೈನ್ಯದ ವ್ಯವಸ್ಥೆ' ಮತ್ತು 'ಆರ್ಥಿಕ ವ್ಯವಸ್ಥೆ'ಯಾಗಿತ್ತು. ವಿಜಯನಗರದ ಅರಸರು ತಾವು ಸೋಲಿಸಿದ ರಾಜರನ್ನು ಸಾಮಂತರನ್ನಾಗಿ ಮಾಡಿಕೊಂಡು, ಅವರಿಂದ ಪ್ರತಿ ವರ್ಷ ಕಪ್ಪ ಕಾಣಿಕೆಗಳು ಮತ್ತು ಸೈನ್ಯ ಸಹಕಾರವನ್ನು ಪಡೆಯುತ್ತಿದ್ದರು. ಹೀಗೆ ಸೈನಿಕ ಸೇವೆ ಮತ್ತು ಹಣಕಾಸಿನ ಸೇವೆಯನ್ನು ಒದಗಿಸುತ್ತಿದ್ದ ಸಾಮಂತರನ್ನು ನಾಯಕರು, ಅಮರ ನಾಯಕರು, ಅಥವಾ ನಾಯಂಕರರು ಎನ್ನುತ್ತಿದ್ದರು.

ಸಾಮ್ರಾಜ್ಯವನ್ನು ರಾಜ್ಯಗಳಾಗಿ / ಪ್ರಾಂತ್ಯಗಳಾಗಿ ವಿಭಾಗಿಸಿದ್ದು ಕೆಲವು ಭಾಗಗಳಲ್ಲಿ ಪ್ರಾಂತೀಯ ಸರ್ಕಾರವನ್ನು ಮಂಡಲವೆಂತಲೂ ಸಹ ಕರೆಯುತ್ತಿದ್ದರು. ರಾಜ್ಯವನ್ನು **'ವಿಷಯ ಅಥವಾ ವಂತೆ'** ಎಂದು ವಿಭಾಗಿಸಲಾಗಿತ್ತು. ಪ್ರತಿ ವಿಷಯಕ್ಕೂ ಸೀಮೆ ಅಥವಾ ನಾಡು ಎಂಬ ಉಪ ವಿಭಾಗವಿತ್ತು. ಕಂಪಣ / ಸ್ಥಳ ಗ್ರಾಮಗಳ ಗುಂಪು ಹಾಗೂ ಗ್ರಾಮಗಳಿದ್ದವು.

ಪ್ರತಿ ಗ್ರಾಮದಲ್ಲಿ ಗೌಡ, ತಳವಾರ, ಕರಿಣಿತ ಎಂಬ ಅಧಿಕಾರಿಗಳಿದ್ದರು.

**ವಿಜಯನಗರದ ಸಮಾಜ**

ವಿಜಯನಗರದ ಸಮಾಜವು ಪಾರಂಪರಿಕ ವರ್ಣಾಶ್ರಮದ ಆಧಾರದ ಮೇಲೆ ರಚಿತವಾಗಿತ್ತು. ಆದ್ದರಿಂದ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ವಿಭಜಿಸಲಾಗಿತ್ತು.

1) ಬ್ರಾಹ್ಮಣ ವರ್ಗವು ಅತ್ಯಂತ ಬಲಿಷ್ಠ ಹಾಗೂ ಪ್ರಭಾವಶಾಲಿ ವರ್ಗವಾಗಿತ್ತು. ರಾಜಗುರುಗಳಾಗಿ, ಪುರೋಹಿತರಾಗಿ, ರಾಜ್ಯಪಾಲರಾಗಿ, ದಂಡನಾಯಕನಾಗಿ ಪ್ರಾಬಲ್ಯಗಳಿಸಿದರು. ರಾಜನು ಇವರಿಗೆ ಹಳ್ಳಿಗಳನ್ನು ದಾನವಾಗಿ ನೀಡುತ್ತಿದ್ದನು.

2) ಕ್ಷತ್ರಿಯ ವರ್ಗ:– ವಿಜಯನಗರ ಸಾಮಾಜಿಕ ವೈಶಿಷ್ಟ್ಯವೇನೆಂದರೆ ಕ್ಷತ್ರಿಯದ ಪ್ರಾಬಲ್ಯವಿಲ್ಲದಿರುವುದು. ಕಾರಣ ವ್ಯಾಪಾರ ಮತ್ತು ಕೃಷಿಕ ವರ್ಗದವರ ಪ್ರಾಧಾನ್ಯತೆ.

3) ವೈಶ್ಯ ವರ್ಗ:– ಬಣಜಿಗರು, ನೇಕಾರರು, ಕೊಮ್ಮಟಿಗರು, ಜೈನರು ಮುಂತಾದವರು ವೈಶ್ಯರಾಗಿದ್ದರು. ದೇವಾಲಯಗಳಿಗೆ, ಶಿಕ್ಷಣ ಸಂಸ್ಥೆಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಉದಾರ ದಾನ ನೀಡುತ್ತಿದ್ದರು.

4) ಶೂದ್ರ ವರ್ಗ:– ಎಲ್ಲ ವರ್ಗಗಳಿಗೂ ಸಹಾಯಕರಾಗಿದ್ದರು.

**ವಿಜಯನಗರದ ಆರ್ಥಿಕತೆ:–**

ವಿಜಯನಗರ ಅರಸರು ಉತ್ತಮ ಆರ್ಥಿಕ ವ್ಯವಸ್ಥೆ ರೂಪಿಸಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯಕ್ಕೆ ಆದಾಯವು ಅನೇಕ ಮೂಲಗಳಿಂದ ಬರುತ್ತಿತ್ತು. ಅವುಗಳೆಂದರೆ ಭೂ ಕಂದಾಯ, ಗೋಮಾಳ ತೆರಿಗೆ, ಗಣಿ, ಅರಣ್ಯ ರಸ್ತೆ ತೆರಿಗೆ, ಭೂ ಕಂದಾಯ ಆದಾಯದ ಪ್ರಮುಖ ಮೂಲವಾಗಿತ್ತು. ಉತ್ಪನ್ನದ ಶೇಕಡಾ 1/6 ನೇ ಭಾಗವನ್ನು ಭೂ ಕಂದಾಯವಾಗಿ ವಸೂಲಿ ಮಾಡುತ್ತಿದ್ದರು. ಭೂ ಕಂದಾಯ ಇಲಾಖೆಯನ್ನು "ಅಧಾವಣೆ" ಎಂದು ಕರೆಯುತ್ತಿದ್ದರು.

- ವಿಜಯನಗರ ಅರಸರು ಬ್ರಾಹ್ಮಣರ ಮೇಲೂ ತೆರಿಗೆ ವಿಧಿಸುತ್ತಿದ್ದರು ಅವರು ತಮ್ಮ ಸಂಪತ್ತಿನ ಮೇಲೆ ಶೇಕಡಾ 1/20 ನೇ ಭಾಗವನ್ನು ತೆರಿಗೆಯಾಗಿ ನೀಡಬೇಕಿತ್ತು. ದೇವಸ್ಥಾನದ ಸಂಪತ್ತಿನ ಮೇಲೆ 1/30 ನೇ ಭಾಗವನ್ನು ತೆರಿಗೆಯಾಗಿ ನೀಡಬೇಕಿತ್ತು.
- ಆಮದು ವಸ್ತುಗಳ ಮೇಲೆ "ಸ್ಥಳಾದಾಯಂ" ಎಂಬ ತೆರಿಗೆ ಮತ್ತು ರಫ್ತಿನ ಮೇಲೆ "ಮಾರ್ಗಾದಾಯಂ" ಎಂಬ ರಸ್ತೆ ಸುಂಕ ವಿಧಿಸಲಾಗುತ್ತಿತ್ತು.
- ವ್ಯಾಪಾರವು ಆಂತರಿಕವಾಗಿ ಮುಸ್ಲಿಂ ವ್ಯಾಪಾರಿಗಳು ಹಾಗೂ ಹಿಂದೂ ಶೆಟ್ಟಿಗಳ ಅಧೀನದಲ್ಲಿತ್ತು. ಅಂಕೋಲಾ, ಹೊನ್ನಾವರ, ಭಟ್ಕಳ, ಮಚಲೀಪಟ್ಟಣಗಳು ಪ್ರಮುಖ ಬಂದರಾಗಿದ್ದವು.
- ಕುದುರೆ, ತಾಮ್ರ, ರೇಷ್ಮೆಗಳನ್ನು ಆಮದು ಮತ್ತು ಸಕ್ಕರೆ, ಉಪ್ಪು, ಸಾಂಬಾರ ಪದಾರ್ಥಗಳು ಪ್ರಮುಖ ರಫ್ತುವಸ್ತುಗಳಾಗಿದ್ದವು.

**ವಿಜಯನಗರ ಧಾರ್ಮಿಕತೆ**

- ವಿಜಯನಗರ ಸಾಮ್ರಾಟರು ತಮ್ಮ ಶಾಸನಗಳಲ್ಲಿ "ಗೋ ಬ್ರಾಹ್ಮಣ ಪ್ರತಿಪಾಲನಾಚಾರ್ಯ" "ಹಿಂದುರಾಯ ಸುರತ್ರಾಣ" ಎಂಬ ಅನೇಕ ಬಿರುದುಗಳನ್ನು ಹೊಂದಿದ್ದರು. ಸಕಲ ಸಂಪ್ರದಾಯವನ್ನು ರಕ್ಷಿಸಿದ್ದರು.
- ಹರಿಹರ ಬುಕ್ಕರು ಶೃಂಗೇರಿಯ ಮಠಕ್ಕೆ ಅಪಾರ ದಾನ–ದತ್ತಿಯನ್ನು ನೀಡಿದ್ದರು. ಹಾಗೂ ಶೈವ ಧರ್ಮವನ್ನು ಪಾಲಿಸುತ್ತಿದ್ದರೂ ಕೂಡ "ವರಾಹ" ಲಾಂಛನವನ್ನು ಹೊಂದಿದ್ದರು.
- ಪ್ರೌಢ ದೇವರಾಯ, ಕೃಷ್ಣದೇವರಾಯರು ತಮ್ಮ ಆಸ್ಥಾನಗಳಲ್ಲಿ ಕುರಾನ್‌ನ ಪ್ರತಿಯನ್ನು ಇರಿಸಿಕೊಂಡಿದ್ದರು. ಅಲ್ಲದೆ ಮುಸ್ಲಿಂರನ್ನು ಸರ್ಕಾರದ ಉನ್ನತ ಹುದ್ದೆಗಳಿಗೆ ನೇಮಕ ಮಾಡಿದ್ದರು.

- ನಾಗರ ಪೂಜೆ ಅಸ್ತಿತ್ವದಲ್ಲಿತ್ತು. ಜೈನ ಮತ ಮತ್ತು ಬೌದ್ಧ ಮತಗಳು ಮಾನ್ಯತೆ ಪಡೆದಿದ್ದವು.
- ಕ್ರೈಸ್ತ ಧರ್ಮೀಯರಿಗೆ ಕರಾವಳಿ ತೀರ ಪ್ರದೇಶದಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟರು.
- ಹೀಗೆ ಸರ್ವಧರ್ಮ ಪರಿಪಾಲಕರಾಗಿ ವಿಜಯನಗರದ ಅರಸರು ಶ್ರೇಷ್ಠತೆ ಮೆರೆದಿದ್ದಾರೆ.

**ವಿಜಯನಗರದ ಕಲೆಗಳು**

ವಿಜಯನಗರ ಅರಸರು ದಕ್ಷಿಣ ಭಾರತದ ಎಲ್ಲಾ ಭಾಷೆಗಳಿಗೂ ಪ್ರೋತ್ಸಾಹ ನೀಡಿದ್ದರು. ಆದ್ದರಿಂದ ಸಂಸ್ಕೃತ, ಕನ್ನಡ, ತಮಿಳು, ತೆಲುಗು ಹೀಗೆ ಎಲ್ಲಾ ಭಾಷೆಗಳಲ್ಲೂ ಸಾಹಿತ್ಯ ರಚನೆಯಾಯಿತು.

**ಸಂಸ್ಕೃತ ಸಾಹಿತ್ಯ**

- ಕೃಷ್ಣದೇವರಾಯ – ಕೃಷ್ಣ ದೇವರಾಯ ಸ್ವತ: ವಿದ್ವಾಂಸನಾಗಿದ್ದು ಜಾಂಬವತಿ ಕಲ್ಯಾಣ, ಮದಲಸ ಚರಿತಂ, ರಸಮಂಜರಿ ಎಂಬ ಕೃತಿಯನ್ನು ರಚಿಸಿದ್ದಾನೆ.
- ತಿರುಮಲಾಂಬೆ – ವರದಾಂಬಿಕಾ ಪರಿಣಯ ಎಂಬ ಕೃತಿ ರಚಿಸಿದ್ದಾನೆ.
- ಗಂಗಾದೇವಿ – ವೀರ ಕಂಪರಾಯ ಚರಿತಂ / ಮಧುರ ವಿಜಯಂ ಹೀಗೆ ಇನ್ನು ಅನೇಕರು ಸಂಸ್ಕೃತದಲ್ಲಿ ಕೃತಿ ರಚಿಸಿದ್ದಾರೆ.

**ಕನ್ನಡ ಸಾಹಿತ್ಯ:–**

| | |
|---|---|
| 1) ಭೀಮ ಕವಿಯ | – "ಧರ್ಮ ಪುರಾಣ" ಕೃತಿ |
| 2) ಕುಮಾರವ್ಯಾಸ | – ಗದುಗಿನ ಭಾರತ |
| 3) ಚಾಮರಸನ | – ಪ್ರಭುಲಿಂಗ ಲೀಲೆ |
| 4) ರತ್ನಾಕರವರ್ಣಿಯ | – ಭರತೇಶ ವೈಭವ |
| 5) ಕನಕದಾಸರು | – ಮೋಹನ ತರಂಗಿನಿ, ನಳಚರಿತೆ, ಹರಿಭಕ್ತಿ ಸಾರ ಮತ್ತು ರಾಮಧಾನ್ಯ ಚರಿತೆ. |

ಕನ್ನಡ ಸಾಹಿತ್ಯಕ್ಕೆ ಕೃಷ್ಣದೇವರಾಯನು ಕೊಟ್ಟ ಕೊಡುಗೆಯಿಂದ ಕೃಷ್ಣ ದೇವರಾಯನನ್ನು **"ಕರ್ನಾಟಕ ರಾಜ್ಯ ರಮಾರಮಣ"** ಎಂಬ ಬಿರುದಿದೆ.

**ತೆಲುಗು ಸಾಹಿತ್ಯ**

| | |
|---|---|
| 1) ಅಲ್ಲಸಾನಿ ಪೆದ್ದಣ್ಣ | – ಮನುಚರಿತಮು |
| 2) ನಂದಿ ತಿಮ್ಮಣ್ಣ | – ಪಾರಿಜಾತ ಪಹರಣಮು |
| 3) ನಾಚನ ಸೋಮ | – ಉತ್ತರ ಹರಿವಿಲಾಸ |
| 4) ಕೃಷ್ಣ ದೇವರಾಯ | – ಅಮುಕ್ತಮೌಲ್ಯದ |

ತೆಲುಗು ಸಾಹಿತ್ಯಕ್ಕೆ ನೀಡಿದ ಕೊಡುಗೆಯಿಂದ ಶ್ರೀ ಕೃಷ್ಣದೇವರಾಯನನ್ನು 'ಆಂಧ್ರ ಭೋಜ" ಎಂದು ಕರೆಯಲಾಗಿದೆ.

**ಚಿತ್ರಕಲೆ:–** ವಿರೂಪಾಕ್ಷ ದೇವಾಲಯ ಹಂಪಿಯ ದೊಡ್ಡ ಮಂಟಪದ ಮೇಲ್ಛಾವಣಿಯಲ್ಲಿ ಭವ್ಯವಾದ ಚಿತ್ರಮಾಲೆಗಳಿಂದ ತುಂಬಿದೆ. ವಿದ್ಯಾರಣ್ಯರ ಪಲ್ಲಕ್ಕಿಯ ಚಿತ್ರಗಳು, ದಶಾವತಾರ, ರಾಮವಿವಾಹ, ಮುಂತಾದ ಅನೇಕ ವರ್ಣಚಿತ್ರಗಳಿವೆ.

**ಲೇಪಾಕ್ಷಿ:**– ಇಲ್ಲಿ ರಾಮಾಯಣ, ಮಹಾಭಾರತ, ಶಿವಪುರಾಣದ ಚಿತ್ರಗಳಿವೆ. ಉದಾ:– ರಾಮಾವತಾರ, ಕಿರಾತಾರ್ಜುನೀಯ, ಕೃಷ್ಣನ ನೃತ್ಯ ಇತ್ಯಾದಿ ಚಿತ್ರಗಳಿವೆ.

**ನೃತ್ಯ** – ವಿಜಯನಗರ ಕಾಲದಲ್ಲಿ ನೃತ್ಯ ಪ್ರಮುಖ ಕಲೆಯಾಗಿತ್ತು. ನರ್ತನ ಮಾಡಲು ದೇವದಾಸಿಯರಿದ್ದರು. ರಾಜರ ಆಸ್ಥಾನದಲ್ಲಿ ನರ್ತಕಿಯರಿಗೆ ವಿಶೇಷ ಗೌರವವಿತ್ತು. ರಾಜರು ನೃತ್ಯಗಾರ್ತಿಯರಿಗೆ ಸನ್ಮಾನಿಸುತ್ತಿದ್ದರು. ದೇವಾಲಯಗಳಲ್ಲೂ ನಾಟ್ಯ ಪ್ರದರ್ಶನ ನಡೆಯುತ್ತಿತ್ತು. ಶಿಲ್ಪಕಲೆಯಲ್ಲೂ ಕೂಡಾ ನೃತ್ಯ, ಕೋಲಾಟದ ದೃಶ್ಯಗಳಿವೆ.

**ಸಂಗೀತ:–** ವಿಜಯನಗರ ಅರಸರು ಭಾರತೀಯ ಶಾಸ್ತ್ರೀಯ ಸಂಗೀತವನ್ನೇ ಶುದ್ಧ ರೂಪದಲ್ಲಿ ಬೆಳೆಸಿ, ಪೋಷಿಸಿ, ರಕ್ಷಿಸಿದರು. ಅದನ್ನು **"ಕರ್ನಾಟಕ ಸಂಗೀತ"** ಎಂದು ಕರೆದಿದ್ದಾರೆ. ವಿಜಯನಗರ ಕಾಲದಲ್ಲಿ 9 ಪ್ರಮುಖ ಸಂಗೀತ ವಿದ್ವಾಂಸರಿದ್ದರು. ಇವರನ್ನು "ಸಂಗೀತ ಶಾಸ್ತ್ರ ನವರತ್ನರೆಂದು" ಕರೆಯಲಾಗಿದೆ.

- ವಿದ್ಯಾರಣ್ಯರು **"ಸಂಗೀತಸಾರ"** ಎಂಬ ಕೃತಿಯನ್ನು ರಚಿಸಿದ್ದಾರೆ.
- ಪುರಂದರ ದಾಸರನ್ನು **"ಕರ್ನಾಟಕ ಸಂಗೀತ ಪಿತಾಮಹ"** ಎಂದು ಕರೆಯಲಾಗಿದೆ. ಇವರು **"ಮಾಯಮಾಳವಗೌಳ"** ಎಂಬ ಹೊಸ ರಾಗವನ್ನು ಶೋಧಿಸಿದರು.
- ವಿಜಯನಗರದ ವಾಸ್ತುಶಿಲ್ಪ – ಇವರ ವಾಸ್ತುಶಿಲ್ಪ ಸಾಮಾನ್ಯವಾಗಿ **'ದ್ರಾವಿಡ'** ಶೈಲಿಯಲ್ಲಿ ನಿರ್ಮಾಣ ಮಾಡಿದ್ದಾರೆ. ವಿಜಯನಗರ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳೆಂದರೆ ದೇವಸ್ಥಾನದ ದ್ವಾರದ ಮೇಲೆ ವಿಮಾನ / ಗೋಪುರದ ನಿರ್ಮಾಣ ಇದನ್ನು **'ರಾಯ ಗೋಪುರ'** ಎನ್ನುವರು.
- ವಿಜಯನಗರ ಅರಸರು ದೇವಾಲಯಗಳಲ್ಲಿ ಕಲ್ಯಾಣ ಮಂಟಪ, ವಸಂತ ಮಂಟಪ, ನಿರ್ಮಾಣ ಮಾಡಿದ್ದಾರೆ. ದೇವಾಲಯಗಳಲ್ಲಿ ಗರ್ಭಗುಡಿ, ಅಂತರಾಳ, ಸುಕನಾಸಿ, ನವರಂಗಗಳೆಂಬ ಭಾಗಗಳು ಸಾಮಾನ್ಯವಾಗಿ ಕಂಡು ಬರುತ್ತದೆ.
- ವಿಜಯನಗರ ಕಾಲದ ವಾಸ್ತುಶಿಲ್ಪವನ್ನು ಸಾಮಾನ್ಯವಾಗಿ ಹಂಪಿ, ಶೃಂಗೇರಿ, ಕಾಳಹಸ್ತಿ, ತಿರುಪತಿ, ಲೇಪಾಕ್ಷಿ, ಮೂಡಬಿದ್ರೆಗಳಲ್ಲಿ ಕಾಣಬಹುದಾಗಿದೆ.

**ವಿಜಯನಗರ ವಾಸ್ತುಶಿಲ್ಪವನ್ನು ಹೊಂದಿರುವ ಪ್ರಮುಖ ದೇವಾಲಯಗಳು.**

1) ವಿದ್ಯಾಶಂಕರ ದೇವಾಲಯ 2) ವಿಜಯ ವಿಠ್ಠಲ ದೇವಾಲಯ 3) ಪಂಪಾವತಿ ದೇವಾಲಯ 4) ಅಚ್ಯುತರಾಯ ದೇವಾಲಯ.

**ವಿಜಯನಗರ ಶಿಲ್ಪ** – ವಿಜಯನಗರ ಅರಸರು ನಿರ್ಮಿಸಿದ ದೇವಾಲಯಗಳಲ್ಲಿ ವಿಜಯನಗರ ಕಾಲದ ಪ್ರಮುಖ ಮೂರ್ತಿಶಿಲ್ಪಗಳೆಂದರೆ, ವಿಜಯ ವಿಠ್ಠಲ ಸ್ವಾಮಿ ಕಾಳಿಯ ದಮನ, ಕೃಷ್ಣ, ತ್ರಿವಿಕ್ರಮ, ಯೋಗ ನರಸಿಂಹ, ಕಡಲೆಕಾಯಿ ಗಣಪ, ಸಾಸಿವೆಕಾಳು ಗಣಪ ಮೂರ್ತಿ. ಹಜಾರ ರಾಮಸ್ವಾಮಿ ದೇವಾಲಯದ ಆವರಣದಲ್ಲಿರುವ ಹನುಮಾನ ಜಾಂಬುವತಿ, ವೇಣುಗೋಪಾಲ, ಲೇಪಾಕ್ಷಿಯಲ್ಲಿರುವ ನಟರಾಜ, ಗಂಗಾಧರ, ಅರ್ಧನಾರೀಶ್ವರ, ಬೃಹತ್ ಸರ್ಪ, ಶಿವಲಿಂಗ ಮತ್ತು ಅಷ್ಟ ದಿಕ್ಪಾಲಕರ ವಿಗ್ರಹಗಳನ್ನು ನೋಡಬಹುದಾಗಿದೆ.

**ವಿಜಯನಗರ ಕುರಿತು ವಿದೇಶಿಗರ ವಿವರಣೆ**

1) **ನಿಕೋಲೋ ಕಾಂಟಿ** – ಒಂದನೇ ದೇವರಾಯನ ಕಾಲದಲ್ಲಿ ಕ್ರಿ.ಶ. 1420 ರಲ್ಲಿ ಇಟಲಿಯ ಪ್ರವಾಸಿಗನಾದ ಈತನು ವಿಜಯನಗರ ಸಂಸ್ಥಾನಕ್ಕೆ ಭೇಟಿ ನೀಡಿದನು. ಈತನು ರಚಿಸಿದ ಕೃತಿ "LE VOYAGE AUX INDES" ನಲ್ಲಿ ವಿಜಯನಗರ 60 ಮೈಲಿ ಸುತ್ತಳತೆಯನ್ನು ಹೊಂದಿದೆ. ಇಲ್ಲಿ 5 ಲಕ್ಷ ಜನರಿದ್ದಾರೆ. ಇಲ್ಲಿ ದೀಪಾವಳಿ ಮತ್ತು ಮಹಾನವಮಿಗಳನ್ನು ವೈಭವದಿಂದ ಆಚರಿಸುವರು.

2) **ಅಬ್ದುಲ್ ರಜಾಕ್** (1443) ಈತನು ಪರ್ಷಿಯಾ ದೇಶದ ಪ್ರವಾಸಿಗ. ಈತನು ಪ್ರೌಢ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಇವನು "ಇಂತಹ ನಗರ ಭೂಮಿಯ ಮೇಲೆ ಬೇರೊಂದು ಇರಲಾರದು ಮತ್ತು ನನ್ನ ಕಣ್ಣುಗಳು ಕಂಡಿಲ್ಲಾ ಮತ್ತು ಕಿವಿಗಳು ಇಂತಹ ನಗರದ ಬಗ್ಗೆ ಕೇಳಿಲ್ಲಾ. ದೇವರಾಯನಂತಹ ದೊರೆ ಮತ್ತೊಬ್ಬರಿಲ್ಲ ಎಂದು ಹಾಡಿ ಹೊಗಳಿದ್ದಾನೆ.

3) **ಡುರೇಟ ಬಾರ್ಬೋಸ –** ಪೋರ್ಚುಗಲ್ ಪ್ರವಾಸಿಗ ವರ್ಣಿಸಿರುವಂತೆ "ವಿಜಯನಗರ ಭವ್ಯ ಮತ್ತು ಶ್ರೀಮಂತವಾಗಿದೆ" ವಿಶಾಲ ಅರಮನೆ ಬೀದಿಗಳು, ಭವನಗಳು, ದೇವಾಲಯಗಳು ಕಂಗೊಳಿಸುತ್ತಿವೆ. ಇಲ್ಲಿನ ರಾಜರು ಕರುಣಾಮಯಿಗಳು, ಅರಮನೆಯ ಬಾಗಿಲಿನಲ್ಲಿ ಸ್ತ್ರೀಯರು ಕಾಯುತ್ತಿದ್ದರು.

4) **ಡೊಮಿಂಗೊ ಫಯಾಸ್** (1520) – ಇವನು ಪೋರ್ಚುಗೀಸ್ ಪ್ರವಾಸಿಗ. ತನ್ನ **"ಕ್ರೊನಿಯ ಡಸ್ ರಿಯಿಸ್ ಡಿ ಬಿಸ್ನನಗ"** ಎಂಬ ಕೃತಿಯಲ್ಲಿ ಸಾಮ್ರಾಜ್ಯದಲ್ಲಿ ಅನೇಕ ಕರಾವಳಿ ತೀರಗಳಿವೆ. ಅಲ್ಲೆಲ್ಲಾ ಶಾಂತಿ ಸುವ್ಯವಸ್ಥೆ ಇದೆ. **"ರೋಂ ನಗರಕ್ಕಿಂತ ದೊಡ್ಡದು"** ಮತ್ತು ಸುಂದರವಾದುದು ದಸರಾ ಉತ್ಸವ ಅಥವಾ ಮಹಾನವಮಿಯನ್ನು ವೈಭವದಿಂದ ಆಚರಿಸುತ್ತಿದ್ದರು.

5) **ಪೆರೋನೋ ನ್ಯೂನಿಜ್** – ಈತ ಪೋರ್ಚುಗೀಸ್ ಪ್ರವಾಸಿಗ. ಈತನು ಕ್ರಿ.ಶ. 1535 ರ ಅಚ್ಯುತರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಈತನು ಕೃಷ್ಣದೇವರಾಯನ ಹತ್ತಿರ ಕುರಾನ ಪ್ರತಿ ಇತ್ತು. ಮಹಾನವಮಿ ಹಬ್ಬವನ್ನು ವೈಭವವಾಗಿ ಆಚರಿಸುತ್ತಿದ್ದರು. ಅಂತಿಮ ದಿನ 25 ಕೋಣಗಳು, 4500 ಕುರಿಗಳನ್ನು ಬಲಿ ಕೊಡಲಾಗುತ್ತಿತ್ತು.

6) **ಅಥನಸಿಯನ್ ನಿಕಿಟಿನ್** (1570) – ಈತ ವಿಜಯನಗರಕ್ಕೆ ಭೇಟಿ ನೀಡಿದ ಕೊನೆಯ ಪ್ರವಾಸಿಗ. ಈತನ ಬರವಣಿಗೆಯು ಸಹ ವೈಭವದ ಹಂಪೆ ಹಾಳು ಹಂಪಿಯಾಗಿದ್ದನ್ನು ತಿಳಿಸುತ್ತದೆ.

**ಧಾರ್ಮಿಕ ಪಂಥಗಳು**

**ಶಂಕರಾಚಾರ್ಯರು** –

ಭಾರತೀಯ ಧಾರ್ಮಿಕ ಇತಿಹಾಸ ಮತ್ತು ಪರಂಪರೆಯಲ್ಲಿ ಶಂಕರಾಚಾರ್ಯರಿಗೆ ಅದ್ವಿತೀಯ ಸ್ಥಾನವಿದೆ. ತಮ್ಮ ಅದ್ವೈತ ಸಿದ್ಧಾಂತದ ಮೂಲಕ ಭಾರತೀಯ ಧರ್ಮ ಪರಂಪರೆಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದರು. ಕ್ರಿ.ಶ. 788 ರಲ್ಲಿ ಕೇರಳದ ಕಾಲಡಿ ಎಂಬಲ್ಲಿ ಜನಿಸಿದರು. **ಗುರು ಗೋವಿಂದ ಭಗವತ್ಪಾದಕರು** ಇವರ ಗುರುಗಳು.

**ಅದ್ವೈತ ಸಿದ್ಧಾಂತ / ಕಾಲಾದ್ವೈತ**

ಅದ್ವೈತ ಎಂದರೆ ಜೀವಾತ್ಮ ಮತ್ತು ಪರಮಾತ್ಮ ಎರಡು ಒಂದೇ ಎಂಬರ್ಥ ಬರುತ್ತದೆ. ಮೋಕ್ಷ ಪಡೆದಾಗ ಜೀವಾತ್ಮ ಪರಮಾತ್ಮನೊಂದಿಗೆ ಒಂದಾಗುತ್ತದೆ ಎಂಬುದೇ ಅದ್ವೈತ ದರ್ಶನ.

- ಬ್ರಹ್ಮನೇ ಸತ್ಯ ಉಳಿದ ಜಗತ್ತೆಲ್ಲಾ ಮಾಯ ಎಂದು ಪ್ರತಿಪಾದಿಸಿದರು. ಈ ವಿಶ್ವಕ್ಕೆ ಬ್ರಹ್ಮನನ್ನು ಬಿಟ್ಟರೆ ಪ್ರತ್ಯೇಕ ಅಸ್ತಿತ್ವವಿಲ್ಲ.
- ಆತ್ಮ ಬ್ರಹ್ಮನಲ್ಲಿ ಸೇರುವುದೇ ಮೋಕ್ಷ. ಆತ್ಮಕ್ಕೆ ಮುಕ್ತಿ ಪಡೆಯಲು ಅರಿವು ಮತ್ತು ಜ್ಞಾನ ಅಗತ್ಯ. ಆದ್ದರಿಂದ ಮೋಕ್ಷ ಸಾಧನೆಗೆ ಜ್ಞಾನಮಾರ್ಗವನ್ನು ಸೂಚಿಸಿದರು. ಭಕ್ತಿ ಮತ್ತು ಜ್ಞಾನಗಳೆರಡು ಇದರ ಪ್ರಧಾನ ಲಕ್ಷಣ **"ಜ್ಞಾನ"** ಬೇಕೆಂದರೆ ಭಕ್ತಿಯೂ ಬೇಕು ಎಂದು ಪ್ರತಿಪಾದಿಸಿದರು.
- **"ಅಹಂ ಬ್ರಹ್ಮಾಸ್ಮಿ"** ಅಂದರೆ ನಾನೇ ಬ್ರಹ್ಮ. ಇದು ಇವರ ಉಪನಿಷತ್ತಿನ ಸಾರವಾಗಿದೆ.

ತಮ್ಮ ತತ್ವ ಸಿದ್ಧಾಂತದ ಪ್ರಚಾರಕ್ಕಾಗಿ ಈ ಕೆಳಗಿನ ಪೀಠವನ್ನು ಸ್ಥಾಪಿಸಿದ್ದಾರೆ.

ಪುರಿ (ಒರಿಸ್ಸಾ) – ಪೂರ್ವ
ದ್ವಾರಕೆ (ಗುಜರಾತ್) – ಪಶ್ಚಿಮ
ಬದರಿ (ಉ.ಪ್ರದೇಶ) – ಉತ್ತರ
ಶೃಂಗೇರಿ (ಕರ್ನಾಟಕ) – ದಕ್ಷಿಣ

ಈ ಮೇಲಿನಲ್ಲಾ ಪೀಠಗಳನ್ನು ಲಿಮ್ನಾಯ / ವೇದಾಧ್ಯಯನ ಪೀಠಗಳೆಂದು ಕರೆಯಲಾಗಿದೆ. ಈ ಮೇಲಿನ ಪೀಠಗಳಿಗೆಲ್ಲಾ ಶಂಕರರೇ ಮೊದಲಿಗರು. ಹಾಗಾಗಿ ಈ ಶಂಕರರನ್ನು ಆದಿ ಶಂಕರಾಚಾರ್ಯ ಎಂದು ಕರೆಯುವರು.

- ಶಂಕರರು ಮಾಯೆಯ ಕಲ್ಪನೆಯನ್ನು ಬೌದ್ಧ ಮಾಧ್ಯಮಿಕ ದರ್ಶನದಿಂದ ಪ್ರೇರಿತವಾದುದು ಎಂದು ಅವರ ವಿರೋಧಿಗಳು ಶಂಕರಾಚಾರ್ಯರನ್ನು **"ಪ್ರಚ್ಛನ್ನ ಬುದ್ಧ"** ಎಂದು ಕರೆಯುತ್ತಾರೆ.

**ರಾಮಾನುಜಾಚಾರ್ಯ:–**

ಇವರು ಪರಿಚಯಿಸಿದ ವೈದಿಕ ಸಿದ್ಧಾಂತವೇ ವಿಶಿಷ್ಟಾದ್ವೈತ ಸಿದ್ಧಾಂತ ಅಥವಾ ಶ್ರೀ ವೈಷ್ಣವ ಸಿದ್ಧಾಂತ.

**ಇವರ ಪ್ರಮುಖ ಬೋಧನೆಗಳು:–**

1) ಶಂಕರರ ಅದ್ವೈತ ಸಿದ್ಧಾಂತವನ್ನು ನಿರಾಕರಿಸಿದರು.
2) ಬ್ರಹ್ಮ ಪ್ರಪಂಚದ ಕರ್ತೃ ಸರ್ವಜೀವಿಗಳ ಆರಾಧಕ, ನಿಯಂತ್ರಕ ಅವನೇ ಬ್ರಹ್ಮ ಅವನು ಸರ್ವಾಂತರ್ಯಾಮಿ ಅವನ ಸ್ವರೂಪದ ಪ್ರತಿ ವಸ್ತುವಿನ ಕಣಕಣದಲ್ಲಿಯೂ ಇರುವನು.
3) ಭಕ್ತಿಯಿಂದ ಮಾತ್ರ ಏಕಾಗ್ರತೆ, ಆತ್ಮಶುದ್ಧಿಯಾಗುತ್ತದೆ. ಆಗ ಬ್ರಹ್ಮ / ಈಶ್ವರ ಮೋಕ್ಷವನ್ನು ಕರುಣಿಸುವರು.
4) ಭಕ್ತಿ ಮಾರ್ಗ ಅನುಸರಿಸಲು ಯಾವ ಕುಲಗೋತ್ರವು ಅಡ್ಡ ಬರುವುದಿಲ್ಲ. ಇದಕ್ಕೆ ಬೇಕಾಗಿರುವುದು **"ಆತ್ಮ ಶುದ್ಧಿ"** ಮತ್ತು ಏಕಾಗ್ರತೆ. ದೇವರಲ್ಲಿ ಭಕ್ತಿ, ದೇವರ ದೃಷ್ಟಿಯಲ್ಲಿ **"ಸರ್ವರು ಸಮಾನರು"**.

- ಇವರು ವೇದಾಂತ ಸಾರ, ವೇದಾಂತ ದೀಪ, ವೇದಾಂತ ಸೂತ್ರ, ವೇದಾಂತ ಸಂಗ್ರಹ, ಶ್ರೀ ಭಾಷ್ಯ ಮುಂತಾದ ಕೃತಿಯನ್ನು ರಚಿಸಿದ್ದಾರೆ.

**ಮಧ್ವಾಚಾರ್ಯರು:–**

ಮಧ್ವಾಚಾರ್ಯರು ಕರ್ನಾಟಕದ ಉಡುಪಿ ಜಿಲ್ಲೆಯ **"ಪಾಜಕ"** ಗ್ರಾಮದವರು.

ಇವರು **ದ್ವಾರಕೆಯಲ್ಲಿ ದೊರೆತ ಕೃಷ್ಣನ ವಿಗ್ರಹವನ್ನು ತಂದು ಉಡುಪಿಯಲ್ಲಿ ಪ್ರತಿಷ್ಠಾಪನೆ ಮಾಡಿದರು.** ಮತ್ತು ಕೃಷ್ಣನ ಮಹಿಷಿರ(ಪತ್ನಿಯರು) ಸಂಕೇತವಾಗಿ ಅಷ್ಟಮಠಗಳನ್ನು ಸ್ಥಾಪಿಸಿದರು.

1) ಸೊದೆ ಮಠ 2) ಪೇಜಾವರ ಮಠ 3) ಶಿರೂರು ಮಠ 4) ಕಾಣಿಯೂರು ಮಠ 5) ಪಲಿಮಾರು ಮಠ
6) ಅದಮಾರು ಮಠ 7) ಕೃಷ್ಣಾಪುರ ಮಠ 8) ಪುತ್ತಿಗೆ ಮಠ

**ಮಧ್ವಾಚಾರ್ಯರ ಬೋಧನೆಗಳು**

- ಇವರು ಪ್ರತಿಪಾದಿಸಿದ ಸಿದ್ಧಾಂತವನ್ನು **"ದ್ವೈತ ಸಿದ್ಧಾಂತ"** ಎಂದು ಕರೆಯಲಾಗಿದೆ. ದ್ವೈತ ಎಂದರೆ "ಜೀವಾತ್ಮ ಮತ್ತು ಪರಮಾತ್ಮ ಎಂಬ ಬೇರೆ ಬೇರೆಯಾದ ಎರಡು ಆತ್ಮಗಳು". ಈ ದ್ವೈತ ಸಿದ್ಧಾಂತಕ್ಕೆ ಮೂಲ ಗೌತಮನ ನ್ಯಾಯ, ಕಪಿಲನ ಸಾಂಖ್ಯ. ಪತಂಜಲಿಯ ಯೋಗ ದರ್ಶನ, ಕಣಾದನ ವೈಶೇಷಿಕ ಸಿದ್ಧಾಂತಗಳು.
- ದ್ವೈತ ಸಿದ್ಧಾಂತವು ಹರಿಯೇ ಪರಬ್ರಹ್ಮ. ಈತನು ಸರ್ವೋತ್ತಮ. ಜಗತ್ತು ಮಾಯೆಯಲ್ಲ, ಜೀವಾತ್ಮ ಮತ್ತು ಪರಮಾತ್ಮರ ನಡುವೆ ಭೇದವಿದೆ. ಜೀವಗುಣವೆಲ್ಲ ಪರಮಾತ್ಮನ ಅನುಚರರು. ಜೀವಾತ್ಮ ಮತ್ತು ಪರಮಾತ್ಮರಲ್ಲಿ ಉಚ್ಚ–ನೀಚ ಎಂಬ ಭೇದವಿದೆ.
- ಮಧ್ವಾಚಾರ್ಯರು ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನು ಖಂಡಿಸಿದ್ದಾರೆ. ಅವರ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಎರಡೂ ಒಂದೇ ಅಲ್ಲ. ಅವೆರಡು ಬೇರೆ ಬೇರೆ ಜೀವಾತ್ಮರೆಲ್ಲ ಪರಮಾತ್ಮನ ಗೊಂಬೆಗಳು.

ದ್ವೈತ ಸಿದ್ಧಾಂತದ ಪ್ರಕಾರ ಜಗತ್ತಿನಲ್ಲಿ ಭೇದ ಪ್ರಕಾರಗಳು ಅಸಂಖ್ಯವಾಗಿವೆ. ಅವುಗಳನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

1) ಜೀವೇಶ್ವರ ಭೇದ
2) ಜಡ ಭೇದ
3) ಪರಸ್ಪರ ಜಡ ಭೇದ
4) ಜಡ ಜೀವ ಭೇದ
5) ಪರಸ್ಪರ ಜಡ ಜೀವ ಭೇದ

ಈ ಐದನ್ನು "ಭೇದ ಪಂಚಕ"ಗಳೆಂದು ಕರೆಯಲಾಗಿದೆ.

- ಈ ಮಾಧ್ವ ದ್ವೈತ ಸಂಪ್ರದಾಯವು ಮುಂದೆ ವಿಜಯನಗರದ ಕಾಲದಲ್ಲಿ **ದಾಸಕೂಟ** ಮತ್ತು **ವ್ಯಾಸಕೂಟದ** ಬೆಳವಣಿಗೆಗೆ ಕಾರಣವಾಯಿತು.

**ಬಸವೇಶ್ವರ ವೀರಶೈವ ಮತ್ತು ವಚನ ಚಳುವಳಿ**

- ಭಾರತೀಯ ಶೈವ ಧರ್ಮದಲ್ಲಿ ಅನೇಕ ಶಾಖೆಗಳಿವೆ. ಅದರಲ್ಲಿ ವೀರಶೈವ / ಲಿಂಗಾಯತ ಪಂಥವು ಶೈವ ಧರ್ಮದ ಕೊನೆಯ ಪಂಥವಾಗಿದೆ.
- ಕ್ರಿ.ಶ. 12 ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಪ್ರವರ್ತಕರಲ್ಲಿ ಬಸವೇಶ್ವರರು ಅಗ್ರಗಣ್ಯರಾಗಿದ್ದಾರೆ.
- ಇವರು ಅನುಭವ ಮಂಟಪವನ್ನು ಕಲ್ಯಾಣದಲ್ಲಿ ಸ್ಥಾಪಿಸಿದ ಮೇಲೆ ವೀರಶೈವ ಧರ್ಮಕ್ಕೆ ಒಂದು ರೂಪ ಬಂದಿತು.
- ಭಾರತದಲ್ಲಿರುವ ಎಲ್ಲಾ ಶಿವಶರಣರನ್ನು ಒಂದೇ ವೇದಿಕೆಯಲ್ಲಿ ತರಬೇಕು ಎನ್ನುವ ಉತ್ಕಟ ಅಭಿಲಾಷೆಯನ್ನು ಬಸವಣ್ಣನವರು ಹೊಂದಿದ್ದರು. ಇದರ ಪ್ರತಿಫಲವೇ ವೀರಶೈವ ಧರ್ಮ.
- ಇವರು **"ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ"**ದ ಪ್ರತಿಪಾದಕರಾಗಿದ್ದಾರೆ.
- ಪರಮಾತ್ಮನು ಪುರುಷ ಸಂಕೇತವಾದರೆ, ಶಕ್ತಿಯು ಪ್ರಕೃತಿಯ ಸಂಕೇತ. ಅಂದರೆ ಪುರುಷ ಮತ್ತು ಪ್ರಕೃತಿಯು ಸೃಷ್ಟಿಯ ಮೂಲ ಸಂಕೇತಗಳಾಗಿವೆ. ಈ ಸಿದ್ಧಾಂತವೇ **"ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ"**.
- ಈ ಸಿದ್ಧಾಂತದ ಸಾರವನ್ನು ಗಮನಿಸಿದರೆ ಧಾರ್ಮಿಕ ವಿಷಯಗಳಿಗಿಂತ ಸಾಮಾಜಿಕ ವಿಷಯಗಳಿಗೆ ಧಾರ್ಮಿಕ ಢಾಂಬಿಕತೆಯನ್ನು ಹೊರಹಾಕುವುದಕ್ಕೆ ಯತ್ನಿಸಿದ್ದಾರೆ. ತಮ್ಮ ವಚನಗಳ ಮೂಲಕ ಹೊರಹಾಕಿದ್ದಾರೆ. ಸುಮಾರು 1400 ವಚನಗಳನ್ನು ಬರೆದಿರುವ ಇವರು **"ಕೂಡಲ ಸಂಗಮ ದೇವ"** ಎಂಬ ಅಂಕಿತ ನಾಮದ ಮೂಲಕ ತಮ್ಮ ವಚನಗಳನ್ನು ಹೇಳಿದ್ದಾರೆ.

**ವಚನ ಚಳುವಳಿಯ ಮಹತ್ವ:–**

1) ಸಾಮಾಜಿಕ ಕ್ರಾಂತಿಗೆ ದಾರಿ
2) ವೈದಿಕ ವ್ಯವಸ್ಥೆಗೆ ವಿರೋಧ
3) ಕಾಯಕತ್ವಕ್ಕೆ ಒತ್ತು
4) ಜಮೀನ್ದಾರಿ ವ್ಯವಸ್ಥೆಗೆ ಪೆಟ್ಟು
5) ಧಾರ್ಮಿಕ ಐಕ್ಯತೆಗೆ ದಾರಿ.

ಬಸವೇಶ್ವರರು ತಮ್ಮ ಸಿದ್ಧಾಂತದಲ್ಲಿ ಸಾಧನೆ ಮಾರ್ಗಕ್ಕೆ ಪ್ರಮುಖ ಸ್ಥಾನ ನೀಡಿದ್ದಾರೆ. ಪ್ರತಿಯೊಬ್ಬ ಭಕ್ತನು **"ಅಷ್ಟಾವರಣ"** ಅಥವಾ 8 ನಿಯಮಗಳನ್ನು ಪಾಲಿಸಬೇಕೆಂದು ತಿಳಿಸುತ್ತಾರೆ.

1) ಗುರು – ಗುರುವಿಗೆ ವಿಧೇಯನಾಗಿರುವುದು.

2) ಲಿಂಗ – ನಿರಾಕಾರ ಶಿವನ ಪ್ರತೀಕವಾದ ಲಿಂಗ ಪೂಜಿಸುವುದು.

3) ಜಂಗಮ – ಶಿವನ ಅವತಾರವೆಂದು ಜಂಗಮನ ಗೌರವಿಸುವುದು

4) ಪಾದೋದಕ – ಗುರು ಅಥವಾ ಜಂಗಮನ ಚರಣೋದಕವನ್ನು ಕುಡಿಯುವುದು

5) ಪ್ರಸಾದ – ಲಿಂಗ ಮತ್ತು ಜಂಗಮನಿಗೆ ನೈವೇದ್ಯವನನು ಸಮರ್ಪಿಸಿದ ನಂತರ ಉಳಿದುದನ್ನು ಸೇವಿಸುವುದು.

6) ವಿಭೂತಿ – ಹಸುವಿನ ಸಗಣಿಯ ಬೆರಣಿಯಿಂದ ಮಾಡಿದ ವಿಭೂತಿಯನ್ನು ಧರಿಸುವುದು.

7) ರುದ್ರಾಕ್ಷಿ – ರುದ್ರಾಕ್ಷಿ ಧರಿಸಬೇಕು.

8) ಮಂತ್ರ – ಭಕ್ತನು **"ನಮ: ಶಿವಾಯ"** ಎನ್ನುವ ಪಂಚಾಕ್ಷರಿ ಮಂತ್ರ ಜಪಿಸಬೇಕು.

ಈ ಮೇಲಿನ ಅಷ್ಟಾವರಣಗಳು ಭಕ್ತನನ್ನು ಲೋಕದ ಕಲ್ಮಶದಿಂದ ದೂರವಿಟ್ಟು ಶಿವನ ಸನ್ನಿಧಿಯತ್ತ ಸಾಗಲು ಸಹಾಯಕವಾಗುತ್ತದೆ ಎಂದು ಬಸವೇಶ್ವರರು ಹೇಳಿದ್ದಾರೆ / ಆದ್ದರಿಂದಲೇ ಬಸವಣ್ಣನವರನ್ನು **'ಅಷ್ಟಾವರಣಗಳ ಅಧಿದೇವತೆ'** ಎಂದು ಭಾವಿಸುತ್ತಾರೆ.

ವೀರಶೈವ ಧರ್ಮವು ಲಿಂಗಾಚಾರ, ಸದಾಚಾರ, ಶಿವಾಚಾರ, ಗುಣಾಚಾರ, ಮತ್ತು ಭೃತ್ಯಾಚಾರಗಳೆಂಬ **"ಪಂಚಾಚಾರ್ಯ"**ಗಳ ಬಗ್ಗೆ ತಿಳಿಸುತ್ತದೆ.

ಅದೇ ರೀತಿ **"ಷಟ್ಸ್ಥಳ"**ಗಳ ಬಗ್ಗೆ ಹೇಳಿದೆ. ಪ್ರತಿಯೊಬ್ಬ ಭಕ್ತನು ಭಗವಂತನ ಸಾಕ್ಷಾತ್ಕಾರ ಹೊಂದಲು 6 ಘಟ್ಟಗಳನ್ನು ದಾಟಬೇಕು. ಅವುಗಳು 1) ಭಕ್ತ ಸ್ಥಲ 2) ಮಹೇಶವರ ಸ್ಥಲ 3) ಪ್ರಸಾದ ಸ್ಥಲ 4) ಪ್ರಾಣ ಲಿಂಗ ಸ್ಥಲ 5) ಶರಣ ಸ್ಥಲ 6) ಐಕ್ಯ ಸ್ಥಲ

**ಹರಿದಾಸ ಚಳುವಳಿ**

ಕರ್ನಾಟಕದಲ್ಲಿ ನಡೆದಿರುವ ಪ್ರಮುಖ ಧಾರ್ಮಿಕ ಚಳುವಳಿಗಳಲ್ಲಿ ಕೂಡಾ ಒಂದು. ಇದು ವೈಷ್ಣವ ಧರ್ಮದ ಚಳುವಳಿಯಾಗಿದೆ. **"ಶ್ರೀ ಹರಿಯೇ ಸರ್ವೋತ್ತಮ"** ಅವನೇ ಪರಮದೈವ ಅವನ ನಾಮಸ್ಮರಣೆಯಿಂದಲೇ ತಮ್ಮ ಮುಕ್ತಿ ಸಾಧ್ಯವೆಂದು ಪ್ರತಿಪಾದಿಸಿದವರನ್ನು ಹರಿದಾಸರೆಂದು ಕರೆಯಲಾಗಿದೆ.

- ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜ ಮತ್ತು ಧರ್ಮದ ಸುಧಾರಣೆಗೆ ಮುಂದಾದರು.
- ವಿಜಯನಗರದ ಅರಸರು ಈ ಚಳುವಳಿಗೆ ಬೆಂಬಲ ನೀಡಿದರು.
- ಇದು ಕ್ರಿ.ಶ. 15 ರಿಂದ 16ನೇ ಶತಮಾನದವರೆಗೆ ಜರುಗಿತ್ತು.
- ಕನ್ನಡ ಭಾಷೆಯಲ್ಲೇ ಸರಳವಾಗಿ ಕೀರ್ತನೆಗಳನ್ನು ಹಾಡಿ ಜನರಿಗೆ ಮನದಟ್ಟು ಮಾಡಿದರು.
- ಈ ಚಳುವಳಿಯಲ್ಲಿ 2 ಪಂಥಗಳಿವೆ. 1) ವ್ಯಾಸ ಕೂಟ 2) ದಾಸ ಕೂಟ

1) **ವ್ಯಾಸ ಕೂಟ** – **"ನರಹರಿ ತೀರ್ಥರು"** ಈ ಚಳುವಳಿಯನ್ನು ಪ್ರವರ್ಧಮಾನಕ್ಕೆ ತಂದರು. ಈ ಕೂಟದ ಪ್ರಮುಖರೆಂದರೆ

- ✓ ನರಹರಿ ತೀರ್ಥರು, ಶ್ರೀ ಪಾದರಾಯರು, ವ್ಯಾಸರಾಯರು ಇತ್ಯಾದಿ.
- ✓ ನರಹರಿ ತೀರ್ಥರು ಕೀರ್ತನೆಗಳನ್ನು ಕನ್ನಡದಲ್ಲಿ ಮಾತ್ರ ರಚಿಸಿದರು.

**ಪ್ರಮುಖ ಹರಿದಾಸರು**

- ✓ ನರಹರಿ ತೀರ್ಥರು – ಇವರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದರು. ಇವರ ಕೀರ್ತನೆಗಳು ಶ್ರೀ ರಘುಪತಿ ಎಂಬ ಅಂಕಿತ ನಾಮದಿಂದ ಕೊನೆಗೊಳ್ಳುತ್ತದೆ.
- ✓ ಶ್ರೀ ಪಾದರಾಯರು – ತಮ್ಮ ಕೀರ್ತನೆಗಳನ್ನು **"ರಂಗವಿಠಲ"** ಎಂಬ ಅಂಕಿತನಾಮದಿಂದ ರಚಿಸಿದ್ದರು. ಇವರನ್ನು **"ಹರಿದಾಸ ಚಳುವಳಿಯ ಪಿತಾಮಹ"** ಎಂದು ಕರೆಯಲಾಗಿದೆ.
- ✓ ವ್ಯಾಸರಾಯರು – ಕೃಷ್ಣದೇವರಾಯನ ಗುರುಗಳಾಗಿದ್ದರು. ಇವರ ಶಿಷ್ಯರೇ ಕನಕದಾಸರು ಮತ್ತು ಪುರಂದರದಾಸರು. ವಿಜಯನಗರಕ್ಕೆ ಆಧ್ಯಾತ್ಮಿಕ ಮಾರ್ಗದರ್ಶಕರಾಗಿದ್ದರು.

**ದಾಸ ಕೂಟ**

ದಾಸ ಕೂಟದವರು ಜನ ಸಾಮಾನ್ಯರ ಜೊತೆ ಬೆರೆತು ವೈಷ್ಣವ ಧರ್ಮ ಪ್ರಚಾರ ಮಾಡಿದರು.

<u>ಪುರಂದರ ದಾಸರು</u>:

- ಇವರು ಪ್ರಸಿದ್ಧ ಹರಿಭಕ್ತರು. ಇವರ ಮೊದಲ ಹೆಸರು **"ಶ್ರೀನಿವಾಸ ನಾಯಕ"**. ಶ್ರೀ ವ್ಯಾಸರಾಯರ ಮಂತ್ರೋಪದೇಶ ಪಡೆದು, ಗುರುದೀಕ್ಷೆಯನು ಸವೀಕರಿಸಿ ಶ್ರೀ ಹರಿಯ ದಾಸರಾದರು.
- **ಇವರ ಪ್ರಖ್ಯಾತ ಕೀರ್ತನೆಗಳು:–** 1) **"ಈಸಬೇಕು ಇದ್ದು ಜಯಿಸಬೇಕು"** 2) **"ಹೇಸಿಗೆ ಸಂಸಾರದಲ್ಲಿ ಆಸೆ ಲವಲೇಶವಿಲ್ಲದ ಹಾಗೆ"**, ಇತ್ಯಾದಿ ಕೀರ್ತನೆಗಳನ್ನು ತಂಬೂರಿ ಹಿಡಿದು ಹಾಡುತ್ತಾ ಜನಸಾಮಾನ್ಯರಿಗೆ ಜೀವನದ ವಾಸ್ತವಿಕತೆ. ಸ್ಥಿತಿಕತೆಯ ಮಹತ್ವವನ್ನು ಬೋಧಿಸಿದರು. ತಮ್ಮ ಕೀರ್ತನೆಗಳನ್ನು **"ಪುರಂದರ ವಿಠಲ"** ಎಂಬ ಅಂಕಿತ ನಾಮದಿಂದ ರಚಿಸುತ್ತಿದ್ದರು.
- ಭಕ್ತಿ, ತ್ಯಾಗ, ತನ್ಮಯತೆಯ ಜೊತೆಗೆ ಸಮಾಜದ ಢಾಂಬಿಕತೆ, ಭೋಗ ಜೀವನ, ಜಾತಿ ಪದ್ಧತಿಯನ್ನು ಕಟುವಾಗಿ ಖಂಡಿಸಿದರು. ಇವರನ್ನು **"ಕರ್ನಾಟಕ ಸಂಗೀತ ಪಿತಾಮಹ"** ಎಂದು ಕರೆಯುವರು.

<u>ಕನಕದಾಸ:–</u>

- ಪುರಂದರದಾಸರ ಸಮಕಾಲೀನರು. ಇವರ ಪೂರ್ವದ ಹೆಸರು ತಿಮ್ಮಪ್ಪ ನಾಯಕ, ಬಾಡ ಗ್ರಾಮದಲ್ಲಿ ಜನಿಸಿದರು. ಇವರು ಮೊದಲು ಸ್ಥಳೀಯ ಪಾಳೇಗಾರರಾಗಿದ್ದರು. ಕಾಗಿನೆಲೆಯಲ್ಲಿ ಭವ್ಯವಾದ ಆದಿಕೇಶವ ಸ್ವಾಮಿಯ ಮಂದಿರವನ್ನು ನಿರ್ಮಿಸಿದರು.

<u>ಪ್ರಮುಖ ಕೀರ್ತನೆಗಳು</u>

1) ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ,
2) ಆತ್ಮ ಯಾವ ಕುಲ, ಜೀವ ಯಾವ ಕುಲ.

ಇವರ ಕೀರ್ತನೆಗಳು ಆದಿಕೇಶವ ಎಂಬ ಅಂಕಿತ ನಾಮದಿಂದ ಕೊನೆಗೊಳ್ಳುತ್ತಿತ್ತು.
ಇವರ ಪ್ರಮುಖ ಕೃತಿಗಳು ಮೋಹನ ತರಂಗಿಣಿ, ನಳಚರಿತೆ, ಹರಿಭಕ್ತ ಸಾರ, ರಾಮಧಾನ್ಯ ಚರಿತೆ.

<u>ಹರಿದಾಸ ಚಳುವಳಿಯ ಪ್ರಭಾವ, ಮಹತ್ವ, ಕೊಡುಗೆಗಳು.</u>

1) ಸಾಮಾಜಿಕ ಲೋಪ–ದೋಷಗಳನ್ನು ಸರಿಪಡಿಸಲು ಯತ್ನಿಸಿತು. ಉದಾ: **"ಕುಲ ಕುಲವೆಂದು ಹೊಡೆದಾಡದಿರಿ. ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ"** ಎಂಬ ಕೀರ್ತನೆಯ ಮೂಲಕ ಮೇಲು–ಕೀಳುಗಳೆಂಬ ಸಂಕುಚಿತ ಮನೋಭಾವನೆಯನ್ನು ತೆಗೆದು ಹಾಕಲು ಯತ್ನಿಸಿದರು.

2) ಧಾರ್ಮಿಕ ಮತ್ತು ಆಧ್ಯಾತ್ಮಿಕ ರಕ್ಷಣೆಗೆ ಆದ್ಯತೆ

ಭಕ್ತಿ ಮಾರ್ಗ, ಜ್ಞಾನ ಮಾರ್ಗ, ಕರ್ಮ ಮಾರ್ಗ ಮಹತ್ವವನ್ನು ಬೋಧಿಸಿದರು.

ಧರ್ಮದಲ್ಲಿ ಉಂಟಾದ ನೈತಿಕ ಅಧ:ಪತನವನ್ನು ತೀವ್ರವಾಗಿ ತಮ್ಮ ಕೀರ್ತನೆಯಲ್ಲಿ ಖಂಡಿಸಿ. ಸರಿದಾರಿಯನ್ನು ತೋರಿದರು.

3) ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಿತು.

ಇವರು ರಚಿಸಿದ ಕೀರ್ತನೆಗಳು, ಉಗಾ ಭೋಗಗಳು, ಸುಳಾದಿಗಳು, ಧರ್ಮ ಗ್ರಂಥಗಳು ಕನ್ನಡ ಸಾಹಿತ್ಯದ ದೊಡ್ಡ ನಿಧಿಯಂತಿದೆ.

4) ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಕೊಡುಗೆ

ಹರಿದಾಸರು ಕೀರ್ತನೆಗಳನ್ನು ರಚಿಸಿ ಸಂಗೀತಕ್ಕೆ ಅಳವಡಿಸಿದರು. ಇದರಿಂದ ಭಕ್ತಿ, ಸಾಹಿತ್ಯ, ಸಂಗೀತಗಳ ತ್ರಿವಳಿ ಸಂಗಮವಾಗಿ, **"ಭಜನೆ ಪದ್ಧತಿ"** ಹುಟ್ಟಿಕೊಂಡಿತು.

<u>ಕಾಳಮುಖ, ಶಕ್ತ ಮತ್ತು ಪಾಶುಪಥ ಪಂಥಗಳು</u>

ಇವುಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಶೈವ ಪಂಥಗಳು.

<u>ಕಾಳಮುಖ</u>: ಸದಾ ತಮ್ಮ ಮುಖಗಳಿಗೆ ಕಪ್ಪುಮಸಿ, ಅಥವಾ ಕಪ್ಪಾದ ಚೀತಾಭಸ್ಮವನ್ನು ಬಳಿದು ಕೊಳ್ಳುತ್ತಿದ್ದರು. ಇವರನ್ನು ಕಾಳಮುಖರೆಂದು ಕರೆಯಲಾಗುತ್ತಿತ್ತು. ಇವರು ಐದು ತತ್ವಗಳಲ್ಲಿ ನಂಬಿಕೆಯಿಟ್ಟಿದ್ದಾರೆ.

1) ಕಾರ್ಯ 2) ಕರಣ 3) ಯೋಗ 4) ಧಾರ್ಮಿಕ ಆಚರಣೆ 5) ಮೋಕ್ಷ

ಕರ್ನಾಟಕದಲ್ಲಿ ಧಾರವಾಡ, ಶಿವಮೊಗ್ಗ, ಬನವಾಸಿ, ಐಹೊಳೆ, ಪ್ರಮುಖ ಕಾಳಮುಖ ಪಂಥದ ತಾಣಗಳಾಗಿದ್ದವು.

<u>ಪಾಶುಪಥ ಪಂಥ</u>:–

- ಶೈವ ಧರ್ಮದ ಧಾರ್ಮಿಕ ಪಂಥಗಳಲ್ಲೊಂದು. ಈ ಪಂಥವನ್ನು ಕ್ರಿ.ಶ. 1ನೇ ಶತಮಾನದಲ್ಲಿ **"ಲಾಕುಲಿಶ"** ಇದಕ್ಕೆ ವ್ಯವಸ್ಥಿತ ರೂಪ ಕೊಟ್ಟನು.
- ಇವರ ಪ್ರಮುಖ ಆಚರಣೆಯೆಂದರೆ ಪ್ರತಿ ದಿನ 3 ಬಾರಿ ಸನ್ಯಾಸಿಗಳು ತಮ್ಮ ದೇಹಕ್ಕೆ ಬೂದಿಯನ್ನು ಬಳಿದುಕೊಂಡು ಧ್ಯಾನ ಮಾಡುವುದು. **"ಓಂ"** ಮಂತ್ರ ಪಠಣೆ, ಪಂಚಾಕ್ಷರಿ ಮಂತ್ರ ಪಠಣೆ ಇತ್ಯಾದಿ.
- ಈ ಪಂಥದಿಂದ ಕಾಳಮುಖ ಮತ್ತು ಕಪಾಲಿಕ ಮತಗಳು ಉಗಮವಾದವು.

**ಶಕ್ತಪಂಥ**

- ಹಿಂದೂ ಧರ್ಮದ ಇನ್ನೊಂದು ಪ್ರಮುಖ ಪಂಥ.
- **"ಶಕ್ತಿ** ಪಂಥ ಇದನ್ನು **"ಶಕ್ತಿ ವಾದ"** ಎಂದು ಸಹ ಕರೆಯುತ್ತಾರೆ.
- ಈ ಪಂಥದಲ್ಲಿ ದೇವಿಯನ್ನು ಪರಮೋಚ್ಛ ದೇವತೆ ಎಂದು ನಂಬಿ ಆರಾಧಿಸಲಾಗುತ್ತದೆ.
- ಶಕ್ತವಾದದ ಬಗ್ಗೆ ನಮಗೆ ಪ್ರಥಮ ಉಲ್ಲೇಖ.
- ಸಿಂಧೂ ಬಯಲಿನ ನಾಗರೀಕತೆಯಲ್ಲಿಯೇ ಸಿಗುತ್ತದೆ. ಈ ಜನರು ಮಾತೃದೇವತಾ ಆರಾಧಕರಾಗಿದ್ದರು.
- ಭಾರತೀಯ ಪಾರಂಪರಿಕ ಕೃತಿಗಳಾದ ವೇದಗಳು, ಪುರಾಣಗಳು, ಉಪನಿಷತ್ತುಗಳು, ಶಕ್ತವಾದದ ಬಗ್ಗೆ ತಿಳಿಸುತ್ತದೆ.
- ಶಕ್ತವಾದದಲ್ಲಿ 2 ಪಂಥಗಳು ಉಗಮವಾದವು. ಅವುಗಳೆಂದರೆ **"ಶ್ರೀ ಕುಲ"** ಮತ್ತು **"ಕಲಿಕುಲ"**

1) **ಶ್ರೀ ಕುಲ ಪಂಥ:–** ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದೆ. ಮೂಲತ: ಈ ಪಂಥ ಪ್ರಾರಂಭವಾಗಿದ್ದು ಕಾಶ್ಮೀರದಲ್ಲಿ. ಆದರೆ ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಈ ಪಂಥದಲ್ಲಿ ದೇವಿಯನ್ನು ಮಹಾದೇವಿ, ಆದಿಶಕ್ತಿ, ಲಲಿತಾತ್ರಿಪುರ ಸುಂದರಿಯೆಂದು ಆರಾಧಿಸಲಾಗುತ್ತದೆ.

2) **ಕಲಿಕುಲ ಪಂಥ:–** ಈ ಪಂಥ ಭಾರತದ ಉತ್ತರ, ಈಶಾನ್ಯ, ನೇಪಾಳ ಮತ್ತು ದಕ್ಷಿಣದ ಕೇರಳದಲ್ಲಿ ಪ್ರಚಲಿತದಲ್ಲಿದೆ.
ಈ ಪಂಥದಲ್ಲಿ ದೇವಿಯನ್ನು **'ವಿದ್ಯಾದೇವತೆ'** ಮತ್ತು **'ಮೋಕ್ಷ ದೇವತೆ'** ಎಂದು ಕರೆಯಲಾಗಿದೆ. ದೇವಿ ಆರಾಧನೆ ಸಂಬಂಧಿಸಿದಂತೆ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಉದಾ: ದಸರಾ, ವಿಜಯದಶಮಿ, ಲಕ್ಷ್ಮೀಪೂಜೆ, ಇತ್ಯಾದಿ.

## ಬಹಮನಿ ಷಾಹಿಗಳು

**1. ಮಹಮದ್ ಗವಾನ–(1447–1481)** – ಮೂಲತ: ಒಬ್ಬ ವ್ಯಾಪಾರಿ. ಈತ ಬೀದರ್‌ಗೆ ಪರ್ಷಿಯದ **"ಗವಾನ"** ಎಂಬ ಹಳ್ಳಿಯಿಂದ ಬಂದು ಬಹಮನಿ ಸುಲ್ತಾನರ ಸೇವೆಗೆ ಸೇರಿಕೊಂಡನು. 2ನೇ ಅಲ್ಲಾವುದ್ದೀನ್ ಮಹಮದ್ ಗವಾನನನ್ನು ಮಂತ್ರಿಯಾಗಿ ನೇಮಿಸಿದನು. ನಂತರ ರಾಜನಾದ ಹುಮಾಯೂನ್ (ಕ್ರಿ.ಶ. 1458–1461) ರ ಕಾಲದಲ್ಲಿಯೇ ಸಹ ಮಂತ್ರಿಯಾಗಿ ಮುಂದುವರೆದನು.

ಹುಮಾಯೂನ ಈತನಿಗೆ **"ಮಾಲಿಕ್–ಉಲ್–ತುಜ್ಜಾರ್"** ಎಂಬ ಬಿರುದನ್ನು ಸಹ ನೀಡಿದರು. ಈತನ ನಂತರ ಅಧಿಕಾರಕ್ಕೆ ಬಂದ 2ನೇ ಮಹಮದ್ ಷಾ (ಕ್ರಿ.ಶ. 1463–1482) ಮಹಮದ್ ಗವಾನನನ್ನು ಬಹಮನಿ ರಾಜ್ಯದ ಪ್ರಧಾನಮಂತ್ರಿಯಾಗಿ ನೇಮಕ ಮಾಡಿದನು. ಮಹಮದ್ ಗವಾನನಿಗೆ **"ಖ್ವಾಜು–ಇ–ಜಹಾನ್"** ಎಂಬ ಬಿರುದು ಸಹ ನೀಡಿದನು.

**ಮಹಮದ್ ಗವಾನನ ಸಾಧನೆಗಳು:**

1) ಬಹಮನಿ ರಾಜ್ಯದ ಆಡಳಿತವನ್ನು ಪುನರ್ ಸಂಘಟಿಸಿದನು.
2) ಬಹಮನಿ ರಾಜ್ಯವನ್ನು 8 ಪ್ರಾಂತ್ಯಗಳಾಗಿ ವಿಂಗಡಿಸಿದನು (ಪ್ರಾಂತ್ಯಗಳನ್ನು) **"ತರ್ಪ್"**ಗಳೆಂದು ಕರೆಯಲಾಗುತ್ತಿತ್ತು. ಪ್ರತಿ ತರ್ಪಗೂ **"ತರಪ್ ದಾರ"** ಎಂಬ ಪ್ರಾಂತ್ಯಾಧಿಕಾರಿಯನ್ನು ನೇಮಿಸಿದನು.
3) ಪ್ರತಿ ಜಿಲ್ಲೆಗೂ ಆರಿಫ್ (ಜಿಲ್ಲಾ ಮುಖ್ಯಸ್ಥ). ನಗರ ಆಡಳಿತಕ್ಕೆ ಕೊತ್ವಾಲ್, ಗ್ರಾಮಗಳ ಆಡಳಿತಕ್ಕೆ ಮುಖದ್ದಮ್ ಎಂಬ ಅಧಿಕಾರಿಗಳನ್ನು ನೇಮಿಸಿದನು.

4) ಈತನು ಕೃಷಿಗೆ ನೀರಾವರಿ ಸೌಲಭ್ಯವನ್ನು ಹಾಗೂ ಅಧಿಕ ತೆರಿಗೆ ಭಾರವನ್ನು ಇಳಿಸಿದನು.

- ವಿಜಯನಗರದ ಜೊತೆಗಿನ ಯುದ್ಧದಲ್ಲಿ ಬಂದೂಕು ಪೌಡರ್ ಬಳಸಿದ್ದನು. ಇದನ್ನು ತರಬೇತಿ ನೀಡಲು ಪರ್ಷಿಯಾದಿಂದ ತಂತ್ರಜ್ಞಾನವನ್ನು ಕರೆಸಿದ್ದನು.
- ಈತನ ಇನ್ನೊಂದು ಪ್ರಮುಖ ನೀತಿಯೆಂದರೆ **"ಅರ್ಹರಿಗೆ ಮಾತ್ರ ಸರಕಾರಿ ಉದ್ಯೋಗ ಸೇವೆ"**ಯನ್ನು ನಿಗದಿಪಡಿಸಿದನು.
- ಶಿಕ್ಷಣ ಸುಧಾರಕನಾಗಿ ಕ್ರಿ.ಶ. 1416 ರಲ್ಲಿ ಬೀದರ್‌ನಲ್ಲಿ ಮದರಸಾವನ್ನು ಆರಂಭಿಸುವುದರೊಂದಿಗೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದನು. ಇದು ಮುಂದೆ ಶಿಕ್ಷಣ ಕೇಂದ್ರವಾಗಿ ರೂಪಗೊಂಡಿತು.
- ಅತ್ಯಂತ ಸಮರ್ಥ ಮಂತ್ರಿ, ಮಹಮದ್ ಗವಾಮ ತನ್ನ ವಿರುದ್ಧದ ಒಳಸಂಚನ್ನು ಸೋಲಿಸಲಾಗದೆ, ಕ್ರಿ.ಶ. 1482 ರಲ್ಲಿ ಕೊಂಡಪಲ್ಲಿಯಲ್ಲಿ ಗಲ್ಲಿಗೇರಿದನು.

**<u>ಬಹುಮನಿ ಸುಲ್ತಾನರ ಕೊಡುಗೆಗಳು:</u>**

1) ಸಾಹಿತ್ಯಕ್ಕೆ ಬಹಮನಿ ಸುಲ್ತಾನರ ಕೊಡುಗೆಗಳು –

- ಸುಲ್ತಾನರು ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದರು. ಆದ್ದರಿಂದ ಅನೇಕ ಸಾಹಿತ್ಯ ಕೃತಿಗಳು ಜನ್ಮ ತಾಳಿದವು. ಬಹಮನಿ ಸುಲ್ತಾನರ ಕಾಲದಲ್ಲಿ ಪರ್ಷಿಯನ್, ಮರಾಠಿ, ಕನ್ನಡ, ಅರೇಬಿಕ, ಗುಜರಾತಿ ಭಾಷೆಗಳು ಮಿಶ್ರಣಗೊಂಡು ಹೊಸ ಮಿಶ್ರಭಾಷೆ **"ದಖ್ಖನಿ ಭಾಷೆ"** ಉಗಮವಾಯಿತು.
- ಹಸನ್–ಇಮಾಮಿಯು **"ಪುತೂಹತ್–ಇ–ಸಲಾತಿನ್"** ಎಂಬ ಕೃತಿ ರಚಿಸಿದ್ದಾನೆ. ಇದು ಬಹಮನಿ ರಾಜ್ಯದ ಬಗ್ಗೆ ಮಾಹಿತಿ ನೀಡಿರುತ್ತದೆ. ಪರಿಸ್ತಾನ **"ತಾರಿಖ್–ಇ–ಪೆರಿಸ್ತಾ"**, ತಬತಬನ **"ಬುರಾನ್–ಇ–ಮಾಸಿರಿ"** ಎಂಬ ಕೃತಿಯ ಹಾಗೆ ಮಹಮದ್ ಗವಾನನ **"ಮಾನ್ಜಿರುಲ್–ಇನ್ಷಾ"** ಮತ್ತು **"ರಿಯಾಜ್–ಉಲ್–ಇನಾ"** ಕೃತಿಗಳು ರಚಿತವಾದವು.

**<u>ವಾಸ್ತುಶಿಲ್ಪಕ್ಕೆ ಬಹಮನಿ ಸುಲ್ತಾನರ ಕೊಡುಗೆಗಳು</u>**

ಬಹುಮನಿ ಸುಲ್ತಾನರು ಇಂಡೋ–ಸಾರ್ಸನಿಕ ಶೈಲಿ ಅಥವಾ ದಖನ್ ಶೈಲಿಯಲ್ಲಿ ಗುಲ್ಬರ್ಗಾ, ಬೀದರ್ ಮತ್ತಿತರ ಕಡೆಗಳಲ್ಲಿ ವಾಸ್ತುಶಿಲ್ಪಿ ನಿರ್ಮಿಸಿದ್ದಾರೆ.

**<u>ಗುಲ್ಬರ್ಗಾದ ಸ್ಮಾರಕಗಳು</u>** – ಇವರ ರಾಜಧಾನಿಯಾಗಿದ್ದ ಗುಲ್ಬರ್ಗದಲ್ಲಿ ಮಸೀದಿ, ಅರಮನೆ, ಕೋಟೆಗಳನ್ನು ನಿರ್ಮಿಸಿದರು. ಪ್ರಮುಖವಾಗಿ

1) ಗುಲ್ಬರ್ಗ ಕೋಟೆ

2) ಕಾವಲು ಗೋಪುರ / ಬುರುಜು

3) **ಜಾಮಿ / ಮಸೀದಿ –** 1ನೇ ಮಹಮದ್ ಷಾನು ನಿರ್ಮಿಸಿದನು. ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ಮಸೀದಿಯಾಗಿದೆ.

4) **ಷಾ ಬಜಾರ ಮಸೀದಿ –** 1ನೇ ಮಹಮದ್ ಷಾನು ನಿರ್ಮಿಸಿದನು.

5) **ಫಿರೋಜ ಷಾ ಗೋರಿ** – ಗುಲ್ಬರ್ಗದ ಕೋಟೆಯ ಆವರಣದಲ್ಲಿದೆ.

6) **ಖ್ವಾಜಾ ಬಂದೇ ನವಾಜ ದರ್ಗಾ –** ಪ್ರಸಿದ್ಧ ಸೂಫಿ ಸಂತ ಖ್ವಾಜಾ ಬಂದೇ ನವಾಜರ ಹೆಸರಿನಲ್ಲಿ ನಿರ್ಮಿಸಲಾಗಿದೆ. ದರ್ಗಾದ ಒಳಗೋಡೆಯನ್ನು ಪರ್ಷಿಯನ್ ಶೈಲಿಯ ಚಿತ್ರಗಳಿಂದ ಅಲಂಕರಿಸಲಾಗಿದೆ.

**<u>ಬೀದರನ ಕಟ್ಟಡಗಳು</u>**

1) ಬೀದರ ಕೋಟೆ – ಗುಲ್ಬರ್ಗದ ಕೋಟೆಗಿಂತ ದೊಡ್ಡದು.

2) ಸೋಲಾಕಂಬ ಮಸೀದಿ – ಪ್ರವೇಶದ್ವಾರದಲ್ಲಿ 16 ಬಾರಿ ಗಾತ್ರದ ಕಂಬಗಳಿವೆ. ಇದಕ್ಕೆ ಅರ್ಧ ಗೋಳಾಕೃತಿಯ ಗುಮ್ಮಟವಿದ್ದು, ರೋಮನ ಕಟ್ಟಡವನ್ನು ಹೋಲುತ್ತದೆ.

3) ಮದರಸಾ ಕಾಲೇಜು – 1472 ರಲ್ಲಿ ಮಹಮದ್ ಗವಾನ ನಿರ್ಮಿಸಿದ. 3 ಅಂತಸ್ತಿನಿಂದ ಕೂಡಿದ್ದು 2 ಮಿನಾರ್‌ಗಳಿವೆ. ಇದು ಪರ್ಷಿಯನ್ ಶೈಲಿಯಲ್ಲಿದೆ.

**ಕಲೆ**

**<u>ಬಿದರಿ ಕಲೆ</u>–** ಇದೊಂದು ಮಿಶ್ರಲೋಹದ ಕಲೆ ಇದನ್ನು ಮಹಮದ್ ಗವಾನ ಕಾಲದಲ್ಲಿ ಬೀದರ್‌ನಲ್ಲಿ ಪರಿಚಯಿಸಲಾಯಿತು. ತಾಮ್ರ, ಹಿತ್ತಾಳೆ ಮತ್ತು ಸತುಗಳ ಮಿಶ್ರಲೋಹ.

ಇದರಲ್ಲಿ ಅಲಂಕಾರಿಕ ಹೂಜಿಗಳು, ಹರಿವಾಣ, ಭರಣಿ, ದೀಪ ಸ್ತಂಭ, ಚಮಚ ಮುಂತಾದವುಗಳ ಮೇಲೆ ಕುರಾನಿನ ವಾಕ್ಯಗಳು, ಹೂಬಳ್ಳಿಗಳು, ಧಾರ್ಮಿಕ ದೃಷ್ಟಾಂತಗಳನ್ನು ಕೆತ್ತಿದ್ದಾರೆ.

**ಬಿಜಾಪುರದ ಆದಿಲ್ ಷಾಹಿಗಳ ಕೊಡುಗೆ**

- ಬಹಮನಿ ಸಾಮ್ರಾಜ್ಯವು ಐದು ಶಾಹಿ ಸಂತತಿಗಳಾಗಿ ಒಡೆದು ಹೋಯಿತು. ಅವುಗಳಲ್ಲಿ ಬಿಜಾಪುರದ ಆದಿಲ್ ಷಾಹಿಗಳು ಪ್ರಮುಖರು.
- ಕ್ರಿ.ಶ. 1490 ರಲ್ಲಿ ಯೂಸುಫ್ ಆದಿಲ್ ಖಾನನಿಂದ ಸ್ಥಾಪಿತವಾಯಿತು. 1ನೇ ಆಲಿ ಆದಿಲ್ ಷಾಹಿ, 2ನೇ ಇಬ್ರಾಹಿಂ ಆದಿಲ್ ಷಾ, ಮತ್ತು ಮಹಮದ್ ಆದಿಲ್ ಷಾ ಈ ಸಂತತಿಯ ಪ್ರಮುಖ ಸುಲ್ತಾನರು.
- ಇವರ ಕಾಲದ ಕಲೆ, ಸಾಹಿತ್ಯ ಮತ್ತು ವಾಸ್ತುಶಿಲ್ಪ
- ಬಿಜಪುರವನ್ನು **"ದಕ್ಷಿಣ ಭಾರತದ ಬನಾರಸ್"** ಮತ್ತು 2ನೇ ಬಾಗ್ದಾದ ಎಂದು ಸಹ ಕರೆಯಲಾಗುತ್ತಿತ್ತು. ಯಾಕೆಂದರೆ ಬಾಗ್ದಾದ್‌ನಿಂದ ಅನೇಕ ಮುಸ್ಲಿಂ ವಿದ್ವಾಂಸರು ಬಿಜಾಪುರಕ್ಕೆ ಬಂದು ನೆಲೆಸಿದ್ದರು.
- ಆದಿಲ್–ಷಾಹಿ–ಸುಲ್ತಾನ 2ನೇ ಇಬ್ರಾಹಿಂ ಆದಿಲ್–ಷಾನು ಸ್ವತ: ವಿದ್ವಾಂಸನಾಗಿದ್ದು ದಖ್ಖನಿ ಭಾಷೆಯಲ್ಲಿ **"ಕಿತಾಬ್–ಇ–ನವರಸ"** ಎಂಬ ಕೃತಿಯನ್ನು ಸಂಗೀತದ ಮೇಲೆ ರಚಿಸಿದನು.
- ಪೆರಿಸ್ತಾನು ಪರ್ಷಿಯನ ಭಾಷೆಯಲ್ಲಿ **"ತಾರೀಖ್–ಇ–ಪೆರಿಸ್ತಾ"** ಎಂಬ ಕೃತಿಯನ್ನು & **"ದಸ್ತೂರ–ಇ–ಅತ್ತಿಬ್ಬಾ"** ಎಂಬ ವೈದ್ಯಕೀಯ ಕೃತಿಯನ್ನು ರಚಿಸಿದ್ದಾನೆ.
- ಅಬ್ದುಲ್ ಎಂಬ ಕವಿ ಪರ್ಷಿಯನ್ ಭಾಷೆಯಲ್ಲಿ **"ಇಬ್ರಾಹಿಂ ನಾಮಾ"** ಎಂಬ ಕೃತಿಯನ್ನು ರಚಿಸಿದ್ದಾನೆ. ಇದು 2ನೇ ಇಬ್ರಾಹಿಂ ಆದಿಲ್ ಷಾನ ಜೀವನ ಚರಿತ್ರೆಯಾಗಿದೆ. ಅದೇ ರೀತಿ ಒಂದನೇ ಅಲಿ ಆದಿಲ್ ಷಾನ ಆಸ್ಥಾನದಲ್ಲಿದ್ದ ಹಸನ್ ಶೌಕಿಯು **"ಪುತುಹ್ ನಾಮಾ"** ಕೃತಿಯನ್ನು, ಜುವೇರಿಯು **"ಬಸಾಲಿ–ಉಸ್–ಸಲಾತಿನ್"** ಎಂಬ ಕೃತಿಯನ್ನು ಪರ್ಷಿಯನ್‌ನಲ್ಲಿ ರಚಿಸಿದ್ದಾರೆ.

**ಕಲೆ–ವಾಸ್ತುಶಿಲ್ಪಗಳು**

ಇವರ ಶೈಲಿಯನ್ನು ಇಂಡೋ–ಸಾರಸನಿಕ್ ಶೈಲಿಯೆಂದು ಕರೆಯಬಹುದು. ಇವರ ಕಾಲದಲ್ಲಿ ಮೂರ್ತಿಶಿಲ್ಪಕ್ಕೆ ಯಾವುದೇ ಪ್ರೋತ್ಸಾಹ ಕಂಡು ಬರುವುದಿಲ್ಲ. ಆದರೆ ವಾಸ್ತುಶಿಲ್ಪಕ್ಕೆ ಬಹಳ ಮಹತ್ವ ದೊರೆಯಿತು. ಇವರ ವಾಸ್ತುಶಿಲ್ಪ ಶೈಲಿಯನ್ನು **"ದಖ್ಖನ್ನಿನ ರಾಣಿ"** ಎಂದು ಕರೆಯಲಾಗಿದೆ.

**ಪ್ರಮುಖ ಅರಮನೆಗಳು:**

1) ಗಗನ ಮಹಲ್ – 1ನೇ ಅಲಿ ಆದಿಲ್ ಷಾನು ನಿರ್ಮಿಸಿದ
2) ಸಂಗೀತ ಮಹಲ್ –2ನೇ ಆದಿಲ್ ಷಾನು ನಿರ್ಮಿಸಿದ
3) ಆನಂದ ಮಹಲ್ – 2ನೇ ಆದಿಲ್ ಷಾನು ನಿರ್ಮಿಸಿದ
4) ಆಸಾರ ಮಹಲ್ – ಸುಲ್ತಾನನ ನ್ಯಾಯಾಲಯ ಎಂದು ಕರೆಯಲಾಗಿದೆ.
5) ಮಹತಾರ್ ಮಹಲ್ – ಯಂತ್ರ ಶಿಲ್ಪಗಳಿಗೆ ಒಂದು ಒಗಟು (A Puzzle to Engineer) ಎಂದು ಕರೆಯಲಾಗಿದೆ.

**ಮಸೀದಿಗಳು ಮತ್ತು ಸಮಾಧಿ ಭವನಗಳು**

- ಜುಮ್ಮಾ ಮಸೀದಿ:– ಇದು ಅತ್ಯಂತ ವಿಸ್ತಾರವಾದ ಮಸೀದಿ. 1ನೇ ಅಲಿ ಆದಿಲ್ ಷಾನು ನಿರ್ಮಿಸಿದ 1578 ರಲ್ಲಿ.
- ಇಬ್ರಾಹಿಂ ರೋಜಾ:– 1626 ರಲ್ಲಿ ಇದಕ್ಕೆ **"ಕುರಾನ ಮಹಲ್"** ಎಂದು ಕರೆಯಲಾಗಿದೆ. ಇದರಲ್ಲಿ ಸುಲ್ತಾನ 2ನೇ ಅಲಿ ಆದಿಲ್ ಷಾನ ಹೆಂಡತಿ, ಮಕ್ಕಳ ಗೋರಿಗಳಿವೆ. ಇದನ್ನು **"ದಕ್ಷಿಣ ಭಾರತದ ತಾಜಮಹಲ್"** ಎಂದು ಕರೆದಿದ್ದಾರೆ.
- ಗೋಳಗುಮ್ಮಟ:– 1629–1656 ಇದು ಮಹಮದ್ ಆದಿಲ್ ಷಾನ ಸ್ವಂತ ಗೋರಿ. ಮಲ್ಲಿಕ್ ಸಂದಲ್ ಇದರ ಶಿಲ್ಪಿ. ಇದನ್ನು **"ಪಿಸುಮಾತಿನ ಮಂದಿರ"** ಎಂದು ಕರೆಯಲಾಗಿದೆ.
- ಬಾರಾ ಕಮಾನು:– ಇದನ್ನು 2ನೇ ಆದಿಲ್ ಷಾನು ನಿರ್ಮಾಣ ಮಾಡಿದನು. ಆದರೆ ಅವನ ಮರಣದಿಂದ ಅಪೂರ್ಣಗೊಂಡಿದೆ.

**ಕರ್ನಾಟಕದಲ್ಲಿ ಸೂಫಿ ಸಂತರು**

ಸೂಫಿಗಳು ಇಸ್ಲಾಂ ಧರ್ಮದ ಧಾರ್ಮಿಕ ಸಂತರು. ಈ ಪಂಥ ಮೊದಲು ಅರೇಬಿಯಾದಲ್ಲಿ ಉಗಮವಾಗಿ ನಂತರ ಭಾರತಕ್ಕೆ ಬಂದಿತು. ಇದು ಇಸ್ಲಾಂ ಧರ್ಮದ **"ಪುನರುಜ್ಜೀವನ ಚಳುವಳಿ"**ಯಾಗಿದೆ.

ಮಧ್ಯಯುಗೀನ ಕಾಲದಲ್ಲಿ ಕರ್ನಾಟಕಕ್ಕೆ ಬಂತು. ಬಹಮನಿ ಸುಲ್ತಾನರು, ಬಿಜಾಪುರ ಸುಲ್ತಾನರು ಈ ಸೂಫಿ ಪಂಥಕ್ಕೆ ಆಶ್ರಯ ನೀಡಿದರು. ಇವರ ಕಾಲದಲ್ಲಿ ಬೀದರ್, ಗುಲ್ಬರ್ಗಾ, ಬೆಳಗಾಂ. ಬಿಜಾಪುರ, ಧಾರವಾಡ, ಬಾಬಾ ಬುಡನ್ ಗಿರಿ ಪ್ರಮುಖ ಕೇಂದ್ರಗಳಾಗಿದ್ದವು.

**ಸೂಫಿ ಪಂಥದ ತತ್ವಗಳು**

1) ಇವರು ಏಕದೇವೋಪಾಸನೆಯಲ್ಲಿ ನಂಬಿಕೆಯಿಟ್ಟಿದ್ದರು.
2) ಇಸ್ಲಾಂ ಧರ್ಮದಲ್ಲಿ ಭಕ್ತಿ ಮಾರ್ಗ ಬೋಧಿಸಿದರು.
3) ಮಾನವ ಸಮಾನತೆ ಮತ್ತು ವಿಶ್ವಭ್ರಾತೃತ್ವದಲ್ಲಿ ನಂಬಿಕೆಯಿಟ್ಟಿದ್ದರು.
4) ದೇವರು ಒಬ್ಬನೇ ಅವನು ಸರ್ವಶಕ್ತ ಎಂದು ನಂಬಿದ್ದರು.
5) ಎಲ್ಲಾ ಮಾನವರು ಸಮಾನರೆಂದು ಜಾತಿ ಪದ್ಧತಿಯನ್ನು ತಿರಸ್ಕರಿಸಿದರು.

ಹೀಗೆ ಹಲವಾರು ತತ್ವಗಳನ್ನು ಒಳಗೊಂಡಿತ್ತು ಸೂಫಿ ಪಂಥವು.

**ಸೂಫಿ ಪಂಥದ ಪಂಗಡಗಳು**

1) ಚಿಸ್ತಿ ಪಂಗಡ
2) ಖಾದ್ರಿಯಾ ಪಂಗಡ
3) ನಕ್ಷ ಬಂದಿಯಾ ಪಂಗಡ
4) ಸತ್ತಾರಿಯಾ ಪಂಗಡ

**ಕರ್ನಾಟಕಕ್ಕೆ ಸೂಫಿ ಪಂಥದ ಆಗಮನ**

ಸೂಫಿ ಪಂಥವು ಕರ್ನಾಟಕಕ್ಕೆ ಬಹಮನಿ ಮತ್ತು ಬಿಜಾಪುರ ಆದಿಲ್ ಷಾಹಿ ಸುಲ್ತಾನರ ಕಾಲದಲ್ಲಿ ಆಗಮಿಸಿತು.
ಕರ್ನಾಟಕಕ್ಕೆ ಮೊದಲು ಬಂದ ಸೂಫಿ ಸಂತರೆಂದರೆ **"ಹಜರತ್ ಸೈಯ್ಯದ್ ಷಾ ಹಿಸಾಮುದ್ದಿನ ತೇಗ್ ಬರಾನಾ"** ಇವರ ಸಮಾಧಿ ಗುಲ್ಬರ್ಗಾದಲ್ಲಿದೆ.
ಎರಡನೆಯ ಸೂಫಿ ಸಂತರೆಂದರೆ **"ನೂರುಲ್ಲಾ ಖಾದ್ರಿ"** ಇವರು ಮಹಮದ್ ಗೌಸ್‌ನ ಕಾಲದಲ್ಲಿ ಭೇಟಿ ನೀಡಿದ್ದರು.

**ಕರ್ನಾಟಕದಲ್ಲಿ ನೆಲೆಸಿದ್ದ ಬಹಳ ಪ್ರಮುಖ ಸೂಫಿ ಸಂತರೆಂದರೆ.**

1) ಖ್ವಾಜಾ ಬಂದೇ ನವಾಜಾ (ಗುಲ್ಬರ್ಗಾ)
2) ಹಜರತ್ ಸೈಯ್ಯದ್ ಕ್ವಾತ-ಉಲ್-ಷಾ (ಬೆಳಗಾಂ)
3) ಮುರ್ತಜ್-ಖಾನಂ(ಬಿಜಾಪುರ)
4) ಹಜರತ್-ಬುರನ್-ಉದ್-ದೀನ್-ಷಾ (ಬಾಬಾ ಬುಡನ್ ಗಿರಿ)
5) ಹಜರತ್ ವಾಲಿ ಉಲ್ಲಾ ಖಾದಿ (ಧಾರವಾಡ)

**ಕರ್ನಾಟಕದಲ್ಲಿ ಸೂಫಿ ಸಂತರ ಕೊಡುಗೆಗಳು ಅಪಾರ ಪ್ರಮಾಣದಲ್ಲಿದೆ. ಪ್ರಮುಖವಾಗಿ.**

1) ಸಮಾಜದಲ್ಲಿ ಸಾಮರಸ್ಯ ಬೋಧಿಸಿತು. ಮತ್ತು ಮುಸ್ಲಿಂರಲ್ಲಿ ಅನ್ನಮತ ಸಹಿಷ್ಣುತಾ ಭಾವನೆ ಬೆಳೆಸಿತು.
2) ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬೋಧಿಸಿತು.
3) ಸೂಫಿ ಪಂತವು ಜಾತೀಯತೆ, ಮುಸ್ಲಿಂರಲ್ಲಿದ್ದ ಷಿಯಾ-ಸುನ್ನಿ ಸಂಘರ್ಷವನ್ನು ಕಡಿಮೆಗೊಳಿಸಿತು.
4) ಸೂಫಿ ಪಂಥವು ಬಹಮನಿ, ಮತ್ತು ಬಿಜಾಪುರದ ಆದಿಲ್ ಷಾಹಿಗಳ ಮೇಲೆ ಪ್ರಭಾವ ಬೀರಿ ರಾಜರು ತಮ್ಮ ಮತಾಂಧತೆಯನ್ನು ಬಿಟ್ಟು ಅನ್ಯಮತ ಸಹಿಷ್ಣುತೆಯನ್ನು ಅನುಸರಿಸುವಂತೆ ಮಾಡಿತು.
5) ಅನೇಕ ಜನಪದ ಸಾಹಿತ್ಯ ರಚನೆಗೆ ಕಾರಣರಾದರೆ ನಮ್ಮ ಸೂಫಿ ಸಂತರು ಅದನ್ನು **"ಚಕ್ಕಿನಾಮ"** ಮತ್ತು **"ಚರಕ ನಾಮ"** ಎಂದು ಕರೆಯಲಾಗಿದೆ.

## ಚಿಕ್ಕ ದೇವರಾಜ ಒಡೆಯರವರ ಕೊಡುಗೆಗಳು

ಮೈಸೂರು ಒಡೆಯರ ಇತಿಹಾಸದಲ್ಲಿ ಪ್ರಸಿದ್ಧ ರಾಜರು. ಇವರು ಮೈಸೂರು ಸಂಸ್ಥಾನದ ವಿವಿಧ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಲು ಸಾಧ್ಯವಾಯಿತು.
ಪ್ರಮುಖ ಕೊಡುಗೆಗಳನ್ನು 1) ಆಡಳಿತಾತ್ಮಕ ಕೊಡುಗೆ
2) ಸಾಂಸ್ಕೃತಿಕ ಕೊಡುಗೆ ಎಂದು ವಿಂಗಡಿಸಬಹುದು.

**1) ಆಡಳಿತಾತ್ಮಕ ಕೊಡುಗೆಗಳು:**

- ಆಡಳಿತದಲ್ಲಿ ದಕ್ಷತೆ ತರಲು 18 ಇಲಾಖೆಗಳನ್ನು ಒಳಗೊಂಡ **'ಅಠಾರ ಕಛೇರಿ"**ಯನ್ನು ಸ್ಥಾಪಿಸಿದರು.
- ಸೈನಿಕ ಸುಧಾರಣೆಗಾಗಿ **"ಸೈನಿಕ ಇಲಾಖೆ"** ಮತ್ತು ಸೈನ್ಯದ ನಿರ್ವಹಣೆಗೆ **"ದಳವಾಯಿ"** ಹುದ್ದೆಯನ್ನು ಜಾರಿಗೆ ತಂದರು.
- ಕಟ್ಟುನಿಟ್ಟಿನ ತೆರಿಗೆ ಪದ್ಧತಿಯನ್ನು ಜಾರಿಗೆ ತಂದು ಆಡಳಿತದಲ್ಲಿ ಮಿತವ್ಯಯ ಸಾಧಿಸಿದರು. ದುಂದು ವೆಚ್ಚವನ್ನು ತಡೆದು **"ನವಕೋಟಿ ನಾರಾಯಣ"** ಎಂಬ ಬಿರುದನ್ನು ಪಡೆದರು.
- ಸರಕಾರದ ಕಾಗದ ಪತ್ರಗಳ ವಿತರಣೆಗೆ **"ಅಂಚೆ ಪದ್ಧತಿ"**ಯನ್ನು ಜಾರಿಗೆ ತಂದರು.
- ಕಾವೇರಿ ನದಿಗೆ ನೀರಾವರಿಗಾಗಿ **"ಚಿಕ್ಕದೇವರಾಜ ನಾಲೆ"** ಮತ್ತು **"ದೊಡ್ಡ ದೇವರಾಜ ನಾಲೆ"**ಗಳೆಂಬ ಎರಡು ಕಾಲುವೆಗಳನ್ನು ತೋಡಿಸಿದರು.

**II. ಸಾಂಸ್ಕೃತಿಕ ಕೊಡುಗೆಗಳು**

**ಧರ್ಮ:–**

- ಚಿಕ್ಕ ದೇವರಾಜ ಒಡೆಯರು ಮೂಲತ: ವೈಷ್ಣವ ಧರ್ಮದ ಅನುಯಾಯಿಯಾಗಿದ್ದು ಮೇಲುಕೋಟಿಯಲ್ಲಿ **"ವೈರಮುಡಿ ಉತ್ಸವ"** ವನ್ನು ಜನಪ್ರಿಯಗೊಳಿಸಿದರು. ಚೆಲುವ ನಾರಾಯಣನನ್ನು ಕುರಿತು **"ಚಿಕ್ಕದೇವರಾಜ ಭಿನ್ನಪ"** ಎಂಬ ಕೃತಿ ರಚಿಸಿದರು.
- ಇವರ ಪ್ರೋತ್ಸಾಹದಿಂದ ಶ್ರವಣ ಬೆಳಗೊಳದಲ್ಲಿ ಬಾಹುಬಲಿಗೆ **"ಮಹಾಮಸ್ತಕಾಭಿಷೇಕ"** ಪ್ರಾರಂಭಿಸಲಾಯಿತು.

**ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ**

- ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ ಅದರಲ್ಲಿಯೂ ಕನ್ನಡ ಭಾಷೆಯಲ್ಲಿ ಮಹತ್ತರ ಕೃತಿಗಳು ರಚನೆಯಾದವು. ಚಿಕ್ಕ ದೇವರಾಜ ಒಡೆಯರ್‌ರವರು ಸ್ವತ: ವಿದ್ವಾಂಸರಾಗಿದ್ದು **"ಚಿಕ್ಕ ದೇವರಾಯ ಭಿನ್ನಪ"** ಮತ್ತು ಗೀತ ಗೋಪಾಲ ಕೃತಿಯನ್ನು ರಚಿಸಿದರು.
- ಇವರ ಆಸ್ಥಾನ ಕವಿ ತಿರುಮಲಾಚಾರ್ಯನು **"ಚಿಕ್ಕ ದೇವರಾಯ ವಂಶಾವಳಿ"** ಮತ್ತು **"ಚಿಕ್ಕದೇವರಾಯ ವಿಜಯ"** ಕೃತಿಯನ್ನು ರಚಿಸಿದನು.
- **"ಸಿಂಗಾರಾರ್ಯನು"** ಕನ್ನಡದ ಮೊದಲ ನಾಟಕ ಕೃತಿ **"ಮಿತ್ರವಿಂದಾ ಗೋವಿಂದಾ"**ವನ್ನು ಕವಯಿತ್ರಿ ಸಂಚಿ ಹೊನ್ನಮ್ಮರು **"ಹದಿಬದೆಯ ಧರ್ಮ"** ಎಂಬ ಕೃತಿಯನ್ನು ರಚಿಸಿದ್ದಾರೆ.
- ಲಕ್ಷ್ಮೀಶ ಕವಿಯ **"ಜೈಮಿನಿ ಭಾರತ"**ವು ಇದೇ ಕಾಲದಲ್ಲಿ ರಚಿತವಾಗಿತ್ತು.

**ಕೆಳದಿ ಮತ್ತು ಚಿತ್ರದುರ್ಗದ ನಾಯಕರು**

- ವಿಜಯನಗರದ ಅವನತಿಯ ನಂತರ ಸ್ವತಂತ್ರರಾದ ಪಾಳೇಗಾರರಲ್ಲಿ ಕೆಳದಿಯ ಮತ್ತು ಚಿತ್ರದುರ್ಗದ ನಾಯಕರು ಪ್ರಮುಖರು.
- ಕೆಳದಿಯ ನಾಯಕರು– ಇವರು ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಭಾಗದಲ್ಲಿ ಆಳ್ವಿಕೆ ಮಾಡಿದರು.
- ಚೌಡಪ್ಪ ಮತ್ತು ಭದ್ರಪ್ಪ ಈ ವಂಶದ ಸ್ಥಾಪಕರು.
- ಸದಾಶಿವನಾಯಕನು ವಿಜಯನಗರದ ಅರಸ ರಾಮರಾಯನ **"ಅಮರ ನಾಯಕ"**ನಾಗಿದ್ದನು. ಈತನಿಗೆ **"ಕೋಟಿಕೋಲಾಹಲ"** ಎಂಬ ಬಿರುದಿತ್ತು.

**ಶಿವಪ್ಪ ನಾಯಕ (1646–1660)** – ಕೆಳದಿಯ ಪ್ರಸಿದ್ಧ ರಾಜ. ಈತನಿಗೆ ತನ್ನ ಸುತ್ತಲಿನ ಪಾಳೇಗಾರರನ್ನು ನಿಯಂತ್ರಿಸಿದನು. ಮೈಸೂರಿನ ದೊಡ್ಡ ದೇವರಾಜ ಒಡೆಯರನ್ನು ಸೋಲಿಸಿ ಮೈಸೂರನ್ನು ನಿಯಂತ್ರಿಸಿದನು.

- ಈತನ ದಂಡಯಾತ್ರೆಗಳಿಗಿಂತ ಆಡಳತಿ ಚತುರತೆಗೆ ಹೆಸರುವಾಸಿಯಾಗಿದ್ದ.
- ಶಿವಪ್ಪನಾಯಕನು ಜಾರಿಗೆ ತಂದ ಭೂ ಸುಧಾರಣೆಗಳನ್ನು **"ಶಿವಪ್ಪನಾಯಕನ ಶಿಸ್ತು"** ಎಂದು ಕರೆಯಲಾಗಿದೆ. ಶಿವಪ್ಪ ನಾಯಕನು ಭೂ ಕಂದಾಯವನ್ನು ಭೂಮಿಯ ಫಲವತ್ತತೆ, ನೀರಾವರಿ, ಮಾರುಕಟ್ಟೆ ಸೌಲಭ್ಯದ ಆಧಾರದ ಮೇಲೆ ವಿಂಗಡಿಸಿದನು.
  1) ಉತ್ತಮ ಭೂಮಿ – ಸದಾ ನೀರಾವರಿಯ ಭೂಮಿ. ಎಕರೆಗೆ ಕಂದಾಯ 2 ರಿಂದ 28 ಆನೆಕಾಸು ನಿಗದಿ.
  2) ಮಧ್ಯಮ ಭೂಮಿ – ಮಳೆಯಾಶ್ರಿ ಭೂಮಿ. ಈ ಭೂಮಿಗೆ ಭೂ ಕಂದಾಯ ಎಕರೆಗೆ 2 ರಿಂದ 10 ಆನೆಕಾಸು ನಿಗದಿ.
  3) ಕನಿಷ್ಠ ಭೂಮಿ – ಕಡಿಮೆ ಮಳೆ. ಕಡಿಮೆ ಫಲವತ್ತತೆ. ಈ ಭೂಮಿಗೆ ಕಂದಾಯ ಎಕರೆಗೆ ½ ರಿಂದ 8 ಆನೆಕಾಸು.

4) ಅಧಮ ಭೂಮಿ – ಕಡಿಮೆ ಫಲವತ್ತಾದ ಭೂಮಿ. ಈ ಭೂಮಿಗೆ ಕಂದಾಯ ವರ್ಷಕ್ಕೆ 2 ಆನೆಕಾಸು.

5) ಅಧಮಾಧಮ ಭೂಮಿ – ಬಂಜರು ಭೂಮಿ ವರ್ಷಕ್ಕೆ ಒಂದು ಆನೆಕಾಸು.

**ಕೆಳದಿಯ ಚೆನ್ನಮ್ಮಾಜಿ (1671–1694)**

- ಕೆಳದಿಯ ಪ್ರಮುಖರಾಗಿ, ಭಾರತದ ಇತಿಹಾಸದಲ್ಲೇ ಧೈರ್ಯಶಾಲಿ ರಾಣಿ ಎನ್ನಬಹುದು. ಇವಳು ಕೆಳದಿಯನ್ನು ಆಂತರಿಕ ಮತ್ತು ವಿದೇಶಿ ದಾಳಿಯಿಂದ ರಕ್ಷಿಸಿದಳು. ಮರಾಠ ರಾಜಕುಮಾರ ರಾಜಾರಾಮನಿಗೆ ಆಶ್ರಯ ನೀಡಿದಳು. ಇದರಿಂದ ಔರಂಗಜೇಬನು ದಾಳಿ ಮಾಡಿದನು. ಚೆನ್ನಮ್ಮಾಜಿಯು ಔರಂಗಜೇಬನ ದಾಳಿಯಿಂದ ಕೆಳದಿಯನ್ನು ರಕ್ಷಿಸಿ, ಔರಂಗಜೇಬನ ಮಗನನ್ನು ಸೆರೆ ಹಿಡಿದಳು.
- ಕೆಳದಿಯ ಅರಸರ ಕಾಲದಲ್ಲಿ ವೀರಶೈವ ಧರ್ಮ ಪುನರುತ್ಥಾನವಾಯಿತು. ಶೃಂಗೇರಿಯ ಶಾರದಾ ಪೀಠ ಜನಪ್ರಿಯವಾಯಿತು. **"ಕೆಳದಿಯ ನೃಪವಿಜಯ", "ಕೆಳದಿ ರಾಜಾಭ್ಯುದಯಂ"** ಕೃತಿಗಳು ರಚಿತವಾದವು.
- ಕೆಳದಿಯ ರಾಮೇಶ್ವರ, ವೀರಭದ್ರ ದೇವಾಲಯ, ಇಕ್ಕೇರಿಯ ಅಘೋರೇಶ್ವರ ದೇವಾಲಯ, ಬಿದನೂರಿನ ಕೋಟೆ, ಕೆಳದಿ ಮತ್ತು ಇಕ್ಕೇರಿಯ ಭವ್ಯ ಅರಮನೆಗಳು ಇವರ ಕಾಲದ ರಚನೆಗಳು.

**ಚಿತ್ರದುರ್ಗದ ನಾಯಕರು**

- ಕ್ರಿ.ಶ, 16ನೇ ಶತಮಾನದಲ್ಲಿ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತ ಆಳ್ವಿಕೆ ನಡೆಸಿದ ಪಾಳೇಗಾರರು. ವಿಜಯನಗರದ ಪತನಾನಂತರ ಸ್ವತಂತ್ರವಾದ ಸಾಮಂತರು.
- **"ಮತ್ತಿ ತಿಮ್ಮಣ್ಣನಾಯಕ"** ಇದರ ಮೂಲ ಪುರುಷ ಮತ್ತು ಸ್ಥಾಪಕ. ಈ ಸಂತತಿಯ 5ನೇ ಮದಕರಿ ನಾಯಕ (1775–1779) ಅತ್ಯಂತ ಪ್ರಸಿದ್ಧನು.
- 5ನೇ ಮದಕರಿ ನಾಯಕನು ಅತ್ಯಂತ ಪ್ರಸಿದ್ಧ ನಾಯಕ. ಈತನು ತನ್ನ ಸೈನಿಕ ಸಾಧನೆಗಳಿಂದ ದುರ್ಗದ ಮೇಲೆ ಮೈಸೂರಿನ ಹೈದರಾಲಿ ಮಾಡುತ್ತಿದ್ದ ದಾಳಿಯನ್ನು ಹಿಮ್ಮೆಟ್ಟಿಸುತ್ತಿದ್ದನು. ಇದನ್ನು ಶಾಶ್ವತವಾಗಿ ತಡೆಯಬೇಕೆಂದು **ಚಿತ್ರದುರ್ಗಕ್ಕೆ ಏಳು ಸುತ್ತಿನ ಕೋಟೆಯನ್ನು** ನಿರ್ಮಿಸಿದನು.

**ಕಿತ್ತೂರಿನ ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ**

- ಕಿತ್ತೂರಿನ ರಾಣಿ ಚೆನ್ನಮ್ಮ – ಅಪ್ರತಿಮ ದೇಶಭಕ್ತಳು. ಶೌರ್ಯ, ಸಾಹಸದ ಪ್ರತಿರೂಪ.
- ಕ್ರಿ.ಶ. 1824 ರಲ್ಲಿ ಕಂಪನಿಯ ಸರ್ಕಾರವು ಕಿತ್ತೂರನ್ನು **"ದತ್ತು ಮಕ್ಕಳಿಗೆ ಹಕ್ಕಿಲ್ಲ"** ಎಂಬ ನೀತಿಯಂತೆ ವಶಪಡಿಸಿಕೊಳ್ಳಲು ಮುಂದಾದಾಗ ತನ್ನ ರಾಜ್ಯ ರಕ್ಷಣೆಯ ನಿಟ್ಟಿನಲ್ಲಿ ಕಾರ್ಯಪ್ರವೃತ್ತಳಾದ ಚೆನ್ನಮ್ಮ ಮೊದಲು ಬ್ರಿಟೀಷರೊಂದಿಗೆ ಮಾತುಕತೆ ನಡೆಸಲು ಹಾಗೂ ಶಾಂತಿಯಿಂದ ಪರಿಸ್ಥಿತಿಯನ್ನು ನಿಭಾಯಿಸಲು ನೋಡಿದಳು.
- ಆದರೆ ಬ್ರಿಟೀಷರು ಯುದ್ಧದಾಹಿಗಳಾಗಿದ್ದರು. ಧಾರವಾಡದ ಕಲೆಕ್ಟರ್ ಥ್ಯಾಕರೆಯು ಕಿತ್ತೂರಿನ ಮೇಲೆ ಯುದ್ಧ ಘೋಷಿಸಿದನು. ಆಗ ಚೆನ್ನಮ್ಮ ತಾನೇ ಯುದ್ಧಭೂಮಿಗೆ ಬಂದು ನಿಂತು ಹೋರಾಡಿದಳು.
- ಯುದ್ಧದಲ್ಲಿ ಥ್ಯಾಕರೆ ಸತ್ತ ನಂತರ ಕಿತ್ತೂರಿಗೆ ಜಯವಾಯಿತು. ಮತ್ತು ಅನೇಕ ಬ್ರಿಟೀಷರನ್ನು ಸೆರೆ ಹಿಡಿಯಲಾಯಿತು. ಆದರೆ ಸೋತ ಬ್ರಿಟೀಷರು ಮತ್ತೊಮ್ಮೆ ಕಿತ್ತೂರಿನ ಒಳಗೆ ಇದ್ದ ದೇಶದ್ರೋಹಿಗಳ ಸಹಾಯದಿಂದ ಯುದ್ಧಕ್ಕೆ ಬಂದರು. ಈ ಬಾರಿ ವಿಶ್ವಾಸ ಘಾತಕರ ವಿಶ್ವಾಸ ದ್ರೋಹದಿಂದ ಚೆನ್ನಮ್ಮ ಸೆರೆಯಾದಳು. ಹಾಗೂ ಕಿತ್ತೂರು ಯುದ್ಧದಲ್ಲಿ ಸೋತು ಹೋಯಿತು.
- ಚೆನ್ನಮ್ಮ ಸೆರೆಯಲ್ಲಿಯೇ ಕೊರಗಿ ಕೊರಗಿ 1829 ರಲ್ಲಿ ಜೈಲಿನಲ್ಲಿಯೇ ನಿಧನಳಾದಳು.

**ಸಂಗೊಳ್ಳಿರಾಯಣ್ಣ**

- ರಾಣಿ ಚೆನ್ನಮ್ಮಳ ನಿಷ್ಠಾವಂತ ಸೇವಕ, ಅಪ್ರತಿಮ ದೇಶಭಕ್ತ, ಸಂಗೊಳ್ಳಿರಾಯಣ್ಣನು ಕಿತ್ತೂರಿನಲ್ಲಿದ್ದ ಬ್ರಿಟೀಷರನ್ನು ಓಡಿಸಬೇಕೆಂದು ಮತ್ತೊಮ್ಮೆ ಗೆರಿಲ್ಲಾ ಯುದ್ಧ ಸಾರಿದನು. ಆತ್ಮವಿಶ್ವಾಸದಿಂದ ಹೋರಾಡುತ್ತಿದ್ದ ರಾಯಣ್ಣನನ್ನು ಮತ್ತೊಮ್ಮೆ ದ್ರೋಹಿಗಳ ಸಹಾಯದಿಂದ ಬ್ರಿಟೀಷರು ಸೆರೆಹಿಡಿದು 1830 ರಲ್ಲಿ ನಂದಗಡದಲ್ಲಿ ಗಲ್ಲಿಗೇರಿಸಿದರು.

**ಯಲಹಂಕದ ನಾಡಪ್ರಭು**

- ನಾಡಪ್ರಭು ಕೆಂಪೇಗೌಡರು ( 1513–1569) ವಿಜಯನಗರದ ಅವನತಿಯ ನಂತರ ಸ್ವತಂತ್ರರಾದ ಪಾಳೇಗಾರರು. ಇವರು ಬೆಂಗಳೂರಿನ ಸ್ಥಾಪಕ **"ನಾಡಪ್ರಭು"** ಎಂದೇ ಖ್ಯಾತರಾದರು.

- ಇವರು ವಿಜಯನಗರದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಮಹಾನವಮಿ ಉತ್ಸವದಲ್ಲಿ ಮಲ್ಲಯುದ್ಧದ ಪ್ರದರ್ಶನ ಮಾಡಿ ಜಯಗಳಿಸುತ್ತಿದ್ದರು.
- ಇವರು ಕ್ರಿ.ಶ. 1537 ರಲ್ಲಿ ಬೆಂಗಳೂರು ನಗರ ನಿರ್ಮಿಸಿದರು.

  1) ಬೆಂಗಳೂರಿನ ನಾಲ್ಕು ದಿಕ್ಕುಗಳಿಗೂ ನಾಲ್ಕು ಗೋಪುರ ನಿರ್ಮಿಸಿದರು.

     1. ಹಲಸೂರು ಕೆರೆಯ ಮೇಲೆ
     2. ಕೆಂಪಾಬುದಿ ಕೆರೆಯ ಮೇಲೆ
     3. ಯಲಹಂಕದ ಬಾಗಿಲು
     4. ದಕ್ಷಿಣದ ಬಾಗಿಲು

  2) ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯ, ಹಲಸೂರಿನ ಸೋಮೇಶ್ವರ ದೇವಾಲಯ, ಕೋರಮಂಗಲದ ಲಕ್ಷ್ಮೀ ದೇವಾಲಯ, ಇವರ ಕಾಲದಲ್ಲಿ ನಿರ್ಮಾಣವಾಗಿದೆ.

  3) ತನ್ನ ಕುಲದೇವತೆ ಕೆಂಪಮ್ಮನ ಹೆಸರಿನಲ್ಲಿ ಕೆಂಪಾಬುದಿ ಕೆರೆ ಹಾಗೂ ಧರ್ಮಾಂಬುದಿ ಕೆರೆ, ಹಲಸೂರು ಕೆರೆಗಳನ್ನು ನಿರ್ಮಾಣ ಮಾಡಿದರು.

## ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ (1761–1799)

### ಹೈದರಾಲಿ (ಕ್ರಿ.ಶ. 1761–1782)

- ಕ್ರಿ.ಶ. 1721 ರಲ್ಲಿ ಕೋಲಾರದ ಬೂದಿ ಕೋಟೆಯಲ್ಲಿ ಜನಿಸಿದರು. ಮೈಸೂರು ರಾಜ್ಯದಲ್ಲಿ ಸಾಮಾನ್ಯ ಸೈನಿಕನಾಗಿ ಸೇವೆ ಸಲ್ಲಿಸಿದ್ದ ಈತನು ಹಂತಹಂತವಾಗಿ ತನ್ನ ಸ್ವ–ಸಾಮರ್ಥ್ಯ ಹಾಗೂ ಅದೃಷ್ಟ ಬಲದಿಂದ ಮೇಲೇರಿ ಮೈಸೂರು ರಾಜ್ಯದ ಸರ್ವಾಧಿಕಾರಿಯಾಗಿ ಬೆಳೆದನು.
- ಹೈದರಾಲಿಯು ಮೈಸೂರು ರಾಜ್ಯದ ಪರವಾಗಿ 2ನೇ ಕರ್ನಾಟಿಕ್ ಯುದ್ಧದಲ್ಲಿ ಭಾಗವಹಿಸಿ, ಹೈದರಾಬಾದ್‌ನ ನಿಜಾಮನ ಖಜಾನೆಯನ್ನು ಲೂಟಿ ಮಾಡಿಕೊಂಡು ಮೈಸೂರಿಗೆ ಬಂದನು.
- ಈ ಲೂಟಿಯಿಂದ ಹೈದರಾಲಿ ಮೈಸೂರು ರಾಜ್ಯದಲ್ಲಿ ಬಹಳ ಪ್ರಸಿದ್ಧನಾದನು.
- 2ನೇ ಕೃಷ್ಣರಾಜ ಒಡೆಯರು **"ಪತೇ ಹೈದರಾಲಿ"** / **"ಪತೇ ಹೈದರ ಖಾನ್"** ಎಂಬ ಬಿರುದು ನೀಡಿದರು. ಮುಂದೆ ಸರ್ವಾಧಿಕಾರಿ ನಂಜರಾಜಯ್ಯ ಮತ್ತು ದಳವಾಯಿ ದೇವರಾಜಯ್ಯರನ್ನು ಅಧಿಕಾರದಿಂದ ಕೆಳಗಿಳಿಸಿ ಮೈಸೂರು ರಾಜ್ಯದ ಸರ್ವಾಧಿಕಾರಿಯಾದನು,
- ಹೈದರಾಲಿ ಮತ್ತು ಅವನ ಮಗ ಟಿಪ್ಪು ಬ್ರಿಟಿಷರೊಂದಿಗೆ 4 ಯುದ್ಧಗಳನ್ನು ಮಾಡಿದರು. ಅವುಗಳನ್ನು ಆಂಗ್ಲೋ–ಮೈಸೂರು ಯುದ್ಧಗಳೆಂದು ಕರೆಯುವರು.

### ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ

- ಹೈದರಾಲಿಯ ರಾಜ್ಯ ವಿಸ್ತರಣಾ ನೀತಿ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಗಿದೆ.
- ಹೈದರಾಲಿ ಮತ್ತು ಟಿಪ್ಪು ಫ್ರೆಂಚರೊಂದಿಗೆ ಉತ್ತಮ ಸ್ನೇಹ ಸಂಬಂಧ ಹೊಂದಿದ್ದರು. ಇದು ಬ್ರಿಟೀಷರಿಗೆ ಎಚ್ಚರಿಕೆ ಗಂಟೆಯಾಯಿತು.
- ಹೈದರಾಲಿ ಮತ್ತು ಟಿಪ್ಪು ಮಲಬಾರ ತೀರವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದು ಬ್ರಿಟೀಷರ ವ್ಯಾಪಾರ ವಹಿವಾಟಿಗೆ ತೊಂದರೆಯಾಗುತ್ತಿತ್ತು.
- 1778 ರಲ್ಲಿ ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಮೈಸೂರು ಸೈನ್ಯವನ್ನು ಕಳುಹಿಸಿದ್ದು ಬ್ರಿಟೀಷರ ಕೋಪ ಹೆಚ್ಚಾಗುವಂತೆ ಮಾಡಿತು.
- ರಾಣಿ ಲಕ್ಷ್ಮಮ್ಮಮ್ಮಣ್ಣಿ ಬ್ರಿಟೀಷರಲ್ಲಿ ಸಹಾಯ ಕೇಳಿದ್ದು, ಕೆಲವು ಪ್ರಮುಖ ಕಾರಣಗಳು.

### ಮೊದಲನೇ ಆಂಗ್ಲೋ–ಮೈಸೂರು ಯುದ್ಧ(1767–1769)

- ಬ್ರಿಟೀಷರು ಹೈದರಾಲಿಯಿಂದ ಸೋತು **"ಮದ್ರಾಸ್ ಒಪ್ಪಂದ"**ಕ್ಕೆ ಸಹಿ ಹಾಕಿದರು. ಇನ್ನೊಂದು **"ರಕ್ಷಣಾತ್ಮಕ ಒಪ್ಪಂದ"**ವಾಗಿತ್ತು.

### ಎರಡನೇ ಆಂಗ್ಲೋ–ಮೈಸೂರು ಯುದ್ಧ(1780–1784)

- ಈ ಯುದ್ಧದ ಮಧ್ಯಭಾಗದಲ್ಲಿ ಹೈದರಾಲಿ 1782 ರಲ್ಲಿ ನಿಧನನಾದನು. ಆದರೆ ಮಗ ಟಿಪ್ಪು ಯುದ್ಧವನ್ನು ಮುಂದುವರೆಸಿದನು. ಕ್ರಿ.ಶ, 1783 ರಲ್ಲಿ ಟಿಪ್ಪು ಮಂಗಳೂರು ಕದನದಲ್ಲಿ ಬ್ರಿಗೇಡಿಯರ್ ಮ್ಯಾಥ್ಯೂಸನನ್ನು ಸೋಲಿಸಿ **'ಮಂಗಳೂರು ಒಪ್ಪಂದಕ್ಕೆ"** ಸಹಿ ಹಾಕಿದರು.

## (2) ಟಿಪ್ಪು ಸುಲ್ತಾನ(ಕ್ರಿ.ಶ. 1782–1799)

- ಹೈದರಾಲಿಯ ಮರಣಾನಂತರ ಟಿಪ್ಪು ಅಧಿಕಾರಕ್ಕೆ ಬಂದನು. ಮೈಸೂರಿನ ಆಡಳಿತವನ್ನು ತಾನೇ ತೆಗೆದುಕೊಂಡು **'ಸುಲ್ತಾನ'** ಎಂದು ಘೋಷಿಸಿಕೊಂಡನು. **"ಮೈಸೂರು ಹುಲಿ"** ಎಂಬ ಬಿರುದನ್ನು ಪಡೆದು ಆಳ್ವಿಕೆ ಮಾಡಿದನು.
- ಟಿಪ್ಪು ಅಧಿಕಾರಕ್ಕೆ ಬಂದ ಮೇಲೆ ಆಡಳಿತದಲ್ಲಿ ಅನೇಕ ಬದಲಾವಣೆ ತಂದನು. ಕೆಲವು ಇಲಾಖೆಯನ್ನು ಜಾರಿಗೆ ತಂದನು.
  - ಮೀರ್–ಅಸೀಫ್–ಕಛೇರಿ (ಕಂದಾಯ & ಹಣಕಾಸು ಇಲಾಖೆ)
  - ಮೀರ್–ಮೈರನ್–ಕಛೇರಿ (ಖಜಾನೆ ಇಲಾಖೆ)
  - ಮೀರ್–ಯಾಮ್–ಕಛೇರಿ (ಬಂದರು ಇಲಾಖೆ) ಇತ್ಯಾದಿ.
- ಆಡಳಿತ ದೃಷ್ಟಿಯಿಂದ ರಾಜ್ಯವನ್ನು ಪ್ರಾಂತ್ಯಗಳಿಗೆ ವಿಭಾಗಿಸಿದ್ದನು. ಅವುಗಳನ್ನು ಅಸಫ್ ಟರ್ಕಿಗಳೆಂದು ಕರೆಯಲಾಗುತ್ತಿತ್ತು.
- ಪ್ರತಿ ಪ್ರಾಂತ್ಯಕ್ಕೆ **'ಆಸಫ್'** ಎಂಬ ನಾಗರಿಕ ಆಡಳಿತದ ಅಧಿಕಾರಿ ಹಾಗೂ **'ಫೌಜುದಾರ'** ಎಂಬ ಮಿಲಿಟರಿ ಅಧಿಕಾರಿ ನೇಮಕ ಮಾಡುದನು.
- ಟಿಪ್ಪು ರೈತವಾರಿ ಪದ್ಧತಿಯನ್ನು ಜಾರಿಗೆ ತಂದು ಭೂ ಕಂದಾಯವನ್ನು 1/3 ರಷ್ಟು ನಿಗದಿ ಮಾಡಿದನು.
- ಟಿಪ್ಪು ಬ್ರಿಟೀಷರ ವಿರುದ್ಧ ಮೊದಲು ಕ್ಷಿಪಣಿಯನ್ನು ಬಳಸಿದನು. ಹಾಗೂ ಸೈನ್ಯವನ್ನು ಯುರೋಪಿಯನ್ ಮಾದರಿಯಲ್ಲಿ ಸಜ್ಜುಗೊಳಿಸಿದನು. ನೌಕಾ ನಿರ್ಮಾಣ ಕೇಂದ್ರವನ್ನು ಸ್ಥಾಪಿಸಿದನು.

### ಟಿಪ್ಪುವಿನ ವಿದೇಶಾಂಗ ನೀತಿ

- ಟಿಪ್ಪು ತನ್ನ ಸಮಕಾಲೀನ ವಿದೇಶ ದೊರೆಗಳೊಂದಿಗೆ ಉತ್ತಮ ಸಂಬಂಧ ಹೊಂದಿದ್ದನು.
- ಫ್ರಾನ್ಸ್, ಟರ್ಕಿ, ಅಪಘಾನಿಸ್ತಾನ, ಇರಾನ್, ಮಾರಿಷಸ್, ಷೇರು ದೇಶಗಳಿಗೆ ರಾಯಭಾರಿಗಳನ್ನು ಕಳುಹಿಸಿದರು.
- 'ಶತ್ರುವಿನ ಶತ್ರು ಮಿತ್ರ' ಎಂಬಂತೆ ತನ್ನ ರಾಜ ತಾಂತ್ರಿಕತೆಯನ್ನು ಟಿಪ್ಪು ಬ್ರಿಟೀಷರ ವಿರುದ್ಧವಾಗಿ ಸಿದ್ಧಗೊಳಿಸಿದ್ದನು.

### ಮೂರನೇ ಆಂಗ್ಲೋ–ಮೈಸೂರು ಯುದ್ಧ(1790–92)

- ಟಿಪ್ಪು ತಿರುವಾಂಕೂರಿನ ಮೇಲೆ ದಾಳಿ ಮಾಡಿದನು. ತಿರುವಾಂಕೂರಿನ ರಾಜ **'ಕಾರ್ತಿಕ ತಿರುನಾಳ್ ರಾಮವರ್ಮ'** ಬ್ರಿಟೀಷರ ಮಿತ್ರನಾಗಿದ್ದ. ಆಗ ಬ್ರಿಟೀಷರು ಟಿಪ್ಪುವಿನ ಮೇಲೆ ಯುದ್ಧ ಸಾರಿದರು.
- ಮರಾಠರು ಮತ್ತು ನಿಜಾಮರು ಬ್ರಿಟೀಷರ ಜೊತೆ ಕೈ ಜೋಡಿಸಿದರು. ಟಿಪ್ಪು ಈ ಯುದ್ಧದಲ್ಲಿ ಸೋತು ಅವಮಾನಕರ **"ಶ್ರೀರಂಗಪಟ್ಟಣ ಒಪ್ಪಂದ"**ಕ್ಕೆ ಸಹಿ ಹಾಕಬೇಕಾಯಿತು.
- ಇದರಿಂದ ತನ್ನ ಅರ್ಧರಾಜ್ಯವನ್ನು ಬ್ರಿಟೀಷರಿಗೆ ಬಿಟ್ಟು ಕೊಟ್ಟು 3.65 ಕೋಟಿ ಹಣವನ್ನು ಯುದ್ಧ ಪರಿಹಾರವಾಗಿ ಕೊಡಬೇಕಾಯಿತು. ಅಲ್ಲಿಯವರೆಗೆ ತನ್ನಿಬ್ಬರು ಮಕ್ಕಳನ್ನು ಇಂಗ್ಲೀಷರಿಗೆ ಒತ್ತೆ ಇಡಬೇಕಾಯಿತು.
- ಟಿಪ್ಪುವಿನ ಅರ್ಧರಾಜ್ಯವನ್ನು 3 ಭಾಗ ಮಾಡಿ ಬ್ರಿಟೀಷರು, ಮರಾಠರು, ನಿಜಾಮರು ಹಂಚಿಕೊಂಡರು.

### ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧ(1799)

- ಅವಮಾನಕರ ಒಪ್ಪಂದ ಮತ್ತು ಸೋಲಿನಿಂದಾಗುವ ಅವಮಾನವನ್ನು ಟಿಪ್ಪು ಮರೆಯಲಿಲ್ಲ. ಅದರಿಂದ ಕಳೆದು ಹೋಗಿದ್ದ ಘನತೆಯನ್ನು ಮರಳಿ ಪಡೆಯುವ ಪ್ರಯತ್ನ ಮಾಡುತ್ತಿದ್ದನು.
- ಬ್ರಿಟೀಷರನ್ನು ಸೋಲಿಸಲು ಟಿಪ್ಪು ಮಾಡುತ್ತಿರುವ ಒಳ ಪ್ರಯತ್ನವನ್ನು ಬ್ರಿಟೀಷರು ಗಮನಿಸುತ್ತಿದ್ದರು ಹಾಗೂ ಲಾರ್ಡ್ ವೆಲ್ಲೆಸ್ಲಿಯ **"ಸಹಾಯಕ ಸೈನ್ಯ ಪದ್ಧತಿ"**ಯನ್ನು ಒಪ್ಪಿಕೊಳ್ಳುವಂತೆ ಬ್ರಿಟೀಷರು ಒತ್ತಡ ಹೇರಿದರು. ಇದನ್ನು ಟಿಪ್ಪು ತಿರಸ್ಕರಿಸಿದನು.
- ಈ ಎಲ್ಲ ಕಾರಣಗಳಿಂದ ಬ್ರಿಟೀಷರು ಟಿಪ್ಪುವಿನ ಮೇಲೆ ಯುದ್ಧ ಸಾರಿದರು. ಅಂತಿಮವಾಗಿ ಕ್ರಿ.ಶ. 1799 ಮೇ 4 ರಂದು ಶ್ರೀರಂಗಪಟ್ಟಣದಲ್ಲಿ ಮಡಿದನು.
- ಟಿಪ್ಪುವಿನ ಸಾವಿನ ನಂತರ ಮೈಸೂರು ಅರಸರು ಬ್ರಿಟೀಷರ **"ಸಹಾಯಕ ಸೈನ್ಯ ಪದ್ಧತಿ"**ಯನ್ನು ಸ್ವೀಕರಿಸಿದರು.
- ಟಿಪ್ಪು ಮರಣಾನಂತರ ಬ್ರಿಟೀಷರಿಗೆ ಯಾವುದೇ ಪ್ರಬಲ ಶತ್ರುಗಳು ಇಲ್ಲವಾದರು.

# ಘಟಕ – 5

# ಆಧುನಿಕ ಮೈಸೂರು

**1) ಕೃಷ್ಣರಾಜ ಒಡೆಯರ್–III – ಅವರ ಕೊಡುಗೆಗಳು**

ಕ್ರಿ.ಶ. 1811 ರಿಂದ 1831 ರವರೆಗೆ ಮೈಸೂರಿನ ಒಡೆಯರಾಗಿ ಆಳ್ವಿಕೆ ಮಾಡಿದವರು ಕೃಷ್ಣರಾಜ ಒಡೆಯರು. 9ನೇ ಚಾಮರಾಜ ಒಡೆಯರ್ ರವರು ಸತ್ತ ನಂತರ ರಾಣಿ ಲಕ್ಷ್ಮಮ್ಮ ಅಮ್ಮಣ್ಣಿರವರು ತನ್ನ ಮಗನಾದ ಮೂರನೇ ಕೃಷ್ಣರಾಜ ಒಡೆಯರ್‌ರವರಿಗೆ ಸಿಂಹಾಸನ ನೀಡದೇ ಟಿಪ್ಪುವು ತನ್ನನ್ನು ತಾನೇ ಸುಲ್ತಾನನೆಂದು ಘೋಷಿಸಿಕೊಂಡನು.

ಇದರಿಂದ ಮಹಾರಾಣಿಯವರು ಬ್ರಿಟೀಷರ ಸಹಾಯ ಕೋರಿದದರು. ಕೊನೆಗೆ 4ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬ್ರಿಟೀಷರು ಮೈಸೂರು ರಾಜ್ಯದ ಬಹುತೇಕ ಭಾಗವನ್ನು ವಶಪಡಿಸಿಕೊಂಡು ಉಳಿದ ಭಾಗವನ್ನು ಮೂರನೇ ಕೃಷ್ಣರಾಜ ಒಡೆಯರಿಗೆ ನೀಡಿದರು. ಇವರು ಅಪ್ರಾಪ್ತರಾಗಿದ್ದರಿಂದ ಮಹಾರಾಣಿ ಲಕ್ಷ್ಮಮ್ಮಮ್ಮಣಿಯವರು ರಾಜಪ್ರತಿನಿಧಿಯಾದರು.

**ಆಡಳಿತ:–** ಆಡಳಿತ ಅನುಕೂಲಕ್ಕಾಗಿ ರಾಜ್ಯವನ್ನು 6 ಪೌಜುಧಾರಿಗಳನ್ನಾಗಿ ಮತ್ತು 125 ತಾಲ್ಲೂಕುಗಳನ್ನಾಗಿ ವಿಂಗಡಿಸಿದರು. ಇವೆಲ್ಲವುಗಳ ಮೇಲುಸ್ತುವಾರಿಗಾಗಿ ಪೌಜುಧಾರರನ್ನು ಮತ್ತು ಅಮಲುದಾರರನ್ನು ನೇಮಕ ಮಾಡಿದರು. ಸರ್ಕಾರದಲ್ಲಿ 18 ಇಲಾಖೆಗಳನ್ನು ಮಾಡಿದರು. ಇದರಿಂದ ಆಡಳಿತ ಸುಗಮವಾಗಿ ನಡೆಯಿತು.

**ಶಿಕ್ಷಣ, ಸಾಹಿತ್ಯಕ್ಕೆ ಕೊಡುಗೆ.**

- ಸಾಂಪ್ರದಾಯಿಕ ಶಿಕ್ಷಣಕ್ಕೆ ಮಾನ್ಯತೆ ನೀಡಿದರು. ಧರ್ಮಶಾಸ್ತ್ರ ಮತ್ತು ಮಹಾಕಾವ್ಯಗಳನ್ನು ಆಧರಿಸಿ ಶಿಕ್ಷಣ ನೀಡಲಾಗುತ್ತಿತ್ತು.
- ಉಚಿತ ಶಾಲೆಗಳನ್ನು ಆರಂಭಿಸಿದರು.
- ಮೈಸೂರಿನಲ್ಲಿ **"ಓರಿಯೆಂಟಲ್ ಲೈಬ್ರರಿಯನ್ನು"** ಸ್ಥಾಪಿಸಿದರು.

**ಸಾಹಿತ್ಯ:** ಸ್ವತ: ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದ ಇವರು ಅನೇಕ ಸಾಹಿತಿಕ ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ ಪ್ರಮುಖವಾದವು ಶ್ರೀ ತತ್ವ ನಿಧಿ, ಶ್ರೀ ಕೃಷ್ಣ ಕಥಾಸಾರ, ಸೌಗಂಧಿಕಾ ಪರಿಣಯ ಪ್ರಮುಖವಾದವು.

ಇವರು ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ್ದರು. ಅವರಲ್ಲಲಿ ಪ್ರಮುಖರಾಗಿ, ಕೆಂಪು ನಾರಾಯಣ ಇವರು **'ಮುದ್ರಾ ಮಂಜುಷ'**, ಹಾಗೂ ಲಿಂಗರಾಜನವರ **'ನರಪತಿಯ ಚರಿತೆ'**, ಬಸಪ್ಪ ಶಾಸ್ತ್ರಿಗಳು (ಅಭಿನವ ಕಾಳಿದಾಸ)ರವರ ಕಾಳಿದಾಸನ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು.

**ಸಂಗೀತಕ್ಕೆ ಇವರ ಕೊಡುಗೆ**

ಇವರ ಆಸ್ಥಾನದಲ್ಲಿ ಬಹಳಷ್ಟು ಸಂಗೀತ ವಿದ್ವಾಂಸರು ಆಶ್ರಯ ಪಡೆದಿದ್ದರು. ಮುಖ್ಯವಾಗಿ ವೀಣೆ ಶೇಷಣ್ಣ, ಕುಣಗಲ್ ರಾಮಾಶಾಸ್ತ್ರಿ, ಚಿಕ್ಕರಾಮಪ್ಪ ಮುಂತಾದವರು ಇವರೆಲ್ಲ **"ಮೈಸೂರು ಸಂಗೀತ"**ವನ್ನು ಜನಪ್ರಿಯಗೊಳಿಸಿದರು.

**ಚಿತ್ರಕಲೆ**

ವಿಜಯನಗರದ ಪತನಾನಂತರ ಅನೇಕ ಚಿತ್ರಕಲಾಕಾರರು, ವಾಸ್ತುಶಿಲ್ಪಿಗಳು ಆಶ್ರಯ ಪಡೆದುಕೊಂಡಿದ್ದೇ ಮೈಸೂರು ಸಂಸ್ಥಾನದಲ್ಲಿ, ಅದರ ಪರಿಣಾಮವಾಗಿ ಮೈಸೂರು ಚಿತ್ರಕಲೆ ಮತ್ತೊಂದು ಮೈಲಿಗಲ್ಲು ಪಡೆಯಿತು.

- 1861 ರಲ್ಲಿ ಇವರು ನಿರ್ಮಿಸಿದ ಜಗನ್ಮೋಹನ ಅರಮನೆಯನ್ನು ನಿರ್ಮಿಸಿ, ಅಲ್ಲಿ ಕಲಾಕೃತಿಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಒಂದು ಅವಕಾಶ ಕಲ್ಪಿಸಿದರು.
- ಸಂತನಾಂಬುಜವು (Lotus Progency) ಮೈಸೂರು ಅರಸರ ವಂಶವೃಕ್ಷವನ್ನು ನಿರೂಪಿಸುವ ಕೃತಿ.
- ಜಂಬೂ ಸವಾರಿಯ ದೃಶ್ಯಗಳು, ಬೇಟೆಯ ದೃಶ್ಯಗಳು ಪ್ರಮುಖವಾಗಿದೆ.

**ನಾಟ್ಯ / ನಾಟಕ / ನೃತ್ಯಕ್ಕೆ ಇವರ ಕೊಡುಗೆ**

ಭರತನಾಟ್ಯಕ್ಕೆ ವಿಶೇಷವಾದ ಪ್ರೋತ್ಸಾಹ ದೊರೆಯಿತು. ತರಬೇತಿಯನ್ನು ನೀಡುವ ತರಬೇತಿ ಶಾಲೆಗಳನ್ನು ಆರಂಭಿಸಿದರು. ಜಟ್ಟಿ ತಾಯಮ್ಮ, ಪುಟ್ಟ ದೇವಮ್ಮ ಮತ್ತು ಚಂದ್ರವದನಮ್ಮ ಎಂಬುವವರು ಈ ಅವಧಿಯ ಸುಪ್ರಸಿದ್ಧ ನೃತ್ಯಗಾರ್ತಿಯರು.

**ಧರ್ಮ:–** ಮುಮ್ಮಡಿ ಕೃಷ್ಣರಾಜ ಒಡೆಯರು ಅಪಾರ ದೈವ ಭಕ್ತರಾಗಿದ್ದು ಮಠ, ಮಂದಿರಗಳಿಗೆ ಅಪಾರ ದಾನ ಧರ್ಮವನ್ನು ಮಾಡುತ್ತಿದ್ದರು. ಮೇಲುಕೋಟೆ, ಶ್ರೀರಂಗಪಟ್ಟಣ, ಚಾಮುಂಡಿ ಬೆಟ್ಟ, ನಂಜನಗೂಡು, ಮುಂತಾದ ದೇವಾಲಯಗಳಿಗೆ ಅಪಾರ ಪ್ರಮಾಣದ ನೆರವು ನೀಡಿದರು.

**ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆ ನೀಡಿದವರು – ಮುಮ್ಮಡಿ ಕೃಷ್ಣರಾಜ ಒಡೆಯರು.**

- 1825 ಕೃಷ್ಣ ಸ್ವಾಮಿ ದೇವಾಲಯವನ್ನು ನಿರ್ಮಿಸಿದರು. ಇಲ್ಲಿ ಅಂಬೆಗಾಲಿಡುತ್ತಿರುವ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.
- ಚಾಮುಂಡಿಬೆಟ್ಟ ಮತ್ತು ನಂಜನಗೂಡಿನಲ್ಲಿ ಮಹಾಗೋಪುರವನ್ನು ನಿರ್ಮಿಸಿದರು.
- 1826 ರಲ್ಲಿ ಚಾಮರಾಜನಗರದ **"ಚಾಮರಾಜೇಶ್ವರ ದೇವಾಲಯ"**ವನ್ನು ನಿರ್ಮಾಣ ಮಾಡಿದರು.

ಒಟ್ಟಾರೆಯಾಗಿ ಮೈಸೂರು ಸಂಸ್ಥಾನದ ಉನ್ನತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದರು.

- ಕ್ರಿ.ಶ. 1831 ರಲ್ಲಿ ನಡೆದ ಬಿದನೂರಿನ ದಂಗೆಯನ್ನು ನಿಯಂತ್ರಿಸಲು ವಿಫಲರಾದ್ದರಿಂದ ಬ್ರಿಟೀಷ ಸರ್ಕಾರ ಮೈಸೂರನ್ನು ವಶಪಡಿಸಿಕೊಂಡಿತು.

**ಕರ್ನಾಟಕದಲ್ಲಿ ಬ್ರಿಟೀಷರ ವಿರುದ್ಧ ಸಶಸ್ತ್ರ ದಂಗೆ**

ಬ್ರಿಟೀಷರ ವಿರುದ್ಧ ಹೋರಾಟದ ರಣಕಹಳೆಯನ್ನು ಮೊಳಗಿಸಿದ ರಾಜ್ಯ ಕರ್ನಾಟಕ. ಪರಕೀಯರ ಆಡಳಿತದ ವಿರುದ್ಧ ಸಶಸ್ತ್ರವಾಗಿ ಅನೇಕ ಹೋರಾಟಗಳು ನಡೆದಿವೆ. ಅವುಗಳಲ್ಲಿ ಕರ್ನಾಟಕದ ಹಲವು ಹೋರಾಟಗಳು ಪ್ರಸಿದ್ಧಿ ಪಡೆದಿದೆ.

**1) ಧೊಂಡಿಯ ವಾಘನ ದಂಗೆ (1800)**

ಈತನ ಬಂಡಾಯವನ್ನು ದಕ್ಷಿಣ ಭಾರತದ ಮೊದಲ ಬ್ರಿಟೀಷ ವಿರೋಧಿ **"ಬಂಡಾಯ"**ವೆಂದು ಬಣ್ಣಿಸಲಾಗಿದೆ. ಈತನು ಟಿಪ್ಪುವಿನ ಮತಾಂತರ ನೀತಿಯನ್ನು ವಿರೋಧಿಸಿ ಬಂಧಿತನಾದನು. ಆಮೇಲೆ ಟಿಪ್ಪುವಿನ ಮರಣಾನಂತರ ಬಿದನೂರಿಗೆ ತೆರಳಿ ಅಲ್ಲಿ ಬ್ರಿಟೀಷರ ವಿರುದ್ಧ ದಂಗೆಯೆದ್ದನು. ಈತನು ತನ್ನನ್ನು **"The lord of two worlds"** / **"ಉಭಯ ಲೋಕಾಧೀಶ್ವರ"** ಎಂಬ ಬಿರುದನ್ನು ಧರಿಸಿದ್ದನು.

**2) ಐಗೂರು ವೆಂಕಟಪ್ಪ ನಾಯಕನ ದಂಗೆ (1800–03)**

ಬ್ರಿಟೀಷರ ವಿರುದ್ಧ **"ಮುಝುರಾಬಾದ್"**ನ ಐಗೂರು ಸಂಸ್ಥಾನದ ವೆಂಕಟಪ್ಪ ನಾಯಕನು ದಂಗೆಯೆದ್ದನು/ ಆದರೆ **'ಅರ್ಥರ್ ವೆಲ್ಲೆಸ್ಲಿ'** ತಾನೇ ಸೈನ್ಯ ಸಮೇತನಾಗಿ ತೆರಳಿ ಈ ದಂಗೆಯನ್ನು ಅಡಗಿಸಿದನು.

**3) ವೀರಪ್ಪನ ದಂಗೆ / ಕೊಪ್ಪಳ ದಂಗೆ (1819)**

4ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬ್ರಿಟೀಷರು ಕೊಪ್ಪಳವನ್ನು ಹೈದರಾಬಾದ್‌ನ ನಿಜಾಮನಿಗೆ ಬಿಟ್ಟುಕೊಟ್ಟರು. ಇದನ್ನು ವೀರಪ್ಪನು ವಿರೋಧಿಸಿದನು. ಯಾಕೆಂದರೆ ವೀರಪ್ಪನಿಗೆ ನಿಜಾಮನ ಕೆಳಗೆ ಕೆಲಸ ಮಾಡಲು ಇಷ್ಟವಿರುವುದಿಲ್ಲ. ಆದ್ದರಿಂದ ಬ್ರಿಟೀಷರ ವಿರುದ್ಧವೂ ದಂಗೆಯೆದ್ದನು. ಅಂತಿಮವಾಗಿ ಮೆ॥ ಪುಟ್ಲರ್ ಈ ದಂಗೆಯನ್ನು ಅಡಗಿಸಿದನು.

**4) ದೇಶಮುಖ್ ದಂಗೆ ಉದ್ಗಿರ ದಂಗೆ (1820–21)**

ಕ್ರಿ.ಶ. 1820 ರಲ್ಲಿ ಬೀದರ್ ಜಿಲ್ಲೆಯ ಉದ್ಗಿರ್‌ನಲ್ಲಿ ಬ್ರಿಟೀಷರ ವಿರುದ್ಧ ಆರಂಭವಾಯಿತು. ಬ್ರಿಟೀಷರ ಮತ್ತು ನಿಜಾಮನ ವಿರುದ್ಧ ದಂಗೆ ಆರಂಭವಾಯಿತು. ಶಿವಲಿಂಗಯ್ಯ ದೇಶಮುಖ, ತಿರುಮಲರಾದ & ಮೇಘಶ್ಯಾಂ ದೇಶಮುಖ ಮುಖಂಡರಾಗಿದ್ದರು.

**5) ಸಿಂದಗಿಯ ದಂಗೆ (1824)**

ಬ್ರಿಟೀಷರ ಅತಿಯಾದ ಕಂದಾಯ ನೀತಿಯನ್ನು ವಿರೋಧಿಸಿ ಬಿಜಾಪುರ ಜಿಲ್ಲೆಯ ದಿವಾಕರ ದೀಕ್ಷಿತ್, ರೇವ್ ಜೀ ರಾಸ್ತೆ, ಬಾಲಾಜಿ ದೇಶಪಾಂಡೆ ಎಂಬುವವರು 1824 ರಲ್ಲಿ ದಂಗೆಯೆದ್ದರು. ಆದರೆ ಧಾರವಾಡದ ಕಲೆಕ್ಟರ್ **'ಸ್ಟೀವನ ಸನ್'** ಈ ಬಂಡಾಯವನ್ನು ಅಡಗಿಸಿದನು.

**6) ಕಿತ್ತೂರಿನ ಬಂಡಾಯ (1824)**

**"ದತ್ತು ಮಕ್ಕಳಿಗೆ ಹಕ್ಕಿಲ್ಲ"** ಎಂಬ ನೀತಿಯಿಂದ ಕಿತ್ತೂರ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಮುಂದಾದ ಬ್ರಿಟೀಷರ ವಿರುದ್ಧ ಕಿತ್ತೂರಿನ ರಾಣಿ ಚೆನ್ನಮ್ಮ ಸಶಸ್ತ್ರ ಹೋರಾಟ ಆರಂಭ ಮಾಡಿದಳು. ಧಾರವಾಡದ ಕಲೆಕ್ಟರ್ ಥ್ಯಾಕರೆಯನ್ನು ಕೊಲ್ಲಲಾಯಿತು. ಇದರಿಂದ ಆರಂಭಿಕ ಮುನ್ನಡೆಯನ್ನು ಕಿತ್ತೂರು ಸಂಸ್ಥಾನ ಪಡೆದರೂ ಕೂಡಾ, ದೇಶದ್ರೋಹಿಗಳ ಒಳಸಂಚಿನಲ್ಲಿ ಸಿಲುಕಿ ಸೋಲಬೇಕಾಯಿತು. ರಾಣಿ ಚೆನ್ನಮ್ಮನನ್ನು ಸೆರೆ ಹಿಡಿದು ಬೈಲಹೊಂಗಲದ ಸೆರೆಮನೆಯಲ್ಲಿಟ್ಟರು. ಆದರೆ ಸೆರೆಮನೆಯಲ್ಲಿಯೇ 1829 ಫೆಬ್ರುವರಿ 2 ರಂದು ಚೆನ್ನಮ್ಮ ನಿಧನಳಾದಳು.

ಅಂತಿಮವಾಗಿ ಚೆನ್ನಮ್ಮಳ ಬಲಗೈ ಭಂಟ, ಅಪ್ರತಿಮ ದೇಶಪ್ರೇಮಿ. ಸಂಗೊಳ್ಳಿ ರಾಯಣ್ಣನನ್ನು 1831 ರಲ್ಲಿ ಗಲ್ಲಿಗೇರಿಸಿ ದಂಗೆಯನ್ನು ನಿಯಂತ್ರಣಕ್ಕೆ ತರಲಾಯಿತು.

**7) ಬಿದನೂರು ದಂಗೆ / ನಗರ ದಂಗೆ (1830–31)**

ಶಿವಮೊಗ್ಗ ಜಿಲ್ಲೆಯ ನಗರ / ಬಿದನೂರಿನಲ್ಲಿ ನಡೆದ ದಂಗೆಯಾಗಿದೆ. ಇದು ಮೈಸೂರು ಒಡೆಯರ ವಿರುದ್ಧ ನಡೆದ ದಂಗೆ. ಇದಕ್ಕೆ ಕಾರಣ ಮೈಸೂರು ಒಡೆಯರ **'ಅತಿಯಾದ ಕಂದಾಯ ನೀತಿ'**. ಇದರ ವಿರುದ್ಧ **'ಸಾದರಮಲ್ಲನೆಂಬಾತ'** ದಂಗೆಯೆದ್ದು ತನ್ನನ್ನು ಬಿದನೂರಿನ ರಾಜನೆಂದು ಘೋಷಿಸಿಕೊಂಡನು. ಇವನಿಗೆ ತರಿಕೆರೆಯ ಪಾಳೇಗಾರ ಸರ್ಜಾ ಹನುಮನಾಯಕ ಹಾಗೂ ಸ್ಥಳೀಯ ನಾಯಕನಾದ ಬೂದಿ ಬಸಪ್ಪನಾಯನು ಬೆಂಬಲ ನೀಡಿದನು. ಅಂತಿಮವಾಗಿ ಕ॥ ರೋಚ ಪೋರ್ಟ ಈ ದಂಗೆಯನ್ನು ನಿಯಂತ್ರಿಸಿದನು. ಮೈಸೂರು ಸಂಸ್ಥಾನ ಬ್ರಿಟೀಷರ ವಶವಾಯಿತು.

**8) ಕೊಡಗಿನ ಬಂಡಾಯ (1834–35)** –

ಕೊಡಗಿನ ಹಾಲೇರಿ ರಾಜನಾದ ಚಿಕ್ಕವೀರ ರಾಜೇಂದ್ರನನ್ನು 1834 ರಲ್ಲಿ ಪದಚ್ಯುತಗೊಳಿಸಿ ಬನಾರಸಿಗೆ ಗಡಿಪಾರು ಮಾಡಿದರು. ಹಾಗೂ ಕೊಡಗು ಬ್ರಿಟೀಷರ ವಶವಾಯಿತು. ಕೊಡಗು ಬ್ರಿಟೀಷರ ವಶವಾದ ನಂತರ ಕೊಡಗಿನಲ್ಲಿ ಸ್ವಾತಂತ್ರ್ಯಕ್ಕಾಗಿ ದಂಗೆ ಎದ್ದಿತು. ಕೆಲವು ಸ್ವಾತಂತ್ರ್ಯಪ್ರಿಯರು ಹಾಗೂ ಚಿಕ್ಕವೀರ ರಾಜೇಂದ್ರನ ಅನುಯಾಯಿಗಳು ಕೊಡಗನ್ನು ಬ್ರಿಟೀಷರ ಕೈಯಿಂದ ಮುಕ್ತಗೊಳಿಸಲು ಪಣತೊಟ್ಟರು. ಅವರಲ್ಲಿ ಮುಖ್ಯವಾಗಿ ಅಪರಂಪರ ಸ್ವಾಮೀಜಿ, ಕಲ್ಯಾಣ ಸ್ವಾಮಿ, ಪುಟ್ಟಬಸಪ್ಪ, ಗುಡ್ಡೇಮನೆ ಅಯ್ಯಪ್ಪ ಪ್ರಮುಖರು.

ಬ್ರಿಟೀಷರು ಅಂತಿಮವಾಗಿ ಪುಟ್ಟಬಸಪ್ಪನನ್ನು ಗಲ್ಲಿಗೇರಿಸಿ ದಂಗೆಯನ್ನು ಕೊನೆಗಾಣಿಸಿದರು.

**9) ಕರ್ನಾಟಕದಲ್ಲಿ 1857 ರ ಕ್ರಾಂತಿ**

ಉತ್ತರ ಭಾರತದಲ್ಲಿ ಕ್ರಿ.ಶ. 1857 ರಲ್ಲಿ ಬ್ರಿಟೀಷರ ವಿರುದ್ಧ ನಡೆದ ಸ್ವಾತಂತ್ರ್ಯಸಮರ ಕರ್ನಾಟಕಕ್ಕೂ ಹಬ್ಬಿತು. ಉತ್ತರ ಕರ್ನಾಟಕದ ಹಲವು ಕಡೆ ದಂಗೆ ಆರಂಭವಾಯಿತು.

**ಅವುಗಳಲ್ಲಿ ಪ್ರಮುಖವಾಗಿ:–**

1) ಹಲಗಲಿಯ ಬೇಡರ ದಂಗೆ
2) ಸುರಪುರದ ವೆಂಕಟಪ್ಪ ನಾಯಕನ ದಂಗೆ
3) ನರಗುಂದದ ಬಾಬಾ ಸಾಹೇಬನ ದಂಗೆ
4) ಮಂಡರಗಿಯ ಭೀಮರಾವನ ದಂಗೆ

ಹೀಗೆ ಕರ್ನಾಟಕವು ಸ್ವಾತಂತ್ರ್ಯ ಹೋರಾಟದ ಎಲ್ಲಾ ಮಜಲುಗಳಲ್ಲಿಯೂ ತನ್ನ ಛಾಪನ್ನು ಮೂಡಿಸಿದೆ.

## <u>ಕಮೀಷನರುಗಳ ಆಳ್ವಿಕೆ (1831–1881)</u>

1831 ರಿಂದ 1881 ರವರೆಗೆ ಸುಮಾರು 50 ವರ್ಷಗಳ ಕಾಲ ಮೈಸೂರು ಸಂಸ್ಥಾನದ ಬ್ರಿಟೀಷರ ನೇರ ಆಳ್ವಿಕೆಗೆ ಒಳಪಟ್ಟಿತು. ಈ ಕಾಲದಲ್ಲಿ ಬ್ರಿಟೀಷ ಕಮೀಷನರುಗಳು ಮೈಸೂರು ಸಂಸ್ಥಾನವನ್ನು ಆಡಳಿತ ಮಾಡಿದರು.

- 1831 ರಲ್ಲಿ ಮೈಸೂರನ್ನು ಆಳ್ವಿಕೆ ಮಾಡಲು **"ಕರ್ನಲ್ ಬ್ರಿಂಗ್ಸ್"** ಅನ್ನು ನೇಮಕ ಮಾಡಲಾಯಿತು. ಇವನು ಮೊದಲ ಕಮೀಷನರ್.
- **"ಕರ್ನಲ್ ಮ್ಯಾರಿಸನ್"**ರು 2ನೇ ಕಮೀಷನರ ಆಗಿ ನೇಮಕಗೊಂಡರು.
- 1834 ರಲ್ಲಿ ಮಾರ್ಕ್ ಕಬ್ಬನ್‌ರವರನ್ನು ಮೈಸೂರಿನ ಕಮೀಷನರ್ ಆಗಿ ನೇಮಕ ಮಾಡಲಾಯಿತು.

## ಮಾರ್ಕ್ ಕಬ್ಬನ್(1834–1861)

- ಇವರು ಮೈಸೂರು ರಾಜ್ಯದ ಕಮೀಷನರ ಆಗಿ ನೇಮಕವಾದ ಮೇಲೆ ಆಡಳಿತ ದೃಷ್ಟಿಯಿಂದ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದನು.
- **"ಅಠಾರಾ ಕಛೇರಿ"**ಯನ್ನು ರದ್ದುಪಡಿಸಿ ಅವುಗಳ ಬದಲು 9 ಇಲಾಖೆಗಳನ್ನು ಜಾರಿಗೆ ತಂದನು. ಅವುಗಳು 1) ಕಂದಾಯ 2) ಅಂಚೆ 3) ಪೋಲೀಸ್ 4) ಲೋಕೋಪಯೋಗಿ (ಮಾರಾಮತ್) 5) ಸೈನಿಕ ಇಲಾಖೆ 6) ಪಶು ಸಂಗೋಪನೆ (ಅಮೃತ ಮಹಲ್) 7) ನ್ಯಾಯಾಂಗ 8) ಸಾರ್ವಜನಿಕ ಶಿಕ್ಷಣ
- ಪೋಲೀಸ್ ವ್ಯವಸ್ಥೆಗೋಸ್ಕರವೇ ಪ್ರತ್ಯೇಕ ಇಲಾಖೆಯನ್ನು ತೆರೆದನು ಮತ್ತು ಪೋಲಿಸ್ ಹುಕುಮಾನ(ನೀತಿ ಸಂಹಿತೆ)ಯನ್ನು ಜಾರಿಗೆ ತಂದನು.
- ಕೃಷಿಯ ಅಭಿವೃದ್ಧಿಗಾಗಿ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿದನು. ಅವುಗಳು ಪ್ರಮುಖವಾಗಿ ಮಾರಿಕಣಿವೆ, ನುಗು, ಹೇಮಾವತಿ, ಕಾವೇರಿ ಯೋಜನೆಗಳು ಇತ್ಯಾದಿ.
- ಕ್ರಿ.ಶ. 1839 ರಲ್ಲಿ **'ಕೃಷಿ–ತೋಟಗಾರಿಕೆ ಯೋಜನೆ'** ಜಾರಿಗೆ ತಂದನು.
- ಮೈಸೂರು ರಾಜ್ಯದ ದೇಶೀಯ ತಳಿ ಅಮೃತ ಮಹಲ್ ರಕ್ಷಣೆಗೆ ಕ್ರಮ ಕೈಗೊಂಡನು.
- ಮೈಸೂರು ರಾಜ್ಯದಲ್ಲಿ ಕುಮ್ರಿ ಬೇಸಾಯ / ಸ್ಥಳಾಂತರ ಬೇಸಾಯವನ್ನು ನಿಷೇಧಿಸಿದನು.
- 1859 ರಲ್ಲಿ ಬೆಂಗಳೂರಿನಿಂದ ತಮಿಳುನಾಡಿನ ಜೋಲಾರ ಪೇಟೆವರೆಗೆ ರೇಲ್ವೆ ಪ್ರಾರಂಭವಾಯಿತು.
- ಬ್ರಿಟೀಷ್ ಮಾದರಿಯ ನಾಣ್ಯಪದ್ಧತಿ ಜಾರಿಗೊಳಿಸಿದನು ಮತ್ತು ತೆರಿಗೆಯನ್ನು ನಗದು ರೂಪದಲ್ಲಿ ಪಾವತಿಸುವುದಕ್ಕೆ ಆದೇಶಿಸಿದನು.
- ಧಾನ್ಯರೂಪದ ಕಂದಾಯ ಪದ್ಧತಿಯನ್ನು ತೆಗೆದು ಹಾಕಿದನು.

## ಲೂಯಿಸ್ ಬೌರಿಂಗ(ಬೌರಿಂಗ್) (ಕ್ರಿ.ಶ. 1862–1870)

ಮಾರ್ಕ್ ಕಬ್ಬಿನ ನಂತರ ಲೂಯಿಸ್ ಬೌರಿಂಗ್‌ರನ್ನು ಮೈಸೂರಿನ ಕಮೀಷನರ ಆಗಿ ನೇಮಕ ಮಾಡಲಾಯಿತು.

**ಈತನು ತಂದ ಸುಧಾರಣೆಗಳು:**

1) 1862 ರಲ್ಲಿ ಇಂಡಿಯನ್ ಪೀನಲ್ ಕೋಡನ್ನು ಮೈಸೂರಿನಲ್ಲಿ ಜಾರಿಗೆ ತಂದನು.
2) 1862 ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಸ್ಥಾಪಿಸಿದನು.
3) 1869 ರಲ್ಲಿ **"ಅಠಾರಾ ಕಛೇರಿ"**ಯನ್ನು (ಪ್ರಸ್ತುತ ಹೈಕೋರ್ಟ್) ನಿರ್ಮಿಸಿದನು.

- ಹೈಕೋರ್ಟ್ ಪಕ್ಕದಲ್ಲಿ ಒಂದು ಉದ್ಯಾನವನವನ್ನು ನಿರ್ಮಾಣ ಮಾಡಿದನು. ಇದನ್ನು ಪ್ರಸ್ತುತ ಕಬ್ಬಿನ ಪಾರ್ಕ್ ಎಂದು ಕರೆಯುವರು.
- 1863 ರಲ್ಲಿ ಭೂಮಿಯ ಸಮೀಕ್ಷೆಗೋಸ್ಕರ **"ಇನಾಂ ಕಮೀಷನನ್ನು"** ಸ್ಥಾಪಿಸಿದರು.
- 1863 ರಲ್ಲಿ ಬೆಂಗಳೂರಿನ **"ಸೆಂಟ್ರಲ್ ಜೈಲನ್ನು"** ಸ್ಥಾಪಿಸಿದರು.
- ಪೋಲಿಸ್ ಇಲಾಖೆಯಲ್ಲಿ IGP / DIG / SP ಹುದ್ದೆಗಳನ್ನು ಸೃಷ್ಟಿಸಿದನು.

ಒಟ್ಟಾರೆ ಮಾರ್ಕ್ ಕಬ್ಬಿನ ನಂತರ ಬೌರಿಂಗನು ಸಹ ಮೈಸೂರಿನ ಪ್ರಗತಿಗಾಗಿ ಶ್ರಮಿಸಿದರು.

ಬೌರಿಂಗ್ ನಂತರ ಸರ್. ರಿಚರ್ಡ್, R.A. ದಾಲ್‌ಯೆಲ್, C.B. ಸೌಂಡರ್ಸ್ ಮತ್ತು ಗಾರ್ಡನ್ ಮೈಸೂರು ರಾಜ್ಯದ ಕಮೀಷನರುಗಳಾಗಿ ಆಳ್ವಿಕೆ ಮಾಡಿದರು. ಗಾರ್ಡನ್ ಮೈಸೂರು ಕಮೀಷನರಾಗಿ ಕೊನೆಯವನಾದ ಆನಂತರ ಮರಳಿ ರಾಜ್ಯವನ್ನು ಮೈಸೂರು ಒಡೆಯರ್‌ರವರಿಗೆ ಒಪ್ಪಿಸಿದರು.

## IV. ಹೈದರಾಬಾದ್ – ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆ

ದಕ್ಷಿಣ ಭಾರತದಲ್ಲಿ ವಿಶಾಲ–ಸಂಸ್ಥಾನವಾಗಿದ್ದ ಹೈದರಾಬಾದ್ ಬಹುಸಂಖ್ಯಾತ ಹಿಂದೂ ಪ್ರಜೆಗಳಿಂದ ಕೂಡಿತ್ತು. ಆದರೆ ನಿಜಾಮ ಮುಸ್ಲಿಂನಾಗಿದ್ದನು. ಇವನು ಬ್ರಿಟೀಷರ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಂದ ಮಾಡಿಕೊಂಡು ನಿರಂಕುಶ ಆಳ್ವಿಕೆ ನಡೆಸುತ್ತಿದ್ದನು. ಇದು ಬಹುಸಂಖ್ಯಾತ ಹಿಂದುಗಳ ಅಸಹನೆಗೆ ಕಾರಣವಾಗಿತ್ತು.

- ಹಿಂದುಗಳಿಗೆ ಪ್ರತ್ಯೇಕ ಕಾನೂನುಗಳಿದ್ದರೆ, ಮುಸ್ಲಿಂರಿಗೆ ಪ್ರತ್ಯೇಕ ಕಾನೂನು ಜಾರಿಯಲ್ಲಿತ್ತು.
- ಹಿಂದೂಗಳ ಧಾರ್ಮಿಕ ಮತ್ತು ಸಾಂಸ್ಕೃತಿ ಸ್ವಾತಂತ್ರ್ಯದ ಮೇಲೆ ಅನೇಕ ನಿರ್ಬಂಧಗಳಿದ್ದವು.

- ಸರ್ಕಾರಿ ಹುದ್ದೆಗಳು ಮುಸ್ಲಿಂರ ಪಾಲಾಗಿದ್ದವು.
- ಉರ್ದು ಭಾಷೆಯನ್ನು ಎಲ್ಲಾ ಹಂತಗಳಲ್ಲೂ ಕಡ್ಡಾಯವಾಯಿತು. ಇದರಿಂದ ಕನ್ನಡಿಗರಿಗೆ ಹಿನ್ನಡೆಯಾಯಿತು.
- ಬಹುಸಂಖ್ಯಾತ ಹಿಂದುಗಳ ಮೇಲೆ ನಿಜಾಮರ ಅಧಿಕಾರಿಗಳು / ಸೈನಿಕರಾದ ರಜಾಕಾರರು ದೌರ್ಜನ್ಯ ಅತಿಯಾಗಿತ್ತು.

ಹೀಗೆ ನಿಜಾಮನ ನಿರ್ಲಕ್ಷ್ಯ ಹಾಗೂ ದೌರ್ಜನ್ಯಗಳಿಂದ ಹೈದರಾಬಾದಿನ ಜನ ಬೇಸತ್ತು ಹೋರಾಟಕ್ಕೆ ಧುಮುಕಿದರು.

## V. ದಿವಾನರ ಆಳ್ವಿಕೆಯಲ್ಲಿ ಮೈಸೂರು ಪ್ರಗತಿ

### (1) ದಿವಾನ್ ರಂಗಾಚಾರ್ಲು (ಕ್ರಿ.ಶ. 1881–1883)

- ಮೈಸೂರಿನ ಮೊದಲ ದಿವಾನರಾಗಿದ್ದ ರಂಗಾಚಾರ್ಲುರವರು ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು.
- 1881 ರಲ್ಲಿ ಇವರು ಪ್ರಾರಂಭಿಸಿದ **'ಪ್ರಜಾ ಪ್ರತಿನಿಧಿ'** ಸಭೆ, ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಮೈಲಿಗಲ್ಲಾಗಿದೆ.
- 1882 ರಲ್ಲಿ ಬೆಂಗಳೂರಿನಿಂದ ಮೈಸೂರಿಗೆ ರೇಲ್ವೆ ಆರಂಭವಾಯಿತು. ಹಾಗೆ ತಿಪಟೂರಿನವರೆಗೆ ರೇಲ್ವೆ ಹಳಿಯನ್ನು ನಿರ್ಮಾಣ ಮಾಡಿದರು.
- ಮೈಸೂರು ರಾಜ್ಯದಲ್ಲಿ ಗಂಧದ ಮರ, ವಸ್ತುಗಳ ಮಾರಾಟಕ್ಕೆ ಪ್ರೋತ್ಸಾಹ ನೀಡಿದರು.
- 1881 ರಲ್ಲಿ ಟೇಲರ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು K.G.F. ನಲ್ಲಿ ಚಿನ್ನದ ಗಣಿ ಆರಂಭಿಸಲು ಕಾರಣರಾದರು.

### (2) ದಿವಾನ ಶೇಷಾದ್ರಿ ಅಯ್ಯರ (ಕ್ರಿ.ಶ. 1883–1901)

- 10ನೇ ಚಾಮರಾಜ ಒಡೆಯರು ಇವರನ್ನು ಮೈಸೂರು ದಿವಾನರನ್ನಾಗಿ ಆಯ್ಕೆ ಮಾಡಿದರು. ಇವರ ಕಾಲದಲ್ಲಿ ಮೈಸೂರು ರಾಜ್ಯ ಗಣನೀಯವಾಗಿ ಏಳಿಗೆಯಾಯಿತು.
- ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಹೆಚ್ಚಿನ ಅಧಿಕಾರ ನೀಡಲಾಯಿತು. ಹಾಗೂ ಪ್ರಜಾ ಪ್ರತಿನಿಧಿಯ ಸಭೆಯ ಸದಸ್ಯರ ಹೆಸರನ್ನು ಗೆಜೆಟ್‌ನಲ್ಲಿ ಪ್ರಕಟಿಸುವ ಪರಿಪಾಠ ಆರಂಭವಾಯಿತು.
- ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನು ಚುನಾವಣೆಯ ಮುಖಾಂತರ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭವಾಯಿತು. ಇವರನ್ನು 3 ವರ್ಷದ ಅವಧಿಗೆ ಆಯ್ಕೆ ಮಾಡುತ್ತಿದ್ದರು.
- 1886 ರಲ್ಲಿ K.G.F ನಲ್ಲಿ ಚಿನ್ನದ ಗಣಿ ಕಾರ್ಯಾರಂಭ ಮಾಡಿತು.
- 1894 ರಲ್ಲಿ ಭೂ ಗರ್ಭ ಸರ್ವೇಕ್ಷಣಾ ಇಲಾಖೆಯನ್ನು ಆರಂಭಿಸಲಾಯಿತು.
- ಕ್ರಿ.ಶ. 1894 ರಲ್ಲಿ ಕೃಷಿ ಬ್ಯಾಂಕ್‌ಗಳನ್ನು ತೆರೆದು ರೈತರಿಗೆ ಸಾಲ ನೀಡಲು ಕ್ರಮಕೈಗೊಂಡರು.
- ಅಂಚೆ ಪದ್ಧತಿಯಲ್ಲಿ ಸುಧಾರಣೆ ತಂದರು.
- 1889 ರಲ್ಲಿ **"ಮೈಸೂರು ಸಿವಿಲ್ ಸರ್ವೀಸ್"** ಪರೀಕ್ಷೆಯನ್ನು ಆರಂಭಿಸಿದರು.
- 1890 ರಲ್ಲಿ ಮೈಸೂರು ರಾಜ್ಯದ ಪುರಾತತ್ವ ಇಲಾಖೆಯನ್ನು B.L. ರೈಸ್‌ರವರ ನೇತೃತ್ವದಲ್ಲಿ ಆರಂಭಿಸಿದರು.
- 1902 ರಲ್ಲಿ ಶಿವನ ಸಮುದ್ರದ ಹತ್ತಿರ ವಿದ್ಯುಚ್ಛಕ್ತಿ ಯೋಜನೆ ಪ್ರಾರಂಭಿಸಿದರು.
- ಕ್ರಿ.ಶ. 1886 ರಲ್ಲಿ **"ಮೈಸೂರು ಶಿಕ್ಷಣ ನೀತಿ"** ಜಾರಿಗೆ ತಂದರು.
- ಮಹಾರಾಣಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಮುಂದೆ 1901 ರಲ್ಲಿ **"ಮಹಾರಾಣಿ ಕಾಲೇಜ್"** ಆಗಿ ಉನ್ನತೀಕರಿಸಲಾಯಿತು.
- ಮೈಸೂರು ರಾಜ್ಯದಾದ್ಯಂತ ಸುಮಾರು 70 ಕನ್ನಡ ಪ್ರಾಥಮಿಕ ಶಾಲೆಯನ್ನು ತೆರೆಯಲಾಯಿತು.

**ಬೆಂಗಳೂರಿಗೆ ಇವರ ಕೊಡುಗೆಗಳು**

- ಕ್ರಿ.ಶ. 1889 ರಲ್ಲಿ ಲಾಲ್‌ಬಾಗ್‌ನಲ್ಲಿ ಗಾಜಿನ ಮನೆ ನಿರ್ಮಾಣ.
- ಕ್ರಿ.ಶ. 1900 ರಲ್ಲಿ ವಿಕ್ಟೋರಿಯಾ ಆಸ್ಪತ್ರೆ ನಿರ್ಮಾಣ.
- ಕ್ರಿ.ಶ. 1905 ರಲ್ಲಿ ಬೆಂಗಳೂರಿಗೆ ವಿದ್ಯುಚ್ಛಕ್ತಿ ಒದಗಿಸಲಾಯಿತು.
- ಭಾರತ ಮತ್ತು ಏಷ್ಯಾದಲ್ಲೇ ವಿದ್ಯುತ್ ಸಂಪರ್ಕ ಪಡೆದ ಮೊದಲ ನಗರ ಬೆಂಗಳೂರು ಎಂಬ ಖ್ಯಾತಿ ಪಡೆಯಿತು.
- ಬೆಂಗಳೂರಿನಲ್ಲಿ L.I.C. ಸ್ಥಾಪನೆ.
- ಇವರನ್ನು **'ಆಧುನಿಕ ಬೆಂಗಳೂರಿನ ನಿರ್ಮಾತೃ'** ಎಂದು ಕರೆಯಲಾಗಿದೆ.
- ಬೆಂಗಳೂರಿನಲ್ಲಿ ಇವರ ಹೆಸರಿನಲ್ಲಿ **'ಶೇಷಾದ್ರಿ ಪುರಂ'** ಎಂಬ ನಗರ ಇದೆ.

**(3) ದಿವಾನ್ ಪಿ.ಎನ್. ಕೃಷ್ಣಮೂರ್ತಿ (1901–1906)**

- ಬೆಂಗಳೂರಿನಲ್ಲಿ ಕರಕುಶಲಗಾರರಿಗೆ ಮತ್ತು ನೇಯ್ಗೆಕಾರರಿಗೆ ತರಬೇತಿ ನೀಡುವುದಕ್ಕಾಗಿ ತರಬೇತಿ ಕೇಂದ್ರವನ್ನು ಆರಂಭಿಸಿದರು.
- **"ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ರಿಸರ್ಚ್"** ಅನ್ನು ಪ್ರಾರಂಭಿಸಿದರು.
- ಚೆನ್ನಪಟ್ಟಣದಲ್ಲಿ ಗೊಂಬೆ ತಯಾರಿಕೆಗೆ ಉತ್ತೇಜನ ಮಾಡಲಾಯಿತು.

**(4) ದಿವಾನ್ ವಿ. ಪಿ. ಮಾಧವರಾವ್ (1906–1909)**

- 1907 ರಲ್ಲಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಪ್ರಾರಂಭಿಸಿದರು.
- ಬೆಂಗಳೂರಿನಲ್ಲಿ **"ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್"** ಆರಂಭಿಸಿದರು.
- ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದರು.
- ಎಲ್ಲಾ ಸಮುದಾಯದವರಿಗೆ ಸಾರ್ವಜನಿಕ ಹಾಸ್ಟೆಲ್ ಸ್ಥಾಪಿಸಿದರು.
- ಕ್ರಿ.ಶ. 1908 ರಲ್ಲಿ ಮೈಸೂರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು.

**(5) ದಿವಾನ್ ಪಿ. ಆನಂದರಾವ್ (1909–1912)**

- 1910 ರಲ್ಲಿ ಮೈಸೂರು ರಾಜ್ಯದಲ್ಲಿ **"ಮೊದಲ ಆರ್ಥಿಕ ಸಮ್ಮೇಳನ"** ನಡೆಸಿದರು.
- 1911 ರಲ್ಲಿ ಕನ್ನಂಬಾಡಿ ಅಣೆಕಟ್ಟು ನಿರ್ಮಾಣ ಆರಂಭವಾಯಿತು.
- ಮೈಸೂರು – ಹಾಸನ ರೈಲ್ವೇ ಪ್ರಾರಂಭವಾಯಿತು.
- ಮೈಸೂರಿನಲ್ಲಿ ಕ್ಷಯ ರೋಗದ ಆಸ್ಪತ್ರೆ (P.K. ಸ್ಯಾನಿಟೋರಿಯಂ) ಸ್ಥಾಪಿಸಲಾಯಿತು.
- ಕ್ರಿ.ಶ. 1912 ರಲ್ಲಿ ಮೈಸೂರಿನ ಅರಮನೆ ಇವರ ಕಾಲದಲ್ಲಿ ಪೂರ್ಣಗೊಂಡಿತು. ಇದು **"ಇಂಡೋ–ಸಾರ್ಸನಿಕ್"** ಶೈಲಿಯಲ್ಲಿದೆ. ಇದರ ಪ್ರಮುಖ ಶಿಲ್ಪಿ **"ಇರ್ವಿನ್"**.
- ಕ್ರಿ.ಶ. 1895 ರಲ್ಲಿ ಬೆಂಕಿಯಿಂದ ಹಿಂದೆ ಇದ್ದ ಮರದ ಅರಮನೆ ನಾಶವಾಯಿತು.

**(6) ಸರ್.ಎಂ. ವಿಶ್ವೇಶ್ವರಯ್ಯ (1912–1919)**

- 1918 ರಲ್ಲಿ **"ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯತ್ ಕಾಯ್ದೆ"** ಜಾರಿಗೆ ತರಲಾಯಿತು.
- 1918 ರಲ್ಲಿ ಮೈಸೂರಿನ ಹತ್ತಿರ **"ಭತ್ತ ಮತ್ತು ಕಬ್ಬು ಸಂಶೋಧನಾ ಕೇಂದ್ರ"** ಸ್ಥಾಪಿಸಲಾಯಿತು.
- 1913 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಲಾಯಿತು.
- 1916 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ
- 1916 ರಲ್ಲಿ ಭದ್ರಾವತಿಯಲ್ಲಿ **"ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸ್ಥಾಪನೆ"**
- 1917 ರಲ್ಲಿ ಚೆನ್ನಪಟ್ಟಣದಲ್ಲಿ **"ರೇಷ್ಮೆ ಸಂಶೋಧನಾ ಕೇಂದ್ರ"** ಸ್ಥಾಪನೆ.
- 1917 ರಲ್ಲಿ ಬೆಂಗಳೂರಿನಲ್ಲಿ **"ಕೃಷಿ ವಿಜ್ಞಾನ ಕೇಂದ್ರ"** (GKVK) ಸ್ಥಾಪನೆ.
- 1917 ರಲ್ಲಿ ಮೈಸೂರು ಸೋಪು ಕಾರ್ಖಾನೆ, ಜಯ ಚಾಮರಾಜೇಂದ್ರ ಪಾಲಿಟೆಕ್ನಿಕ್ ಸ್ಥಾಪನೆ, ಬೆಂಗಳೂರು ಮುದ್ರಣಾಲಯ ಸ್ಥಾಪನೆ.
- 1918 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೈಸೂರು ರಾಜ್ಯದಲ್ಲಿ ಹಿಂದುಳಿದ ವರ್ಗದ ಸ್ಥಿತಿಗತಿಯನ್ನು ಅಧ್ಯಯನ ಮಾಡಲು **"ಪ್ರಥಮ ಹಿಂದುಳಿದ ವರ್ಗಗಳ ಆಯೋಗ"** / **"ಮಿಲ್ಲರ್ ಆಯೋಗ"** ರಚಿಸಿದರು. ಇದರ ರಚನೆ ವಿಶ್ವೇಶ್ವರಯ್ಯನವರ ಕಾಲದಲ್ಲಿ ಆಯಿತು.
- ಇವರನ್ನು **"ಆಧುನಿಕ ಮೈಸೂರು ನಿರ್ಮಾತೃ"** ಎಂದು ಕರೆಯಲಾಗಿದೆ.

**(7) ದಿವಾನ್ ಕಾಂತರಾಜ್ ಅರಸ (1919–1922)**

- ಇವರ ಕಾಲದಲ್ಲಿ ಮಿಲ್ಲರ ವರದಿಯನ್ನು ಅಂಗೀಕರಸಲಾಯಿತು.
- ಮಿಲ್ಲರ ವರದಿಯಂತೆ 1921 ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡಲಾಯಿತು.
- ಪರಿಶಿಷ್ಟ ಪಂಗಡ / ಜಾತಿ / ಹಿಂದುಳಿದ ವರ್ಗದವರಿಗೆ ಶಾಲೆಯನ್ನು ತೆರೆಯಲಾಯಿತು.
- ಇವರ ಕಾಲವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗದವರ **"ಸುವರ್ಣ ಯುಗ"** ಎಂದು ಕರೆಯಲಾಗಿದೆ.

- 1919 ರಲ್ಲಿ ಮೊದಲ ಬಾರಿ ಮೈಸೂರು ರಾಜ್ಯದಲ್ಲಿ **"ಆದಾಯ ತೆರಿಗೆ"** ಜಾರಿಗೆ ತಂದರು.

**(8) ದಿವಾನ್ ರಾಜ ಕುಮಾರ್ ಬ್ಯಾನರ್ಜಿ(1922–1926)**

- ಮೈಸೂರಿನಲ್ಲಿ **"ಸ್ಥಳೀಯ ಸರ್ಕಾರಗಳ ಸಮ್ಮೇಳನ"** ನಡೆಯಿತು.
- ತಾಲ್ಲೂಕು ಮಂಡಳಿಗಳನ್ನು ರದ್ದುಗೊಳಿಸಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು.
- ಅಪೆಕ್ಸ್ ಬ್ಯಾಂಕ್ ಸ್ಥಾಪನೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗಳ ಸ್ಥಾಪನೆ ಇವರ ಪ್ರಮುಖ ಸಾಧನೆ.
- 1923 ರಲ್ಲಿ ಮೈಸೂರು ರಾಜ್ಯದಲ್ಲಿ ಸಂವಿಧಾನಿಕ ಸುಧಾರಣೆ ತರಲು **"ಸೀಲ್ ಸಮಿತಿ"**ಯನ್ನು ರಚಿಸಿದರು.
- 1924 ರಲ್ಲಿ ಕಾವೇರಿ ನದಿ ನೀರು ಹಂಚಿಕೆ ಸಂಬಂಧ **"ಕಾವೇರಿ ಒಪ್ಪಂದ"** ಮೈಸೂರು ಮತ್ತು ಮದ್ರಾಸ್ ಸರ್ಕಾರದ ನಡುವೆ ಆಯಿತು.

**(9) ದಿವಾನ್ ಮಿರ್ಜಾ ಇಸ್ಮಾಯಿಲ್ (1926–1941)**

- ಮಂಡ್ಯ, ಹೊಸಪೇಟೆ, ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಿದರು.
- ಬೆಳಗೊಳದಲ್ಲಿ ರಾಸಾಯನಿಕ ಮತ್ತು ರಸಗೊಬ್ಬರ ಕಾರ್ಖಾನೆ ಸ್ಥಾಪನೆ.
- ಅಮ್ಮಸಂದ್ರದಲ್ಲಿ ಸಿಮೆಂಟ್ ಕಾರ್ಖಾನೆ
- ಮೈಸೂರು ಪೇಪರ್ ಮಿಲ್, ಬೆಂಗಳೂರಿನ ಮಿನರ್ವ ಮಿಲ್, ಬೆಂಗಳೂರಿನಲ್ಲಿ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಮತ್ತು ಬೆಂಗಳೂರಿನಲ್ಲಿ HAL (ಹಿಂದೂಸ್ತಾನ ಏರೋನಾಟಿಕಲ್ ಲಿಮಿಟೆಡ್) ಸ್ಥಾಪನೆ.
- ಮೈಸೂರಿನಲ್ಲಿ ಬೃಂದಾವನ ಗಾರ್ಡನ್ ಸ್ಥಾಪನೆ.
- ಮೈಸೂರು ಜನರ ಆರೋಗ್ಯಕ್ಕಾಗಿ ಅನೇಕ ಆಸ್ಪತ್ರೆಯನ್ನು ಸ್ಥಾಪನೆ ಮಾಡಿದರು. ಪ್ರಮುಖವಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆ, ಮೈಸೂರಿನ ವಾಣಿವಿಲಾಸ ಮೆಟರ್ನಿಟಿ ಆಸ್ಪತ್ರೆ, ಕೋಲಾರದಲ್ಲಿ ನರಸಿಂಹರಾಜ ಆಸ್ಪತ್ರೆ & ಮೆಗ್ಗಾನ ಆಸ್ಪತ್ರೆ, ಹಾಗೂ ಮೈಸೂರಿನಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಿದರು.
- ಬೆಂಗಳೂರಿನಲ್ಲಿ ಟೌನ್‌ಹಾಲ್ ನಿರ್ಮಿಸಿದರು.
- 1939 ರಲ್ಲಿ ಜೋಗ ಹತ್ತಿರ ಜಲ ವಿದ್ಯುಚ್ಛಕ್ತಿ ಕೇಂದ್ರ ಸ್ಥಾಪನೆಗೆ ಅಡಿಗಲ್ಲು ಹಾಕಿದರು.
- ಬೆಂಗಳೂರಿನಲ್ಲಿ ಜಾಮೀ ಮಸೀದಿ ನಿರ್ಮಿಸಿದರು.
- ಇವರ ಕಾಲದಲ್ಲಿ ನಡೆದ 2 ಘಟನೆಗಳು ಇವರ ಆಡಳಿತಕ್ಕೆ ಕಪ್ಪುಚುಕ್ಕೆಯಾಗಿದೆ.
  1) ಸುಲ್ತಾನ ಪೇಟೆ ಗಣಪತಿ ಗಲಭೆ(1928)
  2) ವಿಧುರಾಶ್ವಥ ಘಟನೆ (1938 April 25)

ಮಿರ್ಜಾ ಇಸ್ಮಾಯಿಲ್‌ರವರು ಮೈಸೂರು ರಾಜ್ಯದ ಪರವಾಗಿ ಇಂಗ್ಲೇಂಡಿನಲ್ಲಿ ನಡೆದ 3 ದುಂಡುಮೇಜಿನ ಸಮ್ಮೇಳನಗಳಲ್ಲೂ ಭಾಗವಹಿಸಿದ್ದರು.

**(10) ದಿವಾನ್ ನ್ಯಾಪತಿ ಮಾಧವರಾವ್ (1941–46)**

- ಬೆಂಗಳೂರಿನಲ್ಲಿ **"ಸೆಂಚುರಿ ಕ್ಲಬ್"** ಸ್ಥಾಪಿಸಿದರು.

**(11) ದಿವಾನ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ (1946–47)**

- ಮೈಸೂರು ರಾಜ್ಯದ ಕೊನೆಯ ದಿವಾನರು 1949 ರಲ್ಲಿ ದಿವಾನ ಹುದ್ದೆ ರದ್ದಾಗುವವರೆಗೂ ಮೈಸೂರಿನ ದಿವಾನರಾಗಿದ್ದರು. ಆಗಸ್ಟ್ 15 1947 ರಂದು ಭಾರತ ಸ್ವತಂತ್ರವಾದಾಗ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ರಚನೆಗಾಗಿ ಆಂದೋಲನ ಆರಂಭವಾಯಿತು.
- K.C. ರೆಡ್ಡಿಯವರ ನೇತೃತ್ವದಲ್ಲಿ **'ಮೈಸೂರು ಚಲೋ ಚಳುವಳಿ"** ಆರಂಭವಾಯಿತು. ಅಂತಿಮವಾಗಿ 24 October 1947 ರಂದು ಜಯ ಚಾಮರಾಜೇಂದ್ರ ಒಡೆಯರು K.C. ರೆಡ್ಡಿ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ರಚಿಸಿದರು.

# ಘಟಕ–6

## ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ (1885–1956)

**ಕರ್ನಾಟಕ ಏಕೀಕರಣದ ಅನುಭವಗಳು**

**ಹಿನ್ನಲೆ:**

ವಿಜಯನಗರದ, ಸಾಮ್ರಾಜ್ಯದ ಪತನಾನಂತರ ಕರ್ನಾಟಕ ಒಡೆದ ಮಡಿಕೆಯಾಯಿತು! ಅದರ ಚೂರುಗಳು ದಕ್ಷಿಣ ಭಾರತದಲ್ಲಿ ಅಲ್ಲಿ–ಇಲ್ಲಿ ಚೆಲ್ಲಾಪಿಲ್ಲಿಯಾದವು. ಕನ್ನಡಿಗರ ಬದುಕು ಅತಂತ್ರವಾಯಿತು. ಬ್ರಿಟಿಷರ ಒಡೆದು ಆಳುವ ನೀತಿಯ ಪರಿಣಾಮವಾಗಿ ಕನ್ನಡಿಗರು ಒಟ್ಟಾಗಿ ಒಂದೆಡೆ ಸೇರಿದರೆ ತಮ್ಮ ವಿರುದ್ಧ ದಂಗೆ ಎದ್ದಾರೆಂಬ ಭೀತಿಯಿಂದ ಕರ್ನಾಟಕವನ್ನು ಈಗ ಕರೆಯಲಾಗುತ್ತಿರುವ ಆಂಧ್ರ, ತಮಿಳುನಾಡು, ಕೇರಳ, ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹಾದು ಹಂಚಿಕೊಟ್ಟರು. ಅದರ ಮೊದಲ ಚಿಂತಕರು ಧಾರವಾಡದ ಡೆಪ್ಯುಟಿ ಚೆನ್ನಬಸಪ್ಪನವರು. ಅವರೇ ಕರ್ನಾಟಕ ಏಕೀಕರಣದ ಮೊದಲ ಕೂಗು ಹಾಡಿದ ಮರಗೋಳಿ! 1856ರಲ್ಲಿ ಶ್ರೀಯುತರು ದಕ್ಷಿಣ ಭಾರತದಲ್ಲಿ ಹಾಕಿದ ಕೂಗು ಉತ್ತರ ಭಾರತದ ಕೆಲವು ಭಾಗಗಳಲ್ಲಿ ನಿದ್ದೆ ಕೆಡಸಿತು. ಆ ನಿದ್ದೆ ಮಂಪರಿನಲ್ಲೇ ಭಾಷಾವಾರು ಪ್ರಾಂತ ರಚನೆಯ ಕನಸು ಕಂಡ ರಾಜ್ಯಗಳೆಂದರೆ ಬಂಗಾಳ ಅಸ್ಸಾಂ (1874) ಒರಿಸ್ಸಾ (1876). ಆ ಸರಿಸುಮಾರಿನಲ್ಲಿ ಒರಿಯಾ (ಉತ್ಕಲ) ಭಾಷೆಯಲ್ಲಿ ಒಂದು ಹೊತ್ತಿಗೆ ಹೊರಬಂತು. ಬಹುಶಃ ಅದೇ ಮೊದಲ ಭಾಷಾವಾರು ಪ್ರಾಂತ— ನಾಂದಿ ಹಾಡಿತೆನ್ನಬಹುದು. ಭರದ ಖಂಡದಲ್ಲಿ ಅಂದಿನ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಬ್ರಹ್ಮದೇಶ ಅಥವಾ ಬಂಗಾಳವನ್ನು ವಿಭಜಿಸುವ ಆಜ್ಞೆ ಎಂಬ ಭಾವ ಉದ್ಭವಿಸಿತು. ಪರಿಣಾಮವಾಗಿ ಭಾರತ ಸ್ವಾತಂತ್ರ್ಯ ಹೋರಾಡ ಆರಂಭಗೊಂಡಿತು. ಭಾಷಾವಾರು ಪ್ರಾಂತ್ಯ ರಚನೆಯ ಚಳುವಳಿ ಹಾಗೂ ಭಾರತ ಸ್ವಾತಂತ್ರ್ಯ ಚಳುವಳಿಗಳು ಪರಸ್ಪರ ತೆಕ್ಕೆ ಬಿದ್ದವು. ಆ ವೇಳೆಯಲ್ಲಿ ಕರ್ನಾಟಕ ಏಕೀಕರಣ ಹೋರಾಟದ ಮುಂಚೂಣಿಯಲ್ಲಿ ಸಂತ ಸೇನಾನಿ ಎಂದರೆ ಕನ್ನಡ ಕಟ್ಟಾಭಿಮಾನಿ ಬ್ರಿಟಿಷ್ ಸರ್ಕಾರದ ತಕ್ಷಣ ಇಲಾಖೆಯಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರಾಗಿದ್ದ ಶ್ರೀ ಚೆನ್ನ ಬಸಪ್ಪನವರು. ಶ್ರೀಯುತರು 1857ರಲ್ಲಿ ಧಾರವಾಡ, ಬಿಜಾಪುರ, ಉತ್ತರಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಚಳುವಳಿ ಆರಂಭಿಸಿದರು. ಧಾರವಾಡವೇ ಇಂದಿನ ಚಳುವಳಿಯ ಕೇಂದ್ರ ಕಾರ್ಯಾಗಾರವಾಯಿತು. ಡೆಪ್ಯುಟಿಯವರ ಏಕೀಕರಣ ಚಳುವಳಿ ಯಶಸ್ವಿಯಾಗಿ ಸಾಗಿತು. 1890 ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಗೊಂಡ ಮೇಲೆ ಸಂಘಟನೆ ಬಲಗೊಮಡಿತು. 1903ರಲ್ಲಿ ಬೆನೆಗಲ್ ರಾಮರಾಯರು ಕರ್ನಾಟಕ ಏಕೀಕರಣ ಕುರಿತು ಧಾರವಾಡದಲ್ಲಿ ಭಾಷಣ ಮಾಡಿದರು. ಆಲೂರು ವೆಂಕಟರಾಯರು 1903 ರಲ್ಲಿ 'ವಾಗ್ಭೂಷಣ' ಪತ್ರಿಕೆಯಲ್ಲಿ ಏಕೀಕರಣದ ಅನಿವಾರ್ಯತೆ ಕುರಿತು ಒಂದು ಲೇಖನ ಬರೆದರು. 1915ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ ಚಳುವಳಿಗೆ ಬಲಬಂತು. 1917 ರಲ್ಲಿ ಕಡಪ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್, ಬೆನಗಲ್ ರಾಮರಾವ್, ಗವಿಗಯ್ಯ ಹೊನ್ನಾಪುರ ಮಠ, ಬೆನಗಲ್ ಶಿವರಾವ್, ಸಿದ್ಧಪ್ಪ ಕಂಬಳಿ, ಮಿರ್ಜಾ ಇಸ್ಮಾಯಿಲ್, ಬ.ಶಿವಮೂರ್ತಿ ಶಾಸ್ತ್ರೀ ಮೊದಲಾದ ಕನ್ನಡ ಸದ್ಭಕ್ತರ ಸಾಹಸ ಸಾಧನೆಯಿಂದ 'ಕರ್ನಾಟಕದ ಸಭೆ' ಸ್ಥಾಪನೆಯಾಯಿತು. 1917 ಭಾರತ ರಾಷ್ಟ್ರದಲ್ಲಿ ಕಾಂಗ್ರೆಸ್ ಅಧಿವೇಶನ ಎಲ್ಲೇ ನಡೆಯಲಿ, ಅಲ್ಲಿ ಕರ್ನಾಟಕದ ಏಕೀಕರಣ ಕಹಳೆ ಮೊಳಗುತ್ತಲೇ ಇತ್ತು. 1920ರಲ್ಲಿ ಮೈಸೂರಿನ ದಿವಾನ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ರಾಜಕೀಯ ಸಮ್ಮೇಳನವು ಕರ್ನಾಟಕ ಪ್ರಾಂತ್ಯರಚನೆಯ ನಿರ್ಣಯ ಕೈಗೊಂಡು. ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ನಿರ್ಣಯ ಅಂಗೀಕೃತವಾಯಿತು. 1923ರಲ್ಲಿ ಸಿದ್ಧಪ್ಪ ಕಂಬಳಿಯವರು ಮುಂಬಯಿ ಶಾಸನ ಸಭೆಯಲ್ಲಿ ಕರ್ನಾಟಕ ಏಕೀಕರಣಕ್ಕೆ ಸಮರ್ಥನೆ ನೀಡಿದರು. 1924ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ನಾಗಪುರ ಸಮ್ಮೇಳನದ ನಿರ್ಣಯವನ್ನು ಸ್ವೀಕರಿಸಲಾಯಿತು. ಅನಂತರ ಲಖನೌದಲ್ಲಿ ನಡೆದ ಸಕಲ ಪಕ್ಷಗಳ ಸಮ್ಮೇಳನವು ಕರ್ನಾಟಕದ ಏಕೀಕರಣದ ಪ್ರಸ್ತಾಪವನ್ನು ಮಂಡಿಸಿ, ಸಭೆಯ ಒಪ್ಪಿಗೆ ಪಡೆಯಿತು. 1928–29ರಲ್ಲಿ ಸೈಮನ್ ಕಮೀಷನ್‌ನ ಮುಂದೆಯೂ ಈ — ಬಂದು ಅಂಗೀಕೃತವಾದದ್ದಲ್ಲದೆ, ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳ ವಿಂಗಡಣೆ ಆಗಬೇಕೆಂಬ ಅದರ ಸಲಹೆ ಸಮ್ಮತಿ ಪಡೆಯಿತು.

ಬಿ.ಎಂ.ಶ್ರೀ, ಬೇಂದ್ರ, ಗೋವಿಂದ ಪೈ, ಕುವೆಂಪು, ಮೊದಲಾದ ಕನ್ನಡದ ಹಿರಿಯ ಕವಿಗಳು 'ಸ್ವತಂತ್ರ ಕರ್ನಾಟಕ', 'ಸಂಯುಕ್ತ ಕರ್ನಾಟಕ ಮೊದಲಾದ ಕನ್ನಡ ದಿನ ಪತ್ರಿಕೆಗಳಲ್ಲಿ ಏಕೀಕರಣದ ಮಹತ್ವ ಕುರಿತು ಪ್ರೇರಕ —— ಕವನ, ಲೇಖನಗಳನ್ನು ಬರೆಯತೊಡಗಿದರು. 1949 ಡಿಸೆಂಬರ್ 8 ರಂದು ದಾವಣಗೆರೆಯಲ್ಲಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಮತ್ತು ಕರ್ನಾಟಕ ಏಕೀಕರಣ ಸಭೆ ಇವುಗಳ ಸಂಯುಕ್ತಾಶ್ರಯದಲ್ಲಿ ನಡೆದ ಅಖಿಲ ಕರ್ನಾಟಕ ಮಹಾ ಸಮ್ಮೇಳನವು ಕನ್ನಡ ಬಾಷೆ, ಕನ್ನಡ ಸಂಸ್ಕೃತಿ, ಕನ್ನಡ ನಾಡಿನ ಭೌಗೋಳಿಕ ವಲಯ ಇವುಗಳನ್ನಾಧರಿಸಿ ಪ್ರಾಂತ್ಯ ರಚನೆಯಾಗಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಿತು.

ಆದರೆ ಒಡೆಯರ ಮನೆತನದ ಆಳ್ವಿಕೆಗೆ ಒಳಪಟ್ಟಿದ್ದ ಹಳೆಯ ಮೈಸೂರು ಮತ್ತು ಬ್ರಿಟಿಷ್ ಪ್ರಾಂತ್ಯಗಳಿಗೆ ಸೇರಿದ್ದ ಮೈಸೂರೇ ಕನ್ನಡ ಭಾಗಗಳ ನಡುವೆ ಹೊಂದಾಣಿಕೆ ಕಷ್ಟಸಾಧ್ಯವಾದುದೆಂದು ಆಲೋಚಿಸಿ ಎರಡು ಕರ್ನಾಟಕಗಳ ಸಲಹೆ ತಲೆದೂರಿತು. ಆದರೆ 1948 ಜೂನ್, 1948 17 ರಂದು ಅಸ್ತಿತ್ವಕ್ಕೆ ಬಂದ ಥಾರ್ ಕಮೀಷನ್ 'ಒಕ್ಕೂಟ ಒಳೆಯದೆಂದು' ಅಭಿಪ್ರಾಯಪಟ್ಟಿತು. ಆದರೆ ಆ ಸಲಹೆ ನಿರ್ಣಯಕ್ಕೆ ನಿಲುಕಲಿಲ್ಲ. ಮೈಸೂರನ್ನೊಳಗೊಂಡ ಕರ್ನಾಟಕ ರಾಜ್ಯ ಸ್ಥಾಪನೆಯಾಗಬೇಕು, ಮೈಸೂರು ಅರಸರೇ ರಾಜ್ಯಪಾಲರಾಗಬೇಕು ಎಂದು ಬೆಂಗಳೂರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಮತ್ತು ಕರ್ನಾಟಕ ಏಕೀಕರಣ ಸಮ್ಮೇಳನಗಳು ನಿರ್ಣಯಿಸಿದವು. 1951 ರಲ್ಲಿ ಬೆಂಗಳೂರಿಗೆ ಆಗಮಿಸಿದ್ದ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರ ಮುಂದೆ ಬಿ. ಶಿವಮೂರ್ತಿ ಶಾಸ್ತ್ರೀಯವರ ನೇತೃತ್ವದ ನಿಯೋಗವೊಂದು ಮೇಲಿನ ನಿರ್ಣಯವನ್ನು ಸಮರ್ಪಿಸಿದ್ದು ಉಂಟು.

ಆದರೆ ಯಾವುದೂ ಫಲಕಾರಿಯಾಗಲಿಲ್ಲ.

**ನಡುನೆಲೆ :**

1953 ಡಿಸೆಂಬರ್ 29ರಂದು ಫಜಲ್ ಆಲಿ ಸಮಿತಿ ಅಸ್ತಿತ್ವಕ್ಕೆ ಬಂತು. ಫಜಲ್ ಅಲಿ ಅಧ್ಯಕ್ಷರು ಎಚ್.ಎನ್. ಕುಂಜ್ರು, ಕೆ.ಎಂ.ಫಣಿಕ್ಕರ್ ಅದರ ಸದಸ್ಯರು. ಈ ಸಮಿತಿಯು ಭಾರತದಾದ್ಯಂತ ಕಾಡ್ಗಿಚ್ಚು ಜನಾಭಿಪ್ರಾಯ ತೆಗೆದುಕೊಂಡು, ಇಡೀ ಭಾರತ ರಾಷ್ಟ್ರವನ್ನು ಭಾಷಾವಾರು ಆಧಾರದ ಮೇಲೆ 15 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಕ್ಷೇತ್ರಗಳನ್ನು ರಚಿಸಲು ಶಿಫಾರಸ್ಸು ಮಾಡಿತು. ಹಾಗೆ ರೂಪುಗೊಂಡ 15 ಭಾಷಾಧಾರಿತ ರಾಜ್ಯಗಳಲ್ಲಿ ಕರ್ನಾಟಕವೂ ಒಂದು

ಫಜಲ್ ಅಲಿ ಸಮಿತಿಯ ಶಿಫಾರಸ್ಸಿನಂತೆ ಅಂದಿನ ಮೈಸೂರು ರಾಜ್ಯದಲ್ಲಿ ಸೇರಿದ ಭಾಗಗಳು ಈ ರೀತಿ ಇವೆ.

1. ಹಳೇ ಮೈಸೂರಿನ ಒಂಬತ್ತು ಜಿಲ್ಲೆಗಳು – 9
2. ಮುಂಬಯಿ ರಾಜ್ಯದ (ಚಾಂದಗಡ್ ತಾಲ್ಲೂಕು ಬಿಟ್ಟು) ಬೆಳಗಾವಿ ಜಿಲ್ಲೆ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು.
3. ಹೈದರಾಬಾದ್ ರಾಜ್ಯದ ಗುಲ್ಬರ್ಗ ಜಿಲ್ಲೆ (ಕೋಡಂಗಲ್, ತಾಂಡೂರು ತಾಲ್ಲೂಕುಗಳನ್ನು ಬಿಟ್ಟು) ರಾಯಚೂರು ಜಿಲ್ಲೆ (ಆಲಂಪುರ, ಗದ್ವಾಲ್ ತಾಲ್ಲೂಕುಗಳನ್ನು ಬಿಟ್ಟು) ಮತ್ತು ಬೀದರ್ ಜಿಲ್ಲೆಯ ಬಿದರೆ, ಬಾಲ್ಕಿ, ಸಂತಪುರ, ಹುಮ್ನಾಬಾದ್ ತಾಲ್ಲೂಕುಗಳು.
4. ಮದರಾಸು (ಈಗಿನ ಚೆನ್ನೈ) ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೂಡು ತಾಲ್ಲೂಕು ಮತ್ತು ಅಮೀನ್ ದೀವಿ ದ್ವೀಪಗಳನ್ನು ಬಿಟ್ಟು) ಕೊಯವತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು
5. ಕೊಡಗು – ಭಾರತ ಸರ್ಕಾರವು ಫಜಲ್ ಸಮಿತಿಯ ಸಲಹೆ ಶಿಫಾರಸ್ಸುಗಳನ್ನು ಚಾಚು ತಪ್ಪದೆ, ಪ್ರದೇಶಗಳ ವರ್ಗಾವಣೆಗೆ ಕೈಹಾಕದೆ, ರಾಜ್ಯದ ಹೆಸರಿನ ಬಗೆಗೆ ವಿವಾದಕ್ಕೆ ಎಡೆಗೊಡದೆ, ಸಮಿತಿಯ ಸಲಹೆಯಂತೆ (ವಿಶಾಲ) 'ಮೈಸೂರು ರಾಜ್ಯ' ವೆಂದೇ ಕರೆದು, ಮಸೂದೆಯನ್ನು ಅಂಗೀಕರಿಸಿತು. ಅದೇ ಆಗಸ್ಟ್ 21ರಂದು ರಾಷ್ಟ್ರಪತಿಯವರ ಸಹಿ ಪಡೆದು, ಅಂದಿನಿಂದಲೇ ಅದು ಕಾಯಿದೆಯಾಯಿತು. 1956 ನವೆಂಬರ್ 1 ರಂದು ಹೊಸರಾಜ್ಯ ಉದಯವಾಯಿತು.

ಅಂದಿನಿಂದ ಇಂದಿನವರೆಗೂ, ಇನ್ನು ಮುಂದೆಯೂ ನವೆಂಬರ್ ತಿಂಗಳು 'ಕನ್ನಡ ರಾಜ್ಯೋತ್ಸವ' ಮಾಸವೆಂಬ ಖ್ಯಾತಿ ಪಡೆದು, ಕನ್ನಡ ನಾಡಿನ ಕನ್ನಡ ಅದ್ದೂರಿಯಿಂದ ಮೆರೆಯುತ್ತಾರೆ. ಆದರೆ ಅಷ್ಟೇ ಪ್ರಮಾಣದಲ್ಲಿ ಕಾಸರಗೋಡು, ನೀಲಗಿರಿ, ಹೊಸೂರು, ತಾಳವಾಡಿ, ಮಡಕಶಿರ, ಆಲೂರು, ಆದವಾನಿ, ರಾಯದುರ್ಗ, ದೇಗಲೂರು, ಸೊಲ್ಲಾಪುರ, ಜತ್, ಅಕ್ಕಲಕೋಟಿ, ಗಡಿ ಹಿಂಗ್ಲಜ ಭಾಗಗಳು ಮಲತಾಯಿ ಮಕ್ಕಳಾಗಿ ಪ್ರತಿದಿನವೂ ಕಣ್ಣೀರು ಕಡೆಯತ್ತಾರೆ.

ಇದರ ಹಿಂದೆ ಕನ್ನಡಗರಲ್ಲಿ ಅತೃಪ್ತಿ ಇದೆ. ಸಂಕಟ ಇದೆ. ಕನ್ನಡಿಗರು ಪಡೆದುಕೊಂಡದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು. ಕೆಟ್ಟ ರಾಜಕೀಯದಿಂದಾಗಿ ಸೆರೆ ರಕ್ತವನ್ನು ಹಂಚಿಕೊಂಡು ಹುಟ್ಟಿದ ಸೋದರರು ಪರಕೀಯರಾಗಿ ಅನಾಥರಾಗಿ ಬದುಕು ನೂಕಬೇಕಾಗಿದೆ. ಪಣಿಕ್ಕರ್ ಪ್ರಭಾವದಿಂದ ಕಾಸರಗೋಡು ಕರ್ನಾಟಕಕ್ಕೆ ಸೇರಲಿಲ್ಲ. ರಾಷ್ಟ್ರಕವಿ ಗೋವಿಂದ ಪೈ ಯವರ ತಪೋಭೂಮಿ ಮಂಜೇಶ್ವರವೂ, ಮಲೆಯಾಳಿಗಳ ವಶವಾಯಿತು. 'ಶೂನ—ಸಂಪಾದನ'ಕಾರ ಸಿದ್ಧಲಿಂಗ ಶಿವಯೋಗಿಯ ಗುಮ್ಮಳಾಪುರವನ್ನು ತಮಿಳುನಾಡು ಗುಳುಂ ಮಾಡಿತು. ಬೆಂಗಳೂರು ಬದಿಯ ಹೊಸೂರು ಕನ್ನಡ ನಾಡಿನ ಗಡಿಯೊಡೆಇಯ 'ತನುವಿಪ್ರಂ' ಆಯಿತು. ಅತ್ತ ಕರ್ನಾಟಕಕ್ಕೂ ಸೇರಿದ ಪಾವಗಡ, ಮಡಕಶಿರ, ಇಂದಿಗೂ ಕನ್ನಡಿಗರೇ ತುಂಬಿ ತುಳುಕುತ್ತಿದೆ. ಆಲೂರು, ಆದವಾನಿ, ರಾಯದುರ್ಗ, ಹಿಂದೂಪುರ, ಪೆನುಗೊಂಡ, ಅನಂತಪುರಗಳನ್ನು ಆಂಧ್ರ ಕಬಳಿಸಿತು. 13ನೆಯ ಶತಮಾನದ ಶ್ರೇಷ್ಠ ವಚನಕಾರ ಸಿದ್ಧರಾಮನ ಯೋಗಭೂಮಿ ಸೊನ್ನಲಿಗೆ (ಇಂದಿನ ಸೊಲ್ಲಾಪುರ) ಜತ್, ಅಕ್ಕಲಕೋಟಿ, ದೇಗಲೂರು ಮೊದಲಾದವುಗಳನ್ನು ಮಹಾರಾಷ್ಟ್ರ ಸ್ವಾಹಾ ಮಾಡಿತು. ಒಟ್ಟಿನಲ್ಲಿ ಕನ್ನಡಿಗರ ಬಹುದಿನಗಳ ಕನಸಿನ ಕರ್ನಾಟಕ ಖಂಡ ತುಂಡಗಿ, ಹೆಸರಿಗೆ ಮಾತ್ರ ಅಖಂಡ ಕರ್ನಾಟಕವೆಂದು ಕರೆಸಿಕೊಂಡಿತು.

ಬಳ್ಳಾರಿಯ ಹಗರಣ ಬರೆಯ ಹೋದರೆ ಪೆನ್ನಿನ ಮಸಿ ಮಾಗಿದರೂ ಅದರ ಹೋರಾಟದ ಕಥೆ ಮುಗಿಯುವುದಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿದ್ದ ತುಂಗಭದ್ರಾ ಅಣೆಕಟ್ಟಿನಿಂದ ಆಂಧ್ರಕ್ಕೆ ಹೆಚ್ಚು ಪ್ರಯೋಜನ ಆಗಿವುದರಿಂದ ಹೊಸ ಪೇಟೆವರೆಗಿನ ಭೂಭಾಗವೆಲ್ಲಾ ಆಂಧ್ರಕ್ಕೆ ಸೇರಬೇಕೆಂದು ಫಜಲ್ ಆಲಿ ಸಮಿತಿಯ ಮೊದಲ ಶಿಫಾರಸ್ಸನ್ನು ಪ್ರತಿಭಟಿಸಿ ಬಳ್ಳಾರಿಯ ಕೋ.ಚೆನ್ನಬಸಪ್ಪ, ಗುತ್ತಿಯಲ್ಲಿದ್ದ ಜಿಲ್ಲಾ ಮುನ್ಸಿಫ್ ಟಿ.ಹೆಚ್.ಎಂ, ಸದಾಶಿವಯ್ಯ, ಸಿ.ಕೆ.ನಾಗರಾಜರಾವ್, ಕೆ.ಆರ್. ಕಾರಂತ, ಜಿನರಾಜ ಹೆಗ್ಡೆ, ಮಂಗಳವೀಡು ಶ್ರೀನಿವಾಸರಾವ್, ಅನಕೃ, ಮಾಸ್ತಿ, ಜೆ.ಶಿವಲಿಂಗಪ್ಪ, ಅಂದಾನಪ್ಪ ದೊಡ್ಡಮೇಟಿ, ದತ್ತಾತ್ರೇಯ ಗೌಡ ಮೊದಲಾದ ಮುಖಂಡರು ಹೋರಾಟದ ಕಣಕ್ಕಿಳಿದರು. ಎಸ್.ನಿಜಲಿಂಗಪ್ಪನವರು ಮತ್ತು ಕುವೆಂಪುರವರ ಮಾರ್ಗದರ್ಶನದಲ್ಲಿ ಚಳವಳಿ ಆರಂಭಿಸಿದರು. ಟಿ.ಹೆಚ್.ಎಂ. ಸದಾಶಿವಯ್ಯನವರು ಬಳ್ಳಾರಿ ಜಿಲ್ಲೆಯ ಒಂಬತ್ತು ತಾಲ್ಲೂಕುಗಳು, ಅನಂತರಪುರ ಜಿಲ್ಲೆಯ (ಐದು ತಾಲ್ಲೂಕುಗಳ) ಕರ್ನಾಟಕ ಜಿಲ್ಲೆಯ ಎರಡು ತಾಲ್ಲೂಕುಗಳು ಶುದ್ಧ ಕನ್ನಡದ ನೆಲೆಗಳು. ಇವುಗಳನ್ನು ಯಾವುದೇ ಕಾರಣಕ್ಕೂ ಬಿಟ್ಟು ಕೊಡಬಾರದೆಂದು ಕೋಟೆ ಯವರಿಗೆ ಪತ್ರ ಮುಖೇನ ತಿಳಿಸಿ, ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲ ಸೂಚಿಸಿದರು ಮತ್ತೆ 'ಕಾಂಗ್ರೆಸ್ ಮುಖಾಂತರ ಒಲವು ತೆಲುಗರ ಕಡೆಸೇನೆ ಹೆಚ್ಚಾಗಿದೆ. ಕನ್ನಡ ಕಾಂಗ್ರೆಸ್ ಮುಖಂಡರು ಕನ್ನಡದ ಬಗ್ಗೆ ತುಂಬಾ ಉದಾಸೀನ ಮನೋಭಾವ ತಳೆದವರಿದ್ದಾರೆ. ಬಳ್ಳಾರಿ ಜಿಲ್ಲೆಯನ್ನು ಹೇಗಾದರೂ ಮಾಡಿ ಇಟ್ಟಾಗ ಮಾಡಲಿಕ್ಕೇ ಬೇಕೆಂದು ಪ್ರಯತ್ನವು ಬಹಳ ಜೋರಿನಿಂದ ನಡೆಯುತ್ತದೆ. ಈ ವಿಷಮ ಪರಿಸ್ಥಿತಿಯಲ್ಲಿ ಬಳ್ಳಾರಿ ಜಿಲ್ಲೆಯ ಜನ ಎಚ್ಚೆತ್ತುಕೊಳ್ಳದೆ ಹೋದರೆ ಇಡೀ ಜಿಲ್ಲೆಯ ಕನ್ನಡಕ್ಕೆ ಎರವಾಗುವುದು ನಿಶ್ಚಯ – (ಕೋ.ಚೆ ಯಾರು? ಏನು? ಎಂದು' ಪುಟ (193–163) ಎಂದು 11–11–1947 ರಲ್ಲೇ ಕೋ.ಚೆ.ಯವರಿಗೆ ಬರೆದ ಪತ್ರದಲ್ಲಿ ತಿಳಿಸಿ ಎಚ್ಚರಿಸಿದರು.

ಈ ಎಲ್ಲ ಮಹನೀಯರ ಎಲ್ಲ ಪ್ರಯತ್ನಗಳೂ ವ್ಯರ್ಥವಾದವು. ಕಾಸರಗೋಡಿನ ಕನ್ನಡಿಗರ ಕಣ್ಣೀರು ಬತ್ತಲಿಲ್ಲ; ಮಹಾರಾಷ್ಟ್ರದ ಕನ್ನಡಿಗರ ಸಂಕಟ ಮುಕ್ತಾಯ ಕಾಣಲಿಲ್ಲ, ತಮಿಳು ಮತ್ತು ಕೇರಳಗಳಲ್ಲಿನ ಕನ್ನಡಿಗರ ಆಗುತ್ತಿರುವ ದಿನನಿತ್ಯದ ಹಿಂಸೆ ನಿಲ್ಲಲಿಲ್ಲ. ಈ ಸೋದರರ ಗೋಳಿನ

ಕಣ್ಣೀರಿನಲ್ಲಿ ಕರ್ನಾಟಕದವರೇ ಆದ ಕನ್ನಡಿಗರು ಕೈ ತೊಳೆಯುತ್ತಿರುವುದು ತಪ್ಪಿಲ್ಲ! ಇಂದು ಕೇರಳಕ್ಕೆ ಸೇರಿ ಹೋಗಿರುವ ಕಾಸರಗೋಡು, ಮಂಜೇಶ್ವರ ಮೊದಲಾದ ಭಾಗಗಳು ಕನಿಷ್ಠಪಕ್ಷ ಪಯಸ್ವಿನೀ ನದಿಯ ಗಡಿಯಾಗಿ ಇತ್ತ ಕಡೆಯ ಭಾಗ ಕರ್ನಾಟಕಕ್ಕೆ ಸೇರಿದ್ದರೆ ಎಷ್ಟೋ ಸಮಾಧಾನವಾಗುತ್ತಿತ್ತು. ಅದೂ ಫಲಕಾರಿಯಾಗದೆ ನಿರಾಶೆಯ ನೆರಳಲ್ಲಿ ಕನವರಿಸುವಂತಾಯಿತು.

ಹಿನ್ನಲೆ:

ಕನ್ನಡಿಗರ ಈ ಎಲ್ಲಿ ನೋವುಗಳಿಗೂ ಅಲ್ಪ ಪರಿಹಾರದ ಒಂದು ಆಶಾಕಿರಣ 1976ರಲ್ಲಿ ಮಹಾಜನ್ ಆಯೋಗದ ರೂಪದಲ್ಲಿ ಮೂಡಿತು. ಮಹಾರಾಷ್ಟ್ರ–ಮೈಸೂರು ಗಡಿವಿವಾದದನ್ನು ಪುನರ್ಮಿಮರ್ಶಿಸಿ ಇತ್ಯರ್ಥಪಡಿಸಲು ನೇಮಕವಾಗಿದ್ದ ಆ ಆಯೋಗವು ಅಕ್ಕಲಕೋಟೆ, ಜತ್ ಮತ್ತು ಕಾಸರಗೋಡುಗಳ ಮೈಸೂರು ರಾಜ್ಯಕ್ಕೂ, ನಿಪ್ಪಾಣಿ, ಖಾನಾಪುರ, ಹಳಿಯಾಳ ಮೊದಲಾದವು ಮಹಾರಾಷ್ಟ್ರಕ್ಕೂ ಸೇರಬೇಕೆಂದೂ ಬೆಳಗಾವಿ ಮೈಸೂರಿನಲ್ಲೇ ಉಳಿಯಬೇಕೆಂದೂ ತೀರ್ಪು ನೀಡಿತು. ಆದರೆ ಆ ತೀರ್ಪು ಇನ್ನು ಕಾರ್ಯಗತ ಆಗಿಲ್ಲ. ಆಗಿದಿರುವುದು ತುಂಬು ವಿಪರ್ಯಾಸ

ಮನಸ್ಸಿನ ಗಾಯ ಮೊಯಿಸಲು ಕಾಲ ಒಂದು ಒಳ್ಳೆಯ ಮುಲಾಮು ಎನ್ನುತ್ತಾನೆ ಷೇಕ್ಸ್‌ಫಿಯರ್. ಅದು ಸತ್ಯ ಕಾಲಗತಿಯಲ್ಲಿ ಎಲ್ಲದೂ ಕೊಚ್ಚಿಹೋದಂತೆ, ನೋವಿನಲ್ಲೇ ನಲಿವು ಕಾಣುತ್ತಾ ಗಡಿನಾಡ ಕನ್ನಡಿಗರೂ ಗತಕಾಲದ ಕನ್ನಡಿಗರೆನಿಸಿಕೊಂಡು ಬಾಳುವುದು ನಿಜಕ್ಕೂ ಒಂದು ದೊಡ್ಡ ದುರಂತ

(ಡಾ॥ಸಾ.ಶಿ.ಮರುಳಯ್ಯ)

**ಆಕರ ಗ್ರಂಥಗಳು**


1. ಕರ್ನಾಟಕ : ಕನ್ನಡ ವಿಷಯ ವಸ್ತುಕೋಶ ಕನ್ನಡ ಅಧ್ಯಯನ ಸಂಸ್ಥೆ – ಮೈಸೂರು ವಿಶ್ವವಿದ್ಯಾಲಯ : 1979
2. ಕೋಟೆ – ಯಾರು? ಏನು? ಎಂತು? (ಸಂಭಾವನಾ ಗ್ರಂಥ) 1988
3. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನ ಪ್ರವಾಸಾನುಭವಗಳು (ಲೇಖನ) – ಡಾ॥ಸಾ.ಶಿ.ಮರುಳಯ್ಯ, 1999
4. ಅವಲೋಕನ : ಕರ್ನಾಟಕ ಪರಂಪರೆಯ ಸಮೀಕ್ಷೆ. (ಸಂ) ಹೆಚ್ಚೆಸ್ಕೆ, ಮೊದಲ ವಿಶ್ವ ಕನ್ನಡ ಸಮ್ಮೇಳನದ ಸ್ಮೃತಿ ಸಂಪುಟ 1985.


ಕರ್ನಾಟಕ ಏಕೀಕರಣ

ಹಿನ್ನಲೆ:

- ಪೊಟ್ಟಿ ಶ್ರೀರಾಮುಲು
- ಆಂಧ್ರ ಪ್ರದೇಶದ ರಚನೆ

- ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಏಕೀಕರಣ

ಐಕ್ಯತೆಗೆ ಕಾರಣವಾದ ಪ್ರಮುಖ ಅಂಶಗಳು

- ವೃತ್ತ ಪತ್ರಿಕೆಗಳು
- ಸಾಹಿತ್ಯ
- ಸಂಘ–ಸಂಸ್ಥೆಗಳು
- ನಾಯಕರ ಪ್ರಯತ್ನಗಳು

- ಆಲೂರು ವೆಂಕಟರಾಯರು
- ಡೆಪ್ಯೂಟಿ ಚೆನ್ನಬಸಪ್ಪ
- ಸಿದ್ದಪ್ಪ ಕಂಬ್ಳಿ
- ಕೆಂಗಲ್ ಹನುಮಂತಯ್ಯ
- ಎಸ್.ನಿಜಲಿಂಗಪ್ಪ

ಏಕೀಕರಣದ ಪ್ರಮುಖ ಹಂತಗಳು

- ಥಾರ್ ಸಮಿತಿ
- ಜೆ.ವಿ.ಪಿ. ಸಮಿತಿ
- ಫಜಲ್ ಆಲಿ ಸಮಿತಿ
- 1 ನವೆಂಬರ್ 1956 ಮೈಸೂರು ರಾಜ್ಯ
- 1 ನವೆಂಬರ್ 1973 ಕರ್ನಾಟಕ ಎಂದು ಮರು ನಾಮಕರಣ

1. ಡೆಪ್ಯೂಟಿ ಚೆನ್ನಬಸಪ್ಪನವರ ಪರಿಶ್ರಮ:

ಕನ್ನಡದ ಅಸ್ತಿತ್ವಕ್ಕಾಗಿ ಹಗಲಿರುಳು ಅವಿಶ್ರಾಂತ ಶ್ರಮಿಸಿದ ಪ್ರಮುಖ ಮಹನೀಯರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಒಬ್ಬರು.

ಧಾರವಾಡದಲ್ಲಿ ಜನಿಸಿ ಬಹುಕಾಲ ದಕ್ಷ ಡೆಪ್ಯೂಟಿ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಬಾಂಬೆ ಕರ್ನಾಟಕದಲ್ಲಿ ಮರಾಠಿ ಶಿಕ್ಷಣ ಮಾಧ್ಯಮದ ಬಗ್ಗೆ ಕಿಡಿಕಾರದ ಚೆನ್ನಬಸಪ್ಪನವರು ಅನೇಕ ಕನ್ನಡ ಶಾಲೆಗಳನ್ನು ಅಲ್ಲಿ ತೆರೆದರು.

"ನಮ್ಮ ಭಾಷೆಯಿಂದಲೇ ನಮ್ಮ ಬೆಳವಣಿಗೆ ಸಾಧ್ಯ" ಎಂಬುದನ್ನು ಗ್ರಹಿಸಿದ ಅವರು ಅದರ ಊಚಿತತೆಗೆ ಸರ್ಕಾರದೊಡನೆ ವ್ಯವಹರಿಸಿ ಹಲವಾರು ಕಾಯಕ್ರಮಗಳನ್ನು ಹಮ್ಮಿಕೊಳ್ಳಲಾರಂಭಿಸಿದರು. ಶಿಕ್ಷಣ ಮಾತೃಭಾಷೆಯಲ್ಲಿಯೇ ನಡೆಯಬೇಕೆಂದು ನಿರ್ಧರಿಸಿ ತಾವೇ ಒಂದು ಕನ್ನಡ ಶಾಲೆಯನ್ನು ತೆರೆದರು. ಕನ್ನಡದಲ್ಲಿ ಅಧ್ಯಪಕರ ತರಬೇತಿ, ಕನ್ನಡ ಶಾಲೆಗಳ ಸ್ಥಾಪನೆ. ಕಿಟೆಲ್‌ರವರ ಕನ್ನಡ ನಿಘಂಟು ತಯಾರಿ ಮೊದಲಾದ ಕಾರ್ಯಗಳಿಗೆ ಕಾರಣೀಭೂತರಾದರು. ಇವೆಲ್ಲದರ ಜೊತೆಗೆ ಇಲಾಖೆಯ ಆಡಳಿತ ಪತ್ರ ವ್ಯವಹಾರದಲ್ಲಿ ಕನ್ನಡ ಬಳಸುವಂತೆ ಸೂಕ್ತ ಕ್ರಮ ಕೈಗೊಂಡರು. ಈ ಹಿಂದೆ ಸ್ಥಾಪಿತವಾಗಿದ್ದ "ನಾರ್ಮಲ್ ಸ್ಕೂಲ್" ಅನ್ನು "ಕನ್ನಡ ಶಿಕ್ಷಕರ ತರಬೇತಿ ಕಾಲೇಜು" ಆಗಿ ಪರಿವರ್ತಿಸಿದರು.

ಹೀಗೆ ಕನ್ನಡದ ಏಳಿಗೆಗೆ ಸುಮಾರು 5 ವರ್ಷಗಳ ಕಾಲ ಡೆಪ್ಯೂಟಿ ವಿದ್ಯಾಧಿಕಾರಿಯಾಗಿ ಅವಿರತ ಶ್ರಮಿಸಿದ ಫಲವಾಗಿ ಹಾಗೂ ಅವರು ಬೆಳಗಿಸಿದ ಕನ್ನಡದ ಆ ದಿವ್ಯ ಜ್ಯೋತಿಯ ಫಲವಾಗಿಯೇ ಆ ಪ್ರದೇಶಗಳು ಕರ್ನಾಟಕದಲ್ಲಿ ಉಳಯುವಂತಾಗಿ ಮಹಾರಾಷ್ಟ್ರೀಯರ ಅಧೀನದಲ್ಲಿ ಉಳಿಬೇಕಾಗಿದ್ದ ದಾರುಣ ಪರಿಸ್ಥಿತಿ ತಪ್ಪಿತು.

2. ಕರ್ನಾಟಕ ವಿದ್ಯಾವರ್ಧಕ ಸಂಘ

1890ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡದಲ್ಲಿ ಪ್ರಾರಂಭವಾದುದು ಒಂದು ಮಹತ್ವಪೂರ್ಣ ಮೈಲಿಗಲ್ಲೆನ್ನಬಹುದು. ಕನ್ನಡ ಭಾಷೆ ಮತ್ತು ಕಲೆಯ ಅಭಿವೃದ್ಧಿ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಈ ಸಂಸ್ಥೆಯ ಹೋರಾಟದ ಪಾತ್ರ ಪ್ರಮುಖವಾದುದು.

ಕರ್ನಾಟಕದ ಸಮಗ್ರತೆಯನ್ನು ಕಾಪಾಡಿ ಅದರ ಅಖಂಡತೆಗೆ 'ರಾ.ಹ.ದೇಶಪಾಂಡೆ'ಯವರು ಈ ಸಂಘವನ್ನು ಸ್ಥಾಪಿಸಿದರೆ. ಇದರ ಕ್ರಿಯಾಶೀಲ ಸದಸ್ಯರಾದ 'ಬೆನಗಲ್ ರಾಮರಾಯರು'. 'ಕೆ.ಶ್ಯಾಮರಾಯರು', ಹಾಗೂ 'ಆಲೂರು ವೆಂಕಟರಾಯರು' ಕರ್ನಾಟಕದ ಏಕೀಕರಣ ಕಹಳೆಯನ್ನು ಊದಿದರು.

ಕನ್ನಡ ಸಾಹಿತ್ಯ ಸಂಸ್ಕೃತಿಯ ರಕ್ಷಣೆ. ಕನ್ನಡದಲ್ಲಿ ಗ್ರಂಥ ರಚನೆಗೆ ಪ್ರೋತ್ಸಾಹ, ಪುಸ್ತಕಗಳ ಅನುವಾದ (ಹಾಗೂ) ಕನ್ನಡಿಗರ ಐಕ್ಯತೆ – ಇವು ಇದರ ಉದ್ದೇಶಗಳಾಗಿದ್ದವು.

"ವಾಗ್ಭೂಷಣ" ಮತ್ತು "ಸುವಾಸಿನಿ" ಎಂಬ ಪತ್ರಿಕೆಯನ್ನು ಹೊರಡಿಸಿ; ಕನ್ನಡ ನಾಡು, ನುಡಿ ಕುರಿತು ಲೇಖನ ಹಾಗೂ ಸಂಪಾದಕೀಯವನ್ನು ಬರೆಯಲಾಯಿತು.

ಇದು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸಲು ಶ್ರಮಿಸಿತು, (ಹಾಗೂ) ಕನ್ನಡ ಮಾತನಾಡುವ ಪ್ರದೇಶಗಳ ಒಂದು ಪ್ರಾಂತ್ಯ ರಚನೆಗೆ ಆಗ್ರಹಿಸಿತು. ಈ ಸಂಸ್ಥೆಯು ಮುಂದೆ ಧಾರವಾಡದ ಏಕೀಕರಣದ ಎಲ್ಲಾ ಚಟುವಟಿಕೆಗಳ ಕೇಂದ್ರವಾಯಿತು.

3. ಸಂಘ–ಸಂಸ್ಥೆಗಳ ಪಾತ್ರ:

ಕನ್ನಡಿಗರಲ್ಲಿ ಕನ್ನಡಾಭಿಮಾನವನ್ನು ಮೂಡಿಸಿ ಅವರನ್ನು ಏಕೀಕರಣಕ್ಕೆ ಅಣಿಗೊಳಿಸಲು ಹಲವು ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಅವು ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಲು ಶ್ರಮಿಸಿದವು. ಕನ್ನಡ ಮಾತನಾಡುವ ಪ್ರದೇಶಗಳ ಐಕ್ಯತೆಗೆ ಶ್ರಮಿಸಿತು. ಕನ್ನಡಗರಿಗೆ ಪ್ರತ್ಯೇಕ ರಾಜ್ಯ ರಚಿಸುವುದು ಇವುಗಳ ಗುರಿಯಾಗಿತ್ತು.

ಕರ್ನಾಟಕ ವಿದ್ಯಾವರ್ಧಕ ಸಂಘ

- ಸ್ಥಾಪನೆ – 1890
- ಸ್ಥಳ – ಧಾರವಾಡ
- ಸ್ಥಾಪಕರು – ರಾ.ಹ.ದೇಶಪಾಂಡೆ

ಕನ್ನಡ ಸಾಹಿತ್ಯ ಪರಿಷತ್ತು

- ಸ್ಥಾಪನೆ – 1915
- ಸ್ಥಳ – ಬೆಂಗಳೂರು
- ಪೋಷಕರು – ಮೈಸೂರು ಮಹಾರಾಜರು ವಿಶ್ವೇಶ್ವರಯ್ಯನವರು

ಕರ್ನಾಟಕ ಸಭಾ

- ಸ್ಥಾಪನೆ – 1916
- ಸ್ಥಳ – ಧಾರವಾಡ
- ಸ್ಥಾಪಕರು – ಆಲೂರು ವೆಂಕಟರಾವ್, ಕಡಪ ರಾಘವೇಂದ್ರ ರಾವ್, ಮುದವೀಡು ಕೃಷ್ಣಾರಾಯರು

ಕರ್ನಾಟಕ ಏಕೀಕರಣ ಸಭಾ

- ಸ್ಥಾಪನೆ – 1924
- ಸ್ಥಳ – ಬೆಳಗಾವಿ
- ಪ್ರಥಮ ಅಧ್ಯಕ್ಷರು – ಸರ್ ಸಿದ್ದಪ್ಪ ಕಂಬಳಿ

➢ ಕೆ.ಶೇಷಾದ್ರಿ ಐಯ್ಯರ್ ರವರ ಕರ್ನಾಟಕ ಭಾಷೋಜ್ಜೀವಿನಿ ಸಭಾ', ಬೆಂಗಳೂರಿನ 'ಕನ್ನಡ ಸಂಘ', "ಕರ್ನಾಟಕ ಏಕೀಕರಣ ಮಹಾ ಸಮಿತಿ"
ಇತ್ಯಾದಿ.

**4. ಸಾಹಿತ್ಯದ ಪಾತ್ರ**

ವಿವಿಧ ಭಾಷೆಗಳ ರಾಜ್ಯಾಡಳಿತಗಳಲ್ಲಿ ಹಂಚಿಹೋಗಿದ್ದ ಕನ್ನಡ ನೆಲವನ್ನೆಲ್ಲ ಒಗ್ಗೂಡಿಸುವ ಪ್ರಯತ್ನಕ್ಕೆ ಪ್ರೇರಕವಾದ ಅಂಶಗಳು ಹಲವು. ಅವುಗಳಲ್ಲಿ ಮುಖ್ಯವಾದವುಗಳು ವಿದ್ವಾಂಸರು ಮತ್ತು ಕವಿಗಳು ರಚಿಸಿ ಪ್ರಚುರಪಡಿಸಿದ ಗ್ರಂಥಗಳು ಮತ್ತು ಗೀತೆಗಳು.

ಕನ್ನಡಿಗರಲ್ಲಿ ಭಾವನಾತ್ಮಕ ಐಕ್ಯತೆ ಮತ್ತು ಭಾಷಾಭಿಮಾನವನ್ನು ಮೂಡಿಸಿ ಅವರನ್ನು ಏಕೀಕರಣಕ್ಕೆ ಅಣಿಗೊಳಿಸಿದ ಕೆಲವೊಂದು ಕೃತಿಗಳು ಹಾಗೂ ದೇಶಭಕ್ತಿ ಗೀತೆಗಳೆಂದರೆ:

**ಕೃತಿಗಳು:**

- ಆಲೂರು ವೆಂಕಟರಾಯರ – "ಕರ್ನಾಟಕ ಗತ ವೈಭವ
- ಬಿ.ಎಲ್.ರೈಸ್‌ರವರ – ಎಡಿಗ್ರಾಫಿಕ್ ಕನುಟಕ
- ರಾಬರ್ಟ್ ಸಿವೆಲ್‌ರವರು – ಮರೆತ ಸಾಮ್ರಾಜ್ಯ
- ಡಾ.ಫ್ಲೀಟ್‌ರವರ – ಕೆನರಾ ರಾಜಸಂತತಿಗಳು
- ಮಾರ್ಕ್, ವಿಲ್ಕ್ಸ್‌ರವರ – ಕರ್ನಾಕಟದ ಇತಿಹಾಸ
- ಮೆಕೆಂಜಿಯ – ಹೊಯ್ಸಳರ ಚರಿತ್ರೆ

**ಗೀತೆಗಳು:–**

- ಹುಯಿಲಗೋಳ ನಾರಾಯಣರ – 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'
- ಬಿ.ಎಂ.ಶ್ರೀ ರವರ – 'ಹಾರಿಸು, ಹಾರಿಸು ಕನ್ನಡದ ಬಾವುಟ'
- ಮಂಗೇಶ ಪೈ ರವರ – 'ತಾಯಿ ಬಾರ ಮೊಗವ ತೋರೆ ಕನ್ನಡಿಗರ ಮಾತೆಯೇ'
- ಕುವೆಂಪು ರವರ – 'ಭಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಮತ್ತು 'ನೀ ಮುಟ್ಟುವ ನೆಲ ಅದೆ ಕರ್ನಾಟಕ'

ಇತ್ಯಾದಿಗಳು ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಉಕ್ಕಿಸಿದವು. ಈ ಕನ್ನಡ ಸಾಹಿತ್ಯ ಚರಿತ್ರೆಗಳು ಕರ್ನಾಟಕದ ಸಾಂಸ್ಕೃತಿಕ ಪುನರ್ ನಿರ್ಮಾಣಕ್ಕೆ ಸ್ಫೂರ್ತಿಯಾದವು. ಕನ್ನಡಿಗರಲ್ಲಿ ನಿಜವಾಗಿಯೂ 'ಭಾವನಾತ್ಮಕ ಐಕ್ಯತೆ ಉಂಟಾಗಿದ್ದು ಕನ್ನಡ ಸಾಹಿತ್ಯದಿಂದಲೇ.

**5. ಪತ್ರಿಕೆಗಳ ಪಾತ್ರ:**

ಯಾವುದೇ ಚಳುವಳಿ ಅಥವಾ ಆಂದೋಲನ ಜನತೆ ವಹಿಸುವ ಪಾತ್ರವನ್ನು ಅವಲಂಬಿಸಿರುತ್ತದೆ. ಎಷ್ಟರಮಟ್ಟಿಗೆ ಅವರು ಪಾಲ್ಗೊಳ್ಳುವರೋ ಅಷ್ಟು ಹೇಗೆ ಯಶಸ್ಸು ಲಭ್ಯವಾಗುತ್ತದೆ. ಇದಕ್ಕೆ ಬೇಕಾಗಿರುವುದು ಜನರಲ್ಲಿ ಉಂಟಾಗಬಹುದಾದ ಜಾಗೃತಿ, ಈ ಜಾಗೃತಿ ಅಥವಾ ಪ್ರಜ್ಞೆ ಮೂಡಿಸುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವರವಾದುದಾಗಿದೆ.

ವಿವಿಧ ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಅನ್ಯಭಾಷೀಯರ ಪ್ರಭಾವದಲ್ಲಿ ಉಳಿದು ಮೂಲಭಾಷೆಯನ್ನು ಮರೆತು ಅದು ಕಣ್ಮರೆಯಾಗುವುದರಲ್ಲಿದ್ದಿತು. ಅಂತಹ ಸರಿವೇಳೆಯಲ್ಲಿ ಜನ್ಮತಾಳಿದ ಪತ್ರಿಕೆಗಳು ಜನರಲ್ಲಿ ಜಾಗೃತಿ ಉಂಟು ಮಾಡಿ ಅವರು ಅನ್ಯಭಾಷೀಯ ಆಡಳಿತದ ಹತೋಟಿಯಿಂದ ಬಿಡುಗಡೆ ಹೊಂದಲು ಪ್ರೇರೇಪಿಸಿದವು. ಕನ್ನಡಗರಲ್ಲಿ ಭಾಷಾಭಿಮಾನವನ್ನು ಉಕ್ಕಿಸಿ ಅವರನ್ನು ಏಕೀಕರಣದಲ್ಲಿ ಸಂಘಟಿಸಿದ ಕೀರ್ತಿ ಹಲವು ವೃತ್ತ ಪತ್ರಿಕೆಗಳಿಗೆ ಸಲ್ಲುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

- ಹುಬ್ಬಳ್ಳಿ-ಧಾರವಾಡ ಪ್ರದೇಶಗಳಲ್ಲಿ – ಕರ್ಮವೀರ, ತರುಣ ಕರ್ನಾಟಕ, ಸಂಯುಕ್ತ ಕರ್ನಾಟಕ, ವಾಗ್ಭೂಷಣ
- ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ – ಸಾಧನಾ, ಕರ್ನಾಟಕ ವೈಭವ, ಕರ್ನಾಟಕ ಕೇಸರಿ
- ಉಡುಪಿ – ದಕ್ಷಿಣ ಮತ್ತು ಉತ್ತರ ಕನ್ನಡ ಪ್ರದೇಶಗಳಲ್ಲಿ – ಸತ್ಯಾಗ್ರಹಿ, ನವಯುಗ, ಕಾನಾಡ ವೃತ್ತ
- ಬೆಂಗಳೂರು ಹಾಗೂ ಮೈಸೂರು ಪ್ರದೇಶಗಳಲ್ಲಿ – ಪ್ರಜಾಮತ, ವೀರ ಕೇಸರಿ, ನವಭಾರತ, ಪ್ರಬುದ್ಧ ಕರ್ನಾಟಕ
- ಮಡಿಕೇರಿಯಲ್ಲಿ – ಕೊಡಗು

ಹೀಗೆ ಮೊದಲಾದ ವೃತ್ತ ಪತ್ರಿಕೆಗಳು ಜನರ ಭಾಷಾಭಿಮಾನಗಳನ್ನು ಕೆರಳಿಸಿ ಏಕೀಕರಣದ ಬಗ್ಗೆ ಹುರುದುಂಬಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

**6. ಆಲೂರು ವೆಂಕಟರಾಯರ ಪಾತ್ರ**

'ಕರ್ನಾಟಕದ ಅಸ್ತಿತ್ವಕ್ಕಾಗಿ ಹಗಲಿರುಳು ಅವಿಶ್ರಾಂತ ಶ್ರಮಿಸಿದ ಪ್ರಮುಖ ಮಹನೀಯರಲ್ಲಿ ಆಲೂರು ವೆಂಕಟರಾಯರು ಪ್ರಮುಖರು.

ಸಮಗ್ರ ಕರ್ನಾಟಕ ಮತ್ತು ಕರ್ನಾಟಕತ್ವಗಳು ಅವರ ಕನಸು ಮತ್ತು ಉಸಿರು ಆಗಿದ್ದವು. ಕನ್ನಡ ಪರಂಪರೆಯ ಉದ್ಧಾರಕ್ಕೆ ಇಡೀ ಜೀವಮಾನ ದುಡಿದ ಮಹನೀಯ ಆಲೂರರು.

ಕನ್ನಡಿಗರಲ್ಲಿ ಏಕೀಕರಣ ಭಾವನೆಯನ್ನು ಮೂಡಿಸಲು ಅವರು ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ'ಯನ್ನು ಸ್ಥಾಪಿಸಿದರು. 'ಕನ್ನಡ ಬರಹಗಾರರ ಸಮ್ಮೇಳನಗಳನ್ನು ನಡೆಸಿದರು. ಅವರು ತಮ್ಮ "ವಾಗ್ಭೂಷಣ" ಪತ್ರಿಕೆಯಲ್ಲಿ ಏಕೀಕರಣ ತತ್ವವನ್ನು ಪ್ರಚಾರ ಮಾಡಿದರು. ಅವರು ಬರೆದ 'ಕರ್ನಾಟಕ ಗತವೈಭವ' ಗ್ರಂಥವು ಕರ್ನಾಟಕದ ಭವ್ಯ ಪರಂಪರೆಯನ್ನು ಕನ್ನಡಿಗರ ಕಣ್ಣ ಮುಂದೆ ತಂದಿತು. ಈ ಕೃತಿಯು ಗತಕಾಲದ ಕನ್ನಡಿಗರ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸಿಕೊಟ್ಟು ಕನ್ನಡಗರಲ್ಲಿ ಆತ್ಮಶಕ್ತಿ ಮತ್ತು ಸ್ವಾಭಿಮಾನವನ್ನು ಬಡಿದೆಬ್ಬಿಸಿತು. ಇವರ ಇತರೆ ಕೃತಿಗಳೆಂದರೆ

– ಕರ್ನಾಟಕತ್ವದ ವಿಕಾಸ, ಕರ್ನಾಟಕ ತತ್ವದ ಸೂತ್ರಗಳು, ಕರ್ನಾಟಕ ವೀರರತ್ನಗಳು

ಆಲೂರು ವೆಂಕಟರಾಯರ ಪ್ರಕಾರ "ಕರ್ನಾಟಕತ್ವ ಎಂದರೆ ಕನ್ನಡ ಅಭಿಮಾನ ತಾಳುವುದು ಕರ್ನಾಟಕತ್ವ ಒಂದು ಕಿರಣಗಾಜು ಇದ್ದಂತೆ. ಅದರಲ್ಲಿ ಭಾರತವೇಕೆ ಇಡೀ ಜಗತೇ ಗೋಚರಿಸುತ್ತದೆ. ಭಾರತ ಮತ್ತು ವಿಶ್ವದ ಕಿರಣಗಳು ಅದರಲ್ಲಿ ಅಂತರ್ಯವಾಗಿವೆ."

ಒಟ್ಟಿನಲ್ಲಿ ಆಲೂರು ವೆಂಕಟರಾಯರ ಪರಿಶ್ರಮ. ನಿಸ್ವಾರ್ಥ ಸೇವೆ. ಕನ್ನಡಾಭಿಮಾನ ಎಲ್ಲದಕ್ಕೂ ಮಿಗಿಲಾಗಿ ಅವರ ತ್ಯಾಗದಿಂದಾಗಿ ಕನ್ನಡಿಗರು ತಲೆ ಎತ್ತಿ ನಿಲ್ಲುವಂತಾಯಿತು. ಅಲ್ಲದೆ ನಾಡು ತನ್ನದೇ ಆದ ಅಸ್ತಿತ್ವವನ್ನು ಪಡೆದು ಸ್ವಾಭಿಮಾನ ಬೆಳೆಸಿಕೊಳ್ಳುವಂತಾಯಿತು. ಕನ್ನಡ ಭಾಷೆ, ಕಲೆ, ಸಾಹಿತ್ಯ ಶ್ರೀಮಂತಗೊಳ್ಳುವ ಅವಕಾಶ ಕಲ್ಪಿತವಾಯಿತು. ಇದೆಲ್ಲಾ ಆಲೂರು ವೆಂಕಟರಾಯರ ಅವಿಶ್ರಾಂತ ಶ್ರಮದ ಫಲ. ಇವರ ಅಪಾರ ಸೇವೆಯನ್ನು ಗುರುತಿಸಿದ ಕನ್ನಡ ಜನತೆ 'ಕನ್ನಡ ಕುಲ ಪುರೋಹಿತ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ.

7. ಮಹಿಳೆಯರ ಪಾತ್ರ

ಬ್ರಿಟೀಷ್ ಹಿತಾಸಕ್ತಿಗನುಗುಣವಾಗಿ ಹರಿದು ಹಂಚಿ ಹೋಗಿದ್ದ ಕನ್ನಡ ಜನತೆಯನ್ನು ಒಗ್ಗೂಡಿಸಬೇಕೆಂದು ಆಲೂರು ವೆಂಕಟರಾಯರು, ಹುಯಿಲಗೋಳ ನಾರಾಯಣರಾಯರು. ಬಿ.ಎಂ.ಶ್ರೀಕಂಠಯ್ಯ ಮುಂತಾದವರು ಮುನ್ನೆಡಿಸಿದ ಈ ಏಕೀಕರಣದ ಹೋರಾಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು.

ಧರ್ಮ, ಲಿಂಗ ಮತ್ತು ಜಾತಿಯ ಎಲ್ಲೆಯನ್ನು ಮೀರಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮಹಿಳೆಯರು ಮಂಚೂಣಿಯಲ್ಲಿದ್ದರು.

ಏಕೀಕರಣ ಚಿಂತನೆಯು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಳಿವು – ಉಳಿವಿನ ಸಂಗತಿಯನ್ನು ಮಹಿಳೆಯೊಂದಿಗೆ ಸಮೀಕರಿಸಿದ್ದರಿಂದ ಹಾಗೂ ಸಂಸ್ಕೃತಿಯ ರಕ್ಷಕರಾಗಿ, ವಾಹಕರಾಗಿ ಮಹಿಳೆಯರನ್ನು ಗುರುತಿಸಿದ್ದರಿಂದ ಅಂದಿನ ಮಹಿಳೆಯರು ಅದನ್ನು ಉತ್ಸಾಹದಿಂದ ಹೆಗಲಿಗೇರಿಸಿಕೊಂಡಿದ್ದರು.

ಏಕೀಕರಣದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಶ್ರೀಮಂತಿಕೆಯ ಮೂಲಧನಗಳಲ್ಲಿ ಒಂದಾಗಿದ್ದರಿಂದ ಸಹಜವಾಗಿಯೇ ಅಂದಿನ ಬಹುಪಾಲು ಲೇಖಕಿಯರು ಏಕೀಕರಣಕ್ಕೆ ಹೆಗಲು ಕೊಟ್ಟರು. ಮಹಿಳಾ ಗೋಷ್ಠಿಗಳ ಹಾಗೂ ಮಹಿಳಾ ಸಂಘಟನೆಗಳ ವೇದಿಕೆಗಳನ್ನು ಏಕೀಕರಣದ ವೇದಕೆಗಳಾಗಿ ಬಳಸಿಕೊಂಡರು.

ಅಕ್ಕನ ಬಳಗ, ಶಾರದಾ ಕರ್ನಾಟಕ ಕನ್ಯಾಶಾಲೆ ಮುಂತಾದ ಮಹಿಳಾ ಸಂಘಟನೆಗಳು ತನ್ನ ಉದ್ದೇಶಗಳಲ್ಲಿ ಕನ್ನಡದ ಪ್ರಶ್ನೆಯನ್ನು ಮೊದಲಿನದಾಗಿ ಗುರುತಿಸಿಕೊಂಡಿತು.

ಕರ್ನಾಟಕ ಏಕೀಕರಣ ಚಳುವಳಿಯ ಮಹಿಳಾ ಮಂಚೂಣಿಯ ನಾಯಕಿಯರೆಂದರೆ:

- ಉತ್ತರ ಕರ್ನಾಟಕದ ಭಾಗಗಳಲ್ಲಿ
    - ಜಯದೇವಿತಾಯಿ ಲಿಗಾಡೆ
    - ನಾಗಮ್ಮ ಪಾಟೀಲ
    - ಗದಿಗೆವ್ವಾ ಕುರಹಟ್ಟಿ
    - ಶಾಂತಾಬಾಯಿ ನೀಲಗಾರ
- ಹೈದರಾಬಾದ್ – ಕರ್ನಾಟಕದ ಭಾಗಗಳಲ್ಲಿ
    - ಅಲ್ಲಂ ಸರ್ವಮಂಗಳಮ್ಮ
    - ತೊಗರಿ ಸರ್ವಮಂಗಳಾಂಬ
    - ವಿಮಲಾಬಾಯಿ ಮೇಲ್ಕೋಟೆ
- ಬೆಂಗಳೂರಿನಲ್ಲಿ
    - ಯಶೋಧರಮ್ಮ ದಾಸಪ್ಪ

- ಮಧ್ಯ ಕರ್ನಾಟಕದ ಭಾಗದಲ್ಲಿ
    - ➢ ಬಳ್ಳಾರಿ ಸಿದ್ಧಮ್ಮ
    - ➢ ಪ್ರೇಮಾ ಭಟ್
- ಕಾಸರಗೋಡಿನಲ್ಲಿ
  - ➢ ಡಾ॥ ಲಲಿತಾ ಭಟ್

**ಕನ್ನಡ ಸಾಹಿತ್ಯದ ಮೇಲೆ ಏಕೀಕರಣ ಚಳುವಳಿಯ ಪ್ರಭಾವ**

- ➢ ವಸಾಹತುಶಾಹಿ ಕಾಲಘಟ್ಟನ ಇಂಡಿಯಾದ ದಾಸ್ಯ, ಬ್ರಿಟೀಷರ ಒತ್ತಡಗಳಿಗೆ ಸ್ಥಳೀಯವಾದ ವಿಶೇಷತೆಗಳು ಮೂಲಕ ಸಾಂಸ್ಕೃತಿಕ ವಿಚಾರಗಳ ಮೂಲಕ ಪ್ರತಿರೋಧವನ್ನು ಒಡ್ಡುವುದು.
- ➢ ಕನ್ನಡಿಗರು ಬೇರೆ ಬೇರೆ ಭಾಷಿಕರ ನಡುವೆ ಅನುಭವಿಸುತ್ತಿರುವ ಸಮಸ್ಯೆಗಳ ದರ್ಶನ
- ➢ ಕನ್ನಡ ಭಾಷೆಯ ವೈಭವೀಕರಣ – ಹಿಂದಿನ ಕವಿ – ಕಾವ್ಯ ಪರಂಪರೆಯ ಕುರಿತು ನೆನಪು ಮೂಡುವುದು
- ➢ ಗತವೈಭವವನ್ನು ನೆನಪು ಮಾಡಿಕೊಡಲು ಚಾರಿತ್ರಿಕ, ಧಾರ್ಮಿಕ, ಆಧ್ಯಾತ್ಮಿಕ ವಿಚಾರಗಳನ್ನು ಕಾವ್ಯದಲ್ಲಿ ಅಭಿವ್ಯಕ್ತ ಪಡಿಸುವುದು. ರಾಜಮನೆತನಗಳ ವೈಭವದ ದಿನಗಳನ್ನು ಹಾಗೂ ಸಮಕಾಲೀನ ವಿಭಜಿತ. ದಾಸ್ಯದ ಸ್ಥಿತಿಗಳನ್ನು ತುಲನೆ ಮಾಡುವ ಪ್ರಜ್ಞೆ ಬೆಳಸಿ ಎಚ್ಚರಿಸುವುದು.
- ➢ ದಂಡಿಯು ವಿದ್ಯಾರಣ್ಯರ ಭುವನೇಶ್ವರಿ ದೇವಿಯ ಆಶಯಗಳ ಕನ್ನಡಿಗರ ಸಾಂಸ್ಕೃತಿಕ ಸಾಮ್ರಾಜ್ಯದ ಕೇಂದ್ರ ಹಾಗೂ ಕರ್ನಾಟಕ ಸಿಂಹಾಸನದ ಪ್ರತಿಷ್ಠಾಪನೆಯ ಕೇಂದ್ರವೂ ಹೌದು ದಂಡಿಯ ದಶ್ನದ ಮೂಲಕ ಕನ್ನಡಿಗರನ್ನು ಒಂದುಗೂಡಿಸಲು ಅಂದರೆ ಏಕೀಕರಣವಾಗಲು ಪ್ರೇರಣೆ ನೀಡುವ ವಿಚಾರಗಳನ್ನು ವಿಶೇಷವಾಗಿ ಅಭಿವ್ಯಕ್ತಿಗೊಳಿಸುವುದು.
- ➢ ಹಿಂದಿನ ಕವಿಗಳಿಂದ ದರ್ಶಿತವಾದ ಕನ್ನಡ ನಾಡು–ನುಡಿ ಬಗೆಗಿನ ವಿಚಾರಗಳನ್ನು ಪುನರ್‌ಸೃಷ್ಠಿ ಮಾಡುವ, ಇಲ್ಲಿನ ವಚನಕಾರರ. ದಾಸರ, ದಾರ್ಶನಿಕರ ಕನ್ನಡ ಚಿಂತನೆಗಳ ಮಹತ್ವ, ನಾಡಿನ ವಿಜಯಪುರ, ಬೇಲೂರು, ಹಂಡಿ–ಮೊದಲಾದ ಸ್ಥಳಗಳಲ್ಲಿನ ವಾಸ್ತುಶಿಲ್ಪದ ಹೆಮ್ಮೆ. ಪ್ರಾಕೃತಿಕ ಸಂಪತ್ತಿನ ಮಹತ್ವ ಮೊದಲಾದ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವುದು.
- ➢ ಸ್ವಾರ್ಥ–ಸಂಕುಚಿತ ದೃಷ್ಟಿಕೋನಗಳನ್ನು ಬಿಟ್ಟು, ಭಾರತ – ಕರ್ನಾಟಕಗಳಿಗಾಗಿ ಸೇವೆ ಮಾಡುವ. ಇತರೆ ಭಾಷಿಕರನ್ನು – ಭಾಷೆಗಳನ್ನು ಸೋದರತನದಿಂದ ನೋಡುವ, ಸಮನ್ವಯ ಸಮರಸಕ್ಕಾಗಿ ದೇವ–ದೇವತೆಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವ ಕವಿತೆಗಳು.
- ➢ ಕನ್ನಡ ಸಾಹಿತ್ಯದ ಬಗ್ಗೆ ಅಭಿಮಾನ ಪಟ್ಟುಗೊಳ್ಳುವಂತೆ. ಕನ್ನಡದಲ್ಲಿ ಬರೆಯುವ ಉತ್ಸಾಹಗಳನ್ನು ತುಂಬುವ. ನುಡಿ ಸೇವೆಗಾಗಿ ಕನ್ನಡ ಮಾಲೆಯನ್ನು ಹರಸುವಂತೆ ಕೇಳಿಕೊಳ್ಳಲು ಕವಿತೆಗಳನ್ನು ರಚಿಸುವುದು.
- ➢ ಪ್ರಾಂತೀಯವಾದ (ವಿಭಜಿತ ಕನ್ನಡ ಪ್ರದೇಶದ) ಸ್ಥಳ ಮಹತ್ವವನ್ನು ಹೇಳಿ ಕನಾಟಕ, ಭಾರತ ವಿಶ್ವದರ್ಶನ–ಮೂಡಿಸುವ ವಿಶ್ವವ್ಯಾಪ್ತಿ ದೃಷ್ಟಿಕೋನದ ವಿಚಾರಗಳು. ಅಂತರ್ ಪ್ರಾಂತೀಯ ಹಾಗೂ ವಿಶ್ವಸಂಸಾರದ ಪ್ರಜ್ಞೆ ಇರುವ ಕವಿತೆಗಳ ರಚನೆ.
- ➢ ಏಕೀಕರಣವಾಗುತ್ತಿರುವ ಸಂದರ್ಭವನ್ನು ಸ್ವಾಗತಿಸಲು, ಹಿಂದಿನ ಶೋಷಿತ ದಿನಗಳನ್ನು ಮರೆಯಲು. ಗಡಿ ಸಮಸ್ಯೆಗಳಿಗೆ ಸಾಮರಸ್ಯದಿಂದ ಸ್ಪಂದಿಸಲು. ಏಕೀಕರಣದ ಕನಸುಗಳನ್ನು ನನಸಾಗಿಸಲು ವಿಭಿನ್ನ ಪರಿಗಳುಳ್ಳ ಕವಿತೆಗಳ ರಚನೆ.
- ➢ 'ಕರ್ನಾಟಕ' ಎಂಬ ಹೆಸರಿಗೆ ಬದಲಾಗಿ 'ಮೈಸೂರು' ಎಂದು ಹೆಸರಿಟ್ಟಿದ್ದಕ್ಕೆ ಅಸಮಧಾನ, ಮುಂದೆ ಒಳ್ಳೆಯ ದಿನಗಳು ಹಾಗೂ ಬುದ್ಧಿಮತ್ತೆ ಪ್ರಾಪ್ತವಾಗಿಸಲು ಬೇಡಿಕೊಳ್ಳುವ ವಿಚಾರಗಳುಳ್ಳ ಕವಿತೆಗಳ ರಚನೆ.

- ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರ / ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ:
- ಹೈದರ್ ಅಲಿ, ಟಿಪ್ಪು ಸುಲ್ತಾನ್
- ಧೋಂಡಿಯ ವಾಘನ ದಂಗೆ
- ಕಿತ್ತೂರು ರಾಣಿ ಚೆನ್ನಮ್ಮಳ ದಂಗೆ
- ಸಂಗೊಳ್ಳಿ ರಾಯಣ್ಣನ ದಂಗೆ
- ಹಲಗಲಿ ಬೇಡರ ದಂಗೆ
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆ
- ಬಾಲ ಗಂಗಾಧರ ತಿಲಕರ ಪ್ರಭಾವ
- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾಪನೆ
    - ➢ ಗಂಗಾಧರರಾವ್ ದೇಶಪಾಂಡೆ
    - ➢ ಆಲೂರು ವೆಂಕಟರಾವ್

- ಶ್ರೀನಿವಾಸ್ ಕೌಜಲಗಿ

- ಗಾಂಧೀಜಿಯವರ ಪ್ರಭಾವ
- ಪ್ರಥಮ ಅಸಹಕಾರ ಚಳುವಳಿ
    - ಎನ್.ಎಸ್.ಹರ್ಡಿಕರ್
    - ಹರ್ಡಿಕರ್ ಮಂಜಪ್ಪ
    - ಹನುಮಂತರಾವ್ ಕೌಜಲಗಿ
    - ಕಾರ್ನಾಡ್ ಸದಾಶಿವರಾವ್
    - ಕಾಕಾ ಕಾಲೇಕರ್
- 1924 ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನ
- ಕಾಯ್ದೆ ಭಂಗ ಚಳುವಳಿ
    - ಉಪ್ಪಿನ ಸತ್ಯಾಗ್ರಹ – ಮೈಲಾರ ಮಹದೇವಪ್ಪ
    - ಅಂಕೋಲಾ ಉಪ್ಪಿನ ಸತ್ಯಾಗ್ರಹ
        - ಗಂಗಾಧರರಾವ್ ದೇಶಪಾಂಡೆ
        - ಹನುಮಂತರಾವ್ ಕೌಜಲಗಿ
        - ಕಾರ್ನಾಡ್ ಸದಾಶಿವರಾವ್
- ಶಿವಪುರ ಧ್ವಜ ಸತ್ಯಾಗ್ರಹ – 1938
- ವಿದುರಾಶ್ವಥ್ಥ ಘಟನೆ – 1938
  – ಕರ್ನಾಟಕದ ಜಲಿಯನ್‌ವಾಲಾಬಾಗ್
- ಭಾರತ ಬಿಟ್ಟು ತೊಲಗಿ ಚಳುವಳಿ
  – ಈಸೂರು ದುರಂತ
- 'ಮೈಸೂರು ಚಲೋ' ಚಳುವಳಿ

## ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ

- ವಸಾಹತುಶಾಹಿ ಮತ್ತು ರಾಷ್ಟ್ರೀಯತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎಲ್ಲಿ ವಸಾಹುತುಶಾಹಿ ಆಳ್ವಿಕೆ ಇರುತ್ತದೆಯೋ ಅಲ್ಲಿ ರಾಷ್ಟ್ರೀಯತೆಯ ಉದಯವಾಗುತ್ತದೆ. ಇದು ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳಿಗೂ ಅಸ್ವಿಯವಾಗುತ್ತದೆ.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿದ್ದ ಬ್ರಿಟಿಷರು ಇಲ್ಲಿಯೂ ಅನೈಕ್ಯ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ತಮ್ಮ ವಸಾಹತುಶಾಹಿ ಸಾಮ್ರಾಜ್ಯವನ್ನು ಸ್ಥಾಪಿಸುವುದರ ಮೂಲಕ ಭಾರತೀಯರನ್ನು ಗುಲಾಮಗಿರಿಗೊಳಪಡಿಸುವುದರ ಮೂಲಕ ಇವರ ಹಕ್ಕುಬಾದ್ಯತೆಗಳನ್ನು ಕಸಿದುಕೊಂಡು ಹಿಂಸಿಸತೊಡಗಿದರು. ಇದರಿಂದ ನಲುಗಿ ಹೋಗಿದ್ದ ಭಾರತೀಯರಲ್ಲಿ ನಿಧಾನವಾಗಿ ರಾಷ್ಟ್ರಾಭಿಮಾನ ಚಿಗುರೊಡೆಯಿತು. ಬ್ರಿಟಿಷ್ ಸಾಮ್ರಾಜ್ಯವನ್ನು ಕಿತ್ತೆಸೆಯುವುದಕ್ಕಾಗಿ ದೇಶದ್ಯಾಂತ ಸ್ವತಂತ್ರ್ಯ ಸಂಗ್ರಾಮ ಆರಂಭವಾಯಿತು. ಈ ದಿಸೆಯಲ್ಲಿ ಭಾರತದ ಒಂದು ಭಾಗವಾಗಿದ್ದ ಕರ್ನಾಟಕದಲ್ಲೂ ಬ್ರಿಟಿಷ್ ವಿರೋಧಿ ಬಂಡಾಯಗಳು, ಸಂಗ್ರಾಮಗಳು, ಆ___ ಆರಂಭವಾದವು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಒಂದು ಉಜ್ವಲ ಅಧ್ಯಾಯವಾಗಿದೆ.

ಬ್ರಿಟಿಷರ ವಿರುದ್ಧ ನಡೆದ ಕರ್ನಾಟಕದ ಸ್ವತಂತ್ರ್ಯ ಹೋರಾಟವನ್ನು ಅಧ್ಯಯನದ ದೃಷ್ಟಿಯಿಂದ ಎರಡು ಭಾಗವಾಗಿ ವಿಂಗಡಿಸುತ್ತೇವೆ.

1. ಸಶಸ್ತ್ರ ಬಂಡಾಯ (1885ರಿಂದ ಬ್ರಿಟಿಷರ ಆಳ್ವಿಕೆಯ ಆರಂಭದಿಂದ
2. ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿ (1885–1947)

1. 1885 ರವರೆಗೆ ನಡೆದ ಸಶಸ್ತ್ರ ಬಂಡಾಯ

ಬ್ರಿಟಿಷರ ಆಳ್ವಿಕೆಯ ಆರಂಭದಿಂದ 1885 ರವರೆಗೆ ಕರ್ನಾಟಕದ ರಾಜಮಹಾರಾಜರು, ಪಾಳೆಯಗಾರರು, ಅಳರಸರು ಬ್ರಿಟಿಷರ ವಿರುದ್ಧ ನಡೆಸಿದ ಶಸ್ತ್ರಸಜ್ಜಿತ ಹೋರಾಟಕ್ಕೆ ಸಶಸ್ತ್ರ ಬಂಡಾಯ ಎಂದು ಹೆಸರು. ಭಾರತದಲ್ಲಿಯೇ ಪ್ರಥಮಬಾರಿಗೆ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿದ ಕೀರ್ತಿ ಸ್ವಾತಂತ್ರ್ಯ ಪ್ರೇಮಿಗಳೂ, ಮೈಸೂರಿನ ಸರ್ವಾಧಿಕಾರಿಗಳೂ ಆಗಿದ್ದ ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನ್‌ಗೆ ಸಲ್ಲುತ್ತದೆ.

ಇವರಿಬ್ಬರೂ 1761 ರಿಂದ 1799 ರವರೆಗೆ ಬ್ರಿಟಿಷರ ವಿರುದ್ಧ ಹೋರಾಡಿದರು. 1799 ರಲ್ಲಿ ಟಿಪ್ಪುವಿನ ಮರಣಾನಂತರ ಕರ್ನಾಟಕದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆರಿವು ಲಭಿಸಿತು. ಇವನ ಮಾರ್ಗದಲ್ಲಿಯೇ ಮುಂದೆ ಹಲವಾರು ಜನ ದೇಶ ಪ್ರೇಮಿಗಳು, ಗಂಡುಗಲಿಗಳು, ವೀರ ಪುರಷರು, ವೀರ ವನಿತೆಯರು. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು ಈ ದಿಸೆಯಲ್ಲಿ 1799 ರಿಂದ 1857ರವರೆಗೆ ಕರ್ನಾಟಕದ ಹಲವು ಭಾಗಗಳಲ್ಲಿ ಸಶಸ್ತ್ರ ಬಂಡಾಯಗಳು ಜರುಗಿದವು. ಇವೆಲ್ಲಾ ಧೀರ ಕನ್ನಡಿಗರ ಸ್ವಾತಂತ್ರ್ಯ ಪ್ರೇಮದ ಸಂಕೇತಗಳಾಗಿ ಕಂಗೊಳಿಸುತ್ತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ.

- ಬಿದನೂರಿನ ಧೋಂಡಿಯ ವಾಘನ ದಂಗೆ (1800) – ಇವನು ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ. ಟಿಪ್ಪುವಿನ ಮರಣ ನಂತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಸಶಸ್ತ್ರ ಬಂಡಾಯ ಹೂಡದವರಲ್ಲಿ ಧೋಂಡಿಯಾ ವಾಘ ಮೊದಲಿಗನಾಗಿದ್ದನು. ಇವನು ಚೆನ್ನಗಿರಿಯ ಮರಾಠ ಕುಟುಂಬದಲ್ಲಿ ಜನಿಸಿದ್ದನು.

ಅಸಾಧಾರಣವಾದ ಧೈರ್ಯ, ಶೌರ್ಯಗಳಿಗೆ ಹೆಸರಾಗಿದ್ದ ಕೊಲ್ಲಾಪುರದ ಛತ್ರಪತಿಯ ಸೈನ್ಯದಲ್ಲಿ ಸೇವೆಸಲ್ಲಿಸಿದ್ದನು. 1780 ರಲ್ಲಿ ಇವನ ಈ ಸಾಹಸಕ್ಕೆ ಬೆರಗಾದ ಟಿಪ್ಪು ಮತಾಂತರ ವಿಚಾರದಲ್ಲಿ ಇಬ್ಬರಿಗೂ ವಿವಾದ ನಡೆದು ಅವನನ್ನು ಟಿಪ್ಪು ಸೆರೆಮನೆಗೆ ತಳ್ಳಿದನು. 1799 ರಲ್ಲಿ ಟಿಪ್ಪುವಿನ ಮರಣಾಂತರ ಬಿಡುಗಡೆಹೊಂದಿ ದಕ್ಷಿಣ ಭಾರತದ ಹಲವು ಪಾಳೆಯಗಾರರು ಮತ್ತು ರಾಜರ ಸಂಪರ್ಕದೊಂದಿಗೆ ಅತ್ಯಲ್ಪ ಕಾಲದಲ್ಲಿ ಸುಮಾರು 90,000 ಅಶ್ವದಳ ಮತ್ತು 56,000 ಕಾಲ್ದಳವನ್ನು ಸಂಗ್ರಹಿಸಿ ಬ್ರಿಟಿಷರಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ಮಾರ್ಪಟ್ಟನು.

ಇವನು ಸೋದೆ, ಬನವಾನ, ರಾಣಿ ಬೆನ್ನೂರು, ಸವಣೂರು, ಹರಪನಹಳ್ಳಿ ಹಾನಗಲ್, ಡಂಬಳ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡ ಇವನನ್ನು ಉಭಯ ಲೋಕಾಧೀಶ್ವರ ಎಂಬ ಬಿರುದು ಧರಿಸಿದನು. ಇವನ ಪ್ರಾಬಲ್ಯವನ್ನು ಕಂಡು ಬ್ರಿಟಿಷರು ಆತಂಕಗೊಂಡು, ಇವನನ್ನು ನಿಗ್ರಹಿಸಲು ಪ್ರಸಿದ್ಧ ದಂಡನಾಯಕ ಅರ್ಥರ್ ವೆಲ್ಲೆಸ್ಲಿಡಯ ನಾಯಕತ್ವದಲ್ಲೂ ಮಿಂಚಿನದಾಳಿ ನಡೆಸಿ ವಾಘನನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬೆನ್ನಟ್ಟಿ ಕಡೆಗೆ 1800 ಸೆಪ್ಟಂಬರ್ ರಂದು ಕೋಣ________________

- ದಕ್ಷಿಣ ಕನ್ನಡದ ದಂಗೆ (1799–1802)

ಟಿಪ್ಪುವಿನ ಮರಣಾನಂತರ ಬ್ರಿಟಿಷರು ದಕ್ಷಿಣ ಕನ್ನಡದ ಹಲವು ಪಾಳೆಯಗಾರರಿಗೆ ನಿವೃತ್ತಿ ವೇತನ ನೀಡಿ ತಟಸ್ಥಗೊಳಿಸಿದರು. ಇದರಿಂದ ಅಲ್ಲಿಯ ಬಂಟನಾಯಕರು 1799 ರಲ್ಲಿ ವಿಟ್ಲದ ವಿಠಲ ಹೆಗ್ಗಡೆ ಎಂಬಾ_____ ಶಸ್ತ್ರಿದಾಂ ಸೈನಿಕರೊಂದಿಗೆ ಕುಂಬ್ಳೆಯಿಂದ ಇಂಗ್ಲೀಷರನ್ನು ಬಿಡಿಸಿದರು. ಇವನ ಜೋಲೆ ಇನ್ನೂ ಅನೇಕ ಸ್ಥಳೀಯ ನಾಯಕರು ಸೇರಿಕೊಂಡು ಪ್ರಬಲವಾಗಿ ಹೋರಾಡುತ್ತಾ ಒಂದೊಂದೇ ಪ್ರದೇಶವನ್ನು ಮೇಲೆ ದಾಳಿ ಮಾಡಿದರು ಕೊನೆಗೆ ಬ್ರಿಟಿಷರು ಸ್ಥಳೀಯ ಜನರಿಗೆ ಲಂಚಕೊಟ್ಟು ಈ ನಾಯಕರನ್ನು ಬಂಧಿಸಿ ಗಲ್ಲಿಗೇರಿಸಿದರು.

- ಐಗೂರು ದಂಗ (ವೆಂಕಟಾದ್ರಿ ನಾಯರ್ – ಸರ್.ಅರ್ಥರ್ ವೆಲ್ಲೆಸ್ಲಿ) – ಬ್ರಿಟಿಷರ ವಿರುದ್ಧ ಸಿಡಿದಿದ್ದ ಮತ್ತೊಂದು ಸಂಸ್ಥಾನವೆಂದರೆ ಮುಂಜರಾಬಾದ್ ತಾಲೂಕಿನ (ಸಕಲೇಶಪುರ) ಐಗೂರು ಸಂಸ್ಥಾನ, ಐಗೂರಿನ ವೆಂಕಟಾದ್ರಿನಿಯ ಎಂಬಾವನು ಬ್ರಿಟಿಷರ ವಿರುದ್ಧ ದಂಗೆಯೆದ್ದನು. ಕೊನೆಗೆ ಸರ್ ಅರ್ಥರ್ ವೆಲ್ಲೆಸ್ಲಿ ಸೈನ್ಯಸಮೇತನಾಗಿ ತೆರಳಿ ಈ ದಂಗೆಯನ್ನು ಅಡಗಿಸಿದನು.
- ಕೊಪ್ಪಳದದಂಗೆ (ವೀರಪ್ಪ ನಾಯಕನ ಬಂಡಾಯ – 1819) – 1819ರಲ್ಲಿ ಕೊಪ್ಪಳದ ವೀರಪ್ಪನೆಂಬ ಜಮೀನ್ದಾರನು ಬ್ರಿಟಿಷರ ವಿರುದ್ಧ ದಂಗೆಯೆದ್ದು ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡನು. ಆದರೆ ಮೇಜರ್ ಪ್ರಿಸ್ಲರ್ ಎಂಬುವನು ನಾಯಕತ್ವದಲ್ಲಿ ಬಂದ ಬ್ರಿಟಿಷ್, ಸೈನ್ಯ ಈ ದಂಗೆಯನ್ನು ಅಡಗಿಸಿ ಕೊಪ್ಪಳವನ್ನು ವಶಪಡಿಸಿಕೊಂಡಿತು.
- ಬೀದರ್ ದಂಗೆ (1820–21) ದೇಶಮುಖರ ದಂಗೆಗಳು – 1820ರಲ್ಲಿ ಬೀದರ್ ಜಿಲ್ಲೆಯ ಉದ್ಗೀರ್ ಅಥವಾ ಉದಯಗಿರಿ ಎಂಬಲ್ಲಿ ಹೈದರಾಬಾದ್ ನಿಜಾಮನ ವಿರುದ್ಧ ಸುಳಿಯಳ್ಳಿಯ ಶಿವಲಿಂಗಯ್ಯ ದೇಶಮುಖ್, ತಿರುಮಲ ರಾವ್ ದೇಶಮುಖ್ ಮತ್ತು ಮೇಘಶ್ಯಾಂ ದೇಶಮುಖ್ ದಂಗೆಯೆದ್ದರು ಇವುಗಳಿಗೆ ದೇಶಮುಖರ ದಂಗೆಗಳು ಎಂದು ಕರೆಯುತ್ತಾರೆ. ಇದರಿಂದ ನಿಜಾಮನ ಬ್ರಿಟಿಷ್ ಸೈನ್ಯಧಿಕಾರಿ ಸದರ್‌ಲ್ಯಾಂಡಿನ ಸಹಾಯದಿಂದ 1821ರಲ್ಲಿ ಬಂಡಾಯವನ್ನು ಅಡಗಿಸಿದನು.
- ಸಿಂದಗಿಯ ದಂಗೆ (1824) – ಬ್ರಿಟಿಷರ ವಿರುದ್ಧ ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಹಾವಾಕಲ್ ದೀಕ್ಷಿತ್, ರಾಮೊಜಿರಾವ್ ಬಾಲಾಜಿದೇಶ ಪಾಂಡೆ ಮತ್ತು ಸೆಟ್ಟಿಯಪ್ಪ ತುಕ್ಕಲಿ ಎಂಬುವರು ಬ್ರಿಟಿಷರ ವಿರುದ್ಧ 1824ರಲ್ಲಿ ದಂಗೆಯೆದ್ದರು ಆಗ ಧಾರವಾಡದ ಕಲೆಕ್ಟರ್ 'ಸ್ಟೀವನ್‌ಸನ್' ಈ ಬಂಡಾಯವನ್ನು ಅಡಗಿಸಿದನು.
- ಕಿತ್ತೂರಿನ ಬಂಡಾಯ (1824) – ರಾಣಿ ಚೆನ್ನಮ್ಮ – ಬ್ರಿಟಿಷ್ ವಿರುದ್ಧ ನಡೆದ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರಿನ ಬಂಡಾಯ ಚಿರಸ್ಮರಣೀಯ ಘಟನೆ ಇದರ ನಾಯಕಿ ಕನ್ನಡಿಗರ ಕಣ್ಮಣಿ ವೀರ ಮಹಿಳೆ 'ಕಿತ್ತೂರು ರಾಣಿ ಚೆನ್ನಮ್ಮ' ಝಾನ್ಸಿ ರಾಣಿ ಲಕ್ಷ್ಮೀಬಾಯಿಗಿಂತ 3 ವರ್ಷ ಮೊದಲೇ ಬ್ರಿಟಿಷರ ವಿರುದ್ಧ ಖಡ್ಗ ಹಿಡಿದು ಸ್ವಾತಂತ್ರ್ಯ ಹೋರಾಟ ನಡೆಸಿದ ಕೀರ್ತಿ ರಾಣಿ ಚೆನ್ನಮ್ಮಗೆ ಸಲ್ಲುತ್ತದೆ.

ಕಿತ್ತೂರು ಬೆಳಗಾವಿ ಜಿಲ್ಲೆಯ ಚಿಕ್ಕ ಸಂಸ್ಥಾನ

↓

ಮಲ್ಲಸರ್ಜ ದೇಸಾಯಿ

↓

ರುದ್ರಮ್ಮ ಮತ್ತು ಚೆನ್ನಮ್ಮ

↓

ಮರಾಠರ ಸೆರೆಮನೆಯಿಂದ ಬಿಡುಗಡೆ ಹೊಂದಿ ಮರಳುವಾಗ ಅಕಾಲಿಕ ಮರಣ

↓

ಶಿವಲಿಂಗರುದ್ರ ಸರ್ಜನುನಾಯಕ ಬ್ರಿಟಿಷರ ಕೃಪೆಗೆ ಪಾತ್ರನಾಗಿ ವಂಶಪಾರಂಪರ್ಯ ಆಳ್ವಿಕೆಗೆ ಅನುಮತಿ

↓

ಅಕಾಲಿಕ ಮರಣ – ಗಂಡುಮಕ್ಕಳಿರಲಿ

↓

ಚೆನ್ನಮ್ಮ ರಾಜಪ್ರತಿನಿಧಿ – ದತ್ತು ಬಾಲಕ ಶ್ರೀರಲಿಂಗಪ್ಪದೇಸಾಯಿ

↓

ಧಾರವಾಡ ಕಲೆಕ್ಟರ್ ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವ ನೀತಿಯ ನಿರಾಕರಣೆ

↓

ಥ್ಯಾಕರೆ + ಚೆನ್ನಮ್ಮ ನಡುವೆ ಹೋರಾಟ, ಥ್ಯಾಕರೆ ಮರಣ, ಚೆನ್ನಮ್ಮನಿಗೆ ಗೆಲುವು

ಬ್ರಿಟಿಷರಿಗೆ ಅವಮಾನ, ಮಲ್ಲಪ್ಪಶೆಟ್ಟಿ, ವೆಂಕಟರಾವ್‌ರ ಸಹಾಯ ಕರ್ನಲ್ ಐಕನ್‌ಸನ್ ನಾಯಕತ್ವದಲ್ಲಿ ಕಿತ್ತೂರಿಗೆ ಮುತ್ತಿಗೆ ರಾಣಿ ಚೆನ್ನಮ್ಮ ಬಂಧನ ಬೈಲಹೊಂಗಲದಲ್ಲಿ ಸೆರೆಮನೆಯಲ್ಲಿ ಬಂಧನ. 1929ರಲ್ಲಿ ______

**ಸಂಗೊಳ್ಳಿ ರಾಯಣ್ಣ (1796–1831)**

ಇವನು ಕರ್ನಾಟಕದ ಪ್ರಸಿದ್ಧ ಹೋರಾಟಗಾರ, ಚೆನ್ನಮ್ಮನ ಅನುಯಾಯಿ ಮತ್ತು ಬಲಗೈ ಬಂಟ 1829ರಲ್ಲಿ ಚೆನ್ನಮ್ಮನ ಕೋಟೆ ಯುದ್ಧದಲ್ಲಿ ಸೆರೆಸಿಕ್ಕಿದ್ದನು.

ಚೆನ್ನಮ್ಮನ ಮರಣ ನಂತರ ಸೆರೆಮನೆಯಿಂದ ತಪ್ಪಿಸಿಕೊಳ್ಳುವುದು, ಉತ್ತರಾಧಿಕಾರಿಯಾಗಿದ್ದ ಶಿವಲಿಂಗಪ್ಪ ಸಮನಿಗೆ ಬೆಂಬಲ + ನಾಯಕತ್ವದಲ್ಲಿ ಗುಂರಾರ ಬಾಳಪ್ಪ, ಬಿತ್ತುಗಲ್ಲೆ ಚೆನ್ನಬಸವಣ್ಣ ಸುರಪುರದ ನಾಯಕರ ಬೆಂಬಲ, ಸುಮಾರು 2000 ಸೈನಿಕ ಪಡೆ ರಚನೆ.

ಬ್ರಿಟಿಷರ ವಿರುದ್ಧ ಗೆರಿಲ್ಲ ಮಾದರಿಯ ಯುದ್ಧ, ಬ್ರಿಟಿಷರಿಗೆ ದುಸ್ವಪ್ನ

ಅಮಲ್ದಾರ್ ಕೃಷ್ಣರಾವ್ + ಸಂಗೊಳ್ಳಿಯ ಜಮೀನ್ದಾರ್ ಬಾಳಪ್ಪ ರಂಗಪ್ಪ ಗೌಡನದೊಂದಿಗೆ

ರಾಯಣ್ಣ ಮತ್ತು ಸಹಚರರ ಬಂಧನ ನಂದಗಡದಲ್ಲಿ ನೇಣು ಹಾಕಲಾಯಿತು.

- **ನಗರ ದಂಗೆ (1830–31) – ಬಿದನೂರಿನ ದಂಗೆ**

1830 ರಲ್ಲಿ ಸದರಮಲ್ಲ ಅಥವಾ ಬೂದಿಬಸಪ್ಪನ ನೇತೃತ್ವದಲ್ಲಿ ಮೈಸೂರಿನ ಕಂದಾಯ ಅಧಿಕಾರಿಗಳ ದುರಾಡಳಿತದ ವಿರುದ್ಧ ಅತೃಪ್ತಗೊಂಡಿದ್ದ ರೈತರನ್ನು ಒಲಿಸಿಕೊಮಡು ದಂಗೆಯೆದ್ದನು. ತಂಕೆರೆಯ ಹನುಮಪ್ಪ ನಾಯಕ + ರಂಗಪ್ಪ ನಾಯಕರ ಬೆಂಬಲ – ಚಿತ್ರದುರ್ಗ, ಹೊಸಕೆರೆ, ಹೊಳಲ್ಕೆರೆ ರೈತರು, ಅಮ್ಲಾದಾರರನ್ನು ಬಂಧಿಸಿ ಲಂಚದ ಹಣ ವಸೂಲಿ ಮಾಡಿದರು. ಈ ದಂಗೆ ಎಲ್ಲಾ ಭಾಗಗಳಿಗೂ ವ್ಯಾಪಿಸಿತು.

ಮುಮ್ಮಡಿ ಕೃಷ್ಣರಾಜ ಒಡೆಯರು, ಕರ್ನಲ್ ರಾಚ್ ಪೋರ್ಟನ ನಾಯಕತ್ವದಲ್ಲಿ ಬ್ರಿಟಿಷ್ ಸೈನ್ಯ ಸಹಾಯದಿಂದ ದಂಗೆಯನ್ನು ಹತ್ತಿಕ್ಕಿತ್ತು ಬೂದಿ ಬಸ್ಸಪ್ಪ ಸೇರಿದಂತೆ 99 ಜನ ರೈತರನ್ನು ಬಂಧಿಸಿ ಗಲ್ಲಿಗೇರಿಸಲಾಯಿತು.

- **ಕೊಡಗಿನ ಬಂಡಾಯ (1835–37)**

  1934ರಲ್ಲಿ ಬ್ರಿಟಿಷರು ಕೊಡಗಿನ ಹಾಲೇರಿ ವಂಶದ ಕೊನೆಯ ರಾಜ ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಿಗೊಳಿಸಿ ಕೊಡಗು ಸಂಸ್ಥಾನವನ್ನು ವಶಪಡಿಸಿಕೊಂಡು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದರು. ಇದರಿಂದ ಕೊಡಗಿನ ದೇಶ ಪ್ರಮೀಗಳು ಮತ್ತು ಸ್ವತಂತ್ರ್ಯಪ್ರಿಯರು ಸ್ವಾಮಿ ಅಪರಂಪರ, ಕಲ್ಯಾಣಸ್ವೇಲು, ಮತ್ತು ಪುಟ್ಟ ಬಸಪ್ಪ ನೇತೃತ್ವದಲ್ಲಿ ರಾಜಮನೆತನವನ್ನು ಆಧಾರಕ್ಕೆ ತರುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ದಂಗೆಯೆದ್ದರು.

- **ಬಾದಾಮಿಯ ಬಂಡಾಯ (1841)**

  1841 ರಲ್ಲಿ ಬಾದಾಮಿಯಲ್ಲಿ ನರಸಿಂಗರಾವ್ ಪೇಟ್ಕರ್ ಎಂಬುವವನ್ನು ಬ್ರಿಟಿಷರ ದಾಸ್ಯವನ್ನು ಕಿತ್ತೊಗೆಯಲು ದಂಗೆಯೆದ್ದನು. ಆದರೆ ಬ್ರಿಟಿಷರು ಅವನನ್ನು ಜೀವಾವಧೀ ಶಿಕ್ಷೆ ವಿಧಿಸಿದರು.

- **ನಿಪ್ಪಾಣಿ ದಂಗೆ (1841)**

  ನಿಪ್ಪಾಣಿಯಲ್ಲಿ ರಘುನಾಥರಾವ್ ದೇಸಾಯಿ ಎಂಬುವವನು 1841ರಲ್ಲಿ ಬ್ರಿಟಿಷರ ವಿರುದ್ಧ ದಂತೆಯೆದ್ದು ಬ್ರಿಟಿಷರಿಗೆ ಕಪ್ಪಕೊಡಲು ನಿರಾಕರಿಸಿದನು. ಇವನು ಸತಾರದ ಮರಾಠರ ಸಾಮಾಂತನಾಗಿದ್ದನು. ಆದು ಬ್ರಿಟಿಷರು ಇವನ ದಂಗೆಯನ್ನು ಅಡಗಿಸಿದರು.

**ಕರ್ನಾಟಕದಲ್ಲಿ 1857ರ ಸಿಪಾಯಿ ದಂಗೆಯ ಪ್ರಭಾವ/ಕರ್ನಾಟಕದಲ್ಲಿ ನಡೆದ ದಂಗೆಗಳು:**

ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಭಾರತದಲ್ಲಿ ಜರುಗಿದ ಮೊಟ್ಟಮೊದಲ ಅತ್ಯಂತ ಬೃಹತ್ ಬಂಡಾಯವೆಂದರೆ 1857ರ ಸಿಪಾಯಿ ದಂಗೆ ಅಥವಾ ಭರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಈ ದಂಗೆಯ ಪ್ರಭಾವದಿಂದ ಉತ್ತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಹಲವಾರು ಬಂಡಾಯಗಳು ಸಂಭವಿಸಿ ಕನ್ನಡಿಗರಲ್ಲೂ ರಾಷ್ಟ್ರಪ್ರೇಮ ಚಿಗರೊಡೆಯಿತು "ಸಾವು ಇಲ್ಲವೆ ಸ್ವಾತಂತ್ರ್ಯ ಎಂಬ ಘೋಷಣೆ ಕರ್ನಾಟಕದ ಮೂಲೆ ಮೂಲೆಯಲ್ಲೂ ಪ್ರತಿಧ್ವನಿಸಿತು ಪ್ರಮುಖ ಬಂಡಾಯಗಳು ಈ ಕೆಳಗಿನಂತಿವೆ.

**ಹಲಗಲಿಯ ಬೇಡರ ದಂಗೆ (1857)**

1857ರ ಹಲಗಲಿಯ ಬೇಡರ ದಂಗೆ ಭಾರತದ ಸ್ವತಂತ್ರ ಚಳುವಳಿಯ ಇತಿಹಾಸದಲ್ಲಿ ಒಂದು ಚಿರಸ್ಮರಣೀಯ ಘಟನೆ. ಹಲಗಲಿ ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಒಂದು ಬೇಡ ಜನಾಂಗದಿಂದ ತುಂಬಿದ್ದ ಪುಟ್ಟಗ್ರಾಮ. ಭೇಟೆ ಮತ್ತು ಸೈನ್ಯವೇ ಅವರಿಗೆ ________ __ ಹೆತ್ತ ತಾಯಿಯಂತೆ ಗೌರವಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಅವುಗಳನ್ನು ಪವಿತ್ರ ಭಾವನೆಯಿಂದ ಪೂಜಿಸುತ್ತಿದ್ದರು. ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು.

1857ರ ಸೆಪ್ಟೆಂಬರ್ 11 ರಂದು ಭಾರತೀಯರನ್ನು ನಿಶ್ಯಸ್ತ್ರೀಕರಣಗೊಳಿಸುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಒಂದು ವೇಳೆ ಪಡೆಯಲೇ ಬೇಕಾದರೆ ನೊಂದಾವಣಿ ಮೂಡಿಸಿಕೊಂಡು ಸರ್ಕಾರದ ಪರವಾನಗಿ ಪಡೆಯಬೇಕು. ಮುಧೋಳ ಸಂಸ್ಥಾನದಲ್ಲಿ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತರುವ ಹೊಣೆ ಹೊತ್ತಿದ ಕೃಷ್ಣರಾಯನ ಎಲ್ಲಾ ಪ್ರಯತ್ನಗಳಿಗೂ ಮಣಿಯದೆ ಸ್ವತಂತ್ರ್ಯ ಪ್ರೇಮಿಗಳೂ, ಸ್ವಾಭಿಮಾನಿಗಳೂ ಆಗಿದ್ದ ಬೇಡರು ನಿರಾಕರಿಸಿದರು. ಇದರಿಂದ ಕೋಪಗೊಂಡ ಸರ್ಕಾರ ಎಲ್ಲಾ ದಿಕ್ಕುಗಳಿಂದಲೂ ಹಲಗಲಿಗೆ ಮುತ್ತಿಗೆ ಹಾಕಿದವು. ಮನಗಳನ್ನೇ ಯುದ್ಧರಂಗ ಮಾಡಿಕೊಂಡು ಕಾ__ ಬೇಡರು ಸ್ತ್ರೀಯರನ್ನು ಮಾನಭಂಗ ಮಾಡುವಂತಹ ಹೀನ ಕೃತ್ಯವನ್ನೆಸಿದರೂ ಧೈರ್ಯಗುಂದದೆ ಬ್ರಿಟಿಷರ ವಿರುದ್ಧ ಹೋರಾಡಿದರೂ. ಕೊನೆಗೆ ಹತಾಶರಾಗಿ ತಮ್ಮ ಮನಗಳಿಗೆ ತಾವೇ ಬೆಂಕಿ ಹಚ್ಚಿಕೊಂಡು ಸುಟ್ಟು ಬೂದಿಯಾದರು. ಹಲಗಲಿಯ ಬೇಡರ ತ್ಯಾಗದ ಬಲಿದಾನ ಭಾರತದ ಸ್ವತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಹೆಗ್ಗುರುತು.

**ಸುರಪುರದ ವೆಂಕಟಪ್ಪ ನಾಯಕ (1857)**

1857ರಲ್ಲಿ ಸಂಭವಿಸಿದ ಬಂಡಾಯಗಳಲ್ಲಿ ಸುರಪುರದ ವೆಂಕಟಪ್ಪ ನಾಯಕನ ದಂಗೆಯೂ ಒಂದು. ಇದು ಗುಲ್ಬರ್ಗ ಜಿಲ್ಲೆಯ ಬ್ರಿಟಿಷರ ಅಧೀನಕ್ಕೆ ಒಳಪಟ್ಟ ಚಿಕ್ಕ ಸಂಸ್ಥಾನವಾಗಿತ್ತು. 1853ರಲ್ಲಿ ವೆಂಕಟಪ್ಪನಾಯಕ ವ್ಯಾಪ್ತಿ ವಯಸ್ಸಿಗೆ ಬಂದ ಅಧಿಕಾರ ವೆರಿಸಿಕೊಂಡನು. 1857ರ ಸಿಪಾಯಿದಂಗೆ ಆರಂಭವಾದಾಗ ಸುರಪುರದಲ್ಲಿ ಬ್ರಿಟಿಷ್ ರೆಸಿಡೆಂಟ್‌ನನ್ನು ಇರಿಸಿಕೊಳ್ಳುವಂತೆ ಸೂಚಿಸಿದರೆ ಸ್ವತಂತ್ರ್ಯ ಪ್ರೇಮಿಯಾಗಿದ್ದ ಇವನು ತಿರಸ್ಕರಿಸಿದನು. ಬ್ರಿಟಿಷರ ಅಧೀನವಾದ ಭಾರತವನ್ನು ವಿಮೋಚನೆಗೊಳಿಸುವ ಹೋರಾಟಕ್ಕೆ ವೆಂಕಟಪ್ಪ ಕೈಜೋಡಿಸಿ ತನ್ನ ರಾಯಭಾರಿಯನ್ನು ಕಾನ್ಪುರದ ನಾನಾಸಾಹೇಬನ ಅಸ್ಥಾನಕ್ಕೆ ದಂಗೆ ನಡೆಸಲು ನಿರ್ದೇಶನ ತೋರಿದನು. ಮಾಳಖೇಡದ ಜಮೀನ್ದಾರ್, ಬಿಜಾಪುರ ಜಿಲ್ಲೆಯ ಜಂಬಗಿಯ ದೇಶಮುಖ್ ಮೊದಲಾದವರು ಅವನಿಗೆ ಧನಸಹಾಯ ಮಾಡಿದರು. ಇದರಿಂದ ಸ್ಫೂರ್ತಿಗೊಂಡ ವೆಂಕಟಪ್ಪ ನಾಯಕ 1857ರಲ್ಲಿ ಬ್ರಿಟಿಷರ ವಿರುದ್ಧ ಬಂಡಾಯದ ಬಾವುಟ ಹಾರಿಸಿದನು. ಆಗ ಬ್ರಿಟಿಷ್ ಸರ್ಕಾರ ಬಂಡಾಯವನ್ನು ಹತ್ತಿಕ್ಕಲು 1858ರಲ್ಲಿ ರೌಪ್ಟ್ನ್ ವಿಂಡ್ ಹ್ಯಾಮನ್‌ನ ನಾಯಕತ್ವದಲ್ಲಿ ಒಂದು ಸೈನ್ಯವನ್ನು ರವಾನಿಸಿತು. ವಾಗಟಗೇರಿಯ ಭೀಮರಾಯನ ದೇಶದ್ರೋಹದಿಂದಾಗಿ ಪರಾಭವಗೊಂಡ ನಾಯಕನು ಹೈದರಾಬಾದಿಗೆ ಫಲಾಯನ ಮಾಡಿದನು. ಕೊನೆಗೂ ಹೈದರಾಬಾದಿನ ನಿಜಾಮ ಅವನನ್ನು ಬಂದಿಸಿ ಬ್ರಿಟಿಷರಿಗೆ ಒಪ್ಪಿಸಿದನು, ನಂತರ ಅವನನ್ನು ಮರಣದಂಡನೆಗೆ ಗುರಿಪಡಿಸಲಾಯಿತು. ಆದರೆ ಸ್ವಾಭಿಮಾನಿಯಾಗಿದ್ದ 23 ವರ್ಷದ ಯುವರಾಜಕುಮಾರ "ಪರಕೀಯರ ಕೈಯಲ್ಲಿ ಸಾಯಿಯುವುದಕ್ಕಿಂತ ಸ್ವಹತ್ಯೆಯೇ ಮೇಲೆಂದು" ಭಾವಿಸಿ ತೆಲೆಗೆ ಗುಮಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಿತು.

**ನರಗುಂದದ ದೇಸಾಯಿ ಬಾಬಾ ಸಾಹೇಬ್ (1857)**

1857ರಲ್ಲಿ ಬ್ರಿಟಿಷರ ವಿರುದ್ಧ ನಡೆದ ದಂಗೆಗಳಲ್ಲಿ ಕರ್ನಾಟಕದ ನರಗುಂದದ ದಂಗೆಯೂ ಒಂದು ಈ ದಂಗೆಯ ಮುಖಂಡ ಬಾಬಾ ಸಾಹೇಬ್ ಎಂದು ಜನಪ್ರಿಯಗಳಿಸಿದ್ದ ದೇಸಾಯಿ ಬಾಸ್ಕರ್‌ರಾವ್ ಇವನಿಗೆ ಮಕ್ಕಳಿಲ್ಲದ ಕಾರಣ ದತ್ತು ಮಗುವನ್ನು ಸ್ವೀಕರಿಸಿ ಬ್ರಿಟಿಷರ ಅನುಮತಿ ಕೇಳಿದನು ಆದರೆ ಧಾರವಾಡದ ಕಲೆಕ್ಟರ್ ಬ್ರಿಟಿಷ್ ಗವರ್ನರ್ ಜನರಲ್ ಡಾಲಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವ ಕಾಯ್ದೆ ಅಡಿಯಲ್ಲಿ ನಿರಾಕರಿಸಲಾಯಿತು ಮತ್ತು 1857 ಜಾರಿಗೆ ತಂದು ನಿಶ್ಯಸ್ತ್ರೀಕರಣ ಕಾಯಿದೆ. ಅವನ ಕ್ರೋಧಕ್ಕೆ ಕಾರಣ ಬ್ರಿಟಿಷರ ವಿರುದ್ಧ ಬಂಡಾಯದ ಕಹಳೆ ಮೊಳಗಿಸಿದನು. ಈ ಬಂಡಾಯವನ್ನು ಹತ್ತಿಕ್ಕಲ್ಲು ಬಂದಿದ್ದ ಕರ್ನಲ್ ಮಾನ್ಸನ್‌ನ್ನು ಕೊಂದು ಹಾಕಿದನು. ಇದರಿಂದ ಕ್ರೋಧಗೊಂಡ ಬ್ರಿಟಿಷರು ದೇಶದ್ರೋಹಿಯೊಬ್ಬನ ನೆರವಿನಿಂದ ಬಾಬಾಸಾಹೇಬ್ ನನ್ನು ಬಂಧಿಸಿ ವಿಚಾರಣೆ ನಡೆಸಿ 1858ರ ಜೂನ್ 12 ರಂದು ಗಲ್ಲಿಗೇರಿಸಿದಿನು.

**ಮುಂಡರಗಿ ಭೀಮರಾವ್ (1857)**

1857ರಲ್ಲಿ ಬ್ರಿಟಿಷ್ ವಿರುದ್ಧ ನಡೆದ ದಂಗೆಗಳಲ್ಲಿ ಮುಂಡರಗಿಯ ದಂಗೆ ಅತ್ಯಂತ ಪ್ರಮುಖವಾದುದು. ಈ ದಂಗೆಯ ನೇತಾರ ಭೀಮರಾವ್ ಈತ ಯಾವುದೇ ಸಂಸ್ಥಾನದ ರಾಜನಾಗಿರಲಿಲ್ಲ, ಒಬ್ಬ ಸಾಮಾನ್ಯ ಅಧಿಕಾರಿಯಾಗಿದ್ದರೂ ಸ್ವತಂತ್ರ್ಯ, ದೇಶ ಪ್ರೇಮಿಯಾಗಿದ್ದನು ಇವನು ಬ್ರಿಟಿಷರ ದಬ್ಬಾಳಿಕೆ ಮತ್ತು ಶೋಷಣೆಯಿಂದ ಅತೃಪ್ತಿಗೊಂಡು ತಹಸೀಲ್ದಾರ್ ಹುದ್ದೆಗೆ ರಾಜೀನಾಮೆ ನೀಡಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ದುಮುಕಿದನು. ಇದರಿಂದ ಆತಂಕಗೊಂಡ ಬ್ರಿಟಿಷರಉ 1858ರ ಮೇ 31 ರಂದು ಕೊಪ್ಪಳದ ಮೂಲೆ ದಾಳಿ ಮಾಡಿದನು. ತೀವ್ರ ಹೋರಾಡ ನೆಡೆಸಿದರೂ ಸಫಲವಾಗದೆ ಇದ್ದಾಗ ತನ್ನ ತಲೆಗೆ ಗುಂಡಿಟ್ಟುಕೊಂಡು ವೀರಮರಣವನ್ನಪ್ಪಿದನು. ಅವನ ಹೆಸರು ಸ್ವತಂತ್ರ್ಯ ಹೋರಾಟದಲ್ಲಿ ಇಂದಿಗೂ ಅಜರಾಮರವಾಗಿದೆ.

**ಸೂಪಾದ ದಂಗೆ (1857)**

ಉತ್ತರ ಕನ್ನಡ ಜಿಲ್ಲೆಯ ಸೂಪಾ ತಾಲ್ಲೂಕಿನ ಬುಡಕಟ್ಟು ಜನರು 1857ರಲ್ಲಿ ನಾನಾ, ಬಾಬಾ; ಹನುಮಂತ ಮತ್ತು ಶಾಂತ ಫಡ್ನೀಸ್ ನೇತೃತ್ವದಲ್ಲಿ ಬಂಡಾಯ ಹೂಡಿರು. 1859ರವರೆಗೂ ಬಂಡಯ ಮುಂದುವರೆಯಿತು. ಅಂತಿಮವಾಗಿ ಬ್ರಿಟಿಷರು ಈ ದಂಗೆಯನ್ನು ಅಡಗಿಸಿದರು.

ಹೀಗೆ ಕರ್ನಾಟಕದಲ್ಲಿ 1858ರವರೆಗೂ ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಹಲವಾರು ಸಶಸ್ತ್ರ ಬಂಡಾಯಗಳು ಸಂಭವಿಸಿದವು ಈ ದಂಗೆಕೋರರು ತಮ್ಮ ಸವಹಿತಾಸಕ್ತಿಯ ಜೊತೆಗೆ ದೇಶಪ್ರೇಮದಿಂದಲೂ ಸ್ಫೂರ್ತಿಗೊಂಡರಿದ್ದರು. ಆದರೆ ಆಗಾಧವಾದ ಸೈನ್ಯಬಲ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಬಲದ ಮೂಲಕ ಬಂಡಾಯವನ್ನು ಶಮನ ಮಾಡಿದರು. ಇದರ ವಿಫಲತೆಯಿಂದ ಜಾಗೃತಿಗೊಂಡ ಭಾರತೀಯರು ವಿದ್ಯಾವಂತರು, ಬುದ್ಧಿಜೀವಿಗಳು ಹಿಂಸೆಯನ್ನು ತ್ಯಜಿಸಿ ಅಹಿಂಸಾತ್ಮಕ ಚಳುವಳಿಯನ್ನು ಆರಂಭಿಸಿದರು. ಈ ದಿಸೆಯಲ್ಲಿ 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೇಸ್ ಪಕ್ಷ ಸ್ಥಾಪನೆಯಾಯಿತು. ಪರಿಣಾಮವಾಗಿ

**ಕರ್ನಾಟಕದ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು ಕರ್ನಾಟಕದಲ್ಲಿ ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿ/ಕರ್ನಾಟಕದಲ್ಲಿ ರಾಷ್ಟ್ರೀಯ ಚಳುವಳಿ:–**

ಬ್ರಿಟಿಷರ ವಿರುದ್ಧ ನಡೆದ ಕರ್ನಾಟಕದಲ್ಲಿ ಸ್ವತಂತ್ರ್ಯ ಚಳುವಳಿ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಆರಂಭದಿಂದ 1857ರವರೆಗೆ ನಡೆಸಿದ ಸಶ್ತ್ರಬಂಡಾಯಗಳು ವಿಫಲವಾದವು. ಇದರಿಂದ ಎಚ್ಚರ ಪಾಠ ಕಲಿತ ಭಾರತೀಯರು ತಾಯ್ನಾಡಿನ ಬಂದ ಮುಕ್ತಿಗಾಗಿ ___ ಸ್ವಾತಂತ್ರ್ಯ ಚಳುವಳಿಯನ್ನು ಆರಂಬಿಸಿದರು. ಈ ದಿಸೆಯಲ್ಲಿ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡಿದ್ದರಿಂದ ಕನ್ನಡಿಗರು ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸ ಸ್ಥಾಪನೆಯೊಂದಿಗೆ ಆರಂಭವಾದ ಈ ಚಳುವಳಿ 1847ರ ವರೆಗೂ ಮುಂದುವರೆಯಿತು.

**<u>ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಉದಯ</u>**

ಕ್ರಿ.ಶ.19ನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಮತ್ತು ಇಂಗ್ಲೀಷ್ ಶಿಕ್ಷಣದ ಪ್ರಭಾವವದಿಂದಾಗಿ ಈ ಮೇಲಿನ ಕಾರಣಗಳಿಂದ ___ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಕನ್ನಡಿಗರ ಹೃದಯಾಂತರಾಳದಿಂದ ಹೊರಹಾಕಲಾಯಿತು. ದೇಶಾಭಿಮಾನದ ಪ್ರತೀಕವೇ "ಕರ್ನಾಟಕದ ಸ್ವಾತಂತ್ರ್ಯ ಚಳುವಳಿ" ಭಾರತೀಯರಲ್ಲಿ ಒಡ___ ರಾಷ್ಟ್ರೀಯತೆಯ ಫಲವಾಗಿ 1885ರಲ್ಲಿ 'ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಾಯಿತು. ಈಗ ಬ್ರಿಟಿಷರ ವಿರುದ್ಧ ಭಾರತದ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು. 1885 – 1947ರವರೆಗೆ ವಿಸ್ತರಿಸಿದ್ದೆ ಕರ್ನಾಟಕದ ಸ್ವತಂತ್ರ್ಯ ಚಳುವಳಿಯನ್ನು ಎರಡು ಭಾಗವಾಗಿ ವಿಂಗಡಿಸಿಬಹುದು.

**2. ಗಾಂಧಿಯುಗದ ಪೂರ್ವದ ಸಾತಂತ್ರ್ಯ ಚಳುವಳಿ**

1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯೊಂದಿಗೆ ಬ್ರಿಟಿಷರ ವಿರುದ್ಧ ಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು. ಇದರ ಸ್ಥಾಪಕರು ಭಾರತದ ನಿವೃತ್ತ ___ ಅಧಿಕಾರಿಯಾಗಿದ್ದ ಎ.ಒ.ಹ್ಯೂಂ. 1885ರ ಡಿಸೆಂಬರ್ 28 ರಂದು ಬೊಂಬಾಯಿ ನಗರದಲ್ಲಿ ಪ್ರಥಮ ಅಧಿವೇಶನ ಡಬ್ಲ್ಯೂ.ಸಿ.ಬ್ಯಾನರ್ಜಿಯವರ ನೇತೃತ್ವದಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಬಳ್ಳಾರಿಯ ಕೋಲಾಚಲಂ ವೆಂಕಟರಾವ್ ಮತ್ತು ಬೆಳಗಾವಿಯ ಭಾವೋ ಸಹೇಬ ಭಾಟೆ ಎಂಬುವವರು ಭಾಗವಹಿಸಿದ್ದರು.

**ವಂಗಭಂಗ ಚಳುವಳಿಯ ಪ್ರಭಾವ (1903)**

ಪಶ್ಚಿಮ ಬಂಗಾಳ ಭಾರತದ ರಾಷ್ಟ್ರೀಯತೆಯ ಕೇಂದ್ರಗಳಲ್ಲಿ ಬಂದಾಗಿದ್ದು ಇದನ್ನು ಮನಗೊಂಡ ಲಾರ್ಡ್ ಕರ್ಜನ್ 1905ರಲ್ಲಿ ಆಡಳಿತದ ನೆಪವೊಡ್ಡಿ ಬಂಗಾಳ ಪ್ರಾಂತ್ಯವನ್ನು ಪೂರ್ವ ಬಂಗಾಳ ಮತ್ತು ಪಶ್ಚಿಮ ಬಂಗಾಳ ಎಂದು ವಿಭಜಿಸಿದನು. ಇದು ಒಡೆದು ಆಳುವ ತಂತ್ರವಾಗಿತ್ತು ಇದು ಬಂಗಾಳವನ್ನು ವಿಭಜಿಸಿ ಎಂದು ಪ್ರಸಿದ್ಧಿ ಪಡೆದಿದೆ. ಈ ವಿಭಜನೆಯನ್ನು ವಿರೋಧಿಸಿ ಸುರೇಂದ್ರನಾಥ್ ಬ್ಯಾನರ್ಜಿಯವರ ನಾಯಕತ್ವದಲ್ಲಿ ಉಗ್ರವಾದ ಚಳುವಳಿಯನ್ನು ಆರಂಭಿಸಿದರು. ಇದರ ವಿರುದ್ಧ ಸ್ವದೇಶಿ ಮತ್ತು ಬಹಿಷ್ಕಾರ ಎಂಬ ಅಸ್ತ್ರವನ್ನು ಪ್ರಯೋಗಿಸಿದರು. ಇದು ಕೇವಲ ಬಂಗಾಳ ಮಾತ್ರವಲ್ಲದೇ ಇಡೀ ದೇಶದಾದ್ಯಂತ ಹಬ್ಬಿಕೊಂಡಿತು ಮತ್ತು ವ್ಯಾಪಕವಾದ ಬೆಂಬಲ ದೊರೆಯಿತು. ಈ ಘಟನೆ ದೇಶದಲ್ಲಿ ಮುಂದಾಗಲು ರಾಷ್ಟ್ರೀಯ ಚಳುವಳಿಗೆ ಮಂಗಳ ಹಾಡಿ. ತೀವ್ರಗಾಮಿ ರಾಷ್ಟ್ರೀಯ ಚಳುವಳಿಗೆ ಮುನ್ನುಡಿ ಬರೆಯಿತು. 1906 ರಲ್ಲಿ ಕಲ್ಕತ್ತ ಅಧಿವೇಶನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ವರಾಜ್ಯವನರನು ಪಡೆಯುವುದೇ ತನ್ನ ಗುರಿ ಎಂದು ಘೋಷಿಸಿತು. ಈ ಚಳುವಳಿಯನ್ನು ಬೆಂಬಲಿಸಿ 1905 ರಲ್ಲಿ ಧಾರವಾಡದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು.

ತಿಲಕರು ಉತ್ತರ ಕರ್ನಾಟಕ ಭಾಗದಲ್ಲಿ ಸಂಚರಿಸಿ ಸ್ವದೇಶೀ, ಸ್ವರಾಜ್ಯ, ಮತ್ತು ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನು ಜನರಿಗೆ ತಿಳಿಯಪಡಿಸುವುದರ ಮೂಲಕ ರಾಷ್ಟ್ರೀಯ ಪ್ರಜ್ಞೆಯನ್ನು ಬಡಿದೆಬ್ಬಿಸಿದರು 1905ರಲ್ಲಿ ಬಳ್ಳಾರಿಗೂ ಮತ್ತು 1906ರಲ್ಲಿ ಬೆಳಗಾವಿಗೆ ಭೇಟಿ ನೀಡಿ ಜನರು ಸ್ವತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಇದಲ್ಲದೆ ತಿಲಕರು ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಸ್ವದೇಶೀ ವಸ್ತುಗಳನ್ನು ಬಳಸುವಂತೆ ಹಾಗೂ ರಾಷ್ಟ್ರೀಯ ಶಾಲಾ–ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಸೇರಿಸುವಂತೆ ಕರೆ ನೀಡಿದರ ಫಲವಾಗಿ ನವಲಗೊಂದ, ಅಗಟಿ, ಮಿಶ್ರಕೋಟೆ, ಮುಂತಾದ ಸಣ್ಣ ಊರಗಳಲ್ಲಿ ದೇಶೀಯ ಶಾಲೆಗಳು ಸ್ಥಾಪನೆಯಾದವು. ತಿಲಕರ ಪ್ರಭಾವದಿಂದ ಬೆಳಗಾವಿಯ ಗಂಗಾಧರರಾವ್ ದೇಶಪಾಂಡೆ, ಆಲೂರು ವೆಂಕಟರಾವ್, ಬಿಜಾಪುರದ ಶ್ರೀನಿವಾಸ ಕೌಜಲಗಿ, ಕಡಪ ರಾಮಚಂದ್ರರಾವ್, ಮುಂತಾದವರಿ ಸ್ವದೇಶೀ ಚಳುವಳಿಯಲ್ಲಿ ಭಾಗವಹಿಸಿ ಉತ್ತರ ಕರ್ನಾಟಕದಾದ್ಯಂತ ಸಚಂರಿಸುತ್ತ ಸ್ವತಂತ್ರ್ಯ ಚಳುವಳಿಯನ್ನು ಬಲಪಡಿಸಿರು.

ಹಲವಡೆ ವಿದೇಶಿ ವಸ್ತುಗಳು ತಿರಸ್ಕರಿಸಿ ಸ್ವದೇಶಿ ಕಾರ್ಖಾನೆಗಳು ಸ್ಥಾಪಿತವಾದವು. ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿ ಆರಂಭವಾಯಿತು. ಇದೇ ಸಮಯದಲ್ಲಿ ಕರ್ನಾಟಕದಾದ್ಯಂತ ಪ್ರಕಟವಾದ ಕನ್ನಡ ವೃತ್ತ ಪತ್ರಿಕೆಗಳು ಸ್ವತಂತ್ರ್ಯ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಿದವು ದಾವಣಗೆರೆಯ ಧನುರ್ಧಾರಿ, ಬಳ್ಳಾರಿಯ ವಿಜಯಧ್ವಜ, ಧಾರವಾಡದ ಕರ್ನಾಟಕದ ವೃತ್ತ, ಬಿಜಾಪುರದ ಕರ್ನಾಟಕ ವೃತ್ತ, ಮಂಗಳೂರಿನ ಸ್ವದೇಶಾಭಿಮಾನಿ ಮುಂತಾದವು. ತಿಲಕರನ್ನು ಬೆಂಬಲಿಸಿ ಬೆಳಗಾವಿಯಲ್ಲಿ ಗೋವಿಂದರಾವ್ ಯಾಳಗಿ ಮತ್ತು ಹನುಮಂತರಾವ್ ದೇಶಪಾಂಡೆಯವರು ಮ್ಯಾಚಿನಿ ಕ್ಲಬ್ ಎಂಬ ತೀವ್ರಗಾಮಿ ಸಂಸ್ಥೆಯನ್ನು ಹುಟ್ಟುಹಾಕಿದರು. ತಿಲಕರು 'ಸ್ವರಾಜ್ಯ ನನ್ನ ಆ ಜನ್ಮ ಸಿದ್ದ ಹಕ್ಕನ್ನು ಪಡೆದೆ ಪಡೆಯುತ್ತೇನೆ ಎಂದು ಹೇಳಿದ್ದು ಜನತೆಯಲ್ಲಿ ವಿದ್ಯುತ್ ಸಂಚಾರ ಮಾಡಿದಂತಾಯಿತು. ಇವರ ಮೇಲೆ ರಾಜ ದ್ರೋಹ ಅಪಾದನೆ ಹೊರಸಿ ___ ಬರ್ಮಾದ ಮಾಂಡಲೇ ಜೈಲಿಗೆ ಸಾಗಿಸಿತು. ಇದನ್ನು ವಿರೋಧಿಸಿ ಕರ್ನಾಟಕದಲ್ಲಿ ಉಗ್ರವಾದ ಪ್ರತಿಭಟಿಸಿ ನಡೆಸಿ ಬಿಡುಗಡೆಯಾದ ಬಂದ ನಂತರ 1916ರಲ್ಲಿ ಹೊಂ–ರೂಲ್–ಲೀಗ್‌ನ್ನು ಸ್ಥಾಪಿಸಿದರು. ಇದರ ಶಾಖೆಗಳು ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಸಿದ್ದಾಪುರ, ಬಳ್ಳಾರಿ, ಮಂಗಳೂರು ಮುಂತಾದ ಕಡೆ ಸ್ಥಾಪನೆಯಾಯಿತು. ಹೈದರಾಬಾದ್ ಕರ್ನಾಟಕದ ಪ್ರಾಂತ್ಯಗಳಾದ ಚಂಚೋಳಿ, ಗುಲ್ಬರ್ಗ, ರಾಯಚೂರು, ಕ___ ಮುಂತಾದ ಕಡೆ 'ಆರ್ಯ ಸಮಾಜ ಪ್ರಭಾವದಿಂದ ರಾಷ್ಟ್ರೀಯ ಚಳುವಳಿ ಹೆಚ್ಚಿತು. ಅದೇ ರೀತಿಯಲ್ಲಿ ಶ್ರೀಮತಿ ಅನಿ ಬೆಸೆಂಟರು ತಿಲಕರೊಂದಿಗೆ ಸಹಭಾಗಿಯಾಗಿ ಹೋರಾಟ ಮಾಪಿದ್ದಲ್ಲದೇ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಿದರು. 1917ರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಹೈಸ್ಕೂಲ್ ಸ್ಥಾಪನೆಯಾಯಿತು. ಒಟ್ಟಿನಲ್ಲಿ ತಿಲಕರ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ರಾಷ್ಟ್ರೀಯ ಚಳುವಳಿ ಪ್ರಾರಂಭವಾಯಿತು.

**ಸೂರತ್ತಿನ ಒಡುಕು (1907)**

1907 ಗುಜರಾತಿನ ಸೂರತ್ತಿನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೇಸ್ ಅಧಿವೇಶನದಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂದು ರಾಷ್ಟ್ರೀಯ ಕಾಂಗ್ರೇಸ್ ಇಬ್ಭಾಗವಾಯಿತು. ಈ ಘಟನೆಗೆ ಸೂರತ್ತಿನ ಒಡಕು ಎಂದು ಹೆಸರು. ಈ ಸೂರತ್ ಅಧಿವೇಶನದಲ್ಲಿ ಕರ್ನಾಟಕದ ಕಾಂಗ್ರೇಸ್ ಮುಖಂಡರಾದ ಆಲೂರು ವೆಂಕಟರಾವ್, ಶ್ರೀನಿವಾಸರಾವ್, ಕೌಜಲಗಿ, ಗಂಗಾಧರರಾವ್ ದೇಶಪಾಂಡೆ, ಗೋವಿಂದ ರಾವ್ ಯಾಳಗಿ, ಮೊದಲಾದವರೂ ಭಾಗವಹಿಸಿದ್ದರು. ಇವರೆಲ್ಲಾ ತೀವ್ರಗಾಮಿ ಪಂಗಡದ ನಾಯಕರಾದ ಬ.ಹೆ.ತಿಲಕರಿಗೆ ಬೆಂಬಲ ನೀಡಿದರು.

ಬೆಳಗಾವಿಯಲ್ಲಿ ಗೋವಿಂದರಾವ್ ಯಾಳಗಿ ಮತ್ತು ಹನುಮಂತರಾವ್ ದೇಶಪಾಂಡೆಯವರು "ಮ್ಯಾಜಿನಿಕ್ಲಬ್" ಎಂಬ ತೀವ್ರಗಾಮಿ ಸಂಸ್ಥೆಯನ್ನು ಸ್ಥಾಪಿಸಿದರು.

ಈ ಅಧಿವೇಶನದಿಮದ ಹಿಂತಿರುಗಿದ ತಕ್ಷಣವೇ ತಿಲಕರು ಬೊಂಬಾಯಿ ಪ್ರದೇಶದ ಅಧಿವೇಶನ ನಡೆಸಿ, ತೀವ್ರಗಾಮಿಗಳ ಗುರಿ ಮತ್ತು ಉದ್ದೇಶಗಳನ್ನು ವಿವರಿಸಿದರು. 1908ರಲ್ಲಿ ತಿಲಕರು ಬ್ರಿಟಿಷರ ವಿರುದ್ಧ ದೇಶದಾದ್ಯಂತ ಸ್ವದೇಶಿ ಚಳುವಳಿಯನ್ನು ಆರಂಭಿಸಿದರು. "ಸ್ವರಾಜ್ಯ ನನ್ನ ಆ ಜನ್ಮ ಸಿದ್ಧ ಹಕ್ಕು ಅದನ್ನು ಪಡದೇ ತೀರುತ್ತೇನೆ" ಎಂದು ಗುಡುಗಿದ ಶಬ್ಧ ಇವೇ ದೇಶದಲ್ಲಿ ಮೊಳಗಿತು 1908ರಲ್ಲಿ ಬ್ರಿಟಿಷರು ರಾಜ ದ್ರೋಹದ ಆರೋಪದ ಮೇಲೆ ಬಂಧಿಸಿ "ಮಾಂಡಲೆ ಜೈಲಿಗೆ ಸಾಗಿಸಿದರು ಇದರ ವಿರುದ್ಧ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಪ್ರತಿಭಟನೆಗಳು ಜರುಗಿದವು. ಇದೇ ಕಾಲದಲ್ಲಿ ಕಾರ್ನಾಡ್ ಸದಾಶಿವರಾಯರು ದಕ್ಷಿಣ ಕನ್ನಡದಲ್ಲಿ ಹಾಗೂ ಕೊಲಾಚಲಂ ವೆಂಕಟರಾವ್ ಬಳ್ಳಾರಿಯಲ್ಲಿ ರಾಷ್ಟ್ರೀಯ ಚಳುವಳಿಯನರನು ಸಕ್ರಿಯಗೊಳಿಸಿದರು.

**ಹೋಂರೂಲ್ ಚಳುವಳಿ (1916)**

ತಿಲಕರು ಸೆರವಾಸವನ್ನು ಮುಗಿಸಿಕೊಂಡುಬಂದ ಮೇಲೆ ಶ್ರೀಮತಿ ಆನಿಬೆಸೆಂಟ್ ಜೊತೆ ಸೇರಿಕೊಂಡು 1916ರಲ್ಲಿ "ಪ್ವಿಯೆಂ ಆಡಳಿತ"ವನ್ನು ಪಡೆಯುವುದಕ್ಕಾಗಿ ಬ್ರಿಟಿಷರ ವಿರುದ್ಧ 'ಹೋಂ ರೂಲ್ ಚಳುವಳಿ'ಯನ್ನು ಆರಂಭಿಸಿದರು. ಅದಕ್ಕಾಗಿ ತಿಲಕರು 1916ರಲ್ಲಿ ಪೂನಾದಲ್ಲಿ 'ಹೋಂ ರೂಲ್ ಲೀಗ್' ಎಂಬ ಸಂಘವನ್ನು ಸ್ಥಾಪಿಸಿದರು. ಆನಂತರ ಅವರು ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಸಂಕೇಶ್ವರ ಮೊದಲಾದ ಕಡೆಗಳಲ್ಲಿ ವ್ಯಾಪಕವಾಗಿ ಸಂಚರಿಸಿ. ಹೋಂ ರೂಲ್ ಲೀಗ್‌ನ ಶಾಖೆಗಳನ್ನು ಸ್ಥಾಪಿಸಲಾಯಿತು. ಇದರ ಕಾರ್ಯಚಟುವಟಿಕೆಗಳನ್ನು ಗಂಗಾಧರ ರಾವ್ ದೇಶಪಾಂಡೆಯವರು; ಆಲೂರು ವೆಂಕಟರಾಯರು ಅದರ ಚಟುವಟಿಕೆಗಳನ್ನು ವಿಸ್ತರಿಸಿದರು.

ಕರ್ನಾಟಕದಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಆಲೂರು ವೆಂಕಟರಾಯರು, ಕಡಪರಾಮಚಂದ್ರರಾವ್ ಮತ್ತು ಇತರರು 1916ರಲ್ಲಿ ಧಾರವಾಡದಲ್ಲಿ ಕರ್ನಾಟಕ ಸಭಾ ಎಂಬ ಸಂಘವನ್ನು ಸ್ಥಾಪಿಸಿದರು. ಕರ್ನಾಟಕಕ್ಕೆ ಪ್ರತ್ಯೇಕ ಕಾಂಗ್ರೆಸ್ ಶಾಖೆಯನ್ನು ರಚಿಸುವ ಮನವಿಗೆ 1920 ರಲ್ಲಿ ಈಡೇರಿತು. ಗಾಂಧೀಜಿಯವರು ಕಾರ್ನಾಡ್ ಸದಾಶಿವರಾಯರ ಆಹ್ವಾನದ ಮೇರೆಗೆ 1920 ರಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದರು.

ಕರ್ನಾಟಕದಲ್ಲಿ ಕನ್ನಡ ವೃತ್ತಪತ್ರಿಕೆಗಳು ಸವಾತಂತ್ರ್ಯ ಘೋಷವನ್ನು ಎಲ್ಲಾ ಕಡೆಯೂ ಮೊಳಗಿಸಿದವು. ಬಳ್ಳಾರಿಯ ವಿಜಯಧ್ವಜ, ದಾವಣಗೆರೆಯ ಧನುರ್ಧಾರಿ, ಮೈಸೂರು ಸಂಸ್ಥಾನದ ಕರ್ನಾಟಕ ಪ್ರಕಾಶಿತ, _______ ಕರ್ನಾಟಕದ ವೃತ್ತ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ, ಮಂಗಳೂರಿನ ಸ್ವದೇಶಾಭಿಮಾನಿ ಮೊದಲಾದ ಪತ್ರಿಕೆಗಳು ರಾಷ್ಟ್ರೀಯ ಭಾವನೆಯನ್ನು ಕೆರಳಿಸಿದವು. ಶ್ರೀಮತಿ ಅನಿಬೆಸೆಂಟರ ನೇತೃತ್ವದಲ್ಲಿ ಹಳೇ ಮೈಸೂರು ಪ್ರದೇಶದಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಲಾಯಿತು. ಅದೇ ರೀತಿಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಆರ್ಯ ಸಮಾಜದ ಪ್ರಭಾವದಿಂದ ರಾಷ್ಟ್ರೀಯ ಚಳುವಳಿಗೆ ಸ್ಫೂರ್ತಿ ದೊರೆಯಿತು.

1919ರಲ್ಲಿ ಬ್ರಿಟಿಷ್ ಸರ್ಕಾರ ಭಾರತೀಯರ ನಾಗರೀಕ ಹಕ್ಕುಗಳನ್ನು ದಮನಮಾಡುವ ಉದ್ದೇಶದಿಂದ ರೌಲತ್ ಕಾಯ್ದೆಯನ್ನು ಜಾರಿಗೆ ತಂದಿತು. ಇದನ್ನು ವಿರೋಧಿಸುವುದಕ್ಕಾಗಿ ಮಹಾತ್ಮ ಗಾಂಧೀ ಭಾರತದ ರಾಷ್ಟ್ರೀಯ ಚಳುವಳಿಗೆ ಪಾದಾರ್ಪಣೆ ಮಾಡಿದರು. ಅದಕ್ಕಾಗಿ 1919ರ ಫೆಬ್ರವರಿಯಲ್ಲಿ 'ಸತ್ಯಾಗ್ರಹ ಸಭಾ' ಎಂಬ ಸಂಘವನ್ನು ಸ್ಥಾಪಸಿದರು. ಕಾಯ್ದೆಯ ವಿರುದ್ಧ ದೇಶಾದ್ಯಂತ ಮುಷ್ಕರ ಹರತಾಳ ನಡೆಯಿತು.

ಇದರ ಪ್ರಭಾವ ಕರ್ನಾಟಕಕ್ಕೆ ವ್ಯಾಪಿಸಿತು ಕಾಯ್ದೆಯ ಪರಿಣಾಮವಾಗಿ 1919ರ ಏಪ್ರಿಲ್ 13 ರಂದು ಪಂಜಾಬಿನಲ್ಲಿ ನಡೆದ 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ' ದಂತಹ ದುರಂತ ಘಟನೆ ಸಂಭವಿಸಿತು.

**ಗಾಂಧೀ ಯುಗದ ಚಳುವಳಿ (1920–47)**

1920–47 ರವರೆಗಿನ ಕಾಲವನ್ನು ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಯುಗ ಎಂದು ಕರೆಯುತ್ತಾರೆ. ಏಕೆಂದರೆ ಇದುವರೆಗೂ ಕೇವಲ ವಿದ್ಯಾವಂತರಿಗೆ, ಬುದ್ಧಿಜೀವಿಗಳಿಗೆ, ಸುಶಿಕ್ಷಿತರಿಗೆ ಹಾಗೂ ಮೇಲ್ವರ್ಗದ ಜನರಿಗೆ ಮಾತ್ರ ಸೀಮಿತವಾಗಿದ್ದ ರಾಷ್ಟ್ರೀಯ ಚಳುವಳಿಯನ್ನು ಜನ ಸಾಮಾನ್ಯರ ಮನೆ ಬಾಗಿಲಿಗೆ ಕೊಂಡೊಯ್ದು ಅದನ್ನು ಜನತಾ ಆಂದೋಲನವನ್ನಾಗಿ ಪರಿವರ್ತಿಸಿದ ಕೀರ್ತಿ ಮಹಾತ್ಮ ಗಾಂಧೀಗೆ ಸಲುತ್ತದೆ.

1914ರಿಂದ 1919 ರವರೆಗೂ ತಟಸ್ಥರಾಗಿ ಉಳಿದದ್ದೆ ಗಾಂಧಿ 1919ರಲ್ಲಿ ಬ್ರಿಟಿಷ್ ಸರ್ಕಾರ ಜಾರಿಗೆ ತಂದ ಸುಪ್ರಸಿದ್ಧವಾದ ರೌಲತ್ ಕಾಯ್ದೆಯನ್ನು ವಿರೋಧಿಸುವುದಕ್ಕಾಗಿ ಭಾರತದ ರಾಷ್ಟ್ರೀಯ ಚಳುವಳಿಗೆ ಪಾದಾರ್ಪಣೆ ಮಾಡಿದರು. 1920 ರಲ್ಲಿ ತಿಲಕರ ಮರಣದ ನಂತರ ಭಾರತದ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವವನ್ನು ವರೆಸಿಕೊಂಡು ಗಾಂಧೀಜಿ ಬ್ರಿಟಿಷರ ವಿರುದ್ಧ "ಸತ್ಯಾಗ್ರಹ" ಎನ್ನುವ ಅಹಿಂಸಾತ್ಮಕವಾದ ಸ್ವಾತಂತ್ರ್ಯ ಚಳುವಳಿಯನ್ನು ಆರಂಭಿಸಿದರು.

**ಅಸಹಕಾರ ಚಳುವಳಿ (1920–22)**

ಗಾಂಧೀಜಿಯ ನಾಯಕತ್ವದಲ್ಲಿ ನಡೆದ ಮೊಟ್ಟಮೊದಲ ಸತ್ಯಾಗ್ರಹ ಚಳುವಳಿಯೆಂದರೆ ಅಸಹಕಾರ ಚಳುವಳಿ ಇದು 1920–22 ರಲ್ಲಿ ನಡೆಯಿತು. ಇದರ ಉದ್ದೇಶ ಸರ್ಕಾರದ ಕಾಯ್ದೆ ಕಟ್ಟಳೆಗಳಿಗೆ ಅಸಹಕಾರ ತೋರಿಸುವುದಾಗಿತ್ತು. ಈ ಚಳುವಳಿಯಿಂದಾಗಿ ಕರ್ನಾಟಕದಲ್ಲಿ ರಾಷ್ಟ್ರೀಯ ಭಾವನೆಯ ಪ್ರವಾಹ ಉಕ್ಕಿ ಹರಿಯಿತು.

1920ರಲ್ಲಿ ಗಾಂಧೀಜಿ ಭಾರತೀಯ ಮುಸ್ಲಿಂರು ಅಲಿ ಸಹೋದರರ ನಾಯಕತ್ವದಲ್ಲಿ ಆರಂಭಿಸಿದ್ದ ಖಿಲಾಫತ್ ಚಳುವಳಿಗೆ ತಮ್ಮ ಬೆಂಬಲ ನೀಡುವ ಮೂಲಕ ತಮ್ಮ ಅಸಹಕಾರ ಚಳುವಳಿಗೆ ಮುಸ್ಲಿಂರ ಬೆಂಬಲವನ್ನು ಪಡೆದುಕೊಂಡರು ಈ ಚಳುವಳಿಯ ಅಂಗವಾಗಿ ದೇಶದಾದ್ಯಂತ. ಕರಾನಿರಾಕರಣೆ ಚಳುವಳಿ, ವಿದೇಶಿ ವಸ್ತುಗಳು ಬಹಿಷ್ಕಾರ, ಸ್ವದೇಶೀ ಚಳುವಳಿ, ಖಾದಿ ಪ್ರಚಾರ, ಇತ್ಯಾದಿಗಳು ವ್ಯಾಪಕವಾಗಿ ಜರುಗಿದವು ಗಾಂಧೀ ಟೋಪಿ ಧರಿಸುವುದು, ಖಾದಿ ಬಟ್ಟೆ ಧರಿಸುವುದು ಜನಪ್ರಿಯವಾಯಿತು.

1921ರಲ್ಲಿ ಗಾಂಧೀಜಿ ಅಲಿ ಸಹೋದರರ ಜೊತೆಗೆ ಕರ್ನಾಟಕದಲಲಿ ಪ್ರವಾಸ ಮಾಡಿ ಅಸಂಖ್ಯಾತ ಕನ್ನಡಿಗರು ಚಳುವಳಿಗೆ ದುಮುಕುವಂತೆ ಪ್ರೇರೇಪಿಸಿದರು. ಸರ್ಕಾರಿ ಶಾಲಾ – ಕಾಲೇಜು, ಕೋರ್ಟ್ ಕಛೇರಿಗಳನ್ನು ಬಹಿಷ್ಕರಿಸಲಾಯಿತು. ಈ ಚಳುವಳಿಯಲ್ಲಿ ಕಾರ್ನಾಡ್ ಸದಾಶಿವರಾವ್, ಶ್ರೀನಿವಾಸ್‌ರಾವ್ ಕೌಜಲಗಿ, ಗಂಗಾಧರ ರಾವ್ ದೇಶಪಾಂಡೆ ಆಲೂರು ವೆಂಕಟರಾವ್, ಡಾ॥ ಎನ್.ಎಸ್.ಹರ್ಡೀಕರ್ ಮಂಜಪ್ಪ ಆರ್.ಆರ್.ದಿವಾಕರ್, ಕಾಕಾಕ್ರ ಮರತರ್ ಮೊದಲಾದ ಮುಖಂಡರು ಸಕ್ರಿಯವಾಗಿ ಭಾಗವಹಿಸಿದ್ದರು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬಾ________________________________________

ಕರ್ನಾಟಕದಲ್ಲಿ ರಾಷ್ಟೀಯತೆ ಉದಯವಾಯಿತು ಕನ್ನಡಿಗರು ರಾಷ್ಟ್ರೀಯತೆ ಜೊತೆಗೆ ಕರ್ನಾಟಕತ್ವ ಅಥವಾ ಪ್ರಾಂತೀಯ ಭಾವನೆಯು ಹುಲುಸಾಗಿ ಬೆಳೆಯಿತು ಇದರ ಪ್ರತಿಫಲವೇ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ.

1. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ : ಐರೋಪ್ಯರ ಆಗಮನದೊಂದಿಗೆ ಕರ್ನಾಟಕದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ ಪ್ರಸಾರವಾಯಿತು. ಅವರ ಆಚಾರ, ವಿಚಾರ, ರೂಢಿ, ಸಂಪ್ರದಾಯ, ಶಿಕ್ಷಣ ಪ್ರಸಾರ, ಧರ್ಮಪ್ರಸಾರ, ಸೇವಾಮನೋಭಾವನೆ ಇತ್ಯಾದಿಗಳಿಂದ ಕನ್ನಡಿಗರು ಪ್ರಭಾವಿತರಾಗಿ ರಾಷ್ಟ್ರೀಯ ಜಾಗೃತಿಯನ್ನು ಮೈಗೂಡಿಸಿಕೊಂಡರು. ಬುದ್ಧಿಜೀವಿಗಳು, ಸುಶಿಕ್ಷಿತರು, ವಿದ್ಯಾವಂತರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋದರು.

2. ಇಂಗ್ಲೀಷ್ ಶಿಕ್ಷಣದ ಪ್ರಭಾವ : ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯ ಸ್ಥಾಪನೆಯಿಂದಾಗಿ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಪದ್ಧತಿ ಜಾರಿಗೆ ಬಂದಿತು. ಇಂಗ್ಲೀಷ್ ಭಾಷೆ ಪ್ರಸಾರವಾಯಿತು. ಕ್ರೈಸ್ತಪಾದ್ರಿಗಳು, ಮಿಷನರಿ ಸಂಸ್ಥೆಗಳು ಇಂಗ್ಲೀಷ್ ವಿದ್ಯಾಭ್ಯಾಸವನ್ನು ಪ್ರಚಾರ ಮಾಡಿಚರು. ಇಂಗ್ಲೀಷ್ ಶಿಕ್ಷಣದ ಮೂಲಕ ಪಾಶ್ಚಾತ್ಯರ ರಾಜಕೀಯ ಚಿಂತನೆಗಳು, ದೇಶಪ್ರೇಮ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಸ್ವಾತಂತ್ರ್ಯ, ಭ್ರಾತೃತ್ವ ಮೊದಲಾದ ತತ್ವಗಳು ಭಾರತಕ್ಕೆ ಹರಿದು ಬಂದು ವಿದ್ಯಾವಂತರನ್ನು ಆಕರ್ಷಿಸಿದವು.

ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ, ಫ್ರಾನ್ಸಿನ ಮಹಾಕ್ರಾಂತಿ, ಗ್ರೀಕರ ಸ್ವಾತಂತ್ರ್ಯ ಹೋರಾಟ, ಇಟಲಿ ಮತ್ತು ಜರ್ಮನಿಯ ಏಕೀಕರಣದ ಘಟನೆಗಳು ಭಾರತೀಯರ ಮೇಲೆ ಆಗಾದವಾದ ಪ್ರಭಾವ ಬೀರಿದವು

3. ಕ್ರೈಸ್ತ ಪಾದ್ರಿಗಳ ಪ್ರಭಾವ : ಕ್ರೈಸ್ತ ಪಾದ್ರಿಗಳ ಧರ್ಮ ಪ್ರಚಾರ ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾಯಿತು. ಪಾದ್ರಿಗಳಾದ ಫರ್ಡಿನಾಂಡ್, ಕಿಟ್ಟೆಲ್, ಮೊಗ್ಲಿಂಗ್ ಮೊದಲಾದವರು ಕೊಡಗು, ಮಂಗಳೂರು, ಧಾರವಾಡ, ಮೈಸೂರು ಮೊದಲಾದ ಕಡೆ ಸಂಚರಿಸಿ ಪ್ರಚಾರ ಮಾಡಿದರು. ಫ್ರೆಂಚ್ ಪಾದ್ರಿ ಅಬ್ಬಿ ದುಬಾಯಿ ಎಂಬುವನು "ಹಿಂದೂ ಕಸ್ಟಮ್ಸ್ ಅಂಡ್ ಮ್ಯಾನರ್ಸ್" ಎಂಬ ಗ್ರಂಥವನ್ನು ಬರೆದು ಹಿಂದೂ ಸಮಾಜದ ಜಾತಿಪದ್ಧತಿ ವೇಷ ಭಾಷಣಗಳನ್ನು ಟೀಕಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು.

4. ಬ್ರಿಟಿಷರ ಆಡಳಿತದ ಪ್ರಭಾವ : ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದಿದ್ದ ಏಕರೂಪದ ಆಡಳಿತ ಪದ್ಧತಿ ಸಾರಿಗೆ, ಸಂಪರ್ಕ, ನ್ಯಾಯಾಂಗ ಸುಧಾರಣೆ, ಮೊದಲಾದವುಗಳ ಪ್ರಭಾವದಿಂದ ಕರ್ನಾಟಕದಲ್ಲಿ ರಾಷ್ಟ್ರೀಯತೆ ಉದಯವಾಯಿತು.

5. ಐತಿಹಾಸಿಕ ಸಂಶೋಧನೆ : ಜೆ.ಎಫ್.ಫ್ಲೀಟ್, ಬಿ.ಎಲ್.ರೈಸ್, ರಾಬರ್ಟ್ ಸಿವಿಲ್ ನವರಂತ ಪಾಶ್ಚಿಮಾತ್ಯ ವಿದ್ವಾಂಸರ, ಮಿಥಿಕ್ ಸೊಸೈಟಿಯಂಥ ಮೊದಲಾದ ಸಂಸ್ಥೆಗಳು ಕರ್ನಾಟಕದ ಇತಿಹಾಸದ ಗತವೈಭವದ ಮೇಲೆ ಬೆಳಕು ಚೆಲ್ಲಿದರು. ಕನ್ನಡಿಗರಲ್ಲಿ ದೇಶಾಭಿಮಾನವನ್ನು ಬೆಳೆಸುವ ಉದ್ದೇಶದಿಂದ ಆಲೂರು ವೆಂಕಟರಾಯರು "ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ"ಯನ್ನು ಸ್ಥಾಪಿಸಿದರು ಅವರು "ಕರ್ನಾಟಕ ಗತ ವೈಭವ" ಎಂಬ ಗ್ರಂಥವನ್ನು ಬರೆದು ಕನ್ನಡ ನಾಡು, ನುಡಿ, ಪರಂಪರೆಯನ್ನು ಪ್ರಚಾರ ಮಾಡಿ ಕನ್ನಡಿಗರಲ್ಲಿ ದೇಶಾಭಿಮಾನವನ್ನು ಬಡಿದಬ್ಬಿಸಿದರು.

6. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಯ ಪ್ರಭಾವ : ಬ್ರಹ್ಮ ಸಮಾಜ, ಆರ್ಯ ಸಮಾಜ, ಥಿಯೋಸಾಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್ ಇತ್ಯಾದಿ ಸಂಸ್ಥೆಗಳ ಸುಧಾರಣಾ ಚಳುವಳಿ, ಬುದ್ಧಿಜೀವಿಗಳ ಮೇಲೆ ಅಪಾರ ಪ್ರಭಾವ ಬೀರಿತು. ಸ್ವಾಮಿ ವಿವೇಕಾನಂದರು 1893ರಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಂಚರಿಸಿ ರಾಷ್ಟ್ರೀಯತೆಯನ್ನು ಪ್ರಚೋದಿಸಿದರು

7. ವೃತ್ತಿ ಪತ್ರಿಕೆಗಳ ಪ್ರಭಾವ

8. ತಿಲಕರ ಪ್ರಭಾವ : ತಿಲಕರು ಮುಂಬೈ ಕರ್ನಾಟಕದಲ್ಲಿ ಧಾರವಾಡ, ಬೆಳಗಾವಿ, ಬಿಜಾಪುರ, ಕಾರವಾರ ಮುಂತಾದ ಕಡೆಗಳಲ್ಲಿ ಸಂಚರಿಸಿ ಕನ್ನಡಿಗರಲ್ಲಿ ರಾಷ್ಟ್ರಾಭಿಮಾನವನ್ನು ಬಡಿದೆಬ್ಬಿಸಿದರು ಕೇಸರಿ, ಮರಾಠಾದಂತ ಪತ್ರಿಕೆಗಳು ಗಣೇಶ ಹಬ್ಬ, ಶಿವಾಜಿ ಜಯಂತಿಯಂಥ ನಾಡ ಹಬ್ಬಗಳನ್ನಾಗಿ ಆಚರಣೆಗೆ ತರುವುದರ ಮೂಲಕ ಜನರಲ್ಲಿ ರಾಷ್ಟ್ರೀಯತೆಯನ್ನು ಕೆರಳಿಸಿದರು.

1922 ರಲ್ಲಿ ಡಾ॥__________ ಧಾರವಾಡದಲ್ಲಿ "ಹಿಂದುಸ್ತಾನ್ ಸೇವಾದಳ" ಎಂಬ ಸಂಘವನ್ನು ಸ್ಥಾಪಿಸಿದರು 1931 ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ನಲ್ಲಿ ವಿಲೀನಗೊಳಿಸಲಾಯಿತು. ಇದರ ಜೊತೆಗೆ "ಕಾಂಗ್ರೆಸ್ ಸೇವಾದಳ" ಎಂಬ ಹೆಸರು ಬಂದಿತು. ಗಾಂಧೀಜಿಯ ಪ್ರಭಾವದಿಂದ ಚಳುವಳಿಗೆ ಧುಮುಕಿದ ಹರ್ಡಿಕರ್ ಮಂಜಪ್ಪ ಕರ್ನಾಟಕದ ಗಾಂಧಿ ಎಂದು ಪ್ರಸಿದ್ಧಿಯಾದರು ಗಂಗಾಧರ ರಾವ್ ದೇಶಪಾಂಡೆಯವರು ಚರಕ ಸಂಘವನ್ನು ಸ್ಥಾಪಿಸಿದರು.

ಈ ಸಮಯದಲ್ಲಿ ಕರ್ನಾಟಕದಲ್ಲಿದ ಭಾಗಗಳಲ್ಲಿ ಸುಮಾರು 50 ರಾಷ್ಟ್ರೀಯ ಶಾಲೆಗಳು ಸ್ಥಾಪಿತವಾದವು ಆದರೆ 1922 ರಲ್ಲಿ ನಡೆದ ಹಿಂಸಾತ್ಮಕವಾದ ಚೌರ–ಚೌರಿ ಘಟನೆಯಿಂದ ನೊಂದ ಗಾಂಧೀಜಿ ತಮ್ಮ ಅಸಹಕಾರ ಚಳುವಳಿಯನ್ನು ರದ್ದುಪಡಿಸಿದರು.

**ಬೆಳಗಾವಿ ಕಾಂಗ್ರೆಸ್ ಅಧಿವೇಶನ (1924)**

1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲಿಗಲ್ಲು. ಇದು ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಇದಾಗಿತ್ತು. ಇದರಲ್ಲಿ ಅಧಿಕ ಸಂಖ್ಯೆಯ ಕನ್ನಡಿಗರು ಹುರುಪು ಮತ್ತು ಹುಮ್ಮಸ್ಸಿನಿಂದ ಭಾಗವಹಿಸಿದ್ದರು. ಡಾ॥ಎನ್.ಎಸ್.ಹರ್ಡಿಕರ್ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ್ದ ಹಿಂದುಸ್ತಾನಿ ಸೇವಾದಳದ 1700 ಸ್ವಯಂ ಸೇವಕರು ಈ ಅಧಿವೇಶನದ ವ್ಯವಸ್ಥೆ ನೋಡಿಕೊಂಡರು ಇದರ ಮೂಲಕ ಡಾ॥ಹರ್ಡಿಕರ್ ರಾಷ್ಟ್ರೀಯ ನಾಯಕರಾದರು.

ಈ ಅಧಿವೇಶನದಲ್ಲಿ ಗಾಂಧೀಜಿ ಸೇರಿದಂತೆ ಸಿ.ರಾಜಗೋಪಾಲಚಾರಿ, ಡಾ॥ರಾಜೇಂದ್ರ ಪ್ರಸಾದ್, ಜವಾಹರ್ ಲಾಲ್ ನೆಹರು, ಅಲಿ ಸಹೋದರರು, ವಲ್ಲಭಾಯಿ ಪಟೇಲ್ ಮೊದಲಾದ ಮುಖಂಡರು ಭಾಗವಹಿಸಿದ್ದರು. ಇವರುಗಳ ಭಾಷಣಗಳು ಕನ್ನಡಿಗರ ಮೇಲೆ ಆಗಾದವಾದ ಪ್ರಭಾವ ಬೀರಿದೆವು ಅನೇಕ ನಿಷ್ಠಾವಂತ ಕಾರ್ಯಕರ್ತರು ದೇಶದ ಸ್ವಾತಂತ್ರ್ಯ ಚಳುವಳಿಗಾಗಿ ತಮ್ಮ ಜೀವವನ್ನೇ ಮುಡಿಪಾಗಿರಿಸಿದರು ಹಲವಾರು ಹರಿಜನೋದ್ದಾರ, ಖಾದಿ ಪ್ರಚಾರ ಮಹಿಳೆಯರ ಏಳಿಗೆ ಮುಂತಾದ ರಚನಾತ್ಮಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದರು. ಅವರಲ್ಲಿ ಹರಡೇಕರ್ ಮಂಜಪ್ಪ ಹನುಮಂತ ರಾವ್ ಕೌಜಲಗಿ, ಗಂಗಾಧರ ರಾವ್ ದೇಶಪಾಂಡೆ, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋದಮ್ಮ ದಾಸಪ್ಪ, ಗೌರಮ್ಮ, ಬಳ್ಳಾರಿ ಸಿದ್ದಮ್ಮ ಮೊದಲಾದವರು ಪ್ರಮುಖರಾದರು. ಹಿಂದೂಸ್ತಾನಿ ಸೇವಾದಳದ ನಾಯಕರದ ಡಾ॥ಎಂ.ಎಸ್. ಹರ್ಡೀಕರ್ ವಾಲೆಂಟಿಯರ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನು ಹಾಗೂ ಸ್ವಯಂಸೇವಕ ಎಂಬ ಹಿಂದಿ ಪತ್ರಿಕೆಗಳನ್ನು ಆರಂಭಿಸಿದರು. ಹೀಗೆ ಬೆಳಗಾವಿ ಕಾಂಗ್ರೆಸ್ ಅಧಿವೇಶನದಿಂದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗಳಿಗೆ ಹೊಸ ತಿರುವು ಲಭಿಸಿತು. ಗಾಂಧೀಜಿ ಪ್ರಭಾವದಿಂದ ಮೈಸೂರು ರಾಜ್ಯದ ಬದನವಾಳುವಿನಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಸ್ಥಾಪಿಸಲಾಯಿತು.

ಕರ್ನಾಟಕದಲ್ಲಿ ಕಾನೂನು ಭಂಗ ಚಳುವಳಿ (1930–34) : ಬ್ರಿಟಿಷ್ ಭಾರತ ಸರ್ಕಾರವು ಭಾರತೀಯರು ಸಮುದ್ರದ ನೀರಿನಿಂದ ಉಪ್ಪು ಉತ್ಪಾದಿಸಿದಂತೆ ನಿರ್ಬಂಧಿಸಿದ್ದು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹಕ್ಕೆ ನಾಂದಿಯಾಯಿತು. ಗಾಂಧೀಜಿ ಈ ಕಾಯ್ದೆಯನ್ನು ಮುರಿಯುವ ಉದ್ದೇಶದಿಂದ ಗುಜರಾತಿನ ಸಮುದ್ರ ತೀರದಲ್ಲಿದ್ದ ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸುವ ಮೂಲಕ ಐತಿಹಾಸಿಕ ಕಾವ್ಯ ಕಾನೂನು ಭಂಗ ಚಳುವಳಿಯನ್ನು 1930ರ ಮಾರ್ಚ್ 12ರಂದು ಸಬರಮತಿ ಆಶ್ರಮದಿಂದ ಆರಂಭಿಸಲಾಯಿತು. ಇದರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ 16 ವರ್ಷದ ಮೈಲಾರ ಮಹದೇವಪ್ಪ ಭಾಗವಹಿಸಿದ್ದರು. ಈ ಉಪ್ಪಿನ ಸತ್ಯಾಗ್ರಹವೇ ಮುಂದೆ ಕಾನೂನು ಭಂಗ ಚಳುವಳಿಯಲ್ಲಿ____ ವಶಾನಗೊಂಡಿತು. ಕರ್ನಾಟಕದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು.

**ಅಂಕೋಲ ಉಪ್ಪಿನ ಸತ್ಯಾಗ್ರಹ :** ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಕರ್ನಾಟಕದ ಉಪ್ಪಿನ ಸತ್ಯಾಗ್ರಹ ಕೇಂದ್ರವಾಗಿತ್ತು. ಗಾಂಧೀಜಿಯ ಉಪ್ಪಿನ ಸತ್ಯಾಗ್ರಹದಿಂದ ಸ್ಫೂರ್ತಿಗೊಂಡ ಕರ್ನಾಟಕದ ಕಾಂಗ್ರೆಸ್ ಮುಖಂಡರು, ಸ್ವಯಂ ಸೇವಕರು (40,000) ಸತ್ಯಾಗ್ರಾಹಿಗಳು 1930ರ ಏಪ್ರಿಲ್

13ರಂದು ಎಂ.ಪಿ. ನಾಡಕರ್ಣಿಯವರ ನೇತೃತ್ವದಲ್ಲಿ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ಆಚರಿಸಿದರು. ಈ ಉಪ್ಪಿನ ಸತ್ಯಾಗ್ರಹದಿಂದ ಜನತೆಯಲ್ಲಿ ಮಡುಗಟ್ಟಿ ನಿಂತಿದ್ದ ರಾಷ್ಟ್ರಪ್ರೇಮ ಉಕ್ಕಿ ಹರಿಯಿತು. ಅಂಕೋಲಾಕ್ಕೆ ಎರಡನೆಯ ಬಾರ್ಡೋಲಿ ಎಂಬ ಹೆಸರು ಬಂದಿತು.

ಇದೇ ರೀತಿ ಕರ್ನಾಟಕದ ಕರಾವಳಿ ತೀರದ ಅನೇಕ ಪ್ರದೇಶಗಳಲ್ಲಿ ಸತ್ಯಾಗ್ರಹ ನಡೆಯಿತು ಮಂಗಳೂರಿನಲ್ಲಿ ಕಾರ್ನಾಡ್ ಸದಾಶಿವರಾವ್, ರಾಮಕೃಷ್ಣ ಕಾರಂತರ ನೇತೃತ್ವದಲ್ಲಿ ನಡೆಯಿತು. ಅಂಕೋಲದಲ್ಲಿ ಉಪ್ಪಿನ ಸಂತೆಗಳನ್ನು ನಡೆಸಿ ಸುಂಕ ರಹಿತವಾಗಿ ಸಾವಿರಾರು ಚೀಲ ಉಪ್ಪು ಮಾರಲಾಯಿತು. ಜನರು ಅತ್ಯಂತ ಉತ್ಸಾಹದಿಂದ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು ದಂಡಿಯಾತ್ರೆಯಿಂದ ಹಿಂದಿರುಗಿದ ಮೇಲೆ ಮೈಲಾರ ಮಹದೇವಪ್ಪ ಕರ್ನಾಟಕದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

**ಅರಣ್ಯ ಸತ್ಯಾಗ್ರಹ** : ಉಪ್ಪಿನ ಸತ್ಯಾಗ್ರಹದ ನಂತರ ಮದ್ಯಪಾನ ವಿರೋಧಿ ಚಳುವಳಿಯನ್ನು ಹಮ್ಮಿಕೊಳ್ಳಲಾಯಿತು. ಇದರ ಅಂಗವಾಗಿ ಸರ್ಕಾರಿ ಜಮೀನಿನಲ್ಲಿ ಬೆಳೆದು ನಿಂತಿದ್ದ ಈಚಲು ಮರಗಳನ್ನು ಕಡೆದು ಉರುಳಿಸುವ ಮೂಲಕ ಅರಣ್ಯ ಸತ್ಯಗ್ರಹವನ್ನು ನಡೆಸಲಾಯಿತು. ಈಚಲು ಮರುಗಳನ್ನು ಕಡೆಯುವುದು ಕಾಯ್ದಿಟ್ಟ ಅರಣ್ಯಗಳಿಂದ ಎರವಲು ಕಟ್ಟಿಗೆ ಹಾಗೂ ಹುಲನ್ನು ತರುವುದು ಇತ್ಯಾದಿಗಳು ಈ ಸತ್ಯಾಗ್ರಹದ ಉದ್ದೇಶಗಳಾಗಿದ್ದವು. ಪ್ರಥಮವಾಗಿ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅನಂತರ ಬೆಳಗಾವಿ, ಧಾರವಾಡ, ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿ, ಸರ್ಕಾರಕ್ಕೆ ಬರುವ ಆದಾಯವನ್ನು ತಪ್ಪಿಸಲಾಯಿತು. ಈ ಚಳುವಳಿ ಧಾರವಾಡದ ಶಿಗ್ಗಾವಿಯಲ್ಲಿ ಯಶಸ್ವಿಯಾಯಿತು.

ಅರಣ್ಯ ಸತ್ಯಾಗ್ರಹ ಮತ್ತು ಕರನಿರಾಕರಣೆ ಚಳುವಳಿಯಲ್ಲಿ ಕಾರ್ನಾಡ್ ಸದಾಶಿವರಾಯರು ಮಹತ್ತರವಾದ ಪಾತ್ರ ವಹಿಸಿದ್ದರು. ಮೈಸೂರು ಸಂಸ್ಥಾನದಲ್ಲಿ ಪ್ರಥಮವಾಗಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಕುರುವನೂರಿನಲ್ಲಿ ಅರಣ್ಯ ಸತ್ಯಾಗ್ರಹ ಆರಂಭವಾಯಿತು. ಈ ಸತ್ಯಾಗ್ರಹದ ಮೂಲಕ ಎಸ್.ನಿಜಲಿಂಗಪ್ಪನವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಗಾಂಧೀಜಿಯ ಸೂಚನೆಯ ಮೇರೆಗೆ ಈ ಚಳುವಲ್ಲಿಯನ್ನು ನಿಲ್ಲಿಸಲಾಯಿತು.

**ಕರಾನಿರಾಕರಣೆ ಚಳುವಳಿ(No Tax Campaign)**

ಗುಜರಾತಿನ ಬಾರ್ಡೋಲಿ ಸತ್ಯಾಗ್ರಹದ ಮಾದರಿಯಲ್ಲಿ 1932 ರಲ್ಲಿಆರಂಭಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಅಂಕೋಲಾ ಮತ್ತು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕುಗಳನ್ನು ಆಯ್ಕೆ ಮಾಡಲಾಗಿತ್ತು.

ರೈತರು ಕಂದಾಯ ಕೊಡಲು ನಿರಾಕರಿಸಿದರು, ರೈತರ ಆಸ್ತಿಗಳನ್ನು ಕೊಳ್ಳಲು ಮುಂದೆ ಬಂದ ಸರ್ಕಾರದ ಬೆಂಬಲಿಗರ ಮನೆಯ ಮುಂದೆ ಮಹಿಳೆಯರು ಧರಣಿ ನಡೆಸಿದರು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸುಟ್ಟುಹಾಕಿದರು. ವೀರನಗೌಡ ಪಾಟೀಲರ ನೇತೃತ್ವದಲ್ಲಿ ಹಿರೇಕೆರೂರಿನಲ್ಲಿ ನಡೆದ ಚಳುವಳಿ ಯಶಸ್ವಿಯಾಯಿತು. ಈ ಚಳುವಳಿಯಲ್ಲಿ ಆರ್.ಆರ್.ದಿವಾಕರ್, ಸರ್ದಾರ್ ವೆಂಕಟರಾಮಯ್ಯ, ಕರನರ್‌ಕರ್ ಎಂ.ಪಿ.ನಾಡಕರ್ಣಿ, ತಿಮ್ಮಪ್ಪನಾಯಕ್, ಮೊದಲಾದ ಮುಖಂಡರು ಭಾಗವಹಿಸಿದ್ದರು.

ಈ ಮಧ್ಯೆ ಬ್ರಿಟಿಷ್ ಸರ್ಕಾರ ಚಳುವಳಿಗಾರರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಭಾರತ ಸಂವಿಧಾನ ಸುಧಾರಣೆಯ ಬಗ್ಗೆ ಚರ್ಚೆ ನಡೆಸಲು ಲಂಡನ್ ನಗರದಲ್ಲಿ ದುಂಡು ಮೇಜಿನ ಪರಿಷತ್ತು ಏರ್ಪಡಿಸಲಾಗಿತ್ತು. 1931ರಲ್ಲಿಏರ್ಪಟ್ಟ ಗಾಂಧಿ–ಇರ್ವಿನ್ ಒಪ್ಪಂದದ ಪ್ರಕಾರ ಗಾಂಧೀಜಿ ತಮ್ಮ ಕಾನೂನು ಭಂಗ ಚಳುವಳಿಯನ್ನು ಹಿಂತೆಗೆದುಕೊಂಡು ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲು ಒಪ್ಪಿಕೊಂಡರು. ಅದೇ ರೀತಿಯಾಗಿ 1931ರ ಸೆಪ್ಟೆಂಬರ್ ಡಿಸೆಂಬರ್ ರವರಿಗೆ ಜರುಗಿದ ಎರಡನೇ ದುಂಡು ಮೇಜಿನ ಪರಿಷತ್‌ನಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಏಕ ಮೇವ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಆದರೆ ಬ್ರಿಟೀಷರು ಒಡೆದ ಆಳುವ ನೀತಿಯನ್ನು ವಿರೋಧಿಸಿದ ಗಾಂಧೀಜಿ ಎರಡನೆಯ ದುಂಡುಮೇಜಿನ ಪರಿಷತ್ ವಿಫಲವಾಯಿತು. ಗಾಂಧೀಜಿಯವರು ಬರಿಗೈಲಿ ಬರುವಂತಾಯಿತು. ಇದರ ಪರಿಣಾಮವಾಗಿ 1932ರ ಜನವರಿಯಲ್ಲಿ ಎರಡನೇ ಕಾನೂನು ಭಂಗ ಚಳುವಳಿಗೆ ಕರೆ ನೀಡಿದರು. ಈ ದೆಸೆಯಲ್ಲಿ ಜನವರಿ 12ನೇ ದಿನವನ್ನು 'ಅಖಿಲ ಕರ್ನಾಟಕ ಸತ್ಯಾಗ್ರಹ ದಿನ'ವೆಂದು ಆಚರಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯ ಹಲವು ಪಟ್ಟಣಗಳಲ್ಲಿ ಹಾಗೂ ಮೈಸೂರು ಸಂಸ್ಥಾನದ ಬೆಂಗಳೂರು, ತುಮಕೂರು, ಹೊಸಕೋಟೆ ಮುಂತಾದ ಕಡೆಗಳಲ್ಲಿ ಜನರು ಹರತಾಳ ಉಪವಾಸ ಮತ್ತು ಪ್ರತಿಭಟನಾ ಸಭೆಗಳನ್ನು ನಡೆಸಿದರು. ಬ್ರಿಟಿಷರು ಎಷ್ಟೇ ದಮನಕಾರಿ ನೀತಿಗಳನ್ನು ಅನುಸರಿಸಿದರೂ ಕನ್ನಡಿಗರು ಜಗ್ಗಲಿಲ್ಲ ಮತ್ತು ರಾಷ್ಟ್ರಸೇವೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಾಗಿದ್ದರು. ಈ ಚಳುವಳಿ 1934ರವರೆಗೂ ಹವ್ಯಾಹತವಾಗಿ ಮುಂದುವರೆಯಿತು. ಇದರ ಪರಿಣಾಮವಾಗಿ 1935 ರ ಭಾರತ ಸರ್ಕಾರದ ಕಾಯ್ದೆ ಜಾರಿಗೆ ಬರಲು ಅನುಕೂಲವಾಯಿತು.

**ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಚಳುವಳಿ**

ದೇಶಿಯ ಸಂಸ್ಥಾನವಾಗಿದ್ದ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಚಳುವಳಿ ನಿಧಾನವಾಗಿ ಕಾವೇರ ತೊಡಗಿತು. 1921 ರಲ್ಲಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂದಿತು ಇದೇ ಬೆಂಗಳೂರು, ಮೈಸೂರು, ತುಮಕೂರು ಕಡೆಗಳಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಗಳು ರಚನೆಯಾದವು.

ಕಾಂಗ್ರೆಸ್ ಕಾರ್ಯಕರ್ತರಾದ ಮೈಸೂರಿನ ವಿರುದ್ಧ ಪಿತಾಮಹ ವೆಂಕಟಕೃಷ್ಣಯ್ಯ ರಾಮಚಂದ್ರರಾವ್ ತುಮಕೂರಿನ ರಂಗ ಅಯ್ಯಂಗರ್, ಅಲ್ಲದೆ ಉತ್ತರ ಕರ್ನಾಟಕದವರಾದ ಆಲೂರು ವೆಂಕಟರಾವ್, ಗಂಗಾಧರರಾವ್ ದೇಶಪಾಂಡೆ, ಕಡಪ ರಾಮಚಂದ್ರರಾವ್, ಡಾ॥ಹರ್ಡೀಕರ್ ಮೊದಲಾದವರು ಸ್ವದೇಶಿ ಖಾದಿ ಪ್ರಚಾರ ಮಧ್ಯಪಾನ ವಿರೋಧಿ ಚಳುವಳಿ, ಅಸ್ಪೃಶ್ಯತಾ ನಿವಾರಣ ಮೊದಲಾದ ರಚನಾತ್ಮಕವಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು.

1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಡಾ॥ ಎನ್.ಎಸ್.ಹರ್ಡೀಕರ್ ಸ್ಥಾಪಿಸಿದ "ಭಾರತೀಯ ಸೇವಾದಳ"ದ ಸ್ವಯಂ ಸೇವಕರು ದುಡಿದರು. 1927ರಲ್ಲಿ ಗಾಂಧೀಜಿ ಅನಾರೋಗ್ಯದ ನಿಮಿತ್ತ ವಿಶ್ರಾಂತಿ ಪಡೆಯಲು ನಂದಿ ಬೆಟ್ಟದಲ್ಲಿ ಎಲ್ಲಾ ವ್ಯವಸ್ಥೆಯನ್ನು ದಿವಾನರಾದ ಸರ್.ಮಿರ್ಜಾ ಇಸ್ಮಾಯಿಲ್ ಮಾಡಿದ್ದರು. 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದ ಅನುಸಾರವಾಗಿ 1930 ಜನವರಿ 26ರಂದು ಮೈಸೂರು ರಾಜ್ಯದಲ್ಲಿ ತ್ರಿವರ್ಣ ಧ್ವಜ ವಂದನೆಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಅದೇ ವರ್ಷ ಗಾಂಧೀಜಿಯವರು ಪ್ರಾರಂಭಿಸಿದ ಉಪ್ಪಿನ ಸತ್ಯಾಗ್ರಹ ಚಳುವಳಿಗೆ ವ್ಯಾಪಕವಾದ ಜನ ಬೆಂಬಲ ದೊರೆಯಿತು. ಇವೆಲ್ಲದರ ಕಾರಣದಿಂದಾಗಿ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಸರ್ಕಾರದ ನಡುವೆ ಘರ್ಷಣೆ ಆರಂಭವಾಗಿ ಸ್ವಾತಂತ್ರ್ಯ ಚಳುವಳಿಗೆ ಮುನ್ನುಡಿ ಬರೆಯಿತು.

**ಶಿವಪುರ ಕಾಂಗ್ರೆಸ್ ಅಧಿವೇಶನ (ಶಿವಪುರದ ಧ್ವಜ ಸತ್ಯಾಗ್ರಹ) – 1938**

ಶಿವಪುರದ ಧ್ವಜ ಸತ್ಯಾಗ್ರಹವು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು. ಈ ಅಧಿವೇಶನದ ಮುಖ್ಯ ಗುರಿಯಾಗಿತ್ತು ಈ ಸತ್ಯಾಗ್ರಹದ ನಂತರವೇ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯು ಉಗ್ರರೂಪ ತಾಳಿತು.

1938ರ ಏಪ್ರಿಲ್ 11ರಂದು ಮೈಸೂರು ಕಾಂಗ್ರೆಸ್ ಪಕ್ಷದ ಪ್ರಥಮ ಅಧಿವೇಶನವನ್ನು ಮಂಡ್ಯ ಜಿಲ್ಲೆಯಲ್ಲಿರುವ ಶಿವಪುರದಲ್ಲಿ ಏರ್ಪಡಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ಟಿ.ಸಿದ್ದಲಿಂಗಯ್ಯ ವಹಿಸಿದ್ದರು. ಈ ಅಧಿವೇಶನದಲ್ಲಿ ಜವಾಬ್ದಾರಿ ಸರ್ಕಾರಿ ಸ್ಥಾಪನೆಗಾಗಿ ನಿರ್ಣಯ ಅಂಗೀಕರಿಸುವುದು ಹಾಗೂ ಧ್ವಜಾರೋಹಣವನ್ನು ನೆರವೇರಿಸುವುದು. ಆದರೆ ಮೈಸೂರಿನ ದಿವಾನರು ಸರ್ಕಾರದ ವಿರುದ್ಧ ನಡೆಯುವ ಈ ಧ್ವಜ ಸತ್ಯಾಗ್ರಹವನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿದ್ದರು. ಅಲ್ಲದೆ ಸಮಾವೇಶವನ್ನು ಹತ್ತಿಕುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಪರಿಮಿತ ಅಧಿಕಾರ ನೀಡಿದ್ದರು. ಆಗ ತುಂಬೇಗೌಡ ಎಂಬ ರೈತ ಸಮಾವೇಶಕ್ಕೆ ಸ್ಥಳಾವಕಾಶ ಎಂ.ಎಂ.ಜೋಯಿಷ್‌ರು ಸಮಾರಂಭಕ್ಕೆ ಬೇಕಾದ ವ್ಯವಸ್ಥೆಯನ್ನು ಸಮರ್ಥವಾಗಿ ಮಾಡಿದ್ದರು.

ಈ ಅಧಿವೇಶನದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 25 ಸಾವಿರ ಜನರು ಭಾಗವಹಿಸಿದ್ದರು. ಸರ್ಕಾರದ ಆದೇಶವನ್ನು ಪಾಲಿಸದೆ ಸಮಾವೇಶವನ್ನು ಬಹಿಷ್ಕರಿಸಿ ಗೋಲಿಬಾರ್ ಮಾಡುವಂತೆ ನಿಷೇಧಾಜ್ಞೆ ಮಾಡಿದ್ದಿರೂ ಜಿಲ್ಲಾಧಿಕಾರಿಯ ಸಂಯಮ ಪ್ರಜ್ಞೆಯಿಂದ ಗೋಲಿಬಾರ್ ಮಾಡದೆ ಭಾರೀ ಅನಾಹುತವನ್ನು ತಪ್ಪಿಸಿದ್ದರು ಮತ್ತು ಸಮಾವೇಶವು ಯಶಸ್ವಿಯಾಗಲು ಸಹಕಾರಿಯಾದರು. ಈ ಸಭೆಯಲ್ಲಿ 18 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಇಲ್ಲಿಯ ನಿರ್ಣಯದಂತೆ ಮುಂದೆ ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ಧ್ವಜಾರೋಹಣ ಸಮಾರಂಭಗಳನ್ನು ನಡೆಸಲಾಯಿತು. ಮುಂದೆ ಕೆಂಗಲ್ ಹನುಮಂತಯ್ಯನವರು ಈ ಸ್ಥಳದಲ್ಲಿ ಒಂದು 'ಸ್ಮಾರಕ ಸೌಧ'ವನ್ನು ನಿರ್ಮಿಸಿದರು.

- ವಿದುರಾಶ್ವತ್ಥ ಧ್ವಜ ಸತ್ಯಾಗ್ರಹ(1938) : "ಕರ್ನಾಟಕದ ಜಲಿಯನ್ ವಾಲಾಬಾಗ್" ಎಂದು ಹೆಸರಾಗಿರುವ ವಿದುರಾಶ್ವತ್ಥ ದುರಂತ ಘಟನೆ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ವಿದುರಾಶ್ವತ್ಥ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಒಂದು ಯಾತ್ರಾಸ್ಥಳ ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುವುದು ವಾಡಿಕೆಯಾಗಿತ್ತು. ಈ ಜಾತ್ರೆಯ ಸಮಯದಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದ ಅಧಿವೇಶನ ನಡೆಸಿ ಧ್ವಜಾರೋಹಣ ನೆರವೇರಿಸಿ ನೆರೆದಿದ್ದ ಸಾವಿರಾರು ಜನರನ್ನು ಉದ್ದೇಶಿಸಿ ಭಾಷಣ ಮಾಡಲು ನಿರ್ಧರಿಸಲಾಗಿತ್ತು ಅದಕ್ಕೆ ಸರ್ಕಾರದೊಡನೆ ನಿಷೇಧಾಜ್ಞೆನೆಯನ್ನು ಹೊರಡಿಸಿತ್ತು.

ಆದರೆ ಮೈಸೂರು ಕಾಂಗ್ರೆಸ್ ಪಕ್ಷವು ಸರ್ಕಾರದ ಆಜ್ಞೆಯನ್ನು ನಿರ್ಲಕ್ಷಿಸಿ 1938ರಂದು ಅಧಿವೇಶನ ನಡೆಸಿತು. ಪೊಲೀಸರು ಕಾಂಗ್ರೆಸ್ ನಾಯಕರನ್ನು ಬಂಧಿಸಿ, ನೆರೆದಿದ್ದ ಸಾವಿರಾರು ಜನರನ್ನು ಚದುರಿಸಲು ಲಾಟಿ ಪ್ರಹಾರ ಮತ್ತು ಗುಂಡು ಹಾರಿಸಿದರು ಇದರಿಂದಾಗಿ 35 ಮುಗ್ಧ ಜನ ಗುಂಡೇಟಿಗೆ ಬಲೆಯಾದರು. ಅವರ ಜನರು ಗಾಯಗೊಂಡರು ಇದೇ "ವಿದುರಾಶ್ವತ್ಥ ದುರಂತ ಘಟನೆ".

ಈ ದುರಂತ ಘಟನೆಯ ಸುದ್ದಿ ತಿಳಿದು ಇಡೀ ಭಾರತವೇ ತಲ್ಲಣಗೊಂಡಿತು. ಈ ಘಟನೆಯ ಬಗ್ಗೆ ವರದಿ ನೀಡಲು ಪಡೆಯಲು ಗಾಂಧೀಜಿಯವರು ಮಹದೇವ ದೇಸಾಯಿಯವರನ್ನು ಕಳುಹಿಸಿದರು ಆನಂತರ ಸರ್ಕಾರ ಬದಲಿತರನ್ನು ಬಿಡುಗಡೆ ಮಾಡಿತು.

ವಿದ್ವಾಂಸರೊಬ್ಬರು ಈ ಘಟನೆಯನ್ನು ಕುರಿತು ಹೇಗೆ ಪ್ರತಿಕ್ರಿಯೆ ನೀಡಿದ್ದಾರೆ. "ವಿದುರಾಶ್ವತ್ಥ ಘಟನೆಯಿಂದಾಗಿ ಕಾಂಗ್ರೆಸ್‌ನ ಇನ್ನೊಂದು ಶತಮಾನದಲ್ಲಿ ಬರುವ ಬರಬಹುದಾಗಿದ್ದ ಶಕ್ತಿಯು ಅಲ್ಪಕಾಲದಲ್ಲೇ ಬಂದಿತು" ಎಂದಿದ್ದಾರೆ.

1939ರಲ್ಲಿ ಅರಸೀಕರೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವಂತೆ ನಿರ್ಣಯ ಅಂಗೀಕರಿಸಲಾಯಿತು. ಒಟ್ಟಾರೆ 1938–39 ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ತೀವ್ರಗೊಂಡು ಜನಜಾಗೃತಿ ಉಂಟಾಯಿತು.

**ಕ್ವಿಟ್ ಇಂಡಿಯಾ ಚಳುವಳಿ ಅಥವಾ ಚಲೇ ಜಾವೆ ಚಳುವಳಿ (1942ರ ಆಗಸ್ಟ್ 8–9):**

1942ರ ಆಗಸ್ಟ್ 8–9 ರಂದು ನಡೆದ ಕ್ವಿಟ್ ಇಂಡಿಯಾ ಚಳುವಳಿ ಭಾರತ ಸ್ವಾತಂತ್ರ್ಯ ಚಳುವಳಿ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಇದು ಗಾಂಧೀಜಿಯವರ ನಾಯಕತ್ವದಲ್ಲಿ ನಡೆದು ಕೊನೆಯ ಬೃಹತ್ ಜನಾಂದೋಲನವಾಗಿತ್ತು. ಕನ್ನಡಿಗರಲ್ಲಿ ರಾಷ್ಟ್ರಾಭಿಮಾನವನ್ನು ಬಡಿದೆಬ್ಬಿಸಿತು.

1939ರಲ್ಲಿ ಪ್ರಪಂಚದ ಎರಡನೇ ಮಹಾಯುದ್ಧ ಆರಂಭವಾದಾಗ ಬ್ರಿಟಿಷ್ ಸರ್ಕಾರ ಭಾರತೀಯರ ಅನುಮತಿ ಪಡೆಯದೆ ಭಾರತ ಇಂಗ್ಲೆಂಡಿನ ಪರವಾಗಿ ಯುದ್ಧದಲ್ಲಿ ಭಾಗವಹಿಸಿತು ಎಂದು ಘೋಷಿಸಿತು. ಇದನ್ನು ಪ್ರತಿಭಟಿಸಿ ಕಾಂಗ್ರೆಸ್ ನಾಯಕರು ಮಂತ್ರಿಮಂಡಲಗಳಿಗೆ ರಾಜೀನಾಮೆ ನೀಡಿ ವೈಯಕ್ತಿಕ ಸಮನ್ವಯ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು. ಭಾರತೀಯರ ಸಹಕಾರ ಮತ್ತು ಮನೋವೋಲಿಸುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರ 1942ರಲ್ಲಿ ಸರ್.ಸ್ಟಾಫರ್ಡ್ ಕ್ರಿಪ್ಸ್‌ನ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ಕಳುಹಿಸಿತು. ಈ ಆಯೋಗದ ಸಂಧಾನ ವಿಫಲವಾಗಿ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸಿದರು. ಈ ಚಳುವಳಿಯಿಂದ ಕರ್ನಾಟಕದಲ್ಲಿ ಹಿಂದೆಂದು ಕಂಡರೆಯದಷ್ಟು ಜನಜಾಗೃತಿ ಮೂಡಿತು.

1942ರ ಆಗಸ್ಟ್ 8ರಂದು ಬೊಂಬಾಯಿ ನಗರದಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಕ್ವಿಟ್ ಇಂಡಿಯಾ ಎಂಬ ನಿರ್ಣಯ ಕೈಗೊಳ್ಳಲಾಯಿತು ಮತ್ತು ಗಾಂಧೀಜಿಯವರು ಈ ಸಂದರ್ಭದಲ್ಲಿ "ಮಾಡು ಇಲ್ಲವೇ ಮಡಿ" ಎಂಬ ಐತಿಹಾಸಿಕ ಹೇಳಿಕೆಯನ್ನು ನೀಡಿದರು. ಇದರಿಂದ ಬ್ರಿಟಿಷ್ ಸರ್ಕಾರ ಗಾಂಧೀಜಿ ಮತ್ತು ನಾಯಕರನ್ನು ಬಂಧಿಸಿತು, ಈ ಬಂಧನದ ಸುದ್ದಿಯಿಂದ ಕಾಡ್ಗಿಚ್ಚಿನಂತೆ ಕ್ರೋಧವು ದೇಶದ ಎಲ್ಲಾ ಭಾಗಗಳಲ್ಲಿ ಸಂಚರಿಸಿತು.

ಈ ಕ್ರೋಧದ ಕಿಡಿ ಕರ್ನಾಟಕಕ್ಕೂ ಹಬ್ಬಿತ್ತು. ಮುಂಬೈ, ಕರ್ನಾಟಕ, ಹೈದರಾಬಾದ್-ಕರ್ನಾಟಕ ಹಾಗೂ ಹಳೆ ______ ಮೈಸೂರು ಪ್ರಾಂತ್ಯದಲ್ಲಿ ಚಳುವಳಿ ನಡೆಯಿತು.

ರೊಚ್ಚಿಗೆದ್ದ ಕನ್ನಡಿಗರು ರೈಲು ಕಂಬಿಗಳನ್ನು ಕತ್ತರಿಸಿ ಹಾಕಿದರು. ಅಂಚೆ, ತಂತಿ, ಟೆಲಿಗ್ರಾಫ್, ತಂತಿಗಳನ್ನು ನಾಶ ಪಡಿಸಿದರು. ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಪಡಿಸಿದರು (ಠಾಣೆಗಳು, ಸರ್ಕಾರಿ ಕಚೇರಿಗಳು, ಸಾಮಾಜಿಕ ಕಟ್ಟಡ) ಮುಂಬೈ ಕರ್ನಾಟಕದಲ್ಲಿ 28 ಠಾಣೆಗಳನ್ನು ಸುಡಲಾಯಿತು.

ನಿಪ್ಪಾಣಿ ಅಂಚಿ ಕಚೇರಿ ಸುಟ್ಟು ಬೂದಿಯಾಯಿತು. ಬೆಳಗಾವಿ ಜಿಲ್ಲೆಯಲ್ಲಿ ಚೆನ್ನಪ್ಪ ವಾಲೀಕರ್, ವಾಮನ ಒಂದು, ವಾಹನ ಒಂದು ಧಾರವಾಡ ಜಿಲ್ಲೆಯಲ್ಲಿ ಮೈಲಾರ ಮಹಾದೇವಪ್ಪ, ಶಂಕರ ಕುರ್ತುಕೋಟಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆ.ಜೆ ಅಂಬಾಲಿ ಬಿಜಾಪುರದಲ್ಲಿ ರಾಮಚಂದ್ರ ಪ್ರಭು ಮತ್ತು ಕೆಜೆ ಜೋಶಿ, ಮೈಲಾರ ಮಹದೇವಪ್ಪ, ಬಿಂದು ಮಾಧವ ಆಚಾರ್ಯ ಹಾಗೂ ಇತರರು ಭೂಗತ ಚಳುವಳಿಯ ಮುಂದಾಳತ್ವವನ್ನು ವಹಿಸಿದ್ದರು. ಅದೇ ರೀತಿಯಲ್ಲಿ ಹಳೇ ಮೈಸೂರು ಸಂಸ್ಥಾನದ ಬೆಂಗಳೂರು, ಮೈಸೂರು, ಭದ್ರಾವತಿ, ಕಡೂರು, ಹಾಸನ ಮುಂತಾದ ಭಾಗಗಳಿಂದ ಉತ್ತಮವಾದ ಬೆಂಬಲ ದೊರೆಯಿತು. ಎಚ್.ನರಸಿಂಹಯ್ಯ ಎಸ್.ಕರಿಯಪ್ಪ, ಎಸ್.ನಿಜಲಿಂಗಪ್ಪ ಬಳ್ಳಾರಿ ಸಿದ್ದಮ್ಮ ಮೊದಲಾದವರು ಸಕ್ರಿಯವಾಗಿ ಭಾಗವಹಿಸಿದ್ದರು. ಈಗ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲೂ ವ್ಯಾಪಕವಾದ ಚಳುವಳಿ ನಡೆಯಿತು.

1943ರ ಏಪ್ರಿಲ್ 1 ರಂದು ನಿಷ್ಠಾವಂತ ಗಾಂಧೀಜಿವಾದಿಯಾಗಿದ್ದ ಮೈಲಾರ ಮಹದೇವಪ್ಪ ಧಾರವಾಡ ಜಿಲ್ಲೆಯ ಹೊಸ ರೀತಿಯಲ್ಲಿ ಖಜಾನೆಯನ್ನು ಲೂಟಿ ಮಾಡುವಾಗ ಗುಂಡಿಗೆ ಬಲಿಯಾದನು. ರಾಜ್ಯದ ಎಲ್ಲಾ ಬಂಧಿಖಾನಗಳು ಚಳುವಳಿಗಾರರಿಂದ ತುಂಬಿ ಹೋಗಿದ್ದವು ಹೀಗೆ ಎರಡು ವರ್ಷಗಳವರೆಗೆ ನಡೆದ ಕ್ವಿಟ್ ಇಂಡಿಯಾ ಚಳುವಳಿಯು 1944ರ ಆಗಸ್ಟ್‌ನಲ್ಲಿ ಮುಕ್ತಾಯವಾಯಿತು.

**ಈಸೂರು ದುರಂತ (1942)**

1942ರ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ನಡೆದ "ಈಸೂರು ದುರಂತ" ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ನಡೆದ ಒಂದು ಮೈಲಿಗಲ್ಲು ಈ ಘಟನೆ ಶ್ರೀಸಾಮಾನ್ಯರ ಸ್ವಾತಂತ್ರ್ಯ ಪ್ರೇಮದ ಸಂಕೇತವಾಗಿತ್ತು.

ಈಸೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಒಂದು ಪುಟ್ಟ ಗ್ರಾಮ ಈ ಗ್ರಾಮ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ರಾಷ್ಟ್ರದ ಗಮನವನ್ನು ಸೆಳೆಯಿತು ಗಾಂಧೀಜಿಯ "ಮಾಡು ಇಲ್ಲವೇ ಮಡಿ" ಎಂಬ ಕರೆಗೆ ಒಗಟು ಸ್ವಾತಂತ್ರ್ಯ ಪ್ರೇಮದಿಂದ ಸ್ಫೂರ್ತಿಗೊಂಡು ಇಡೀ ಗ್ರಾಮದ ಜನತೆ ಒಕ್ಕೂರಲಿನಿಂದ ಚಳುವಳಿಗೆ ಧುಮುಕಿತು.

1942ರ ಸೆಪ್ಟೆಂಬರ್ 28ರಂದು ಈಸೂರು ಗ್ರಾಮದ ಜನರು ಈಸೂರು ಗ್ರಾಮವನ್ನು "ಸ್ವತಂತ್ರ ಗ್ರಾಮ" ಎಂದು ಘೋಷಿಸಿದರು. ಊರಿನ ಜನರೆಲ್ಲ ಗ್ರಾಮದ ವೀರಭದ್ರ ದೇವಾಲಯದ ಹತ್ತಿರ ಸಭೆ ಸೇರಿ ದೇವಾಲಯದ ಮೇಲೆ ತ್ರಿವರ್ಣ ಧ್ವಜವನ್ನು ಆರಿಸಿ ನಾವು ಸ್ವತಂತ್ರರು ಬೀಜವಾರಿ ಸರ್ಕಾರದವರು ಊರಿಗೆ ಬಂದರೆ ಪ್ರವೇಶವಿಲ್ಲ ಎಂಬ ಎಚ್ಚರಿಕೆ ಸೂಚನಾ ಫಲಕವನ್ನು ಊರಿನ ಮುಂಭಾಗದಲ್ಲಿ ನೇತು ಹಾಕಲಾಗಿತ್ತು.

ಈ ಗ್ರಾಮದ ಜನರು ತಮ್ಮದೇ ಆದ ಪ್ರತಿ ಸರ್ಕಾರವನ್ನು ಸ್ಥಾಪಿಸಿಕೊಂಡು. "ಜಯ" ಎಂಬ ಹತ್ತು ವರ್ಷದ ಬಾಲಕನನ್ನು ಅಮಲ್ದಾರನನ್ನಾಗಿ ನೇಮಿಸಿ, ಗ್ರಾಮದ ಪಟೇಲ ಮತ್ತು ಶಾನುಭೋಗರಿಂದ ಸರ್ಕಾರಿ ದಫ್ತರುಗಳನ್ನು ಕಸಿದುಕೊಂಡು ಅವರ ಬಟ್ಟೆ ಕಳಿಸಿ ಅವಮಾನ ಮಾಡಿದರು. ಈ ಎಲ್ಲಾ ಕಾರ್ಯವನ್ನು ಯುವಕರೇ ಸಾಧಿಸಿದ್ದು ವಿಶೇಷವಾಗಿದೆ. ಇದರಿಂದ ಎಚ್ಚೆತ್ತುಕೊಂಡ ಶಿಕಾರಿಪುರ ತಾಲ್ಲೂಕಿನ ಸಬ್ ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್‌ಸ್ಪೆಕ್ಟರ್ ಕೆಂಚೇಗೌಡ ಪೊಲೀಸ್ ಪಡೆಯೊಂದಿಗೆ ಈಸೂರಿಗೆ ಧಾವಿಸಿ ಜನರ ಮೇಲೆ ಮನಬಂದಂತೆ ಗುಂಡು ಹಾರಿಸಿದರು. ಪೊಲೀಸರ ಮತ್ತು ಗ್ರಾಮಸ್ಥರ ನಡುವೆ ಘರ್ಷಣೆಯುಂಟಾಗಿ ಅಮಲ್ದಾರ್ ಚೆನ್ನಕೃಷ್ಣಯ್ಯ ಮತ್ತು ಸಬ್ ಇನ್‌ಸ್ಪೆಕ್ಟರ್ ಕೆಂಚೇಗೌಡ ಹಸುನೀಗಿದರು.

ಈ ಸುದ್ದಿಯನ್ನು ತಿಳಿದ ಶಿವಮೊಗ್ಗ ಜಿಲ್ಲಾಧಿಕಾರಿ ನವನೀತ ನಾಯ್ಡು ಮಿಲಿಟರಿ ಅಧಿಕಾರಿಗಳೊಂದಿಗೆ ಹೆಚ್ಚಿನ ಪೊಲೀಸ್ ಪಡೆಯೊಂದಿಗೆ ಈಸೂರು ಗ್ರಾಮಕ್ಕೆ ಧಾವಿಸಿ ಕೈಗೆ ಸಿಕ್ಕಿದವರನ್ನು ಚಿತ್ರಹಿಂಸೆಗೆ ಒಳಪಡಿಸಲಾಯಿತು. ಜನರ ಮನೆ ಮಠಗಳನ್ನು ಲೂಟಿ

ಮಾಡಲಾಯಿತು. ಜನರು ಧಿಗ್ಭ್ರಾಂತರಾಗಿ ದಿಕ್ಕು ಪಾಲಾಗಿ ಓಡಿದರು ಕೊನೆಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಆರೋಪಿಗಳಿಗೆ ಮರಣದಂಡನೆಯನ್ನು ಕಾಯಂಗೊಳಿಸಿತು.

ಇದೇ ಐತಿಹಾಸಿಕವಾದ **"**ಈಸೂರು ದುರಂತ**"** ಹೀಗೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಈ ದುರಂತ ಚಿರಸ್ಮರಣೀಯವಾಗಿದೆ. **"**ಏಸೂರು ಕೊಟ್ಟರು ಈಸೂರು ಬಿಡವು**"** ಎಂಬ ಘೋಷಣೆಯೊಂದಿಗೆ ಈ ಪುಟ್ಟ ಗ್ರಾಮ ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ರಾಷ್ಟ್ರದ ಗಮನ ಸೆಳೆಯಿತು.